
ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಸಿಲು

ಬೆಂಗಳೂರಿನ ಇನ್‌ಫೆಂಟ್ರಿ ರಸ್ತೆಯಲ್ಲಿ ಬಿಸಿಲಿನ ತಾಪ ತಾಗದಂತೆ ಮುಖವನ್ನು ಬಟ್ಟೆಗಳಿಂದ ಮುಚ್ಚಿ ಯುವತಿಯರು ನಡೆದ ದೃಶ್ಯ ಕಂಡಿದ್ದು ಹೀಗೆ...



PRM/KA/RERA/1251/308/PR/280324/006766

MANA SKANDA

THE RIGHT LIFE

Right move today. Right life tomorrow.



Artist's impression

Over 40+ thoughtful child-centric features in this sprawling lakeside township.
Residential, Commercial & Recreational—all in one place, tailored for your right life.



Designed for children
Multiple playgrounds, spacious campgrounds and open areas inviting imagination to roam free



Amplify your social life
A stunning ***1 lakh SFT*** clubhouse to socialize with peers and relax in style



Artist's impression

Expansive water zone
Complete with a kids' pool, boardwalk pool and a cascade water feature

40+ amenities	For the Toddler (1.5 to 4 years)	For Young Kids (4 to 6 years)	For the Preteen (6 to 12 years)	For the Teens (13 to 16 years)	For Active Families
For the young ones & the young at heart!	✓ Kids' play area ✓ Moon deck*	✓ Space-themed kids' play area* ✓ Musical deck* ✓ Star gazing deck*	✓ Trampoline park ✓ Basketball court ✓ Kids' pool with cascade water feature & more	✓ Tennis court* ✓ Glamping area ✓ Sand volleyball & more	✓ Yoga lawn ✓ Butterfly garden ✓ Periphery walking trail & more

*This feature is in Phase 1.1

3 & 3.5 BHK homes starting at ₹1.8 Cr*

therightlife.in

The Right Life,
Sarjapur-Varthur Road, Bengaluru

080 7117 5000

Strategic Partner ANAROCK RESIDENTIAL

Project Finance by BAJAJ FINSERV

Scan to discover more

*Specifications, pricing, and visuals depicted are subject to change. Actual features may vary from artist's impressions and may not accurately reflect the final product. T&C apply**

ಭಾನುವಾರ, ಏಪ್ರಿಲ್ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 98 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸೋನಂ ವಾಂಗ್‌ಚುಕ್ ಹಿಮಾಲಯ ಪರ್ವತ ಪ್ರದೇಶಗಳ ಉಳಿವಿಗಾಗಿ ನಡೆಸಿದ 'ಹಿಮಾಲಯನ್ ಸತ್ಯಾಗ್ರಹ'



ಬರ ಪರಿಹಾರ ಅನುದಾನ ಬಿಡುಗಡೆ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸಮರ್ಥನೆ
'ವಿಳಂಬ ಉದ್ದೇಶಪೂರ್ವಕವಲ್ಲ' 5

ಶೇ 15ರಷ್ಟು ಉದ್ಯೋಗಿಗಳ ವಜಾಕ್ಕೆ ಜೀ ನಿರ್ಧಾರ 9

ಮುನಿಸು ಮರೆತ ಎಚ್‌ಡಿಕೆ–ವಿಶ್ವನಾಥ್ 5

ಕೇಂದ್ರ– ರಾಜ್ಯ; ಜೋರು ವ್ಯಾಜ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ ಎಂಬ ಕೂಗನ್ನು ರಾಜ್ಯ ಸರ್ಕಾರವೇ ಎಬ್ಬಿಸಿದೆ. ಅನ್ಯಾಯ ಮಾಡಿಲ್ಲ; ನ್ಯಾಯಯುತ ಪಾಲು ನೀಡಲಾಗಿದೆ ಎಂದು ಬಿಜೆಪಿ ಪ್ರತಿಪಾದಿಸುತ್ತಿದೆ.

ಈ ವಿಷಯದಲ್ಲಿ ರಾಜ್ಯ ಮತ್ತು ಕೇಂದ್ರದ ವಾದವನ್ನು ಒಂದೇ ವೇದಿಕೆಯಲ್ಲಿ ಆಲಿಸುವುದಕ್ಕಾಗಿ ಜಾಗೃತ ಕರ್ನಾಟಕ ಹಾಗೂ ರೈತ ಸಂಘಟನೆಗಳು ಶನಿವಾರ ಬಹಿರಂಗ ಚರ್ಚೆ ಹಮ್ಮಿಕೊಂಡಿದ್ದವು. ಕೇಂದ್ರದಿಂದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ರಾಜ್ಯ ಕಂದಾಯ ಸಚಿವ ಕೃಷ್ಣ ಬೈರೇಗೌಡರಿಗೆ ಆಹ್ವಾನ ನೀಡಲಾಗಿದೆ ಎಂದು ಸಂಘಟಕರು ಹೇಳಿದ್ದರು.

ಬಹಿರಂಗ ಚರ್ಚೆಯಲ್ಲಿ ಭಾಗವಹಿಸದ ನಿರ್ಮಲಾ, ಅದಕ್ಕೂ ಮೊದಲೇ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ತೆರಿಗೆ ಪಾಲು, ಅನುದಾನದ ಹಂಚಿಕೆ ಸೇರಿದಂತೆ ಹಲವು ವಿಷಯಗಳ ಕುರಿತ ಮಾಹಿತಿ ನೀಡಿದರು. ಕೃಷ್ಣ ಬೈರೇಗೌಡ ಬಹಿರಂಗ ಚರ್ಚೆಯಲ್ಲಿ ರಾಜ್ಯದ ವಾದ ಮಂಡಿಸಿದರು. ನಿರ್ಮಲಾ ಅವರಿಗಾಗಿ ಕಾಯ್ದಿರಿಸಿದ್ದ ಕುರ್ಚಿ ಕೊನೆಯವರೆಗೂ ಖಾಲಿ ಇತ್ತು.

ನಿರ್ಮಲಾ ವಾದವೇನು?

- 'ನನ್ನ ತೆರಿಗೆ– ನನ್ನ ಹಕ್ಕು' ಎಂಬ ಘೋಷಣೆ ಚೆನ್ನಾಗಿಯೇ ಇದೆ. ಆದರೆ, ಅದನ್ನು ಕೂಗುತ್ತಿರುವವರ ಉದ್ದೇಶ ಸರಿ ಇಲ್ಲ. ದೇಶದಲ್ಲಿ ಎಲ್ಲರೂ ತೆರಿಗೆಯ ಮೇಲೆ ಹಕ್ಕು ಹೊಂದಿದ್ದಾರೆ.
- ಬೆಂಗಳೂರಿನಲ್ಲಿ ಸಂಗ್ರಹವಾಗುವ ತೆರಿಗೆಯನ್ನು ಬೆಂಗಳೂರಿನ ಅಭಿವೃದ್ಧಿಗೆ ಮಾತ್ರ ಬಳಸಿದರೆ ಕಲ್ಯಾಣ ಕರ್ನಾಟಕದ ಪಾಡು ಏನಾಗಬೇಕು? ನಾವು ದೇಶದ ಹಿತದಲ್ಲಿ ತೆರಿಗೆ ಕಟ್ಟುತ್ತೇವೆ ಎಂಬುದನ್ನು ನೆನಪಿನಲ್ಲಿ ಇಡಬೇಕು.
- ಕರ್ನಾಟಕಕ್ಕೆ ₹ 5,495 ಕೋಟಿ ವಿಶೇಷ ಅನುದಾನ ಕೊಡಬೇಕೆಂಬ ಶಿಫಾರಸು 15ನೇ ಹಣಕಾಸು ಆಯೋಗದ ಮಧ್ಯಂತರ ವರದಿಯಲ್ಲಿತ್ತು. ಆದರೆ, ಅಂತಿಮ ವರದಿಯಲ್ಲಿ ವಿಶೇಷ ಅನುದಾನದ ಪ್ರಸ್ತಾಪವೇ ಇರಲಿಲ್ಲ. ಮಧ್ಯಂತರ ವರದಿ ಮುಖ್ಯವೋ? ಅಂತಿಮ ವರದಿಯೋ?



8ನೇ ಪುಟ ನೋಡಿ

ಕೃಷ್ಣ ಬೈರೇಗೌಡ ವಾದವೇನು?



- ಜಿಎಸ್‌ಟಿ, ಸೆಸ್, ತೆರಿಗೆಯಲ್ಲಿ ರಾಜ್ಯದ ಪಾಲು ಕೇಳಿದರೆ ಕೇಂದ್ರ ಸರ್ಕಾರ ಅನುದಾನದ ಬದಲಿಗೆ ಅವಮಾನದ ಮಳೆಯನ್ನೇ ಸುರಿಸಿದೆ.
- ಹಣಕಾಸು ಆಯೋಗವು ಮುಂದಿನ ಸಾಲಿನ ಅನುದಾನ ನೀಡುವ ಕುರಿತು ಕೆಲವೇ ದಿನಗಳಲ್ಲಿ ತೀರ್ಮಾನ ತೆಗೆದುಕೊಳ್ಳಲಿದೆ. ಆಗಲೂ ಅನ್ಯಾಯ ಆಗಬಾರದು.
- ರಾಜ್ಯದ ಜನರಿಗೆ ಸತ್ಯಾಂಶ ತಿಳಿಯಲೆಂದು ಬಹಿರಂಗ ಚರ್ಚೆಗೆ ಬಂದಿದ್ದೇನೆ. ಮೇಡಂ (ನಿರ್ಮಲಾ ಸೀತಾರಾಮನ್) ಅವರೂ ಈ ಚರ್ಚೆಗೆ ಬರಬೇಕಿತ್ತು. ಯಾರದ್ದು ನ್ಯಾಯ–ಅನ್ಯಾಯ ಎಂಬುದು ಜನರಿಗೆ ತಿಳಿಯುತ್ತಿತ್ತು.
- ಜಿಎಸ್‌ಟಿಯಲ್ಲಿ ರಾಜ್ಯಕ್ಕೆ 2017ರಿಂದ 2024ರ ವರೆಗೆ ₹59,274 ಕೋಟಿ (ಶೇ 34) ಖೋತಾ ಆಗಿದೆ.
- ಇನ್ನು ಮುಂದೆ ಜಿಎಸ್‌ಟಿ ಪಾಲಿನಲ್ಲಿ ರಾಜ್ಯಕ್ಕೆ ಪ್ರತಿವರ್ಷ ₹36 ಸಾವಿರ ಕೋಟಿಯಷ್ಟು ನಷ್ಟವಾಗಲಿದೆ. ಇದು ರಾಜ್ಯಕ್ಕೆ ಮಾಡಿದ ಅನ್ಯಾಯ ಅಲ್ಲವೇ? ಪರಿಹಾರದ ರೂಪದಲ್ಲಿ ಬರುತ್ತಿದ್ದ ಅನುದಾನವನ್ನೂ ಬಂದ್ ಮಾಡಲಾಗಿದೆ.

8ನೇ ಪುಟ ನೋಡಿ

ಮೋದಿ ಚಿತ್ರ ಬಳಕೆ: ಈಶ್ವರಪ್ಪ ಕೇವಿಯಟ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ನನ್ನ ಹೃದಯ ಬಗೆದರೆ ಅಲ್ಲಿ ಅಯೋಧ್ಯೆಯ ಶ್ರೀರಾಮಚಂದ್ರ ಹಾಗೂ ಪ್ರಧಾನಿ ನರೇಂದ್ರ ಮೋದಿ ಮಾತ್ರ ಕಾಣಸಿಗುತ್ತಾರೆ' ಎಂದು ಹೇಳುತ್ತಿದ್ದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಈಗ ಮೋದಿ ಭಾವಚಿತ್ರ ಬಳಕೆ ವಿಚಾರದಲ್ಲಿ ತಮ್ಮ ವಾದವನ್ನೂ ಆಲಿಸುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.

'ಲೋಕಸಭಾ ಚುನಾವಣಾ ಪ್ರಚಾರದ ವೇಳೆ ಪ್ರಧಾನಿ ಮೋದಿ ಭಾವಚಿತ್ರ ಬಳಸುತ್ತಿದ್ದು, ಬಿಜೆಪಿ ನನ್ನ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾದಲ್ಲಿ ಆ ಪ್ರಕರಣದಲ್ಲಿ ನನ್ನ ವಾದವನ್ನೂ ಆಲಿಸಬೇಕು' ಎಂದು ಕೋರಿ ಹೈಕೋರ್ಟ್‌ನಲ್ಲಿ ಕೇವಿಯಟ್ ಸಲ್ಲಿಸಿದ್ದಾರೆ. ರಾಷ್ಟ್ರಭಕ್ತರ ಬಳಗದ ಹೆಸರಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಕೆ.ಎಸ್.ಈಶ್ವರಪ್ಪ ಸಿದ್ಧತೆ ನಡೆಸಿದ್ದಾರೆ. ಪ್ರಚಾರದ ವೇದಿಕೆ, ಫ್ಲೆಕ್ಸ್, ಬ್ಯಾನರ್‌ಗಳಲ್ಲಿ ಪ್ರಧಾನಿ ಮೋದಿ ಅವರ ಭಾವಚಿತ್ರ ಹಾಕಿಕೊಳ್ಳುತ್ತಿದ್ದಾರೆ.

5ನೇ ಪುಟ ನೋಡಿ

'ಬಿಜೆಪಿ ವಿರುದ್ಧವೂ ತನಿಖೆ ಮಾಡಿ' 08

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹಿರಿಯರಿಗೆ ಸಿಗಲಿ 'ಸಂಧ್ಯಾ' ಆಸರೆ

ಒಳನೋಟ

• ಮಂಜುಶ್ರೀ ಎಂ. ಕಡಕೋಳ



ಚಿತ್ರ: ಭಾನು ಪಟ್ಟಾರ್

ಬೆಂಗಳೂರು: 'ನಾನು ಸಿವಿಲ್ ಎಂಜಿನಿಯರ್. ನಿವೃತ್ತಿಯಾಗಿ ವರ್ಷದೊಳಗೆ ಹೆಂಡತಿ ತೀರಿಕೊಂಡಳು. ಮಗ–ಸೊಸೆ ಇಬ್ಬರೂ ಉದ್ಯೋಗಸ್ಥರು. ಚೆನ್ನಾಗಿ ನೋಡಿಕೊಳ್ತಾರೆ ಅಂತ ಜತೆಯಲ್ಲೇ ಇದ್ದೆ. ನನ್ನ ಉಳಿತಾಯದ ದುಡ್ಡನ್ನು ಬ್ಯಾಂಕಿನಲ್ಲಿಡುತ್ತೇನೆಂದು ತೆಗೆದುಕೊಂಡ ಮಗ, ಈಗ ನೋಡಿದ್ರೆ ವೃದ್ಧಾಶ್ರಮಕ್ಕೆ ಬಿಟ್ಟಿದ್ದಾನೆ. ನಮ್ಮಂಥವರಿಗೆ ಇಲ್ಲಿ ಇರಲಾಗದು, ಹಾಗಂತ ಅಲ್ಲಿಗೆ (ದೇವರ ಬಳಿ) ಹೋಗಲೂ ಆಗದು. ಸಾವು ಬರುವ ತನಕ ಕಾಯಬೇಕಷ್ಟೇ...' ಎಂದು ಭಾವುಕರಾದರು ಆ ಹಿರಿಯ ವ್ಯಕ್ತಿ.

'ನಾನಿದ್ರೆ ಅವರ ಪ್ರೈವೆಸಿಗೆ ಅಡ್ಡಿಯಾಗುತ್ತೆ ಅಂತೆ. ಈ ವಯಸ್ಸಿನಲ್ಲಿ ನನಗೆ ಇಂಥ ಗತಿ ಬರುತ್ತೆ ಅಂತ ಅಂದುಕೊಂಡಿರಲಿಲ್ಲ. ಖಾಸಗಿ ನೌಕರಿಯಲ್ಲಿದ್ದ ನನಗೆ ಪಿಂಚಣಿಯೂ ಇಲ್ಲ. ವಯಸ್ಸಿದ್ದಾಗ ಮಗನ ಭವಿಷ್ಯಕ್ಕೇ ಹಣ ಖರ್ಚು ಮಾಡಿದೆ. ಕನಿಷ್ಠ ಆರೋಗ್ಯ ವಿಮೆಯನ್ನೂ ಮಾಡಿಸಿಕೊಳ್ಳಲಿಲ್ಲ. ನಮ್ಮಂಥವರು ವಯಸ್ಸಾಗುವ ಮೊದಲೇ ಕಣ್ಮುಚ್ಚಬೇಕು' ಎಂದು ಕಣ್ಣೀರಾದರು.

–ಇದು ಹಿರಿಯ ನಾಗರಿಕರೊಬ್ಬರ ಕಥೆಯಾದರೆ, ವಿಧವೆ ಸುಮಿತ್ರಮ್ಮ ಅವರ ಕಥೆ ಮತ್ತೊಂದು ರೀತಿಯದ್ದು. ಸರ್ಕಾರಿ ನೌಕರಿಯಲ್ಲಿದ್ದ ಅವರಿಗೆ ಎರಡು ಗಂಡು, ಒಂದು ಹೆಣ್ಣು. ಗಂಡ ಅಕಾಲಿಕ ಸಾವಿಗೀಡಾದರೂ ಛಲದಿಂದಲೇ ಮೂವರು ಮಕ್ಕಳನ್ನು ವಿದ್ಯಾವಂತರನ್ನಾಗಿಸಿದ ಸುಮಿತ್ರಮ್ಮನವರಿಗೆ ಸದಾ ಮಕ್ಕಳದ್ದೇ ಚಿಂತೆ. ಆದರೆ, ಸಾಯುವ ಕಾಲದಲ್ಲಿ ಕನಿಷ್ಠ ಆಸ್ಪತ್ರೆಗೂ ದಾಖಲಿಸದ ಸ್ಥಿತಿ ತಂದಿಟ್ಟಿದ್ದರು ಮಕ್ಕಳು. ಬರುವ ಪಿಂಚಣಿ ಹಣವನ್ನೆಲ್ಲ ಸ್ವಂತ ಖರ್ಚಿಗೆ ಬಳಸಿಕೊಳ್ಳುತ್ತಿದ್ದ ಮಕ್ಕಳು, ತಾಯಿಯನ್ನು ಮೂಲೆಯಲ್ಲಿಟ್ಟಿದ್ದರು.

ಇನ್ನು ಸೆಕ್ಯೂರಿಟಿ ಗಾರ್ಡ್ ಆಗಿದ್ದ ಕೆಂಚಪ್ಪನವರ ಕಥೆಯೂ ಇದಕ್ಕಿಂತ ಭಿನ್ನವೇನಿಲ್ಲ.

4ನೇ ಪುಟ ನೋಡಿ

ಎನ್‌ಐಎ ವಶಕ್ಕೆ ಸಂಚುಕೋರರು

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ಶೋಧ ಕಾರ್ಯ ನಡೆಸುತ್ತಿದ್ದ ಎನ್‌ಐಎ ತಂಡದ ಮೇಲೆ ಸ್ಥಳೀಯರ ಗುಂಪು ದಾಳಿ ನಡೆಸಿದ್ದು, ಇದರ ನಡುವೆಯೂ ಎನ್‌ಐಎ ತಂಡ, 2022ರ ಸ್ಫೋಟ ಪ್ರಕರಣದ ಇಬ್ಬರು ಸಂಚುಕೋರರನ್ನು ಬಂಧಿಸಿದೆ. 8

ವೈದ್ಯನಿಗೆ ₹94,110 ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಲಿನಿಕ್ ನವೀಕರಣಕ್ಕಾಗಿ ಆ್ಯಪ್ ಮೂಲಕ ₹ 5 ಲಕ್ಷ ಸಾಲ ಪಡೆಯಲು ಮುಂದಾಗಿದ್ದ ವೈದ್ಯರೊಬ್ಬರು ₹ 94,110 ಕಳೆದುಕೊಂಡಿದ್ದು, ಈ ಸಂಬಂಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘33 ವರ್ಷದ ವೈದ್ಯರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಕ್ಲಿನಿಕ್ ನವೀಕರಣ ಮಾಡಲು ಮುಂದಾಗಿದ್ದ ವೈದ್ಯರಿಗೆ ಸಾಲದ ಅಗತ್ಯವಿತ್ತು. ಸಾಮಾಜಿಕ ಮಾಧ್ಯಮದಲ್ಲಿ ಬಂದಿದ್ದ ಜಾಹೀರಾತು ನೋಡಿದ್ದ ಅವರು, ಮೊಬೈಲ್ ಆ್ಯಪ್‌ವೊಂದನ್ನು ಇನ್‌ಸ್ಟಾಲ್ ಮಾಡಿಕೊಂಡಿದ್ದರು.’

‘ಖಾಸಗಿ ಬ್ಯಾಂಕ್ ಪ್ರತಿನಿಧಿ ಹೆಸರಿನಲ್ಲಿ ಕರೆ ಮಾಡಿದ್ದ ಅಪರಿಚಿತರು, ದೂರುದಾರರ ವೈಯಕ್ತಿಕ ಹಾಗೂ ಬ್ಯಾಂಕ್ ಖಾತೆಗಳ ಮಾಹಿತಿ ಪಡೆದುಕೊಂಡಿದ್ದರು. ₹ 5 ಲಕ್ಷ ಸಾಲ ಮಂಜೂರಾಗಿರುವುದಾಗಿ ಹೇಳಿದ್ದ ಅಪರಿಚಿತರು, ಅದನ್ನು ಖಾತೆಗೆ ಜಮೆ ಮಾಡಲು ಕೆಲ ಶುಲ್ಕಗಳನ್ನು ಪಾವತಿಸುವಂತೆ ತಿಳಿಸಿದ್ದರು. ಅದನ್ನು ನಂಬಿದ್ದ ವೈದ್ಯ, ಹಂತ ಹಂತವಾಗಿ ₹ 94,110 ಪಾವತಿಸಿದ್ದರು’ ಎಂದು ತಿಳಿಸಿದರು.

‘ಮರುದಿನ ಕರೆ ಮಾಡಿ ಆರೋಪಿಗಳು, ಮತ್ತಷ್ಟು ಹಣ ಕೇಳಿದ್ದರು. ಅನುಮಾನಗೊಂಡ ವೈದ್ಯ, ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ’ ಎಂದರು.

ಕದ್ದ ಬೈಕ್‌ನಲ್ಲಿ ಸುತ್ತಾಡಿ ಕೃತ್ಯ, ಅನ್ನಪೂರ್ಣೇಶ್ವರಿನಗರ ಪೊಲೀಸರ ತನಿಖೆ

ಮಗನ ಬಳಸಿ ಕಳ್ಳತನ: ತಾಯಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಳಾಸ ಕೇಳುವ ನೆಪದಲ್ಲಿ ಮಹಿಳೆಯರನ್ನು ಮಾತನಾಡಿಸಿ ಸರ ಕಳ್ಳತನ ಮಾಡುತ್ತಿದ್ದ ಪ್ರಕರಣದಲ್ಲಿ ಆರೋಪಿ ರೋಜಾ (32) ಎಂಬುವವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚಿಂತಾಮಣಿಯ ರೋಜಾ, ಉಲ್ಲಾಳದಲ್ಲಿ ವಾಸವಿದ್ದರು. ಅಪ್ರಾಪ್ತ ವಯಸ್ಸಿನ ಮಗ ಹಾಗೂ ಆತನ ಸ್ನೇಹಿತನ ಮೂಲಕ ಕಳ್ಳತನ ಮಾಡಿಸುತ್ತಿದ್ದರು. ಇತ್ತೀಚೆಗೆ ನಡೆದಿದ್ದ ಕಳ್ಳತನದ ಬಗ್ಗೆ ತನಿಖೆ ಕೈಗೊಂಡಾಗ, ಸುಳಿವು ಸಿಕ್ಕಿತ್ತು. ಸೆರೆ ಹಿಡಿದು, ವಿಚಾರಣೆ ನಡೆಸಿದಾಗ ರೋಜಾ ತಪ್ಪು ಒಪ್ಪಿಕೊಂಡರು’ ಎಂದು ಪೊಲೀಸರು ಹೇಳಿದರು.



ಆರೋಪಿ ರೋಜಾ ಅವರಿಂದ ಜಪ್ತಿ ಮಾಡಲಾದ ಚಿನ್ನದ ಸರಗಳು

‘ಕೂಲಿ ಕೆಲಸ ಮಾಡುತ್ತಿದ್ದ ರೋಜಾ, ಬಿಡುವು ಸಿಕ್ಕಾಗ ನಗರದ ಪ್ರದೇಶಗಳಲ್ಲಿ ಸುತ್ತಾಡುತ್ತಿದ್ದರು. ಯಾವ ರಸ್ತೆಯಲ್ಲಿ ಯಾವ ಮಹಿಳೆ ನಿತ್ಯ ಓಡಾಡುತ್ತಾರೆ? ಅವರ ಬಳಿ ಚಿನ್ನದ ಸರವಿದೆಯಾ? ಸರ ಕಿತ್ತುಕೊಂಡ ನಂತರ ಯಾವ ರಸ್ತೆಯಲ್ಲಿ ಪರಾರಿಯಾಗಬೇಕು? ಎಂಬ ಮಾಹಿತಿ ತಿಳಿದುಕೊಳ್ಳುತ್ತಿದ್ದರು. ಮಹಿಳೆಯರ ಚಿನ್ನದ ಸರ ಕದ್ದು ಮಾರಿದರೆ, ಹೆಚ್ಚು ಹಣ ಬರುತ್ತದೆ. ಅದರಿಂದ ಜೀವನ ನಡೆಸಬಹುದೆಂದು ಮಗನಿಗೆ ರೋಜಾ ಹೇಳುತ್ತಿದ್ದರು. ತಾಯಿ ಮಾತಿಗೆ ಒಪ್ಪಿದ್ದ ಮಗ, ಕಳ್ಳತನಕ್ಕೆ ಸಜ್ಜಾಗುತ್ತಿದ್ದ. ಸ್ನೇಹಿತನೊಬ್ಬನ ಸಹಾಯವನ್ನೂ ಪಡೆದಿದ್ದ’ ಎಂದರು.

ಮೈಸೂರಿನಲ್ಲಿ ಬೈಕ್ ಕಳ್ಳತನ: ‘ಮಹಿಳೆಯರನ್ನು ಹಿಂಬಾಲಿಸಿ ಸರ ಕಳ್ಳತನ ಮಾಡಲು ಬೈಕ್ ಅಗತ್ಯವಿರುವುದಾಗಿ ಆರೋಪಿ ರೋಜಾ ಹೇಳಿದ್ದರು. ಮೈಸೂರಿಗೆ ಹೋಗಿದ್ದ ಮಗ ಹಾಗೂ ಸ್ನೇಹಿತ, ಬೈಕ್‌ವೊಂದನ್ನು ಕದ್ದು ನಗರಕ್ಕೆ ತಂದಿದ್ದರು. ಅದೇ ಬೈಕ್‌ನಲ್ಲಿ ನಗರದಲ್ಲಿ ಸುತ್ತಾಡಿ ಕಳ್ಳತನ ಮಾಡಲು ಸಂಚು ರೂಪಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

12 ಅಪರಾಧ ಪ್ರಕರಣಗಳಲ್ಲಿ ಭಾಗಿ

‘55 ವರ್ಷದ ದೂರುದಾರ ಮಹಿಳೆ, ಮುದ್ದಿನಪಾಳ್ಯದ ದೊಡ್ಡಣ್ಣ ವೃತ್ತದ ಬಳಿ ಮಾರ್ಚ್ 15ರಂದು ನಡೆದುಕೊಂಡು ಹೊರಟಿದ್ದರು. ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು, ವಿಳಾಸ ಕೇಳುವ ನೆಪದಲ್ಲಿ ಮಹಿಳೆಯನ್ನು ಮಾತನಾಡಿಸಿ ಬಳಿಕ, ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಮಹಿಳೆ ದೂರು ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕೃತ್ಯ ನಡೆದಿದ್ದ ಸ್ಥಳದಲ್ಲಿ ಹಲವು ಬಾರಿ ಆರೋಪಿ ರೋಜಾ ಓಡಾಡಿದ್ದರು. ಅನುಮಾನದ ಮೇರೆಗೆ ಅವರನ್ನು ವಶಕ್ಕೆ ಪಡೆದಾಗ, ಅವರ ಮಗ ಹಾಗೂ ಆತನ ಸ್ನೇಹಿತನೇ ಕೃತ್ಯ ಎಸಗಿರುವುದು ಗೊತ್ತಾಯಿತು.

‘ರೋಜಾ ಮಗ ಹಾಗೂ ಸ್ನೇಹಿತನ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ 12 ಅಪರಾಧ ಪ್ರಕರಣ ದಾಖಲಾಗಿವೆ. ರೋಜಾ ಅವರಿಂದ ₹ 5 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ. ತಲೆಮರೆಸಿಕೊಂಡಿರುವ ಮಗ ಹಾಗೂ ಸ್ನೇಹಿತನ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ’ ಎಂದರು.

‘ಮಹಿಳೆಯರು ಓಡಾಡುವ ರಸ್ತೆಗಳ ಬಗ್ಗೆ ತಾಯಿ ಮಾಹಿತಿ ನೀಡುತ್ತಿದ್ದರು. ಅದೇ ರಸ್ತೆಗೆ ಹೋಗುತ್ತಿದ್ದ ಮಗ–ಸ್ನೇಹಿತ, ಸರ ಕಿತ್ತು ಪರಾರಿಯಾಗುತ್ತಿದ್ದರು. ಸರಗಳನ್ನು ತಾಯಿ ಮಾರುತ್ತಿದ್ದರು. ಕೆಲವನ್ನು ಅಡವಿಡುತ್ತಿದ್ದರು’ ಎಂದರು.

ಸೋನು ಗೌಡಗೆ ಜಾಮೀನು

ಬೆಂಗಳೂರು: ಬಾಲಕಿಯನ್ನು ಅಕ್ರಮವಾಗಿ ದತ್ತು ಪಡೆದಿದ್ದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿದ್ದ ಕಿರುತೆರೆ ಸಹನಟಿ ಸೋನು ಶ್ರೀನಿವಾಸ್ ಗೌಡ ಅಲಿಯಾಸ್ ಶಾಂಭವಿ (29) ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಶನಿವಾರ ಹೊರಗೆ ಬಂದಿದ್ದಾರೆ.

ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಘಟಕದ (ಬೆಂಗಳೂರು ಪಶ್ಚಿಮ) ಕಾನೂನು ಪರಿವೀಕ್ಷಣಾ ಅಧಿಕಾರಿ ಗೀತಾ ನೀಡಿದ್ದ ದೂರು ಆಧರಿಸಿ ಸೋನು ಅವರನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದರು. ಬಳಿಕ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು.

ಸೋನು ಅವರಿಗೆ ಜಾಮೀನು ಕೋರಿ ಅವರ ಪರ ವಕೀಲರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ನ್ಯಾಯಾಲಯ, ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಎಲ್ಲ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿದ ಸೋನು ಗೌಡ ಶನಿವಾರ ರಾತ್ರಿ ಜೈಲಿನಿಂದ ಹೊರಗೆ ಬಂದರು.

‘₹200 ದಂಡ’ ಫಲಕ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಾರಿವಾಳಗಳಿಗೆ ಆಹಾರ ಹಾಕಿದ್ದಲ್ಲಿ ₹ 200 ದಂಡ ವಿಧಿಸಲಾಗುವುದು’ ಎಂಬ ನಿಯಮಕ್ಕೆ ಪಕ್ಷಿ ಪ್ರೇಮಿಗಳಿಂದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ, ಕಾಮಗಾರಿ ಸ್ಥಳದಲ್ಲಿದ್ದ ದಂಡದ ಫಲಕವನ್ನು ತೆರವು ಮಾಡಲಾಗಿದೆ.

ರೇಸ್‌ಕೋರ್ಸ್ ರಸ್ತೆಯ (ರೆಬಲ್ ಸ್ಟಾರ್ ಎಂ.ಎಚ್. ಅಂಬರೀಷ್ ರಸ್ತೆ) ಜಂಕ್ಷನ್‌ನಲ್ಲಿ ಹಲವು ವರ್ಷಗಳಿಂದ ಪಾರಿವಾಳಗಳು ಬಂದು ಕೂರುತ್ತಿವೆ. ನಿತ್ಯವೂ ಜಂಕ್ಷನ್‌ಗೆ ಬರುವ ಹಲವರು, ಪಾರಿವಾಳಗಳಿಗೆ ಆಹಾರ ಹಾಕಿ ನೀರಿಡುತ್ತಿದ್ದಾರೆ.

ಇದೇ ಜಂಕ್ಷನ್ ಅಭಿವೃದ್ಧಿಗೆ ಹಲವು ತಿಂಗಳಿನಿಂದ ಕಾಮಗಾರಿ ಶುರುವಾಗಿದೆ. ಜಂಕ್ಷನ್ ಸೌಂದರ್ಯಕ್ಕೆ ಧಕ್ಕೆ ತರಬಹುದೆಂಬ ಕಾರಣಕ್ಕೆ ಗುತ್ತಿಗೆದಾರ, ಪಾರಿವಾಳಗಳು ಬರದಂತೆ ತಡೆಯಲು ಯೋಚಿಸಿದ್ದರು. ಪಾರಿವಾಳಗಳಿಗೆ ಆಹಾರ ಹಾಕದಂತೆ ಜನರಿಗೆ ಎಚ್ಚರಿಸಿದ್ದರು. ‘ಇಲ್ಲಿ ಪಾರಿವಾಳಗಳಿಗೆ ಆಹಾರ ಹಾಕಬೇಡಿ. ಹಾಕಿದ್ದಲ್ಲಿ ₹200 ದಂಡ ವಿಧಿಸಲಾಗುವುದು’ ಎಂಬ ಫಲಕಗಳನ್ನೂ ನೇತು ಹಾಕಿದ್ದರು.



ರೇಸ್‌ಕೋರ್ಸ್ ರಸ್ತೆಯ (ರೆಬಲ್ ಸ್ಟಾರ್ ಎಂ.ಎಚ್. ಅಂಬರೀಷ್ ರಸ್ತೆ) ಜಂಕ್ಷನ್‌ನಲ್ಲಿ ಕಾಮಗಾರಿ ಸ್ಥಳದಲ್ಲಿದ್ದ ಫಲಕ

ಯಾವುದೇ ಅಧಿಕಾರಿ ಸಹಿ ಇಲ್ಲದೇ ದಂಡದ ಬಗ್ಗೆ ಅನಧಿಕೃತವಾಗಿ ಫಲಕ ನಿಲ್ಲಿಸಿದ್ದಕ್ಕೆ ಪಕ್ಷಿಪ್ರೇಮಿಗಳು ಆಕ್ಷೇಪ ವ್ಯಕ್ತಪಡಿಸಿದ್ದರು.

ಈ ಬಗ್ಗೆ ‘ಪ್ರಜಾವಾಣಿ’ಯ ಮಾರ್ಚ್ 23ರ ಸಂಚಿಕೆಯಲ್ಲಿ ‘ಪಾರಿವಾಳಕ್ಕೆ ಆಹಾರ ಹಾಕಿದ್ರೆ ₹ 200 ದಂಡ’ ಶೀರ್ಷಿಕೆಯಡಿ ವರದಿ ಪ್ರಕಟಗೊಂಡಿತ್ತು. ಇದರಿಂದ ಎಚ್ಚೆತ್ತ ಗುತ್ತಿಗೆದಾರ, ಫಲಕವನ್ನು ತೆರವು ಮಾಡಿದ್ದಾರೆ.

ದಂಡಕ್ಕೆ ಹೆದರಿದ್ದ ಕೆಲವರು, ಜಂಕ್ಷನ್ ಸಮೀಪದಲ್ಲಿರುವ ವಾಹನಗಳ ಪಾರ್ಕಿಂಗ್ ಜಾಗದಲ್ಲಿ ಆಹಾರ ಹಾಕುತ್ತಿದ್ದಾರೆ. ಹೀಗಾಗಿ, ಈ ಸ್ಥಳದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪಾರಿವಾಳಗಳು ಕೂರುತ್ತಿವೆ.

‘ಜಂಕ್ಷನ್‌ನಲ್ಲಿ ಪಾರಿವಾಳಗಳ ಗುಂಪು ಸದಾ ಇರುತ್ತದೆ. ಆಟೊ ಚಾಲಕರು, ಬೈಕ್ ಸವಾರರು, ವೃದ್ಧರು, ಮಕ್ಕಳು ಆಹಾರ ತಂದು ಹಾಕುತ್ತಾರೆ. ಇದು ಒಳ್ಳೆಯ ಕೆಲಸ. ಆದರೆ, ಆಹಾರ ಹಾಕಿದವರಿಗೆ ದಂಡ ವಿಧಿಸುವುದಾಗಿ ಫಲಕ ಹಾಕಲಾಗಿತ್ತು. ಇದಕ್ಕೆ ಜನರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ, ಫಲಕ ತೆಗೆದಿದ್ದಾರೆ’ ಎಂದು ಆಟೊ ಚಾಲಕರೊಬ್ಬರು ಹೇಳಿದರು.

ತ್ಯಾಗರಾಜ ‘ಕೋ ಆಪ್’ ಬ್ಯಾಂಕಿಗೆ ₹12 ಕೋಟಿ ಲಾಭ

ಬೆಂಗಳೂರು: ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ 2023–24ನೇ ಸಾಲಿನಲ್ಲಿ ಒಟ್ಟು ₹12.20 ಕೋಟಿ ತೆರಿಗೆ ಪೂರ್ವ ಲಾಭ ಗಳಿಸಿದೆ ಎಂದು ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್ ತಿಳಿಸಿದ್ದಾರೆ.

ಬ್ಯಾಂಕಿನ ಒಟ್ಟು ವಾರ್ಷಿಕ ವ್ಯವಹಾರ ₹ 5,283 ಕೋಟಿ ಮೀರಿದ್ದು, ಮುಂದಿನ ಸಾಲಿನಲ್ಲಿ ₹ 7,000 ಕೋಟಿ ವ್ಯವಹಾರ ನಡೆಸುವ ಗುರಿ ಇದೆ. ಪ್ರಸ್ತುತ ಎನ್‌ಪಿಎ (ವಸೂಲಾಗದ ಸಾಲ) ಶೇ 4.39ರಷ್ಟು ಇದೆ. ನಿವ್ವಳ ಎನ್‌ಪಿಎ ಪ್ರಮಾಣ ಶೂನ್ಯ ಮಟ್ಟದಲ್ಲಿದೆ. ಸ್ವಂತ ಬಂಡವಾಳ ₹ 121 ಕೋಟಿ ಮೀರಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರಿ ಭದ್ರತಾ ಪತ್ರಗಳಲ್ಲಿ ₹ 211.93 ಕೋಟಿ ತೊಡಗಿಸಲಾಗಿದೆ ಎಂದರು.

ಇಂಟರ್ ಬ್ಯಾಂಕ್ ಮೊಬೈಲ್ ಪೇಮೆಂಟ್ ಸಿಸ್ಟಂ (ಐಎಂಪಿಎಸ್) ಸೇವೆಯನ್ನು ಗ್ರಾಹಕರಿಗೆ ಒದಗಿಸಲಾಗಿದೆ. ಶೀಘ್ರ ಯುಪಿಐ ಸೌಲಭ್ಯ ಒದಗಿಸಲಾಗುವುದು. ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯ ಮತ್ತು ವಿದ್ಯುತ್ ಬಿಲ್, ನೀರಿನ ಬಿಲ್, ಡಿಟಿಎಚ್ ರಿಚಾರ್ಜ್ ಪಾವತಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಕೇಂದ್ರ, ರಾಜ್ಯ ಸರ್ಕಾರಗಳ ಸಬ್ಸಿಡಿಗಳನ್ನು ನೇರವಾಗಿ ಗ್ರಾಹಕರ ಖಾತೆಗಳಿಗೆ ವರ್ಗಾಯಿಸಲು ಆಧಾರ್ ಬೇಸ್ಡ್ ಪೇಮೆಂಟ್ ಸಿಸ್ಟಂ ಜಾರಿಗೊಳಿಸಲಾಗಿದೆ ಎಂದು ವಿವರ ನೀಡಿದ್ದಾರೆ.



ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆಗೆ ಭೇಟಿ ನೀಡಿದ್ದ ಕಮಿಷನರ್ ಬಿ.ದಯಾನಂದ್, ಕಾರ್ಯವೈಖರಿ ಬಗ್ಗೆ ಮಾಹಿತಿ ಪಡೆದುಕೊಂಡರು

ಸಂಚಾರ ಠಾಣೆಗೆ ಕಮಿಷನರ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆಗೆ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪೊಲೀಸ್ ವ್ಯವಸ್ಥೆ ಹಾಗೂ ಪೊಲೀಸರ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರಿಂದ ದೂರು ಬರುತ್ತಿರುವುದರಿಂದ ಕಮಿಷನರ್ ಅವರು ಠಾಣೆಗಳಿಗೆ ಮೇಲಿಂದ ಮೇಲೆ ಭೇಟಿ ನೀಡುತ್ತಿದ್ದಾರೆ.

ಎಲೆಕ್ಟ್ರಾನಿಕ್ ಸಿಟಿ ಸಂಚಾರಠಾಣೆಗೆ ಶನಿವಾರ ಬೆಳಿಗ್ಗೆ ಹೋಗಿದ್ದ ಕಮಿಷನರ್, ಪೊಲೀಸರ ಕೆಲಸದ ಬಗ್ಗೆ ಮಾಹಿತಿ ಪಡೆದುಕೊಂಡರು. ಠಾಣೆ ಕೆಲಸಗಳ ಪ್ರಗತಿ ಬಗ್ಗೆ ತಿಳಿದುಕೊಂಡರು. ಠಾಣೆಗೆ ಬರುವ ಸಾರ್ವಜನಿಕರ ದೂರುಗಳನ್ನು ಸೌಜನ್ಯದಿಂದ ಆಲಿಸಿ ಕ್ರಮ ಕೈಗೊಳ್ಳುವಂತೆ ಹೇಳಿದರು.

ಜಂಟಿ ಕಮಿಷನರ್ ಎಂ.ಎನ್. ಅನುಚೇತ್, ಡಿಸಿಪಿ ಶಿವಪ್ರಕಾಶ್ ದೇವರಾಜ್ ಹಾಜರಿದ್ದರು.

ಭೇಟಿ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕಮಿಷನರ್, ‘ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಆಧುನಿಕ ಸೌಲಭ್ಯ ಒಳಗೊಂಡಿದ್ದು, ಸುಸಜ್ಜಿತವಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂತು. ಠಾಣೆ ಪರಿಸರವೂ ಉತ್ತಮವಾಗಿದೆ’ ಎಂದರು.

ಅಭ್ಯಂಜನ ಸಪ್ತಾಹ

ಬೆಂಗಳೂರು: ರಾಜಾಜಿನಗರ 1ನೇ ಬ್ಲಾಕ್‌ನಲ್ಲಿರುವ ಕ್ಷೇಮ ಆರೋಗ್ಯಧಾಮದಲ್ಲಿ ಏ.7ರಿಂದ 9ರವರೆಗೆ ತೈಲಾಭ್ಯಂಜನ ಮತ್ತು ಅವಿಸ್ನಾನ ಸಪ್ತಾಹ ಆಯೋಜಿಸಲಾಗಿದೆ. ಮಾಹಿತಿಗೆ 080– 23577635, 9845572955 ಸಂಪರ್ಕಿಸಬಹುದು.

ಬಿಎಂಸಿಆರ್‌ಐ: ವಿದ್ಯಾರ್ಥಿನಿಯರಲ್ಲಿ ಕಾಲರಾ ದೃಢ

ಬೆಂಗಳೂರು (ಪಿಟಿಐ): ಬೆಂಗಳೂರು ವೈದ್ಯಕೀಯ ಕಾಲೇಜು, ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಇಬ್ಬರು ವಿದ್ಯಾರ್ಥಿನಿಯರಿಗೆ ಕಾಲರಾ ಇರುವುದು ಖಚಿತವಾಗಿದೆ. ಇವರು ಭೇದಿ ಹಾಗೂ ನಿರ್ಜಲೀಕರಣದಿಂದ ಬಳಲುತ್ತಿದ್ದರು.

ಭೇದಿ ಮತ್ತು ನಿರ್ಜಲೀಕರಣದ ಕಾರಣಕ್ಕೆ ಈ ಕಾಲೇಜಿನ ವಿದ್ಯಾರ್ಥಿನಿಯರ ನಿಲಯದ 47 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇಬ್ಬರಿಗೆ ಕಾಲರಾ ಇರುವುದು ದೃಢಪಟ್ಟಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ವಿಚಕ್ಷಣಾ ಘಟಕದ ಡಾ. ಪದ್ಮಾ ಎಂ.ಆರ್. ತಿಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ ಮಹಿಳಾ ಆಯೋಗದ ಅಧ್ಯಕ್ಷರು ಆಸ್ಪತ್ರೆಗೆ ಮತ್ತು ವಿದ್ಯಾರ್ಥಿನಿಯರ ನಿಲಯಕ್ಕೆ ಭೇಟಿ ನೀಡಿದ್ದರು.

47 ಮಂದಿ ವಿದ್ಯಾರ್ಥಿನಿಯರನ್ನು ಶುಕ್ರವಾರ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಡೀನ್ ಹಾಗೂ ನಿರ್ದೇಶಕ ರಮೇಶ್ ಕೃಷ್ಣ ತಿಳಿಸಿದ್ದಾರೆ.

ವಿದ್ಯಾರ್ಥಿನಿಯರ ನಿಲಯದಿಂದ ಸಂಗ್ರಹಿಸಿದ ನೀರಿನಲ್ಲಿ ಕಾಲರಾ ರೋಗಕಾರಕ ಪತ್ತೆಯಾಗಿಲ್ಲ ಎಂದು ಕೃಷ್ಣ ಅವರು ಹೇಳಿದ್ದಾರೆ.

ಶೇ 50ರಷ್ಟು ನೀರು ಕಡಿಮೆ ಬಳಕೆಗೆ ಜಲಮಂಡಳಿ ಸೂಚನೆ

ಏರಿಯೇಟರ್: ಗಡುವು ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೀರಿನ ಬಳಕೆಯನ್ನು ಕಡಿಮೆ ಮಾಡುವ ಫ್ಲೋ ರಿಸ್ಟ್ರಿಕ್ಟರ್ ಅಥವಾ ಏರಿಯೇಟರ್‌ಗಳನ್ನು ಅಳವಡಿಸಿಕೊಳ್ಳಬೇಕಾದ ಗಡುವನ್ನು ಏಪ್ರಿಲ್ 30ರವರೆಗೆ ವಿಸ್ತರಿಸಲಾಗಿದೆ.

ಮಾಲ್, ವಾಣಿಜ್ಯ ಸಂಕೀರ್ಣ, ದೇವಸ್ಥಾನ, ಐಷಾರಾಮಿ ಹೋಟೆಲ್, ರೆಸ್ಟೋರೆಂಟ್, ಸಾರ್ವಜನಿಕ ಪ್ರದೇಶಗಳ ಸ್ವಚ್ಛತೆಗಾಗಿ ನೀರು ಬಳಸುವ ನಲ್ಲಿಗಳಿಗೆ ಕಡ್ಡಾಯವಾಗಿ ಏರಿಯೇಟರ್‌ಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಶೇ 50ರಷ್ಟು ನೀರಿನ ಬಳಕೆ ಕಡಿಮೆಯಾಗಲಿದೆ ಎಂದು ಜಲಮಂಡಳಿ ಏ.7ರ ಗಡುವು ನೀಡಿತ್ತು. ಹೆಚ್ಚಿನ ಸಮಯವನ್ನು ನಾಗರಿಕರು ಕೇಳಿರುವುದರಿಂದ ಅವಧಿ ವಿಸ್ತರಿಸಲಾಗಿದೆ.

ಏ.30ರವರೆಗೆ ದಂಡ ವಿಧಿಸುವುದಿಲ್ಲ. ಏ.30ರೊಳಗೆ ಏರಿಯೇಟರ್ ಅಳವಡಿಸಿಕೊಳ್ಳದಿದ್ದರೆ, ಶೇ 50ರಷ್ಟು ನೀರು ಸರಬರಾಜು ಕಡಿತಗೊಳಿಸಲಾಗುತ್ತದೆ. ಆದೇಶ ಉಲ್ಲಂಘಿಸಿದರೆ, ₹5 ಸಾವಿರ ದಂಡ, ಉಲ್ಲಂಘನೆ ಮರುಕಳಿಸಿದಲ್ಲಿ ಮತ್ತೆ ₹5 ಸಾವಿರ ದಂಡದ ಜೊತೆಗೆ ಹೆಚ್ಚುವರಿಯಾಗಿ ಪ್ರತಿದಿನ ₹500 ದಂಡ ವಿಧಿಸಲಾಗುವುದು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಕೈಗಾರಿಕೆಗಳಿಗೆ ಪ್ರತ್ಯೇಕ ಪೈಪ್‌ಲೈನ್‌ನಲ್ಲಿ ಸಂಸ್ಕರಿಸಿದ ನೀರು

ಬೆಂಗಳೂರು: ದೇಶದಲ್ಲೇ ಮೊದಲ ಬಾರಿಗೆ ಕೈಗಾರಿಕೆಗಳಿಗೆ ಪ್ರತ್ಯೇಕ ಪೈಪ್‌ಲೈನ್ ಮೂಲಕ ಸಂಸ್ಕರಿಸಿದ ನೀರು ಸರಬರಾಜು ಮಾಡಲು ಚಿಂತನೆ ನಡೆಸಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಕೈಗಾರಿಕೋದ್ಯಮಿಗಳು, ಪೀಣ್ಯ ಕೈಗಾರಿಕಾ ಸಂಸ್ಥೆ, ಎಫ್‌ಕೆಸಿಸಿಐ, ಕಾಸಿಯಾ ಪದಾಧಿಕಾರಿಗಳು, ಎಂಎಸ್‌ಎಂಇ ನಿರ್ದೇಶಕ ಡಾ. ವಿಜಯ ಮಹಾಂತೇಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನಿರ್ದೇಶಕ ಕುಮಾರ್ ಅವರೊಂದಿಗಿನ ಸಭೆಯಲ್ಲಿ ಅವರು ಮಾತನಾಡಿದರು.

‘ಸಂಸ್ಕರಿಸಿದ ನೀರಿನ ಬಳಕೆಯನ್ನು ಮತ್ತಷ್ಟು ಹೆಚ್ಚಿಸುವ ಮೂಲಕ ಕಾವೇರಿ ನೀರಿನ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸುವುದು ನಮ್ಮ ಗುರಿಯಾಗಿದೆ. ಭಾರತೀಯ ವಿಜ್ಞಾನ ಸಂಸ್ಥೆಯಿಂದ ಪ್ರಮಾಣೀಕೃತವಾದ ಸಂಸ್ಕರಿಸಿದ ನೀರನ್ನು ಕುಡಿಯಲು ಹೊರತುಪಡಿಸಿ ಸ್ವಚ್ಛತೆ ಸೇರಿದಂತೆ ಬಹಳಷ್ಟು ಕಾರ್ಯಗಳಿಗೆ ಉಪಯೋಗಿಸಬಹುದಾಗಿದೆ’ ಎಂದು ಹೇಳಿದರು.

ಕೈಗಾರಿಕೆಗಳಿಗೆ ಸಮರ್ಪಕ ರೀತಿಯಲ್ಲಿ ನೀರು ಪೂರೈಸಲಾಗುತ್ತಿದೆ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಶಶಿಧರ ಶೆಟ್ಟಿ, ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಆರಿಫ್ ಎಚ್.ಎಂ. ತಿಳಿಸಿದರು.

ನೀರಿನ ಉಳಿತಾಯ ಮಾಡುವಂತಹ ಪಂಚ ಸೂತ್ರಗಳನ್ನು ಅಳವಡಿಸಿಕೊಳ್ಳುವ ಮೂಲಕ ಜನಾಂದೋಲನದಲ್ಲಿ ಭಾಗಿಯಾಗುವುದಾಗಿ ಕೈಗಾರಿಕೋದ್ಯಮಿಗಳು ತಿಳಿಸಿದರು.

‘ಸಹಕಾರಕ್ಕೆ ಮನವಿ’

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾಂಕ್ರಾಮಿಕ ರೋಗಗಳ ಹರಡುವಿಕೆ ತಡೆಗಟ್ಟಲು ಸಹಕಾರ ನೀಡುವಂತೆ ಜಲಮಂಡಳಿ ಅಧ್ಯಕ್ಷರಿಗೆ ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರೋಲ್ಕರ್ ವಿಕಾಸ್ ಕಿಶೋರ್ ಪತ್ರ ಬರೆದಿದ್ದಾರೆ.

‘ಪ್ರಸ್ತುತ ಬೇಸಿಗೆ ಕಾಲದಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣಗೊಳ್ಳದಂತೆ ನಿಯಂತ್ರಿಸಬೇಕಿದೆ. ಇದಕ್ಕಾಗಿ ಜಲಮಂಡಳಿ ಅಧಿಕಾರಿ, ಸಿಬ್ಬಂದಿಗೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಸೂಚನೆ ನೀಡಬೇಕು’ ಎಂದು ಕೋರಿದ್ದಾರೆ.

‘ನೀರಿನ ಶುದ್ಧೀಕರಣ ಘಟಕಗಳು ಮತ್ತು ಕೊನೆಯ ಹಂತದ ವಿತರಣೆ ನೀರಿನ ಮಾದರಿಗಳಲ್ಲಿ ಕ್ಲೋರಿನೇಷನ್ ಮಟ್ಟ ನಿಯಮಾನುಸಾರ ಇರುವುದನ್ನು ಖಾತರಿಪಡಿಸಿಕೊಳ್ಳಬೇಕು. ಸಾಂಕ್ರಾಮಿಕ ರೋಗಗಳು ವರದಿಯಾದ ಪ್ರದೇಶಗಳಲ್ಲಿ ಮ್ಯಾನ್‌ಹೋಲ್ ಮತ್ತು ಕೊಳಚೆ ನೀರಿನಿಂದ ಮಾದರಿಗಳನ್ನು ಸಂಗ್ರಹಿಸಲು ಆರೋಗ್ಯ ಇಲಾಖೆಯ ಸಿಬ್ಬಂದಿಗೆ ಸಹಕಾರ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು’ ಎಂದಿದ್ದಾರೆ.

‘ಯಾವುದಾದರೂ ನೀರಿನ ಕೊಳವೆಗಳು ಸೋರಿಕೆ ಇದ್ದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಈ ವಿಷಯಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮಗಳ ಬಗ್ಗೆ ಕಾರ್ಯಕ್ರಮ ಅಧಿಕಾರಿಗಳು(ಐಎಚ್‌ಐಪಿ) ಬಿಬಿಎಂಪಿಗೆ ವರದಿ ಸಲ್ಲಿಸಬೇಕು’ ಎಂದು ಮನವಿ ಮಾಡಿದ್ದಾರೆ.





ನೆಹರೂ ತಾರಾಲಯದಲ್ಲಿ ‘ಸ್ಕೈ ಶೋ’ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಗಗನಯಾನದ ಆರಂಭ, ವಿಕಾಸ ಹಾಗೂ ಸಾಧನೆಗಳು, ಗಗನಯಾತ್ರಿಗಳ ತರಬೇತಿ, ಎಚ್‌ಎಲ್‌ವಿ 3ರ ಉಡ್ಡಯನ ಸೇರಿದಂತೆ ಉಪಗ್ರಹ ಯಾವ ರೀತಿಯಾಗಿ ಉಡಾವಣೆಯ ಆಗುತ್ತದೆ ಎಂಬ ಸಂಪೂರ್ಣ ಮಾಹಿತಿ ತಿಳಿದುಕೊಳ್ಳುವ ಆಸಕ್ತಿ ಇದ್ದರೆ ಜವಾಹರಲಾಲ್ ನೆಹರೂ ತಾರಾಲಯಕ್ಕೆ ಭೇಟಿ ನೀಡಬೇಕು.

ಸೌಂಡಿಂಗ್ ರಾಕೆಟ್‌ಗಳಿಂದ ಈಗಿನ ಗಗನಯಾನದವರೆಗಿನ ‘ಭಾರತೀಯ ಅಂತರಿಕ್ಷ ಯಾತ್ರೆ’ ಎಂಬ ಶೀರ್ಷಿಕೆ ಅಡಿಯಲ್ಲಿ ‘ಸ್ಕೈ ಶೋ’ (ಆಕಾಶ ದರ್ಶನ) ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಹಾಗೂ ಇಸ್ರೊದ ಗಗನಯಾನ ಯೋಜನಾ ನಿರ್ದೇಶಕ ಆರ್. ಹಟನ್ ಶನಿವಾರ ಚಾಲನೆ ನೀಡಿದರು.



ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಗಗನಯಾನದ ಗಗನನೌಕೆ ಮಾದರಿಯನ್ನು ಎ.ಎಸ್.ಕಿರಣ್ ಕುಮಾರ್, ಆರ್.ಹಟನ್ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಎ.ಎಸ್. ಕಿರಣ್ ಕುಮಾರ್, ‘1960ರಲ್ಲಿ ಸೌಂಡಿಂಗ್ ರಾಕೆಟ್‌ನಿಂದ ಇಂದಿನ ಗಗನಯಾನದವರೆಗೆ ವಿವಿಧ ಅಭಿವೃದ್ಧಿ ಹಂತಗಳನ್ನು ಮುಂದಿನ ಪೀಳಿಗೆಯವರಿಗೆ ಅರ್ಥವಾಗುವಂತೆ ನೀಡಲಾಗಿದೆ. ಚಂದ್ರಯಾನ–3ರ ಯಶಸ್ಸಿನ ನಂತರ ವಿಶ್ವದಲ್ಲಿ ಹೆಚ್ಚಿನ ಯುವಕರಲ್ಲಿ ವಿಜ್ಞಾನ, ಬಾಹ್ಯಾಕಾಶ ಬಗ್ಗೆ ಹೆಚ್ಚು ಆಸಕ್ತಿ ಮೂಡಿದೆ. ಜವಾಹರಲಾಲ್ ನೆಹರೂ ತಾರಾಲಯವು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಬಾಹ್ಯಾಕಾಶದ ಬಗ್ಗೆ ಮಾಹಿತಿ ನೀಡುವಲ್ಲಿ ಉತ್ತಮ ಕೆಲಸ ಮಾಡುತ್ತಿದೆ’ ಎಂದರು.

‘ಸ್ಕೈ ಶೋ’ ಇಂದಿನಿಂದ: ಜವಾಹರಲಾಲ್ ನೆಹರೂ ತಾರಾಲಯದಲ್ಲಿ ಏ.7ರಿಂದ ಸಾರ್ವಜನಿಕ ವೀಕ್ಷಣೆಗೆ ಅವಕಾಶ ನೀಡಲಾಗಿದೆ. ಪ್ರತಿ ಸೋಮವಾರ ಮತ್ತು ತಿಂಗಳ ಎರಡನೇ ಮಂಗಳವಾರ ಹೊರತುಪಡಿಸಿ, ಪ್ರತಿದಿನ ಬೆಳಿಗ್ಗೆ 10.30ಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಹಾಗೂ ಬೆಳಿಗ್ಗೆ 11.30ಕ್ಕೆ ಕನ್ನಡ ಭಾಷೆಯಲ್ಲಿ ಈ ‘ಸ್ಕೈ ಶೋ’ ಸಾಕ್ಷ್ಯಚಿತ್ರ ಪ್ರದರ್ಶನ ನಡೆಯಲಿದೆ. ಈ ಪ್ರದರ್ಶನ ಎರಡು ತಿಂಗಳವರೆಗೆ ನಡೆಯಲಿದೆ ಎಂದು ತಾರಾಲಯದ ನಿರ್ದೇಶಕ ಬಿ.ಆರ್. ಗುರುಪ್ರಸಾದ್ ಮಾಹಿತಿ ನೀಡಿದರು.



ಈಶ್ವರಪ್ಪ ವಿರುದ್ಧ ಎಫ್‌ಐಆರ್

ಶಿವಮೊಗ್ಗ: ಅನುಮತಿ ಪಡೆಯದೇ ದೇವಸ್ಥಾನದ ಅರ್ಚಕರ ಮನೆಯ ಎದುರು ರಾಜಕೀಯ ಸಭೆ ನಡೆಸಿ ನೀತಿ ಸಂಹಿತೆ ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ತೀರ್ಥಹಳ್ಳಿ ತಾಲ್ಲೂಕು ನೊಣಬೂರು ಗ್ರಾ.ಪಂ ವ್ಯಾಪ್ತಿಯ ಅಂಬುತೀರ್ಥದ ದೇವಸ್ಥಾನವೊಂದರಲ್ಲಿ ಏಪ್ರಿಲ್ 5 ರಂದು ಪೂಜಾ ಕಾರ್ಯಕ್ರಮ ನೆರವೇರಿಸಿದ್ದ ಈಶ್ವರಪ್ಪ, ಅಲ್ಲಿಯೇ ಹತ್ತಿರದ ಅರ್ಚಕರ ಮನೆಗೆ ಹೋಗಿದ್ದರು. ಅವರ ಮನೆಯ ಅಂಗಳದಲ್ಲಿ ಸಭೆ ನಡೆಸಿ ಭಾಷಣ ಮಾಡಿದ್ದರು.

ಹೀಗಾಗಿ ನ್ಯಾಯಾಲಯದ ಅನುಮತಿ ಪಡೆದು ಅವರ ವಿರುದ್ಧ ತೀರ್ಥಹಳ್ಳಿ ಪೊಲೀಸ್ ಠಾಣೆಯಲ್ಲಿ ಚುನಾವಣಾ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ.

'ವಂಚಿಸುತ್ತಿರುವುದೇ ಬಿಜೆಪಿ ಸಾಧನೆ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಹಲವು ಆಶ್ವಾಸನೆಗಳೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಶೇ 10ರಷ್ಟು ಭರವಸೆಗಳನ್ನೂ ಈಡೇರಿಸಲು ವಿಫಲವಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಅಭ್ಯರ್ಥಿ ಡಿ.ಕೆ. ಸುರೇಶ್ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬೆಮೆಲ್ ಬಡಾವಣೆ, ಗಟ್ಟಿಗೆರೆಯಲ್ಲಿ ಮತಯಾಚಿಸಿದ ಅವರು ಮಾತನಾಡಿದರು.

'ಕೇಂದ್ರ ಸರ್ಕಾರ ಬೆಲೆ ಏರಿಕೆ ಮೂಲಕ ಬಡವರು, ಕೂಲಿಕಾರ್ಮಿಕರು, ಮಧ್ಯಮ ವರ್ಗದವರ ಬದುಕನ್ನು ಮೂರಾಬಟ್ಟೆಯಾಗಿಸಿದೆ' ಎಂದು ಕಿಡಿಕಾರಿದರು.

'ಕಾಂಗ್ರೆಸ್ ತನ್ನದೇ ಆದ ಇತಿಹಾಸ ಹೊಂದಿದೆ. ಶೋಷಿತರು, ದಲಿತರು ಹಾಗೂ ಹಿಂದುಳಿದವರ ಏಳಿಗೆಗೆ ಪಕ್ಷವು ಅಪಾರ ಕೊಡುಗೆ ನೀಡಿದೆ' ಎಂದರು.

ಸರ್ಕಾರಿ ಶಾಲೆ ದತ್ತು ಪಡೆಯಲು ನಿರಾಸಕ್ತಿ, ರಾಜಕಾರಣಿಗಳ ಹಿಡಿತದಲ್ಲಿ ಶಿಕ್ಷಣ ಸಂಸ್ಥೆಗಳು

ಪ್ರತಿಭೆಗಿಲ್ಲ ಅವಕಾಶ; ಹಣಕ್ಕೆ ಮಣೆ

• ಆದಿತ್ಯ ಕೆ.ಎ.


ಬೆಂಗಳೂರು ನಗರ ವಿಶ್ವವಿದ್ಯಾಲಯ

ಮತ ಮಂಥನ

ಬೆಂಗಳೂರು: ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರುತ್ತೇವೆ, ಶುಲ್ಕ ಕಡಿಮೆ ಮಾಡುತ್ತೇವೆ, ಸುಸಜ್ಜಿತ ವಸತಿ ಶಾಲೆ ತರುತ್ತೇವೆ, ಬಡ ವರ್ಗದ ವಿದ್ಯಾರ್ಥಿಗೂ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುವಂತಹ ನೀತಿ ರೂಪಿಸುತ್ತೇವೆ.. ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುತ್ತೇವೆ. ಉಚಿತ ಶಿಕ್ಷಣ ಕೊಡಿಸುತ್ತೇವೆ...

ಪ್ರತಿ ಚುನಾವಣೆ ಬಂದಾಗಲೂ ಶಿಕ್ಷಣ ಕ್ಷೇತ್ರವನ್ನು ನೆನಪಿಸಿಕೊಳ್ಳುವ ರಾಜಕೀಯ ಪಕ್ಷಗಳ ನಾಯಕರು, ಪ್ರಚಾರದ ವೇಳೆ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಇಂಥ ಭರವಸೆ, ವಾಗ್ದಾನಗಳ ಹೊಳೆಯನ್ನೇ ಹರಿಸುತ್ತಾರೆ. ಚುನಾವಣೆ ಮುಗಿದ ಮೇಲೆ ಎಲ್ಲ ನಾಯಕರು ತಮ್ಮ ಆಶ್ವಾಸನೆಗಳನ್ನು ಮರೆತು ಬಿಡುತ್ತಾರೆ.

ಸರ್ಕಾರಿ ಶಾಲೆಗಳ ಅಭಿವೃದ್ಧಿಯ ಭರವಸೆ ನೀಡುವ ಮಾತುಗಳ ನಡುವೆಯೇ, ಒಂದೊಂದೇ ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆಗಳೂ ನಡೆಯುತ್ತಿವೆ. ಕಳೆದ ವರ್ಷ ನಗರದ ಚಿಕ್ಕಪೇಟೆ ಸರ್ಕಾರಿ ಶಾಲೆಯ ₹100 ಕೋಟಿ ಮೌಲ್ಯದ ಆಸ್ತಿಯನ್ನೇ ಮಾರಾಟ ಮಾಡಲು ಸಂಚು ನಡೆದಿತ್ತು. ಕೊನೆಗೆ ಶಿಕ್ಷಕಿಯೊಬ್ಬರ ಹೋರಾಟದಿಂದ ಆಸ್ತಿ ಉಳಿದಿದೆ. ಹೀಗೆ ಮಹಾನಗರದಲ್ಲಿ ಸರ್ಕಾರಿ ಶಾಲೆಗಳ ಆಸ್ತಿ ಮೇಲೆ ರಿಯಲ್ ಎಸ್ಟೇಟ್ ಉದ್ಯಮಿಗಳ, ರಾಜಕಾರಣಿಗಳ ಕಣ್ಣು ಆಗಾಗ್ಗೆ ಬೀಳುತ್ತಲೇ ಇದೆ.

ಶುಲ್ಕ ನಿಯಂತ್ರಣವಿಲ್ಲ: ನಗರದ ಪ್ರಮುಖ ನರ್ಸರಿ ಶಾಲೆಗಳ ಪ್ರವೇಶಕ್ಕೇ ಲಕ್ಷದಷ್ಟು ಶುಲ್ಕ ಪಾವತಿಸಬೇಕಿದೆ. ಅದರಲ್ಲೂ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯಬೇಕಿದ್ದರೆ ಒಂದು ವರ್ಷದ ಮೊದಲೇ ಮಗುವಿಗೆ ಸೀಟು ಕಾಯ್ದಿರಿಸಬೇಕು! ಇನ್ನು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಪಡೆಯುವುದು ದೊಡ್ಡ ತ್ರಾಸು ಎನಿಸುತ್ತಿದೆ. ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಮಾತನಾಡುವ ಜನಪ್ರತಿನಿಧಿಗಳಿಗೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿರುವ 'ದುಬಾರಿ' ಶುಲ್ಕದ ಮೇಲೆ ನಿಯಂತ್ರಣ ಹೇರಲು ಸಾಧ್ಯವಾಗಿಲ್ಲ.

ನಗರದಲ್ಲಿರುವ ಸರ್ಕಾರಿ ಶಾಲೆಗಳ ಸ್ಥಿತಿಗತಿ ಸುಧಾರಣೆ ಆಗದಿರುವ ಕಾರಣಕ್ಕೆ, ಬಡವರ ಮಕ್ಕಳು ಅನಿವಾರ್ಯವಾಗಿ ಇಂಥ ದುಬಾರಿ ಶುಲ್ಕಗಳ ಖಾಸಗಿ ಶಾಲೆಗಳತ್ತ ಹೆಜ್ಜೆ ಹಾಕುವಂತಾಗಿದೆ. ನಗರದಲ್ಲಿರುವ ಹೆಚ್ಚಿನ ಶಾಲೆ, ಕಾಲೇಜು ಶಿಕ್ಷಣ ಸಂಸ್ಥೆಗಳು ರಾಜಕಾರಣಿಗಳ ಮಾಲೀಕತ್ವದ್ದೇ ಆಗಿರುವುದರಿಂದ, ಶುಲ್ಕ ಇಳಿಕೆ ಅಥವಾ ನಿಯಂತ್ರಣ, ಸರ್ಕಾರಿ ಶಾಲಾ– ಕಾಲೇಜುಗಳ ಅಭಿವೃದ್ಧಿ ಇವೆಲ್ಲ ಹೇಗೆ ಸಾಧ್ಯ ಎಂದು ಜನರೇ ಪ್ರಶ್ನಿಸುತ್ತಾರೆ. ಹೀಗೆ ಬಡ, ಮಧ್ಯಮವರ್ಗದ ಕುಟುಂಬದ ಮಕ್ಕಳು ಅನಿವಾರ್ಯವಾಗಿ ಖಾಸಗಿ ಶಿಕ್ಷಣಗಳಿಗೆ ಸೇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಬಸವಳಿದ ವಿ.ವಿಗಳು: ಶಾಲಾ, ಕಾಲೇಜುಗಳದ್ದು ಒಂದು ಕಥೆಯಾದರೆ, ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳದ್ದು ಇನ್ನೊಂದು ಕಥೆ. ಈ ವಿ.ವಿಗಳಲ್ಲಿ ನಿವೃತ್ತರಿಗೆ ವೇತನ ಕೊಡಲು ಆರ್ಥಿಕ ಸಮಸ್ಯೆ ಎದುರಾಗುತ್ತಿದೆ. ವಿ.ವಿಗಳ ನಿರ್ವಹಣೆ ಕಷ್ಟವಾಗಿದ್ದು, ಶಿಕ್ಷಣ ಇಲಾಖೆಗೆ ಬರುತ್ತಿರುವ ಅನುದಾನ ಸಹ ಕಡಿಮೆಯಾಗಿದೆ ಎಂದು ಸಚಿವರೊಬ್ಬರು ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಾಸ್ತವ ಸ್ಥಿತಿ ಬಿಚ್ಚಿಟ್ಟಿದ್ದರು.

ಬೆಂಗಳೂರಿನಲ್ಲಿ ಹಲವು ವಿ.ವಿಗಳಿದ್ದು ಅವುಗಳು ಮೂಲಸೌಕರ್ಯದಿಂದ ಬಳಲುತ್ತಿವೆ. ಇದಕ್ಕೆ ಸಚಿವರ ಮಾತೇ ಸಾಕ್ಷಿಯಂತಿದೆ. ಇನ್ನು ಖಾಸಗಿ ವಿ.ವಿಗಳ ಸಂಖ್ಯೆ ಹೆಚ್ಚಿದ್ದರೂ ಬಡ ಮಕ್ಕಳಿಗೆ ಕೈಗೆಟುಕದ ನಕ್ಷತ್ರವಾಗಿವೆ.

ಖಾಸಗಿ ಶಿಕ್ಷಣ ಸಂಸ್ಥೆಗಳು ಕಿರಿದಾದ ಸ್ಥಳಗಳಲ್ಲಿ ಶಾಲೆ, ಕಾಲೇಜುಗಳನ್ನು ತೆರೆಯುತ್ತಿವೆ. ಇಂಥವುಗಳಿಗೆ ಆಟದ ಮೈದಾನವಿರುವುದಿಲ್ಲ, ನುರಿತ ಶಿಕ್ಷಕರ ಕೊರತೆಯಿರುತ್ತದೆ. ಇಂಥ ಸಂಸ್ಥೆಗಳ ಬಗ್ಗೆ ಜನಪ್ರತಿನಿಧಿಗಳು ಎಲ್ಲೂ ಧ್ವನಿ ಎತ್ತುವುದೂ ಇಲ್ಲ. ಅನಿವಾರ್ಯವಾಗಿ ಕೆಲ ಪೋಷಕರು ಸಾವಿರಾರು ರೂಪಾಯಿ ಪಾವತಿಸಿ ಮಕ್ಕಳನ್ನು ಅಂತಹ ಸಂಸ್ಥೆಗಳಿಗೆ ಸೇರಿಸುತ್ತಿದ್ದಾರೆ.

ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಹಿಂದಿನ ಸರ್ಕಾರದ ಅವಧಿಯಲ್ಲಿ ಶಿಕ್ಷಣ ಸುಧಾರಣೆಗಳ ಸಲಹೆಗಾರರಾಗಿ ನೇಮಕಗೊಂಡಿದ್ದ ಪ್ರೊ.ಎಂ.ಆರ್.ದೊರೆಸ್ವಾಮಿ ಅವರು ಎರಡು ವರ್ಷಗಳ ಹಿಂದೆ ದಿಟ್ಟಹೆಜ್ಜೆ ಇಟ್ಟಿದ್ದರು. ಇದಕ್ಕೆ ಶಾಸಕರಿಂದ ಸ್ಪಂದನೆ ಸಿಗಲಿಲ್ಲ.


ಸರ್ಕಾರಿ ಶಾಲೆಗಳನ್ನು ಶಾಸಕರು ದತ್ತು ಪಡೆದು, ಅಭಿವೃದ್ಧಿ ಪಡಿಸುವ ಯೋಜನೆಯನ್ನು ದೊರೆಸ್ವಾಮಿ ಜಾರಿಗೊಳಿಸಿದ್ದರು. ತಲಾ ಮೂರು ಶಾಲೆಗಳನ್ನು ಅಭಿವೃದ್ಧಿಪಡಿಸುವಂತೆ ನಗರದ ಎಲ್ಲ ಶಾಸಕರಿಗೆ ದತ್ತು ಸ್ವೀಕಾರ ಪತ್ರಗಳನ್ನು ಹಸ್ತಾಂತರಿಸಿದ್ದರು. ಆದರೆ, ಕೆಲ ಶಾಸಕರು ತಾವು ದತ್ತು ಪಡೆದ ಶಾಲೆಗಳನ್ನು ಅಭಿವೃದ್ಧಿ ಪಡಿಸಿ, ಹಸ್ತಾಂತರಿಸಲೇ ಇಲ್ಲ. ಶಾಲೆಯತ್ತ ತಿರುಗಿಯೂ ನೋಡಲಿಲ್ಲ.

ನವೋದಯ ಶಾಲೆಗೆ ಬೇಡಿಕೆ

5 ರಿಂದ 12ನೇ ತರಗತಿವರೆಗೆ ಗ್ರಾಮ ಪಂಚಾಯಿತಿ ಮತ್ತು ನಗರದ ವಾರ್ಡ್ ಹಂತದಲ್ಲಿ ಕೇಂದ್ರೀಯ ಶಾಲೆಯ ಮಾದರಿಯಲ್ಲಿ ಸುಸಜ್ಜಿತ ರಾಜೀವ್ ಗಾಂಧಿ ಸಾರ್ವಜನಿಕ ನವೋದಯ ಶಾಲೆಗಳನ್ನು ಪ್ರಾರಂಭಿಸಲು ಮುಂದಿನ ನಾಲ್ಕು ವರ್ಷಗಳಿಗೆ ಕ್ರಿಯಾ ಯೋಜನೆ ತಯಾರಿಸಬೇಕು ಎಂದು ಒತ್ತಾಯಿಸಿ, ಶಿಕ್ಷಣ ತಜ್ಞ ವಿ.ಪಿ.ನಿರಂಜನಾರಾಧ್ಯ ಅವರು ಇತ್ತೀಚೆಗೆ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆದರೆ, ಸರ್ಕಾರ ಮಾತ್ರ ಆ ನಿಟ್ಟಿನಲ್ಲಿ ಪ್ರಯತ್ನಕ್ಕೆ ಕೈ ಹಾಕಿಲ್ಲ.

ಸಾವಿರ ಶಾಲೆಗಳಲ್ಲಿ ಉಭಯ ಮಾಧ್ಯಮ (ಆಂಗ್ಲ ಮತ್ತು ಕನ್ನಡ) ಪ್ರಾರಂಭಿಸುವ ತೀರ್ಮಾನವನ್ನೂ ಕೈ ಬಿಡಬೇಕು. ಪೂರ್ವ ಪ್ರಾಥಮಿಕದಿಂದಲೇ ಪಂಚಾಯಿತಿಗೊಂದು ಸಾರ್ವಜನಿಕ ಶಾಲೆ ಪ್ರಾರಂಭಿಸುವ ಬದಲು, 2017ರ 'ಸರ್ಕಾರಿ ಶಾಲೆಗಳ ಸಬಲೀಕರಣ ವರದಿ'ಯ ತೀರ್ಮಾನದಂತೆ ಪೂರ್ವ ಪ್ರಾಥಮಿಕದಿಂದ 4ನೇ ತರಗತಿವರೆಗೆ ಬುನಾದಿ ಪ್ರಾಥಮಿಕ ಶಿಕ್ಷಣವನ್ನು ಆಯಾ ಹಳ್ಳಿ, ಹಟ್ಟಿ, ಹಾಡಿಗಳಲ್ಲಿ ಉಳಿಸಿಕೊಳ್ಳಬೇಕೆಂದು ಮುಖ್ಯಮಂತ್ರಿಗೆ ಬರೆದ ಪತ್ರದಲ್ಲಿ ಅವರು ಉಲ್ಲೇಖಿಸಿದ್ದರು.

ಸರ್ಕಾರದ ಶಿಕ್ಷಣ ನೀತಿಯೇ ಸರಿಯಿಲ್ಲ



ವಿಧಾನಸೌಧದ ಅಕ್ಕಪಕ್ಕದಲ್ಲೇ ಸಾಕಷ್ಟು ಸರ್ಕಾರಿ ಶಿಕ್ಷಣ ಸಂಸ್ಥೆಗಳಿವೆ. ಅವುಗಳು ಮೂಲಸೌಕರ್ಯದಿಂದ ಬಳಲುತ್ತಿವೆ. ವಿ.ವಿಗಳಲ್ಲಿ ಪ್ರಾಧ್ಯಾಪಕರ ಕೊರತೆಯಿದೆ. ನಗರದಲ್ಲಿ ಅಗತ್ಯಕ್ಕೆ ತಕ್ಕಂತೆ ಸರ್ಕಾರಿ ಮೆಡಿಕಲ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಿಲ್ಲ. ಸಿಟಿ ಮಾರುಕಟ್ಟೆಯ ಕೋಟೆ ಪ್ರೌಢಶಾಲೆಯಲ್ಲಿ ಹಿಂದೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿತ್ತು. ಈಗ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ.

ಸರ್ಕಾರದ ಶಿಕ್ಷಣದ ನೀತಿಯೇ ಸರಿಯಿಲ್ಲ. ಇಂತಹ ಕೆಟ್ಟ ನೀತಿ ಸರ್ಕಾರಿ ಸಂಸ್ಥೆಗಳನ್ನು ಸಾಯಿಸುತ್ತಿದೆ. ಮತ್ತೊಂದೆಡೆ, ಸರ್ಕಾರಿ ಸಂಸ್ಥೆಗಳು ಅನುದಾನ ಲಭಿಸದೆ ದಯನೀಯ ಸ್ಥಿತಿ ಎದುರಿಸುತ್ತಿವೆ.

ವಿ.ಎನ್.ರಾಜಶೇಖರ್, ಉಪಾಧ್ಯಕ್ಷ, ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ

ಲೋಕಸಭಾ ಚುನಾವಣೆ | ಮತದಾರರು ಏನಂತಾರೆ?

ಮೆಟ್ರೊ ಕಾಮಗಾರಿ ಬೇಗ ಶುರುಮಾಡಿ



ಬೆಂಗಳೂರು ದಕ್ಷಿಣ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳು ಮೊದಲಿಗೆ ನಾಯಂಡಹಳ್ಳಿ ಜಂಕ್ಷನ್‌ನಿಂದ ಜೆ.ಪಿ. ನಗರದವರೆಗೂ ಮೆಟ್ರೊ ಕಾಮಗಾರಿ ಆದಷ್ಟು ಬೇಗ ಶುರು ಮಾಡಿಸಿದರೆ ಮುಂದೆ ಟ್ರಾಫಿಕ್ ಸಮಸ್ಯೆ ಸ್ವಲ್ಪ ಕಡಿಮೆ ಆಗಬಹುದು. ಹಾಗೇ ಸಂಸತ್ ಅಧಿವೇಶನ ಇಲ್ಲದ ಸಮಯದಲ್ಲಿ ಸಂಸದರು ಕ್ಷೇತ್ರದಲ್ಲಿ ಓಡಾಡಬೇಕು. ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಜನಸಂಪರ್ಕ ಸಭೆಗಳನ್ನು ನಡೆಸಿ ಸಮಸ್ಯೆಗಳನ್ನು ಸರಿಪಡಿಸಬೇಕು. ಸರ್ಕಾರಿ ಕಚೇರಿಗಳಲ್ಲಿ ನಡೆಯುವ ಭ್ರಷ್ಟಾಚಾರ ಲಂಚಗುಳಿತನ ತಡೆಗಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಾಸ್‌ಪೋರ್ಟ್ ಕಚೇರಿ ತೆರೆಯಬೇಕು. ಸರ್ಕಾರಿ ಶಾಲೆ ಕಾಲೇಜುಗಳನ್ನು ಉನ್ನತೀಕರಿಸಬೇಕು. ಒಳ್ಳೆಯ ಚಿಕಿತ್ಸೆಗೆ ಬೇಕಾಗುವ ಉಪಕರಣಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ಒದಗಿಸಬೇಕು.

ಎ.ಸಿ. ಸುರೇಶ್, ಗಿರಿನಗರ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ

ಶ್ರೀಮಂತರ ಒತ್ತುವರಿ ತೆರವಾಗಿಲ್ಲ



ಬೆಂಗಳೂರು ಗ್ರಾಮಾಂತರ ಕ್ಷೇತ್ರದ ರಾಜರಾಜೇಶ್ವರಿನಗರದ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಕೆರೆಗಳನ್ನು ಕಟ್ಟಡಗಳ ನಿರ್ಮಾಣ ಮಾಡುವುದಕ್ಕಾಗಿ ಸಂಪೂರ್ಣವಾಗಿ ಕಬಳಿಸಲಾಗಿದೆ. ಇಲ್ಲವೇ ಒತ್ತುವರಿ ಮಾಡಲಾಗಿದೆ. ಒತ್ತುವರಿ ಮಾಡಿದ ಬಡವರ ಮನೆಗಳನ್ನು ನಿರ್ದಾಕ್ಷಿಣ್ಯವಾಗಿ ಒಡೆದು ಹಾಕಲಾಗಿದೆ ಗಣ್ಯರ ಮನೆಗಳನ್ನು ಮಾತ್ರ ಇನ್ನೂ ಮುಟ್ಟಿಲ್ಲ. ನಿತ್ಯ ಸಾವಿರಾರು ವಾಹನಗಳು ಸಂಚರಿಸುವ ರಸ್ತೆಗಳೂ ಅಭಿವೃದ್ಧಿಯತ್ತ ಮುಖ ಮಾಡಿಲ್ಲ. ರಸ್ತೆಗಳ ಬದಿಯಲ್ಲೇ ಕಸ ಎಸೆದು ಹೋಗುವವರನ್ನು ಶಿಕ್ಷಿಸುತ್ತಿಲ್ಲ. ಅಲ್ಲಲ್ಲಿ ಅರಣ್ಯ ಪ್ರದೇಶವಿದ್ದು ಅಪರೂಪದ ಪ್ರಾಣಿ– ಪಕ್ಷಿಗಳು ಉಳಿದುಕೊಂಡಿದ್ದರೂ ಅವುಗಳಿಗೆ ರಕ್ಷಣೆಯಿಲ್ಲ. ಕೆಲವು ಕಡೆ ದೇವಸ್ಥಾನಗಳು ಪಾದಚಾರಿ ರಸ್ತೆ ಆಕ್ರಮಿಸಿಕೊಂಡಿದ್ದರೂ ಕ್ರಮ ತೆಗೆದುಕೊಂಡಿಲ್ಲ. ಪಕ್ಷದ ತತ್ವ ಸಿದ್ಧಾಂತಗಳನ್ನು ಬದಿಗಿಟ್ಟು, ಜನರ ನಿತ್ಯ ಸಂಕಟಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ಅಭ್ಯರ್ಥಿಯನ್ನು ಆಯ್ಕೆಮಾಡಬೇಕಾಗಿದೆ.

ಬೈರಮಂಗಲ ರಾಮೇಗೌಡ, 84, ಪುಷ್ಪಗಿರಿನಗರ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ
96060 38256

ವಿಜಯಪುರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ

'ದಿನೇಶ್ ಮನೆಯಲ್ಲೇ ಅರ್ಧ ಪಾಕಿಸ್ತಾನ'

ಪ್ರಜಾವಾಣಿ ವಾರ್ತೆ


ಯತ್ನಾಳ

ವಿಜಯಪುರ: 'ಸಚಿವ ದಿನೇಶ್ ಗುಂಡೂರಾವ್ ಅವರ ಮನೆಯಲ್ಲೇ ಅರ್ಧ ಪಾಕಿಸ್ತಾನ ಇದೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಇಲ್ಲಿ ಹೇಳಿದರು.

ಬೆಂಗಳೂರಿನ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಅಧಿಕಾರಿಗಳು ಬಿಜೆಪಿ ಪದಾಧಿಕಾರಿಗೆ ವಿಚಾರಣೆಗೆ ಒಳಪಡಿಸಿದ ಕುರಿತು ಸಚಿವ ಗುಂಡೂರಾವ್ ಅವರು 'ಎಕ್ಸ್'ನಲ್ಲಿ ಸಂದೇಶ ಹಾಕಿದ್ದರು.

ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಯತ್ನಾಳ, 'ಸಚಿವರಿಗೆ ದೇಶ ವಿರೋಧಿ ಹೇಳಿಕೆ ಕೊಡುವುದು ಚಟವಾಗಿದೆ' ಎಂದರು.

'ಬಿಜೆಪಿ ಪದಾಧಿಕಾರಿ ಮೊಬೈಲ್ ಸಿಮ್ ವ್ಯಾಪಾರಿಯಾಗಿದ್ದಾರೆ. ಅವರ ಬಳಿ ಶಂಕಿತ ಉಗ್ರರು ಸಿಮ್ ಖರೀದಿಸಿದ್ದ ಹಿನ್ನೆಲೆಯಲ್ಲಿ ಎನ್‌ಐಎ ವಿಚಾರಣೆ ನಡೆಸಿದೆ' ಎಂದು ಹೇಳಿದರು.

ಯತ್ನಾಳ ಹುಚ್ಚು ಶಾಸಕ– ಸಚಿವ ಕಿಡಿ

ಬೆಂಗಳೂರು: 'ಭಾರತೀಯ ಭ್ರಷ್ಟರ ಪಾರ್ಟಿಯಲ್ಲಿ ಯತ್ನಾಳ ಎಂಬ ಹುಚ್ಚು ಶಾಸಕ ಬಾಯಿಗೆ ಬಂದಂತೆ ಮಾತನಾಡುತ್ತಲೇ ಇರುತ್ತಾರೆ. ಯತ್ನಾಳರಂತೆ ನಾವು ಮನೆ ಒಡೆಯುವ ಕೆಲಸ, ಕೀಳು ಭಾಷೆ ಬಳಕೆ ಮಾಡುವುದಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಎಕ್ಸ್' ಮೂಲಕ ಪ್ರತಿಕ್ರಿಯಿಸಿರುವ ದಿನೇಶ್, 'ಮತಾಂಧತೆಯಲ್ಲಿ ಬಿದ್ದು ಹೊರಳಾಡುತ್ತಿರುವ ಯತ್ನಾಳ ಮಾತೆತ್ತಿದರೆ ಪಾಕಿಸ್ತಾನ ಎನ್ನುತ್ತಾರೆ. ಅವರಿಗೆ ಪಾಕಿಸ್ತಾನದ ಮೇಲೆ ಅಷ್ಟೊಂದು ಪ್ರೀತಿಯಿದ್ದರೆ ಅಲ್ಲಿಗೇ ಹೋಗಲಿ' ಎಂದಿದ್ದಾರೆ.

ದೂರು: ವಿಜಯಪುರಕ್ಕೆ ಹಸ್ತಾಂತರ

ಬೆಂಗಳೂರು: 'ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಕುಟುಂಬದವರ ಬಗ್ಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ' ಎಂದು ಆರೋಪಿಸಿ ಗಾಂಧಿನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಜೆ. ಸರವಣನ್ ಅವರು ಶೇಷಾದ್ರಿಪುರ ಠಾಣೆಗೆ ಶನಿವಾರ ದೂರು ನೀಡಿದ್ದಾರೆ.

ದೂರು ಸ್ವೀಕರಿಸಿರುವ ಪೊಲೀಸರು, 'ಬಿಜೆಪಿಯ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ವಿಜಯಪುರದಲ್ಲಿ ಮಾತನಾಡಿದ್ದಾರೆ. ಕೃತ್ಯ ನಡೆದ ಆಧಾರದಲ್ಲಿ ವಿಜಯಪುರ ಜಿಲ್ಲಾ ಪೊಲೀಸರಿಗೆ ದೂರು ಹಸ್ತಾಂತರಿಸಲಾಗುವುದು' ಎಂದಿದ್ದಾರೆ.

ಯುಗಾದಿ ನಂತರ ನಿರ್ಧಾರ: ವೀಣಾ ಕಾಶಪ್ಪನವರ

ಬಾಗಲಕೋಟೆ: 'ಚುನಾವಣಾ ಪ್ರಚಾರಕ್ಕೆ ಹೋಗದೆ ತಟಸ್ಥೆ ಆಗಿರುವೆ. ಯುಗಾದಿ ಬಳಿಕ ನಿರ್ಧಾರ ಪ್ರಕಟಿಸುವೆ. ನನ್ನ ಹೋರಾಟ ನಾಯಕರ ವಿರುದ್ಧವೇ ಹೊರತು ಪಕ್ಷದ ವಿರುದ್ಧ ಅಲ್ಲ' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವೀಣಾ ಕಾಶಪ್ಪನವರ ಹೇಳಿದರು.

ನವನಗರದಲ್ಲಿ ಶನಿವಾರ ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಅವರು, 'ಬೆಂಬಲಿಗರ ಸಭೆ ರದ್ದಾಗಿದೆ ಎಂದು ವದಂತಿ ಹರಡಿ ಮುಖಂಡರು, ಕಾರ್ಯಕರ್ತರು ಬಾರದಂತೆ ಕುತಂತ್ರ ಮಾಡಿದ್ದಾರೆ' ಎಂದರು.

'ಜಿಲ್ಲೆಯ ಶಾಸಕರ ಗೆಲುವಿಗಾಗಿ ಶ್ರಮಿಸಿದ್ದೇನೆ. ಆದರೆ, ಅವರು ನನ್ನ ಹೆಸರು ಹೇಳಿಲ್ಲ. ಶಾಸಕರಿಗೆ ಮಾಡಿದ ಅನ್ಯಾಯ ಏನು? ಪಕ್ಷದ ಪರ ಕೆಲಸ ಮಾಡಿದ್ದು ತಪ್ಪೇ? ಯಾಕೆ ನನಗೆ ಅನ್ಯಾಯ ಮಾಡಲಾಯಿತು' ಎಂದು ಅವರು ಪ್ರಶ್ನಿಸಿದರು.

'ಬೆಂಗಳೂರು ದುಃಸ್ಥಿತಿಗೆ ಕಾಂಗ್ರೆಸ್ ಕಾರಣ'

ಪ್ರಜಾವಾಣಿ ವಾರ್ತೆ


ನಿರ್ಮಲಾ ಸೀತಾರಾಮನ್

ಬೆಂಗಳೂರು: 'ಬೆಂಗಳೂರಿನಲ್ಲಿ ಜನರು ಬೇರೆ ದಾರಿ ಇಲ್ಲದೆ ಕಲುಷಿತ ನೀರು ಕುಡಿಯುತ್ತಿದ್ದಾರೆ. ಕಾಲರಾವೂ ಪತ್ತೆಯಾಗಿದೆ. ಕಾಂಗ್ರೆಸ್ ನೇತೃತ್ವದ ಸರ್ಕಾರದ ದುರಾಡಳಿತವೇ ಬೆಂಗಳೂರಿನ ಈ ದುಸ್ಥಿತಿಗೆ ಕಾರಣ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರೋಪಿಸಿದರು.

ಬಿಜೆಪಿ ರಾಜ್ಯ ಘಟಕದ ಮಾಧ್ಯಮ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ಜನರಿಗೆ ಕುಡಿಯಲು ಶುದ್ಧ ನೀರು ದೊರೆಯುತ್ತಿಲ್ಲ. ರಾಜ್ಯ ಸರ್ಕಾರ ಸರಿಯಾಗಿ ಕೆಲಸ ಮಾಡಿದ್ದರೆ ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ' ಎಂದರು.

ನೀರು ಪೂರೈಕೆ ಮತ್ತು ನೀರಾವರಿ ಕಾಮಗಾರಿಗಳ ಕುರಿತು ರಾಜ್ಯ ಸರ್ಕಾರದ ಪ್ರಮುಖರು ಈಗ ಮಾತನಾಡಲು ಆರಂಭಿಸಿದ್ದಾರೆ. 2023ರ ಮೇ ತಿಂಗಳಲ್ಲಿ ₹ 20,000 ಕೋಟಿ ವೆಚ್ಚದ ನೀರಾವರಿ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿತ್ತು. ಎಲ್ಲವೂ ಸ್ಥಗಿತಗೊಂಡಿವೆ. ಜಲ ಜೀವನ್ ಮಿಷನ್ ಯೋಜನೆಯ ಕೆಲಸವೂ ಕರ್ನಾಟಕದಲ್ಲಿ ಸರಿಯಾಗಿ ನಡೆಯುತ್ತಿಲ್ಲ ಎಂದು ದೂರಿದರು.

ತುಷ್ಟೀಕರಣದಿಂದ ಅಪಾಯ: 'ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುತ್ತಿರುವುದರಿಂದ ಸಮಾಜಕ್ಕೆ ಅಪಾಯ ಎದುರಾಗಿದೆ. ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ನಡೆದ ಬಾಂಬ್ ಸ್ಫೋಟಕ್ಕೆ ಕಾಂಗ್ರೆಸ್ ಪಕ್ಷವು ಮಾಡುತ್ತಿರುವ ಅಲ್ಪಸಂಖ್ಯಾತರ ತುಷ್ಟೀಕರಣವೇ ಕಾರಣ' ಎಂದು ನಿರ್ಮಲಾ ಆಪಾದಿಸಿದರು.

ಬಾಂಬ್ ಸ್ಫೋಟದ ಕುರಿತು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತನಿಖೆ ನಡೆಸುತ್ತಿದೆ. ಪ್ರಮುಖ ಆರೋಪಿಗಳು ಯಾರು? ಎಂಬ ಮಾಹಿತಿಯನ್ನೂ ಬಹಿರಂಗಪಡಿಸಿದೆ. ಆದರೆ, ಪ್ರಕರಣದ ಸಾಕ್ಷಿಯೊಬ್ಬರನ್ನು ಆರೋಪಿ ಎಂದು ಬಿಂಬಿಸುವ ಕೆಲಸವನ್ನು ಈ ರಾಜ್ಯದ ಆರೋಗ್ಯ ಸಚಿವರು ಮಾಡಿದ್ದಾರೆ. ಪ್ರಕರಣಕ್ಕೆ ಸಾಕ್ಷಿಯಾದ ವ್ಯಕ್ತಿಯ ಗುರುತು ಅವರಿಂದಾಗಿ ಬಹಿರಂಗವಾಗಿದ್ದು, ಅವರ ಜೀವಕ್ಕೆ ಅಪಾಯ ಎದುರಾಗಿದೆ ಎಂದರು.

'ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುವುದಕ್ಕಾಗಿ 'ಹಿಂದೂ ಭಯೋತ್ಪಾದನೆ' ಎಂಬುದನ್ನು ಕಾಂಗ್ರೆಸ್‌ನ ಕೆಲವು ನಾಯಕರು ಸೃಷ್ಟಿಸಿದ್ದರು. ಈಗ ಕೂಡ ಬಾಂಬ್ ಸ್ಫೋಟದ ಪ್ರಕರಣದಲ್ಲಿ ಗಮನ ಬೇರೆಡೆ ಸೆಳೆಯಲು ಸಚಿವರೇ ಸುಳ್ಳು ಹಬ್ಬಿಸುತ್ತಿದ್ದಾರೆ' ಎಂದು ದೂರಿದರು.

ಬೆಂಗಳೂರಿನಲ್ಲಿ ಪಶು ಆಸ್ಪತ್ರೆ ನಿರ್ಮಾಣಕ್ಕೆ ದಾನಿಯೊಬ್ಬರು ನೀಡಿದ್ದ ಜಮೀನನ್ನು ಈಗ ಅಲ್ಪಸಂಖ್ಯಾತ ಸಮುದಾಯದ ಸಂಸ್ಥೆಯೊಂದಕ್ಕೆ ನೀಡಲಾಗಿದೆ. ಇದು ಕೂಡ ಕಾಂಗ್ರೆಸ್‌ನ ತುಷ್ಟೀಕರಣ ನೀತಿಗೆ ಮತ್ತೊಂದು ಉದಾಹರಣೆ ಎಂದರು.

ರಾಜ್ಯದ ತೆರಿಗೆ, ಕೇಂದ್ರ ದರೋಡೆ ಕೆಆರ್‌ಎಸ್ ಪಕ್ಷ ಆರೋಪ

ಬೆಂಗಳೂರು: 'ರಾಜ್ಯಕ್ಕೆ ಬರ ಪರಿಹಾರ ಕೊಡಲು ಸಾಧ್ಯವಾಗದಿದ್ದರೆ ನೇರವಾಗಿ ಹೇಳಿ, ನಾವು ಕೊಡುವ ತೆರಿಗೆ ಹಣವನ್ನು ಕೇಂದ್ರ ಸರ್ಕಾರ ಹಗಲು ದರೋಡೆ ಮಾಡಿದೆ ಎಂದು ಸಮಾಧಾನ ಮಾಡಿಕೊಂಡು ಬದುಕುತ್ತೇವೆ' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಹೇಳಿದೆ.

ಈ ಕುರಿತು 'ಎಕ್ಸ್'ನಲ್ಲಿ ಹೇಳಿಕೆ ನೀಡಿರುವ ಪಕ್ಷ, 'ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಸರಿಯಾಗಿ ಸುಳ್ಳು ಹೇಳಲೂ ಬರುವುದಿಲ್ಲ. ಕೇಂದ್ರದ ಅಧಿಕಾರಿಗಳ ತಂಡ ಬರ ಪರಿಸ್ಥಿತಿ ಅಧ್ಯಯನ ಮಾಡಲು ಯಾವಾಗ ರಾಜ್ಯಕ್ಕೆ ಬಂದಿದೆ. ಕನ್ನಡಿಗರನ್ನು ಮೂರ್ಖರಾಗಿಸಬೇಡಿ' ಎಂದು ಆಕ್ರೋಶ ವ್ಯಕ್ತಪಡಿಸಿದೆ.

'ಕರ್ನಾಟಕದಲ್ಲಿ ಬರ ಇದೆ. ಜನರು ನರಳುತ್ತಿದ್ದಾರೆ. ಚುನಾವಣೆ ಘೋಷಣೆಯಾಗುತ್ತದೆ. ತ್ವರಿತ ಸಭೆ ಮಾಡಿ ಒಪ್ಪಿಗೆ ಪಡೆಯಬೇಕು ಎಂಬ ಕನಿಷ್ಠ-ಮಟ್ಟದ ಆಡಳಿತಾತ್ಮಕ ಜ್ಞಾನವೂ ಇಲ್ಲ' ಎಂದು ಟೀಕಿಸಿದೆ.

ನಗರ ಮೂರು ಕ್ಷೇತ್ರಗಳಲ್ಲಿ ಎಂ.ಪಿ. ಲ್ಯಾಡ್ಸ್ ನಿಧಿಯಿಂದ ₹55.88 ಕೋಟಿ ಬಳಕೆ

ಮೂಲಸೌಕರ್ಯ ಅಭಿವೃದ್ಧಿಗೆ ಶೇ 42ರಷ್ಟು ಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೂವರು ಸಂಸದರು ತಮ್ಮ ಲೋಕಸಭಾ ಕ್ಷೇತ್ರದ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆಯಲ್ಲಿನ (ಎಂ.ಪಿ. ಲ್ಯಾಡ್ಸ್) ₹55.88 ಕೋಟಿ ಉಪಯೋಗಿಸಿಕೊಂಡಿದ್ದು, ಅದರಲ್ಲಿ ಶೇ 42.67ರಷ್ಟು ಅನುದಾನವನ್ನು ಸಾರ್ವಜನಿಕ ಮೂಲಸೌಕರ್ಯ ಅಭಿವೃದ್ಧಿಗೆ ಬಳಸಿದ್ದಾರೆ.

ಬೆಂಗಳೂರಿನ ಉತ್ತರ, ಕೇಂದ್ರ ಮತ್ತು ದಕ್ಷಿಣ ಲೋಕಸಭಾ ಕ್ಷೇತ್ರಗಳಲ್ಲಿ 2019ರಿಂದ 2024ರವರೆಗಿನ ಅನುದಾನ ಬಳಕೆ ವಿವರಗಳನ್ನು ಪರಿಶೀಲಿಸಿ 'ಬೆಂಗಳೂರು ಪೊಲಿಟಿಕಲ್ ಆ್ಯಕ್ಷನ್ ಕಮಿಟಿ' (ಬಿ–ಪ್ಯಾಕ್) ಶನಿವಾರ ಬಿಡುಗಡೆ ಮಾಡಿದ ವರದಿಯಲ್ಲಿ ಈ ಅಂಶಗಳಿವೆ.

ಅನುದಾನದಲ್ಲಿ ಶುದ್ಧ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಗೆ ಖರ್ಚು ಮಾಡಲಾಗಿದೆ. ನಂತರ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ನೀಡಲಾಗಿದೆ. ಸಂಸದರೊಬ್ಬರಿಗೆ ಪ್ರತಿವರ್ಷ ಎಂ.ಪಿ.ಲ್ಯಾಡ್ಸ್‌ಯಡಿ ₹ 5 ಕೋಟಿ ಅನುದಾನ ಲಭ್ಯವಾಗುತ್ತದೆ.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ₹19.36 ಕೋಟಿ ಅನುದಾನ ಬಳಸಿಕೊಂಡಿದ್ದರೆ, ಕೇಂದ್ರ ಕ್ಷೇತ್ರದ ಪಿ.ಸಿ. ಮೋಹನ್ ₹18.69 ಹಾಗೂ ಉತ್ತರ ಕ್ಷೇತ್ರದ ಡಿ.ವಿ. ಸದಾನಂದ ಗೌಡ ಅವರು ₹17.97 ಕೋಟಿ ಅನುದಾನ ಉಪಯೋಗಿಸಿದ್ದಾರೆ.

'ಈ ವರದಿ ಮೂಲಕ ಸಂಸದರು ಐದು ವರ್ಷಗಳಲ್ಲಿ ಕೈಗೊಂಡ ಕಾರ್ಯಗಳ ಬಗ್ಗೆ ಮತದಾರರಿಗೆ ತಿಳಿಸುವ ಪ್ರಯತ್ನ ಇದಾಗಿದೆ' ಎಂದು ಬಿ.ಪ್ಯಾಕ್ ಟ್ರಸ್ಟಿ ರೇವತಿ ಅಶೋಕ್ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕೋವಿಡ್' ಹಿನ್ನೆಲೆಯಲ್ಲಿ ಎ.ಪಿ. ಲ್ಯಾಡ್ಸ್ ಅನ್ನು 2020ರ ಏಪ್ರಿಲ್ 6ರಿಂದ 2021ರ ನವೆಂಬರ್ 9ರವರೆಗೆ ಅಮಾನತುಗೊಳಿಸಲಾಗಿತ್ತು. 2020–21ನೇ ಆರ್ಥಿಕ ಸಾಲಿನಲ್ಲಿ ಈ ಯೋಜನೆಯ ಯಾವುದೇ ಅನುದಾನ ಬಿಡುಗಡೆ ಆಗಿಲ್ಲ. 2021–22ರ ಆರ್ಥಿಕ ವರ್ಷದಲ್ಲಿ 2021ರ ನವೆಂಬರ್ 10ರಿಂದ 2022ರ ಮಾರ್ಚ್ 31ರವರೆಗೆ ಪ್ರತಿ ಸಂಸದರಿಗೆ ₹2 ಕೋಟಿ ಹಣ ಬಿಡುಗಡೆ ಆಗಿದೆ' ಎಂದರು.



ಅನುದಾನ ಬಳಕೆ– ಯಾವುದಕ್ಕೆ ಎಷ್ಟು?

₹55.88 ಕೋಟಿ — 5 ವರ್ಷಗಳಲ್ಲಿ 3 ಕ್ಷೇತ್ರಗಳಿಗೆ ಪ್ರದೇಶಾಭಿವೃದ್ಧಿ ನಿಧಿಯಡಿ ಬಿಡುಗಡೆಯಾದ ಒಟ್ಟು ಅನುದಾನ

₹23.47 ಕೋಟಿ (ಶೇ 42.67ರಷ್ಟು) — ಸಾರ್ವಜನಿಕ ಮೂಲಸೌಕರ್ಯ ಅಭಿವೃದ್ಧಿಗೆ ಬಳಕೆ

₹16.03 ಕೋಟಿ (ಶೇ 29.15ರಷ್ಟು) — ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಗೆ ಬಳಕೆ


₹7.27 ಕೋಟಿ (ಶೇ 13.22ರಷ್ಟು) — ಶಿಕ್ಷಣ ಕ್ಷೇತ್ರಕ್ಕೆ ಬಳಕೆ


ಅಧಿವೇಶನದಲ್ಲಿ ನಗರ ಸಂಸದರ ಭಾಗವಹಿಸುವಿಕೆ


ಲೋಕಸಭಾ ಕ್ಷೇತ್ರ	ಭಾಗವಹಿಸಿದ ದಿನಗಳು	ಶೇಕಡಾವಾರು	ಕೇಳಿದ ಪ್ರಶ್ನೆಗಳು
ಬೆಂ. ಉತ್ತರ (ಡಿ.ವಿ. ಸದಾನಂದಗೌಡ)	100	ಶೇ 63	–
ಬೆಂ. ಕೇಂದ್ರ (ಪಿ.ಸಿ. ಮೋಹನ್)	224	ಶೇ 82	189
ಬೆಂ. ದಕ್ಷಿಣ (ತೇಜಸ್ವಿ ಸೂರ್ಯ)	212	ಶೇ 78	382
ಅಧಿವೇಶನ ನಡೆದ ಒಟ್ಟು ದಿನಗಳು	273		

ವಲಯವಾರು ಅನುದಾನ ಬಳಕೆ (₹ ಕೋಟಿಗಳಲ್ಲಿ)

ಸೇವಾ–ಸೌಲಭ್ಯಗಳು	ಬೆಂಗಳೂರು ಉತ್ತರ	ಬೆಂಗಳೂರು ಕೇಂದ್ರ	ಬೆಂಗಳೂರು ದಕ್ಷಿಣ
ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ	6.38	6.58	3.07
ಮೂಲಸೌಕರ್ಯ ಅಭಿವೃದ್ಧಿ	9.18	5.42	8.86
ಕ್ರೀಡೆ ಮತ್ತು ಯುವಜನಸೇವೆ	–	1.22	–
ಶಿಕ್ಷಣ	1.92	2.59	2.76
ಆರೋಗ್ಯ ಮತ್ತು ಕುಟುಂಬ ಕಲ್ಯಾಣ	1.05	1.57	3.79
ಯೋಗ ಕೇಂದ್ರ	0.1	–	–
ಸಿ.ಸಿ.ಟಿವಿ	0.05	0.21	0.55
ಪಶುಸಂಗೋಪನೆ	–	0.20	–
ಕೋವಿಡ್ ಪರಿಹಾರ	–	–	0.35
ಒಟ್ಟು	18.69	17.97	19.36







'ಕಾಂಗ್ರೆಸ್‌ಗೆ ಗ್ಯಾರಂಟಿಗಳೇ ಶ್ರೀರಕ್ಷೆ'

ಯಲಹಂಕ: 'ಇಡೀ ಕೇಂದ್ರ ಸರ್ಕಾರವೇ ಬಂದು ನಿಂತುಕೊಂಡರೂ ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ನಿಶ್ಚಿತ' ಎಂದು ಶಾಸಕ ಪ್ರದೀಪ್ ಈಶ್ವರ್ ಸವಾಲು ಹಾಕಿದರು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಎಲ್ಲೆಡೆ ಕಾಂಗ್ರೆಸ್ ಪಕ್ಷದ ಹವಾ ಇದೆ. ಸರ್ಕಾರದ ಐದು ಗ್ಯಾರಂಟಿಗಳು ಕೆಲಸ ಮಾಡಲಿದ್ದು, ಚಿಕ್ಕ ಬಳ್ಳಾಪುರ ಲೋಕಸಭಾ ಕ್ಷೇತ್ರವು ಕಾಂಗ್ರೆಸ್‌ನ ಭದ್ರ ಕೋಟೆ ಎಂಬುದನ್ನು ಸಾಬೀತು ಪಡಿಸುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದೆ' ಎಂದರು.

ಅಭ್ಯರ್ಥಿ ರಕ್ಷಾ ರಾಮಯ್ಯ ಮಾತನಾಡಿ, 'ಈ ಚುನಾವಣೆ ನಮ್ಮ ರಾಜ್ಯ ಮತ್ತು ದೇಶಕ್ಕೆ ಬಹಳ ಮಹತ್ವವಾದ ಚುನಾವಣೆ. ಬಿಜೆಪಿಯವರು ಸಂವಿಧಾನ ಬದಲಾಯಿಸುವ ಸಲುವಾಗಿ ಚುನಾವಣೆ ಎದುರಿಸಲು ಬರುತ್ತಿದ್ದಾರೆ. ಇಂತಹವರಿಂದ ರಾಜ್ಯ ಮತ್ತು ದೇಶದ ಅಭಿವೃದ್ಧಿ ಸಾಧ್ಯವೇ? ಎಂಬುದರ ಬಗ್ಗೆ ಜನರು ಎಚ್ಚರದಿಂದಿರಬೇಕು. ಒಗ್ಗಟ್ಟಿನಲ್ಲಿ ಶಕ್ತಿಯಿದ್ದು, ಯಲಹಂಕದಲ್ಲಿ ಈ ಬಾರಿ ಯುವಕರ ಮತ್ತು ಮಹಿಳಾ ಶಕ್ತಿಯು ಕಾಂಗ್ರೆಸ್‌ಗೆ ಶಕ್ತಿ ತುಂಬುವ ಕೆಲಸ ಮಾಡಲಿದೆ ಎಂಬ ವಿಶ್ವಾಸವಿದೆ' ಎಂದರು.

ಸುಧಾಕರ್ ವಿರುದ್ಧ ರಕ್ಷಾ ರಾಮಯ್ಯ ಟೀಕೆ

'ದಬ್ಬಾಳಿಕೆಯಿಂದಲೇ ಸೋಲು'

ಪ್ರಜಾವಾಣಿ ವಾರ್ತೆ


ಚಿಕ್ಕಬಳ್ಳಾಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಮತ್ತು ಶಾಸಕ ಎನ್. ಶ್ರೀನಿವಾಸ್ ಮಾತುಕತೆಯಲ್ಲಿ ತೊಡಗಿದ್ದರು. ಮುಖಂಡರಾದ ಕೇಶವಮೂರ್ತಿ, ಆರ್.ಉಮಾಶಂಕರ್, ವಿಧಾನಪರಿಷತ್ ಸದಸ್ಯ ರವಿ ಭಾಗವಹಿಸಿದ್ದರು

ನೆಲಮಂಗಲ: 'ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ಅವರ ದರ್ಪ, ದಬ್ಬಾಳಿಕೆಯ ಪ್ರತಿಫಲವಾಗಿ ವಿಧಾನಸಭಾ ಚುನಾವಣೆಯಲ್ಲಿ ಜನ ಅವರನ್ನು ತಿರಸ್ಕರಿಸಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಲಕ್ಷಾಂತರ ಜನರ ಕಣ್ಣಲ್ಲಿ ನೀರು ಹಾಕಿಸಿದ್ದರಿಂದ ಇಂದು ಅವರು ಅಳುವ ಪರಿಸ್ಥಿತಿ ಬಂದಿದೆ' ಎಂದು ಚಿಕ್ಕಬಳ್ಳಾಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಟೀಕಿಸಿದರು.

ಕಾಂಗ್ರೆಸ್ ಮುಖಂಡರ, ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿ, 'ದಬ್ಬಾಳಿಕೆಯನ್ನು ಶಾಶ್ವತವಾಗಿ ಅಂತ್ಯ ಮಾಡಲು ಕಾಂಗ್ರೆಸ್‌ಗೆ ಮತ ನೀಡುವ ಮೂಲಕ ನನ್ನನ್ನು ಲೋಕಸಭೆಗೆ ಕಳುಹಿಸಿಕೊಡಿ' ಎಂದು ಮನವಿ ಮಾಡಿದರು.

ಶಾಸಕ ಎನ್. ಶ್ರೀನಿವಾಸ್ ಮಾತನಾಡಿ, 'ರಕ್ಷಾ ರಾಮಯ್ಯ ಅವರನ್ನು ಲೋಕಸಭೆಗೆ ಆರಿಸಿ ಕಳುಹಿಸಿದರೆ ನಿಮ್ಮ ಮನೆ ಬಾಗಿಲಿಗೆ ಅವರನ್ನು ಕರೆತಂದು ಕೆಲಸ ಮಾಡಿಸಿಕೊಡುವ ಜವಾಬ್ದಾರಿ ನನ್ನದು' ಎಂದರು.

ವಿಧಾನ ಪರಿಷತ್ ಸದಸ್ಯ ರವಿ ಮಾತನಾಡಿ, 'ಅತ್ಯಂತ ಭ್ರಷ್ಟ ಸುಧಾಕರ್ ಅವರು ಅಂಬಾನಿ ಅವರ ಮುಖಾಂತರ ಕರೆ ಮಾಡಿಸಿ, ಹೈಕಮಾಂಡ್‌ಗೆ ಸೂಟ್‌ಕೇಸ್ ನೀಡಿ ಟಿಕೆಟ್ ಪಡೆದಿದ್ದಾರೆ. ಅವರಿಗೆ ಟಿಕೆಟ್ ನೀಡಿರುವುದಕ್ಕೆ ಬಿಜೆಪಿಯಲ್ಲಿಯೇ ವಿರೋಧವಿದೆ' ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಬಿಎಂಎಲ್ ಕಾಂತರಾಜು, ಮುಖಂಡರಾದ ಗೌರಿಶಂಕರ್, ಕೇಶವಮೂರ್ತಿ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಂ. ನಾರಾಯಣಗೌಡ, ಕಾಂಗ್ರೆಸ್ ಅಧ್ಯಕ್ಷ ವಜ್ರಘಟ್ಟ ನಾಗರಾಜು ಭಾಗವಹಿಸಿದ್ದರು.

'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಶೈಕ್ಷಣಿಕ ಮೇಳ 'ಎಡ್ಯುವರ್ಸ್' • ಸಿಇಟಿ, ಕಾಮೆಡ್–ಕೆ ಅಣಕು ಪರೀಕ್ಷೆ

ಶಿಕ್ಷಣ ಉಪಯೋಗವೇ 'ಜೀವನದ ವಿದ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಿತ ಶಿಕ್ಷಣವನ್ನು ಉಪಯೋಗಿಸುವ ಕಲೆಯೇ 'ಜೀವನದ ವಿದ್ಯೆ' ಎಂದು ಅಪೊಲೊ ನ್ಯಾಷನಲ್ ಸ್ಕೂಲ್‌ನ ಉಪಾಧ್ಯಕ್ಷೆ ಐಶ್ವರ್ಯಾ ಡಿ.ಕೆ. ಎಸ್ ಹೆಗ್ಡೆ ಹೇಳಿದರು.

ಎಡ್ಯುವರ್ಸ್ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ



ಬೆಂಗಳೂರಿನಲ್ಲಿ 'ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ' ಆಯೋಜಿಸಿರುವ 14ನೇ 'ಎಡ್ಯುವರ್ಸ್' ಅನ್ನು ನಟ ವಿಜಯ ರಾಘವೇಂದ್ರ ಶನಿವಾರ ಉದ್ಘಾಟಿಸಿದರು. ರಾಜೀವ್ ವೇಲೂರ್, ಕಿರಣ್ ಸುಂದರರಾಜನ್, ಐಶ್ವರ್ಯಾ ಡಿ.ಕೆ.ಎಸ್ ಹೆಗ್ಡೆ, ರಕ್ಷಿತ್ ಶೆಟ್ಟಿ, ಕೆ.ವಿಜಯಕಲಾ ಸುಧಾಕರ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ



'ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ' ಆಯೋಜಿಸಿರುವ 14ನೇ ಶೈಕ್ಷಣಿಕ ಮೇಳ 'ಎಡ್ಯುವರ್ಸ್'ನಲ್ಲಿ ವಿದ್ಯಾರ್ಥಿ ಮತ್ತು ಪೋಷಕರು ವಿವಿಧ ಕೋರ್ಸ್‌ಗಳ ಮಾಹಿತಿ ಪಡೆದರು –ಪ್ರಜಾವಾಣಿ ಚಿತ್ರ

ಇಲ್ಲಿನ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಶನಿವಾರ ನಡೆದ, 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

'ಬದಲಾಗುತ್ತಿರುವ ಜಗತ್ತಿಗೆ ಅನುಗುಣವಾಗಿ ಶಿಕ್ಷಣದ ಸ್ವರೂಪವೂ ಬದಲಾಗಿದೆ. ಜೀವನ ನಿಭಾಯಿಸುವುದು ಹೇಗೆ ಎನ್ನುವುದನ್ನು ಶಿಕ್ಷಣದ ಮೂಲಕ ಕಲಿಯುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ಖುಷಿ ಕೊಡುವ, ಮನಸ್ಸಿಗೆ ಮುದ ನೀಡುವ ವಿಷಯಗಳನ್ನು ಓದಲು ಪೋಷಕರು ಪ್ರೇರೇಪಣೆ ನೀಡಬೇಕು. ಮಕ್ಕಳು ಸೂಕ್ತ ವಿಷಯಗಳ ಆಯ್ಕೆಯಲ್ಲಿ ವಿಫಲರಾದರೆ ಅದಕ್ಕೆ ಪೋಷಕರೇ ಹೊಣೆ' ಎಂದರು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿವೃತ್ತ ಪಿಆರ್‌ಒ ಎ.ಎಸ್.ರವಿ ಮಾತನಾಡಿ, 'ಒಳ್ಳೆಯ ಕಾಲೇಜು ಆಯ್ಕೆ ಮಾಡಿಕೊಳ್ಳುವುದು ಮಹತ್ವದ ಘಟ್ಟವಾಗಿರುತ್ತದೆ. ಕಾಲೇಜುಗಳ ಆದ್ಯತೆ ನೀಡುವಾಗ ಹೆಚ್ಚಿನ ಕಾಲೇಜುಗಳ ಹೆಸರು ನಮೂದಿಸಬೇಕು. ಉತ್ತಮ ಕಾಲೇಜಿನ ಹೆಸರು ಮೊದಲ ಆದ್ಯತೆಯಲ್ಲಿ ಇರಬೇಕು. ಆದ್ಯತೆ ನೀಡುವಾಗ ಎಡವಿದರೆ, ಇಷ್ಟವಿಲ್ಲದ ಕಾಲೇಜಿನಲ್ಲಿ ಸೀಟು ಲಭಿಸುವ ಸಾಧ್ಯತೆ ಇರುತ್ತದೆ' ಎಂದು ಎಚ್ಚರಿಸಿದರು.

'ಪ್ರಸ್ತುತ ಶೈಕ್ಷಣಿಕ ಅವಕಾಶಗಳು ಹೆಚ್ಚಿದ್ದು, ಕೋರ್ಸ್ ಆಯ್ಕೆಯಲ್ಲಿ ಆದಷ್ಟು ಎಚ್ಚರಿಕೆ ವಹಿಸಬೇಕು. ಉತ್ತಮ ರ್‍ಯಾಂಕ್ ಗಳಿಸಿದರೆ ಉತ್ತಮ ಪ್ರಯೋಗಾಲಯ, ಗ್ರಂಥಾಲಯ, ಬೋಧಕ ವೃಂದ ಹೊಂದಿರುವ ಕಾಲೇಜಿನಲ್ಲಿ ಸೀಟು ಲಭಿಸಲಿದೆ. ದಾಖಲಾತಿಗಳನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವಾಗ ಎಚ್ಚರಿಕೆ ವಹಿಸಬೇಕು. ದಾಖಲಾತಿ ಹಾಗೂ ಪಾಸ್‌ವರ್ಡ್ ಅನ್ನು ಯಾರಿಗೂ ನೀಡಬಾರದು' ಎಂದು ಸಲಹೆ ನೀಡಿದರು.

'ಆನ್‌ಲೈನ್‌ಗೆ ದಾಖಲಾತಿ ಸಲ್ಲಿಸುವುದಕ್ಕೂ ಮೊದಲು ಕಾಲೇಜುಗಳ ವಿವರವನ್ನು ಮೊದಲೇ ಪಡೆದುಕೊಂಡಿರಬೇಕು. ಆಗ ಸುಲಭವಾಗಲಿದೆ' ಎಂದು ಸಲಹೆ ನೀಡಿದರು.

ಶೈಕ್ಷಣಿಕ ಮೇಳದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗಾಗಿ ಸಿ.ಇ.ಟಿ, ಕಾಮೆಡ್–ಕೆ ಅಣಕು ಪರೀಕ್ಷೆ ನಡೆಯಿತು. ಮೇಳದಲ್ಲಿ ಭಾಗವಹಿಸಿದ್ದ ಪೋಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ಅನಿಸಿಕೆ ಹಂಚಿಕೊಂಡರು.

ವಿದ್ಯಾರ್ಥಿಗಳು–ಪೋಷಕರ ಅನಿಸಿಕೆ...

'ಹೆಚ್ಚು ಅನುಕೂಲ...'



ಶೈಕ್ಷಣಿಕ ಮೇಳವನ್ನು ವ್ಯವಸ್ಥಿತವಾಗಿ ಆಯೋಜಿಸಲಾಗಿದೆ. ಹೊಸ ಕೋರ್ಸ್‌ಗಳು ಹಾಗೂ ಪ್ರವೇಶ ಶುಲ್ಕದ ಮಾಹಿತಿ ಒಂದೇ ಸೂರಿನಡಿ ಲಭಿಸಿತು. ಈ ರೀತಿಯ ಮೇಳದಿಂದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲ ಆಗಲಿದೆ.

ಅದಿತಿ ನಾಗರಾಜ್, ವಿದ್ಯಾರ್ಥಿನಿ,

'ಗೊಂದಲ ನಿವಾರಣೆ'



ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು ಎಂಬುದರ ಕುರಿತು ಗೊಂದಲ ಇತ್ತು. ತಜ್ಞರಿಂದ ಮಾಹಿತಿ ಪಡೆದುಕೊಂಡು, ಗೊಂದಲ ಬಗೆ ಹರಿಸಿಕೊಂಡಿದ್ದೇವೆ.

ಶಮೀಲ್, ಪೋಷಕ, ಗೋಣಿಕೊಪ್ಪಲು, ಕೊಡಗು

'ತಪ್ಪಿದ ಅಲೆದಾಟ...'



ಬಿ.ಎಸ್‌ಸಿ ಕೋರ್ಸ್‌ಗೆ ಸೇರಲು ನಿರ್ಧರಿಸಿದ್ದೇನೆ. ಒಂದೇ ಸ್ಥಳದಲ್ಲಿ ಎಲ್ಲ ಮಾಹಿತಿ ಸಿಕ್ಕಿದ್ದರಿಂದ ಪ್ರತಿ ಕಾಲೇಜು ಬಳಿಗೆ ತೆರಳಿ ವಿಚಾರಿಸುವುದು ತಪ್ಪಿತು. ನನ್ನ ಆಯ್ಕೆಯ ಕಾಲೇಜಿನ ಮಳಿಗೆಗಳೂ ಮೇಳದಲ್ಲಿ ಪಾಲ್ಗೊಂಡಿದ್ದವು.

ಗಗನ್, ವಿದ್ಯಾರ್ಥಿ, ಮಲ್ಲೇಶ್ವರ

'ಪ್ರವೇಶ ಶುಲ್ಕದ ಮಾಹಿತಿ'



ಹೊಸ ಕೋರ್ಸ್‌ಗಳ ಪ್ರಾಮುಖ್ಯ, ಭವಿಷ್ಯದಲ್ಲಿನ ಉದ್ಯೋಗ ಅವಕಾಶ, ಶುಲ್ಕದ ವಿವರವನ್ನು ಮಳಿಗೆಯವರು ನೀಡಿದರು. ಈ ಮೇಳ ಆಯೋಜಿಸಿದ್ದಕ್ಕೆ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಬಳಗಕ್ಕೆ ಧನ್ಯವಾದಗಳು

ರಘುಪತಿ, ಪೋಷಕರು, ಬನಶಂಕರಿ

'ಧೈರ್ಯ ಬಂದಿದೆ'



ವೈದ್ಯಕೀಯ ಶಿಕ್ಷಣ ಪಡೆಯಲು ಆಸಕ್ತಿ ಹೊಂದಿದ್ದೇನೆ. ಕೌನ್ಸೆಲಿಂಗ್ ಎದುರಿಸುವುದು ಹೇಗೆ ಎಂಬ ಭಯವಿತ್ತು. ವಿಚಾರಗೋಷ್ಠಿಯಲ್ಲಿ ತಜ್ಞರು ನೀಡಿದ ಮಾಹಿತಿಯಿಂದಾಗಿ ಧೈರ್ಯ ಬಂದಿದೆ.

ವಿನಿತ್, ವಿದ್ಯಾರ್ಥಿ, ಕನಕಪುರ, ರಾಮನಗರ ಜಿಲ್ಲೆ

'ಸಂಪೂರ್ಣ ಮಾಹಿತಿ'

ಬಿ.ಟೆಕ್ ಕೋರ್ಸ್‌ಗೆ ಸೇರಲು ಇಚ್ಛಿಸಿದ್ದೇನೆ. ಅದರ ಬಗ್ಗೆ ಸಂಪೂರ್ಣ ಮಾಹಿತಿ ಶೈಕ್ಷಣಿಕ ಮೇಳದ ಮಳಿಗೆಯಲ್ಲಿ ದೊರೆಯಿತು. ಯಾವ ಕೋರ್ಸ್ ತೆಗೆದುಕೊಂಡರೆ ಭವಿಷ್ಯಕ್ಕೆ ಅನುಕೂಲ ಎಂಬುದು ಮೇಳದಿಂದ ತಿಳಿಯಿತು.

ವಿ.ಮೋನಿಶ್, ವಿದ್ಯಾರ್ಥಿ

ನಕಲಿ ಗ್ಯಾರಂಟಿ: ₹ 5 ಕೋಟಿ ಪಡೆದಿದ್ದ ಸಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಕಾಮಗಾರಿಗಳನ್ನು ಗುತ್ತಿಗೆ ಪಡೆಯಲು ನಕಲಿ ಎಲೆಕ್ಟ್ರಾನಿಕ್ ಬ್ಯಾಂಕ್ ಗ್ಯಾರಂಟಿ (ಇ–ಬಿಜಿ) ನೀಡುತ್ತಿದ್ದ ಪ್ರಕರಣದಲ್ಲಿ ಬಂಧಿಸಲಾಗಿರುವ ಲೆಕ್ಕ ಪರಿಶೋಧಕ (ಸಿ.ಎ) ಆಶೀಷ್ ಸಕ್ಸೇನಾ ಅಲಿಯಾಸ್ ರಾಯ್ (45), ₹ 5 ಕೋಟಿ ಕಮಿಷನ್ ಪಡೆದಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ.

ನ್ಯಾಷನಲ್ ಇ-ಗವರ್ನೆನ್ಸ್ ಸರ್ವೀಸಸ್ ಲಿಮಿಟೆಡ್ (ಎನ್‌ಇಎಸ್‌ಎಲ್) ಅಧಿಕಾರಿಗಳು ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡಿರುವ ನಗರದ ಸಿಸಿಬಿ ಸೈಬರ್ ಕ್ರೈಂ ಠಾಣೆ ಪೊಲೀಸರು, ಆಶೀಷ್ ಸಕ್ಸೇನಾನನ್ನು ವಿಚಾರಣೆ ನಡೆಸಿ ಮಾಹಿತಿ ಕಲೆಹಾಕಿದ್ದಾರೆ.

'ದೇಶದ ವಿವಿಧ ರಾಜ್ಯಗಳ ಗುತ್ತಿಗೆದಾರರು, ಎನ್‌ಇಎಸ್‌ಎಲ್ ಜಾಲತಾಣದಲ್ಲಿ ನಕಲಿ ಎಲೆಕ್ಟ್ರಾನಿಕ್ ಬ್ಯಾಂಕ್ ಗ್ಯಾರಂಟಿ ಅಪ್‌ಲೋಡ್ ಮಾಡಿದ್ದರು. ಅವುಗಳ ಪರಿಶೀಲನೆ ಸಂದರ್ಭದಲ್ಲಿ, ನಕಲಿ ಎಂಬುದು ಗೊತ್ತಾಗಿತ್ತು' ಎಂದು ಪೊಲೀಸರು ಹೇಳಿದರು.

'ಉತ್ತರ ಪ್ರದೇಶದ ಆಶೀಷ್, ವೃತ್ತಿಯಲ್ಲಿ ಲೆಕ್ಕ ಪರಿಶೋಧಕ. ದೇಶದ ವಿವಿಧ ಲೆಕ್ಕ ಪರಿಶೋಧಕರ ಜೊತೆ ಒಡನಾಟವಿಟ್ಟುಕೊಂಡಿದ್ದ. ಅವರ ಮೂಲಕ ಗುತ್ತಿಗೆದಾರರನ್ನು ಸಂಪರ್ಕಿಸಿ, ಯಾವುದೇ ಮುಂಗಡ ಹಣವಿಲ್ಲದೇ ಬ್ಯಾಂಕ್ ಗ್ಯಾರಂಟಿ ಕೊಡಿಸುವುದಾಗಿ ಹೇಳುತ್ತಿದ್ದ' ಎಂದು ತಿಳಿಸಿದರು.

'11 ಗುತ್ತಿಗೆದಾರರಿಂದ ₹ 5 ಕೋಟಿ ಪಡೆದಿದ್ದ ಆರೋಪಿ, ₹ 168.13 ಕೋಟಿ ಮೌಲ್ಯದ ನಕಲಿ ಇ–ಬ್ಯಾಂಕ್ ಗ್ಯಾರಂಟಿ ಮಾಡಿಕೊಟ್ಟಿದ್ದ. ಆರೋಪಿ ಗುತ್ತಿಗೆದಾರರಿಗೆ ನೀಡಿದ್ದ ಎಲ್ಲ ದಾಖಲೆಗಳು ನಕಲಿಯಾಗಿದ್ದವು. ಈ ಬಗ್ಗೆ ಸಂಬಂಧಪಟ್ಟ ಬ್ಯಾಂಕ್‌ಗಳಿಂದಲೂ ಮಾಹಿತಿ ಪಡೆಯಲಾಗಿದೆ. ಜೊತೆಗೆ, ಗುತ್ತಿಗೆದಾರರಿಗೂ ನೋಟಿಸ್ ನೀಡಿ ಹೇಳಿಕೆ ದಾಖಲಿಸಿಕೊಳ್ಳಲಾಗುತ್ತಿದೆ. ಆಶೀಷ್ ಸಕ್ಸೇನಾ ಕೃತ್ಯದಲ್ಲಿ ಇನ್ನೊಬ್ಬ ಆರೋಪಿ ಶಾಮೀಲಾಗಿದ್ದು, ಆತ ಸದ್ಯ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

ಕಾಯ್ದೆ ಪುಸ್ತಕ ಮುದ್ರಣದಲ್ಲಿ ದೋಷವಿದ್ದರೆ ಮೊಕದ್ದಮೆ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಶಾಸನಗಳ ಕಂತೆಯನ್ನು ಒಳಗೊಂಡ ಕಾನೂನು ಪುಸ್ತಕಗಳನ್ನು ಮುದ್ರಿಸುವ ಪ್ರಕಾಶಕರ ಮೈಯೆಲ್ಲ ಕಣ್ಣಾಗಿರಬೇಕು. ಒಂದು ವೇಳೆ ಮುದ್ರಣ ದೋಷದಿಂದಾಗಿ ತಪ್ಪುಗಳು ಉಳಿದು ಕೊಂಡಿದ್ದರೆ ನ್ಯಾಯಾಂಗ ನಿಂದನೆ ಪ್ರಕರಣ ಎದುರಿಸಬೇಕಾಗುತ್ತದೆ' ಎಂದು ಹೈಕೋರ್ಟ್ ಆದೇಶಿಸಿದೆ.

ಸಾಗುವಳಿ ಚೀಟಿ ನೀಡಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನ ನಾರಾವಿಯ ಪಾದ್ರಿ ವಲೇರಿಯನ್ ಫರ್ನಾಂಡೀಸ್ (55) ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

ಅರ್ಜಿದಾರರ ಪರ ವಕೀಲ ಎ.ಕೇಶವ ಭಟ್ ಅವರ ವಾದವನ್ನು ಮಾನ್ಯ ಮಾಡಿರುವ ನ್ಯಾಯಪೀಠ, 'ಯಾರೂ ಕೂಡಾ ಕಾನೂನನ್ನು ತಪ್ಪಾಗಿ ಭಾವಿಸಿ ಯಾತನೆ ಅನುಭವಿಸುವಂತೆ ಆಗಬಾರದು. ಅದೇ ರೀತಿ ಪ್ರಕಾಶಕರ ತಪ್ಪಿಗಾಗಿ ತೊಂದರೆಯನ್ನೂ ಅನುಭವಿಸಬಾರದು. ಶಾಸನ ಪುಸ್ತಕಗಳನ್ನು ಮುದ್ರಿಸಿ, ಪ್ರಕಾಶನ ಮಾಡುವವರು ಹೆಚ್ಚು ಎಚ್ಚರಿಕೆಯಿಂದ ಇರಬೇಕು ಎಂದು ಹೇಳಲು ಇದು ಸೂಕ್ತ ಸಮಯ' ಎಂದು ಅಭಿಪ್ರಾಯಪಟ್ಟಿದೆ.

'ಒಂದು ವೇಳೆ ಇಂತಹ ದೋಷಗಳು ಕಂಡು ಬಂದರೆ ಹೊಣೆ ಹೊತ್ತವರು ನ್ಯಾಯಾಂಗ ನಿಂದನೆಯನ್ನೂ ಒಳಗೊಂಡಂತೆ ಕಾನೂನಾತ್ಮಕ ಸಮಸ್ಯೆಗಳಿಗೆ ಈಡಾಗಬೇಕಾಗುತ್ತದೆ. ಅಂತಹ ಪ್ರಕಾಶನ ಸಂಸ್ಥೆಯನ್ನು ಪುಸ್ತಕಗಳ ಪೂರೈಕೆಗೆ ಸಾರ್ವಜನಿಕ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪು ಪಟ್ಟಿಗೆ ಸೇರ್ಪಡೆ ಮಾಡುವುದಕ್ಕೂ ಅವಕಾಶ ನೀಡಬಹುದಾಗಿದೆ' ಎಂದು ನ್ಯಾಯಪೀಠ ವಿವರಿಸಿದೆ.

'ಈ ಆದೇಶದ ಪ್ರತಿಯನ್ನು ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿ, ಹೈಕೋರ್ಟ್‌ನ ಪ್ರಧಾನ ಗ್ರಂಥಪಾಲಕರು ಮತ್ತು ಕರ್ನಾಟಕ ಕಾನೂನು ನಿಯತಕಾಲಿಕೆ ಪ್ರಕಾಶಕರಿಗೆ ತ್ವರಿತ ಅಂಚೆಯ ಮೂಲಕ ಕಳುಹಿಸಿ ಕೊಡಬೇಕು' ಎಂದು ತಾಕೀತು ಮಾಡಿದೆ.

ಭೋಗ್ಯದ ಕರಾರನ್ನು ಬದಿಗೆ ಸರಿಸದೇ ಎಷ್ಟು ಹಣ ಪಾವತಿಸಬೇಕು ಎಂಬುದನ್ನು ನಿರ್ಧರಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದ್ದ ರಾಜ್ಯ ಮೇಲ್ಮನವಿ ನ್ಯಾಯಮಂಡಳಿಯ ಆದೇಶವನ್ನು ವಲೇರಿಯನ್ ಫರ್ನಾಂಡಿಸ್ ಹೈಕೋರ್ಟ್ ನಲ್ಲಿ ಪ್ರಶ್ನಿಸಿದ್ದರು.



ಕಾವೇರಿ ಆಸ್ಪತ್ರೆ

ಮಾರತ್ತಹಳ್ಳಿಯಲ್ಲಿ ಕಾವೇರಿ ಆಸ್ಪತ್ರೆ ಸಮೂಹದ ನೂತನ ಆಸ್ಪತ್ರೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೌರವಿಸಲಾಯಿತು. ಆಸ್ಪತ್ರೆಯ ಕಾರ್ಯನಿರ್ವಾಹಕ ಅಧ್ಯಕ್ಷ ಡಾ. ಎಸ್.ಚಂದ್ರಶೇಖರ್, ಶಾಸಕ ಶರತ್ ಬಚ್ಚೇಗೌಡ, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಕಾವೇರಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಮಣಿವಣ್ಣನ್ ಸೆಲ್ವರಾಜ್, ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಸ್. ವಿಜಯಭಾಸ್ಕರನ್ ಉಪಸ್ಥಿತರಿದ್ದರು.

ಚುನಾವಣಾ ಕರ್ತವ್ಯದಿಂದ ವೈದ್ಯರು, ನರ್ಸ್‌ಗಳಿಗೆ ವಿನಾಯಿತಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯರು, ನರ್ಸ್‌ಗಳು ಸೇರಿದಂತೆ ಫಾರ್ಮಸಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಚುನಾವಣಾ ಕರ್ತವ್ಯದಿಂದ ವಿನಾಯ್ತಿ ನೀಡುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಯಶವಂತಪುರದ ಇಎಸ್‌ಐ ಡಿಸ್ಪೆನ್ಸರಿಯ ಫಾರ್ಮಸಿ ಅಧಿಕಾರಿ ಕೆ.ಪ್ರದೀಪ್ ಮತ್ತಿತರರು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಬಿ.ಎಂ.ಸಂತೋಷ್, 'ವೈದ್ಯರು, ನರ್ಸ್ ಗಳು, ಫಾರ್ಮಸಿ ಅಧಿಕಾರಿಗಳಿಗೆ ಚುನಾವಣಾ ಕರ್ತವ್ಯದಿಂದ ವಿನಾಯಿತಿ ನೀಡಲಾಗಿದೆ. ಆದರೂ, ಬೃಹತ್



ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಫಾರ್ಮಸಿ ಅಧಿಕಾರಿಗಳಿಗೆ ಕಾನೂನು ಬಾಹಿರ ಆದೇಶ ಹೊರಡಿಸಿದ್ದು, ಚುನಾವಣಾ ಕರ್ತವ್ಯಕ್ಕೆ ಕಡ್ಡಾಯವಾಗಿ ಹಾಜರಾಗುವಂತೆ ಸೂಚಿಸಲಾಗಿದೆ' ಎಂದು ಆಕ್ಷೇಪಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ವೈದ್ಯರು, ನರ್ಸ್‌ಗಳು ಮತ್ತು ಎಎನ್‌ಎಂಗಳನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸದಂತೆ ಚುನಾವಣಾ ಆಯೋಗವೇ ಆದೇಶಿಸಿದೆ. ಹೀಗಾಗಿ, ಅವರಿಗೆ ಸೇವೆಯಿಂದ ವಿನಾಯಿತಿ ನೀಡಬೇಕು' ಎಂದು ಜಿಲ್ಲಾ ಚುನಾವಣಾ ಅಧಿಕಾರಿಗೆ ನಿರ್ದೇಶಿಸಿತು.

ಪ್ರತಿವಾದಿಗಳಾದ ಕೇಂದ್ರ ಚುನಾವಣಾ ಆಯೋಗ, ರಾಜ್ಯ ಸರ್ಕಾರ ಮತ್ತು ಜಿಲ್ಲಾ ಚುನಾವಣಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

'ಅರ್ಜಿದಾರರು ಫಾರ್ಮಸಿ ಅಧಿಕಾರಿಗಳಾಗಿದ್ದಾರೆ. ರಾಜ್ಯದಲ್ಲಿ ಈ ಹಿಂದೆ ನಡೆದ ಚುನಾವಣೆ ಸಮಯದಲ್ಲಿ ಫಾರ್ಮಸಿ ಅಧಿಕಾರಿಗಳಿಗೆ ಚುನಾವಣಾ ಕರ್ತವ್ಯದಿಂದ ವಿನಾಯ್ತಿ ನೀಡಲಾಗಿತ್ತು. ಆದರೆ, ಈ ಬಾರಿಯ ಚುನಾವಣೆಯಲ್ಲಿ ಅವರನ್ನು ಪುನಃ ನಿಯೋಜನೆ ಮಾಡಲಾಗಿದೆ. ಇದು ಭಾರತೀಯ ಚುನಾವಣಾ ಆಯೋಗ ಹೊರಡಿಸಿರುವ ಕೈಪಿಡಿಗೆ ವಿರುದ್ಧವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಮುಂಬೈ ರೇಸ್

ಜೂಲಿಯೆಟ್ ಗೆಲ್ಲುವ ನಿರೀಕ್ಷೆ

ಸಿ.ಎನ್.ವಾಡಿಯಾ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ರೇಸ್‌ಗಳ ಆಕರ್ಷಣೆಯಾಗಿದ್ದು, ಜೂಲಿಯೆಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4:45ಕ್ಕೆ ಪ್ರಾರಂಭವಾಗಲಿರುದ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎಟಾಯ್ಲ್ 1, ಅರಿಯಾನ ಸ್ಟಾರ್ 2, ಪ್ರಿನ್ಸ್ ಇಗೋರ್ 5
2ನೇ ರೇಸ್: ಸೂಪರ್‌ನ್ಯಾಚುರಲ್ 3, ನಾಟಿ ಚಾರ್ಮರ್ 2, ಮೊಯಿಟೊ 1
3ನೇ ರೇಸ್: ಡಿವೈನ್ ಹೋಪ್ 4, ಡೆಸರ್ಟ್ ಕ್ಲಾಸಿಕ್ 3, ಮಾನ್ಸ ಮೂಸ 5
4ನೇ ರೇಸ್: ಜೂಲಿಯೆಟ್ 2, ಡಿಫ್ 1, ಜೆಂಡಾಯಿ 3
5ನೇ ರೇಸ್: ಸ್ಯಾಂಟಿಸಿಮೊ 3, ಫೀಲ್ಡ್ ಆಫ್ ಡ್ರೀಮ್ಸ್ 4, ಫಿಯೊರೆಂಟಿನಿ 5
6ನೇ ರೇಸ್: ಕ್ರಿಸ್ಟೊಫಾನಿ 4, ಡಫಿ 5, ಫ್ಲಾಶಿಂಗ್ ಫೇಮಸ್ 6
7ನೇರೇಸ್: ಎಸ್ಪರಾಂಜ 1, ದೌಲತ್ ಮಾಯ್ 8, ಕ್ವೀನ್ಸ್ ಪ್ರೈಡ್ 2

ಉತ್ತಮ ಬೆಟ್‌ಸ್ಯಾಂಟಿಸಿಮೊ

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ಬಜರಂಗ ದಳ ಮುಖಂಡ ಭರತ್ ಕುಮಾರ್ ಗಡಿಪಾರು ಆದೇಶ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬಜರಂಗದಳ ಮುಖಂಡ ಭರತ್ ಕುಮಾರ್ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರಿಗೆ ಗಡಿಪಾರು ಮಾಡಿ ಹೊರಡಿಸಲಾಗಿದ್ದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಈ ಕುರಿತಂತೆ ಭರತ್ ಕುಮಾರ್ (35) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹೈಕೋರ್ಟ್ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಭರತ್ ಕುಮಾರ್ ತಮ್ಮ ವಿರುದ್ಧ ಇದ್ದ ಎಂಟು ಕ್ರಿಮಿನಲ್ ಪ್ರಕರಣಗಳಲ್ಲಿ ಈಗಾಗಲೇ ಆರು ಪ್ರಕರಣಗಳಲ್ಲಿ ಖುಲಾಸೆಗೊಂಡಿದ್ದಾರೆ. ಒಂದು ಪ್ರಕರಣದಲ್ಲಿ ನ್ಯಾಯಾಲಯದ ತಡೆ ಆದೇಶ ಇದ್ದು ಇನ್ನೊಂದು ವಿಚಾರಣೆ ಹಂತದಲ್ಲಿದೆ. ಹೀಗಿರುವಾಗ ಮಂಗಳೂರು ಉಪ ವಿಭಾಗಾಧಿಕಾರಿ ಹೊರಡಿಸಿರುವ ಗಡಿಪಾರು ಆದೇಶ ಊಹೆಗಳಿಂದ ಕೂಡಿದೆ. ಭರತ್ ಕುಮಾರ್ ಅಪರಾಧಿಕ ಪ್ರಕರಣಗಳಲ್ಲಿ ಭಾಗಿಯಾಗಬಹುದು ಎಂಬ ಶಂಕೆ ಕಾನೂನು ಬಾಹಿರ. ಆದ್ದರಿಂದ, ಗಡಿಪಾರು ಆದೇಶ ರದ್ದುಪಡಿಸಬೇಕು' ಎಂದು ಪ್ರತಿಪಾದಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಮಂಗಳೂರು ಉಪ ವಿಭಾಗಾಧಿಕಾರಿ ಎಸ್.ಜೆ. ಹರ್ಷವರ್ಧನ್; ಕರ್ನಾಟಕ ಪೊಲೀಸ್ ಕಾಯ್ದೆ-1963ರ ಕಲಂ 55 ಮತ್ತು 56ರ ಅಡಿಯಲ್ಲಿ ತಮ್ಮ ಅರೆನ್ಯಾಯಿಕ ಪ್ರಕ್ರಿಯೆಯಲ್ಲಿನ ಅಧಿಕಾರ ಚಲಾಯಿಸಿ ಇದೇ 2ರಂದು ಹೊರಡಿಸಿದ್ದ ಗಡಿಪಾರು ಆದೇಶವನ್ನು ರದ್ದುಗೊಳಿಸಿದರು.

ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ಸುಯೋಗ್ ಹೇರಳೆ ಮತ್ತು ನಿಶಾಂತ್ ಕುಶಾಲಪ್ಪ ವಕಾಲತ್ತು ವಹಿಸಿದ್ದರು.



ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಗರದ ಟೌನ್‌ಹಾಲ್ ಎದುರಿನ ಎಸ್‌ಜೆಪಿ ರಸ್ತೆಯಲ್ಲಿ ಸಿಐಎಸ್‌ಎಫ್ ಯೋಧರು ಪಥಸಂಚಲನ ನಡೆಸಿದರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ರಂಜಾನ್‌ಗೆ ವಂಡರ್‌ಲಾ ಕೊಡುಗೆ

ಪ್ರಜಾವಾಣಿ ವಾರ್ತೆ

ರಾಮನಗರ: ಮನರಂಜನಾ ತಾಣವಾದ ವಂಡರ್‌ಲಾ ರಂಜಾನ್ ಹಬ್ಬದ ಪ್ರಯುಕ್ತ ಗ್ರಾಹಕರಿಗೆ ಏಪ್ರಿಲ್ 11ರಿಂದ 14ರವರೆಗೆ ವಿಶೇಷ ಕೊಡುಗೆ ನೀಡಿದೆ. ಗ್ರಾಹಕರಿಗೆ ₹1,899 ಟಿಕೆಟ್‌ನೊಂದಿಗೆ ಉಚಿತವಾಗಿ ಬಿರಿಯಾನಿ ಕೊಡುಗೆಯನ್ನು ಘೋಷಿಸಿದೆ. ಆನ್‌ಲೈನ್‌ನಲ್ಲಿ ಮುಂಗಡವಾಗಿ ಬುಕ್ಕಿಂಗ್ ಮಾಡಿಕೊಳ್ಳುವ ಗ್ರಾಹಕರಿಗೆ ಮಾತ್ರ ಈ ಕೊಡುಗೆ ಸಿಗಲಿದೆ.

ಗ್ರಾಹಕರು ಟಿಕೆಟ್ ಕಾಯ್ದಿರಿಸಲು ಏಪ್ರಿಲ್ 3ರಿಂದಲೇ ಅವಕಾಶ ಕಲ್ಪಿಸಬೇಕಾಗಿದೆ. ವಿದ್ಯಾರ್ಥಿಗಳಿಗೂ ಹಾಲ್ ಟಿಕೆಟ್ ಕೊಡುಗೆ ನೀಡುತ್ತಿದೆ. 2023-24ನೇ ಶೈಕ್ಷಣಿಕ ವರ್ಷದ 10, 11 ಮತ್ತು 12ನೇ ತರಗತಿ ಪರೀಕ್ಷೆ ಬರೆದ ಎಲ್ಲ ವಿದ್ಯಾರ್ಥಿಗಳಿಗೂ ಈ ಕೊಡುಗೆ ಲಭ್ಯ. ತಮ್ಮ ಪರೀಕ್ಷೆಯ ಹಾಲ್ ಟಿಕೆಟ್ ಅನ್ನು ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರೆ ಪ್ರವೇಶ ಟಿಕೆಟ್ ಶೇ35ರಷ್ಟು ರಿಯಾಯಿತಿ ಪಡೆಯಬಹುದು. ವಿವರಗಳಿಗೆ ಸಂಪರ್ಕ ಸಂಖ್ಯೆ: 80372 30333, 80350 73966.

ನಗರದಲ್ಲಿ ಇಂದು

ಪುರಂದರದಾಸ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವ: ಕರ್ನಾಟಕ ಶಾಸ್ತ್ರಿಯ ಸಂಗೀತ ಕಛೇರಿ: ಯುಗಳ ಗಾಯನ: ನಾಗದೀಪ್ತಿ, ನಾಗಪ್ರಣತಿ, ಪಿಟೀಲು: ವಿಭುದೇಷ ಸಿಂಹ, ಮೃದಂಗ: ದೀಪಕ ಶ್ರೀನಿವಾಸನ್, ಮೋರ್ಚಿಂಗ್: ಲಿಖಿತ್ ಕೆ.ಎಂ., ವೇಣು ವಾದನ: ರಘು ಸಿಂಹ, ಪಿಟೀಲು: ಕೃತಿಕ್ ಕೌಶಿಕ್, ಮೃದಂಗ: ವಿ. ವೆಂಕಟಸುಬ್ಬು, ಘಟ: ಆರ್.ಪಿ. ರವಿಶಂಕರ್, ಆಯೋಜನೆ: ಕೆ.ಎನ್. ಕೃಷ್ಣಮೂರ್ತಿ ಗುರುವಂದನಾ ಸಮಿತಿ, ಸ್ಥಳ: ಜಯಮಾರುತಿ ದೇವಸ್ಥಾನ, ಬಸವೇಶ್ವರನಗರ, ಬೆಳಿಗ್ಗೆ 9ರಿಂದ

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಅನುಜ್ಞಾ ಗಣಪತಿ ಹೋಮ ಬೆಳಿಗ್ಗೆ 9.30ಕ್ಕೆ, ವಾಸ್ತುಶಾಂತಿ ಮೃತ್ಸಂಗ್ರಹಣ, ಅಂಕುರಾರ್ಪಣ, ರಕ್ಷಾಬಂಧನ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30ರಿಂದ

ಎಂ.ಕೆ. ಭಾಸ್ಕರ್ ರಾವ್ ಅವರಿಗೆ ನೆನಪಿನಗುಚ್ಛ ಅರ್ಪಿಸುವ ಕಾರ್ಯಕ್ರಮ: ಅತಿಥಿಗಳು: ವಿ. ಬಾಲಸುಬ್ರಮಣಿಯನ್, ಮದನಗೋಪಾಲ್, ವಿಠ್ಠಲಮೂರ್ತಿ, ಜಯರಾಜ್, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಸಂಗೀತ ಸಾನ್ನಿಧ್ಯ: ಗಾಯನ:ವಿರಾಜ್ ಜೋಶಿ, ತಬಲಾ: ರೂಪಕ್ ವೈದ್ಯ, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ಸನ್ಮಾನಿತರು: ರವೀಂದ್ರ ಯಾವಗಲ್, ಜಿ.ಎಲ್. ಭಟ್ ಇಡಗುಂಜಿ, ಅತಿಥಿ: ರವೀಂದ್ರ ಭಟ್ಟ, ಜುಗಲಬಂದಿ ಕಛೇರಿ: ಪಿಟೀಲು: ಸಂತೋಷ್ ನಹರ್, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ತಬಲಾ: ರವೀಂದ್ರ ಯಾವಗಲ್, ಆಯೋಜನೆ: ಸಪ್ತಕ್, ಸ್ಥಳ: ಹವ್ಯಕ ಸಭಾಭವನ, ಮಲ್ಲೇಶ್ವರ, ಸಂಜೆ 5.30

'ಅಂಕ ಲಿಪಿ–ಹೊಸ ಶೋಧ, ಕರ್ನಾಟಕದ ಕರಾವಳಿ ಭೂರೂಪಶಾಸ್ತ್ರ ಮತ್ತು ಅದರ ಭೂ–ಪ್ರವಾಸೋದ್ಯಮ ಸಾಮರ್ಥ್ಯ' ಕುರಿತು ಉಪನ್ಯಾಸ: ಜಿ.ಕೆ. ದೇವರಾಜಸ್ವಾಮಿ, ಎನ್.ಆರ್. ರಮೇಶ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಕೀರ್ತಿ ಹೆಗಡೆ, ಅತಿಥಿಗಳು: ಸುಮಾ ನಾಗೇಶ್, ಗಜಾನನ ಶರ್ಮಾ, ಆಯೋಜನೆ: ಶ್ರೀ ಕಲಾಗೌರಿ ನೃತ್ಯಾಲಯ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5.30

ಹಿಂದೂಸ್ಥಾನಿ ಸಂಗೀತ ಕಛೇರಿ: ಗಾಯನ: ಸುಹಾಸ್ ವ್ಯಾಸ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ಕಿರಣ್ ಯಾವಗಲ್, ಆಯೋಜನೆ: ಭಾರತೀಯ ವಿದ್ಯಾಭವನ, ಇನ್ಫೋಸಿಸ್ ಫೌಂಡೇಷನ್, ಆರ್ಟ್ ಫ್ಲೈ, ಸ್ಥಳ: ಕೆಆರ್‌ಜಿ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ಮಾರ್ಗಂ ನೃತ್ಯ ಪ್ರದರ್ಶನ: ಪ್ರಸ್ತುತಿ: ಭಾನುಪ್ರಿಯಾ, ಆಯೋಜನೆ: ಅಂಬಲಮ್ ಫೌಂಡೇಷನ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 6.10

'ಸರಸ ವಿರಸ ಸಮರಸ' ನಾಟಕ ಪ್ರದರ್ಶನ: ನಿರ್ದೇಶನ: ಜೋಸೆಫ್ ಜಾನ್, ಆಯೋಜನೆ: ಸುಸ್ಥಿರ ಫೌಂಡೇಷನ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಪುರವಣಿ ಓದಿ

ಸುಧಾ, ಮಯೂರ ಓದಿರಿ

ಹಿರಿಯರಿಗೆ ಸಿಗಲಿ ‘ಸಂಧ್ಯಾ’ ಆಸರೆ



ಚಿತ್ರ: ಭಾವು ಪತ್ತಾರ್

ಒಂದನೇ ಪುಟದಿಂದ

ಅತ್ತ ಮನೆಯವರನ್ನೂ ಬಿಟ್ಟುಕೊಡಲಾರದೇ ಇತ್ತ ತಮ್ಮ ದಯನೀಯ ಸ್ಥಿತಿಯನ್ನೂ ಸರಿಯಾಗಿ ಹೇಳಿಕೊಳ್ಳಲಾಗದ ಅವರು, ಕಣ್ಣಂಚಿನಲ್ಲಿ ಬರುತ್ತಿದ್ದ ನೀರನ್ನು ತಡೆಯುತ್ತಲೇ ತಮ್ಮ ಸ್ಥಿತಿ ಬಿಚ್ಚಿಟ್ಟಿದ್ದು ಹೀಗೆ...

‘ದುಡಿಯುತ್ತಿದ್ದಾಗ ಮನೆಯಲ್ಲಿ ಹೆಂಡತಿ, ಮಕ್ಕಳು ಗೌರವ ಕೊಡುತ್ತಿದ್ದರು. ಸೆಕ್ಯೂರಿಟಿ ಗಾರ್ಡ್ ಸೇರಿದಂತೆ ಇತರ ಸಣ್ಣಪುಟ್ಟ ಕೆಲಸ ಮಾಡುತ್ತಿದ್ದೆ. ವಯಸ್ಸಾಯಿತು ಅಂತ ಮನೇಲಿದ್ದೇನೆ. ಮಕ್ಕಳು ದುಡಿಯೋದು ಅವರ ಜೀವನಕ್ಕಾದರೆ ಸಾಕು ಅನ್ನುವಂತಿದೆ. ಸೊಸೆಯಂದಿರ ದೃಷ್ಟಿಯಲ್ಲಿ ನಾನು ಕೆಲಸಕ್ಕೆ ಬಾರದವನು. ಕೊರೊನಾಕ್ಕಿಂತ ಮುಂಚೆ ಬಿಬಿಎಂಪಿಯವರು ಬಿಸಿಯೂಟ ಕೊಡ್ತಾ ಇದ್ರು. ಅದನ್ನು ತಿನ್ಕೊಂಡು ಹೊಟ್ಟೆ ತುಂಬಿಸಿಕೊಳ್ತಾ ಇದ್ದೆ. ಈಗ ಅದೂ ಇಲ್ಲ. ಸರ್ಕಾರದ ಪೆನ್ಷನ್ ಔಷಧಿಗೂ ಸಾಲಲ್ಲ. ಮಕ್ಕಳೆದುರು ಕೈಚಾಚಲು ಸ್ವಾಭಿಮಾನ ಅಡ್ಡಿಯಾಗುತ್ತೆ’ ಎಂದು ಭಾವುಕರಾದರು ಕೆಂಚಪ್ಪ.

ಕೆಲವು ದಶಕಗಳ ಹಿಂದೆ ಭಾರತದಲ್ಲಿ ಹಿರಿಯರನ್ನು ನೋಡಿಕೊಳ್ಳುವುದು ಸಮಸ್ಯೆಯಾಗಿರಲಿಲ್ಲ. ಅವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಿದ್ದ ಕಾರಣ ಹಿರಿಯರ ಆರೈಕೆ ಮನೆಯಲ್ಲೇ ಯಾರಾದರೂ ಮಾಡುತ್ತಿದ್ದರು. ವಯಸ್ಸಾದಂತೆ ದೇಹದಲ್ಲಿ ಕಾರ್ಯಕ್ಷಮತೆ ಕುಗ್ಗಿ, ರಕ್ತದೊತ್ತಡ, ಮಧುಮೇಹ, ಮಂಡಿನೋವಿನಂಥ ಸಾಮಾನ್ಯ ಸಮಸ್ಯೆಗಳಿಂದ ಹಿಡಿದು ಗಂಭೀರ ಕಾಯಿಲೆ ಪೀಡಿತರಾಗುತ್ತಿದ್ದ ಹಿರಿಯರ ಸೇವೆ ಮಾಡುವುದು ಪುಣ್ಯದ ಕೆಲಸವೆಂದೇ ಭಾವಿಸಲಾಗುತ್ತಿತ್ತು. ಆದರೆ, ಇತ್ತೀಚಿನ ಜಾಗತೀಕರಣ, ಉದ್ಯೋಗ, ವಲಸೆ, ಸರ್ಕಾರಗಳ ನೀತಿ ಮತ್ತು ನೀಡುವ ಸೌಲಭ್ಯಗಳು ಪರೋಕ್ಷವಾಗಿ ಹಿರಿಯರ ಆರೈಕೆಯ ಮೇಲೂ ಪರಿಣಾಮ ಬೀರುತ್ತಿವೆ.

ಇದಕ್ಕೆ ಇಂಬುಗೊಡುವಂತಿವೆ ಈಚೆಗಷ್ಟೇ ವೃದ್ಧಾಪ್ಯದ ಕುರಿತು ಬಿಡುಗಡೆಯಾಗಿರುವ ಕೇಂದ್ರ ನೀತಿ ಆಯೋಗ ಹಾಗೂ ಯುಎನ್‌ಎಫ್‌ಪಿ ವರದಿಗಳು. ಈ ಎರಡೂ ವರದಿಗಳ ಪ್ರಕಾರ, ದೇಶದಲ್ಲಿ ಪ್ರಸ್ತುತ ಹಿರಿಯ ನಾಗರಿಕರ ಪ್ರಮಾಣವು ಒಟ್ಟು ಜನಸಂಖ್ಯೆಯಲ್ಲಿ ಶೇ 8.6ರಷ್ಟು ಇದೆ. ಇದು, 2030ರೊಳಗೆ ಶೇ 13ಕ್ಕೆ, 2050ರೊಳಗೆ ಶೇ 20ಕ್ಕೆ ಏರಿಕೆ ಆಗಲಿದೆ ಎಂದೂ ಅಂದಾಜಿಸಲಾಗಿದೆ. ಭಾರತದಲ್ಲಿ ಈ ಏರಿಕೆಗೆ ಅನುಗುಣವಾಗಿ ಹಿರಿಯರ ಆರೈಕೆಗೆ ತ್ವರಿತವಾಗಿ ನೀತಿ–ನಿಯಮಗಳನ್ನು ರೂಪಿಸಿ, ತುರ್ತು ಜಾರಿಗೆ ತರುವ ಅಗತ್ಯವನ್ನೂ ವರದಿಗಳೂ ಪ್ರತಿಪಾದಿಸಿವೆ.

ದೇಶದಲ್ಲಿ ಶೇ 70ರಷ್ಟು ಹಿರಿಯರು ಗ್ರಾಮೀಣ ಭಾಗದಲ್ಲಿದ್ದರೆ, ಶೇ 30ರಷ್ಟು ಹಿರಿಯರು ನಗರ ಪ್ರದೇಶಗಳಲ್ಲಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ, ಶುದ್ಧ ಕುಡಿಯುವ ನೀರು, ಆರೋಗ್ಯ ಸೌಕರ್ಯದಂಥ ಮೂಲ ಸೌಕರ್ಯಗಳ ಸಮಸ್ಯೆ ಇರುವುದರಿಂದ ಇಲ್ಲಿ ವಾಸಿಸುವ ಹಿರಿಯರಿಗೆ ಉತ್ತಮ ಆಹಾರ, ಆರೋಗ್ಯದಂಥ ಅಗತ್ಯ ಮೂಲಸೇವೆಗಳು ದೊರೆಯುತ್ತಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಶೇ 18ರಷ್ಟು ಮಂದಿಗೆ ಮಾತ್ರ ಆರೋಗ್ಯ ವಿಮೆಯ ಸೌಲಭ್ಯ ಇದೆ. ಹಿರಿಯರಲ್ಲಿ ಬಹುತೇಕರು ಆರ್ಥಿಕ ಅಭದ್ರತೆಯಲ್ಲಿದ್ದಾರೆ. ಸಾಮಾಜಿಕ ಭದ್ರತಾ ಸೌಲಭ್ಯಗಳು ಸಾಕಾಗುತ್ತಿಲ್ಲ. ಹಿರಿಯ ನಾಗರಿಕರ ಪೈಕಿ ಮಹಿಳೆಯರಲ್ಲಿ ಶೇ 54ರಷ್ಟು ಮಂದಿ ವಿಧವೆಯರು, ಇವರಲ್ಲಿ ಶೇ 9ರಷ್ಟು ಮಂದಿ ಒಂಟಿಯಾಗಿ ವಾಸಿಸುತ್ತಿದ್ದಾರೆ.

ಸ್ವೀಡನ್ ಮಾದರಿ

ಭಾರತಕ್ಕೆ ಹೋಲಿಸಿದರೆ ವೃದ್ಧರ ಆರೈಕೆಯಲ್ಲಿ ಸ್ವೀಡನ್ ದೇಶ ಮಾದರಿಯಾಗಿದೆ. ಅಲ್ಲಿನ ಜನರ ಜೀವಿತಾವಧಿ ಅತಿ ಹೆಚ್ಚು. ಅಲ್ಲಿ ಪುರುಷರ ಜೀವಿತಾವಧಿ 81 ವರ್ಷವಿದ್ದರೆ, ಮಹಿಳೆಯರದ್ದು 84 ವರ್ಷ. ಹಾಗಾಗಿ, ಅಲ್ಲಿ 60 ವರ್ಷದ ನಂತರವೂ ದುಡಿಯಲು ಅವಕಾಶವಿದೆ. ವೃದ್ಧರ ಆರೋಗ್ಯ– ಸಾಮಾಜಿಕ ರಕ್ಷಣೆ ಸ್ವೀಡನ್ ಜನಕಲ್ಯಾಣ ನೀತಿಯ ಪ್ರಮುಖ ಭಾಗವಾಗಿದೆ. ಹಿರಿಯ ಸಾಮಾಜಿಕ ಭದ್ರತಾ ಕಾಯ್ದೆಯು ಅಲ್ಲಿನ ಹಿರಿಯರಿಗೆ ಬೇಕಾದ ಮೂಲಭೂತ ಹಕ್ಕುಗಳನ್ನು ಖಾತ್ರಿಪಡಿಸುತ್ತದೆ. ಹಾಗಾಗಿ, ಸ್ವೀಡನ್ ದೇಶದ ವೃದ್ಧಾಪ್ಯ ಆರೈಕೆಯನ್ನು ಅಂತರರಾಷ್ಟ್ರೀಯ ಮಾದರಿಯನ್ನಾಗಿ ಪರಿಗಣಿಸಲಾಗಿದೆ. ಹಿರಿಯ ನಾಗರಿಕರ ಯೋಜನೆಗಳಿಗೆ ಸ್ಥಳೀಯ ಸಂಸ್ಥೆಗಳ ತೆರಿಗೆ ಹಾಗೂ ಸರ್ಕಾರದ ಧನ ಸಹಾಯವನ್ನು ಬಳಸಲಾಗುತ್ತದೆ. ಮನೆಯಲ್ಲಿ ವೈಯಕ್ತಿಕ ಆರೈಕೆ, ವಿಶೇಷ ವಸತಿ ಆರೈಕೆ ಹಾಗೂ ನರ್ಸಿಂಗ್ ಹೋಂ–ಆಸ್ಪತ್ರೆಗಳಲ್ಲಿ ಆರೈಕೆ ಹೀಗೆ ಮೂರು ಮಾದರಿಯ ಆರೈಕೆ ಸೌಲಭ್ಯ ಸ್ವೀಡನ್‌ನಲ್ಲಿದೆ. ಸ್ವಂತ ಕೆಲಸಗಳನ್ನು ನಿರ್ವಹಿಸಿಕೊಳ್ಳಲಾಗದ, ಸಾರಿಗೆ ಅಗತ್ಯವಿರುವ ಹಿರಿಯರು ಸ್ಥಳೀಯ ಸಂಸ್ಥೆಗಳಿಗೆ ಅರ್ಜಿ ಸಲ್ಲಿಸಿದರೆ, ಊಟ, ವಸತಿ, ಸಾರಿಗೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಇದನ್ನು ತೆರಿಗೆ ಹಣದಿಂದಲೇ ನೀಡುವುದು ವಿಶೇಷ.

ಇನ್ನು ಒಮಾನ್‌ನಲ್ಲಿ ಹಿರಿಯ ನಾಗರಿಕರಿಗೆ ವೃದ್ಧಾಪ್ಯ ಎನ್ನುವುದು ಕೊರಗಲ್ಲ. ಸರ್ಕಾರಿ ಉದ್ಯೋಗಿಯಾಗಿದ್ದರೆ ಜೀವತಾವಧಿಯಲ್ಲಿ ಪಿಂಚಣಿ ಸಿಗುತ್ತದೆ. ದೇಶದ ಪ್ರಜೆಯಾಗಿದ್ದರೆ (ಹಸಿರು ಕಾರ್ಡ್ ಹೊಂದಿದವರು) ಅವರಿಗೆ ಯಾವುದೇ ರೀತಿಯ ಕಾಯಿಲೆಗೂ ಚಿಕಿತ್ಸೆ ಉಚಿತವಾಗಿ ಸಿಗುತ್ತದೆ. ಹೀಗಾಗಿ, ಆರೋಗ್ಯ ವೆಚ್ಚದ ಹೊರೆ ಅವರನ್ನು ಕಾಡುವುದಿಲ್ಲ. ಅಲ್ಲದೆ, ಇಲ್ಲಿ ವಸತಿರಹಿತ ವೃದ್ಧರಿಗೆ ಸರ್ಕಾರವೇ ಜಾಗ, ಮನೆ ಒದಗಿಸುತ್ತದೆ ಎನ್ನುತ್ತಾರೆ ಒಮಾನ್‌ನಲ್ಲಿ ಮೂರು ದಶಕವಿದ್ದು, ಪ್ರಸ್ತುತ ಮಂಗಳೂರಿನಲ್ಲಿರುವ ಸೈಯ್ಯದ್ ಅಕ್ಬರ್. ಮುಸ್ಲಿಂ ಧರ್ಮದಲ್ಲಿ ಮಗನು ತಂದೆ–ತಾಯಿಯನ್ನು ನೋಡಿಕೊಳ್ಳುವುದು ಆತನ ಕರ್ತವ್ಯ. ಹೀಗಾಗಿ, ಪಾಲಕರನ್ನು ನಿರ್ಲಕ್ಷಿಸುವ, ಅವರು ವೃದ್ಧಾಶ್ರಮಕ್ಕೆ ಸೇರುವ ಪರಿಕಲ್ಪನೆಯೇ ಇಲ್ಲ ಎನ್ನುತ್ತಾರೆ ಅವರು.

‘ಯುನೈಟೆಡ್ ಅರಬ್ ಎಮಿರೈಟ್ಸ್‌ನಲ್ಲಿ ಹಿರಿಯ ನಾಗರಿಕರಿಗೆ ಅವರ ಅಗತ್ಯಕ್ಕೆ ತಕ್ಕಂತೆ ಸಾಮಾಜಿಕ ಬೆಂಬಲ, ಆರೋಗ್ಯ ಮತ್ತು ವಸತಿ ಸೌಲಭ್ಯಗಳಿವೆ. ಸರ್ಕಾರದ ಪಿಂಚಣಿ, ಆರೋಗ್ಯ ಸೇವೆಗಳು ದೊರೆಯುತ್ತವೆ. ಹಿರಿಯ ನಾಗರಿಕರು ಉತ್ತಮ ಆರೋಗ್ಯಕ್ಕಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಕೊಳ್ಳುತ್ತಾರೆ’ ಎನ್ನುತ್ತಾರೆ ಯುಎಇಯಲ್ಲಿ ಎಂಜಿನಿಯರ್ ಆಗಿರುವ ಮಲ್ಪೆಯ ಸುಜಯ್ ದೀಶನ್ ಜತ್ತನ್.

ಅಮೆರಿಕ, ಜಪಾನ್ ಸ್ವಾವಲಂಬನೆಗೆ ಆದ್ಯತೆ

ಅಮೆರಿಕ, ಜಪಾನ್‌ನಲ್ಲಿ ಹಿರಿಯ ನಾಗರಿಕರು ಇರುವ ಸ್ಥಳಗಳಿಗೇ ಹೋಗಿ ಸ್ವಯಂಸೇವಕರು ಅವರ ಯೋಗಕ್ಷೇಮದ ಬಗ್ಗೆ ವಿಚಾರಿಸುತ್ತಾರೆ. ಅಷ್ಟೇ ಅಲ್ಲ, ಹಿರಿಯರನ್ನು ಸಮುದಾಯ ಕೇಂದ್ರಗಳಲ್ಲಿ ಕರೆದೊಯ್ದು, ಸಂಜೆ ವಾಪಸ್ ಮನೆಗೆ ಬಿಡುವ ವ್ಯವಸ್ಥೆ ಇದೆ. ಈ ಕೇಂದ್ರಗಳಲ್ಲಿ ಹಿರಿಯರಿಗೆ ಆಹಾರ, ಮನ ರಂಜನೆ, ಓದು, ಯೋಗ, ಆಟೋಟ ಇತ್ಯಾದಿ ಸೌಕರ್ಯಗಳಿರುತ್ತವೆ.

ಅಮೆರಿಕ, ಜಪಾನ್‌ನಲ್ಲಿ ಮಕ್ಕಳು ಹದಿಹರೆಯಕ್ಕೆ ಬರುತ್ತಿದ್ದಂತೆಯೇ ತಂದೆ–ತಾಯಂದಿರಿಂದ ದೂರವಾಗಿ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳುತ್ತಾರೆ. ಪೋಷಕರೂ ಮುಪ್ಪಿನಲ್ಲಿ ಮಕ್ಕಳ ಮೇಲೆ ಅವಲಂಬಿತರಾಗದೇ, ಜತೆಗಾರರು ಇಲ್ಲವೇ ಒಂಟಿಯಾಗಿ ಜೀವನ ಎದುರಿಸಲು ಮಾನಸಿಕವಾಗಿ ಸಿದ್ಧವಾಗುತ್ತಾರೆ. ಆದರೆ, ಭಾರತದಲ್ಲಿ ಮಕ್ಕಳು ವಯಸ್ಕರಾಗುವವರೆಗೆ ಪೋಷಕರೊಂದಿಗೆ ಇರುವುದು ಹಾಗೂ ಮುಪ್ಪಿನಲ್ಲಿ ತಂದೆತಾಯಂದಿರ ಜವಾಬ್ದಾರಿ ಮಕ್ಕಳ ಮೇಲೆ ಇರುತ್ತದೆ’ ಎನ್ನುತ್ತಾರೆ ಟೋಕಿಯೊದಲ್ಲಿರುವ ಕನ್ನಡತಿ ಶಿಲ್ಪಾ.

ಜಪಾನ್‌ನಲ್ಲಿ ಹಿರಿಯರನ್ನು ರಾಷ್ಟ್ರದ ಸಂಪತ್ತು ಎಂದೇ ಪರಿಗಣಿಸುತ್ತಾರೆ. ಅಲ್ಲಿನ ರೈಲ್ವೆ ನಿಲ್ದಾಣ, ಮಾಲ್ ಇತ್ಯಾದಿ ಸ್ಥಳಗಳಲ್ಲಿ 60 ವರ್ಷಕ್ಕೆ ಮೀರಿದ ಹಿರಿಯರೂ ಕೆಲಸ ಮಾಡುತ್ತಾರೆ. ಅಲ್ಲಿನ ಜನರು ಶ್ರಮಜೀವಿಗಳು. ವಯಸ್ಸು ಅವರಿಗೆ ಮುಖ್ಯವೇ ಅಲ್ಲ ಎನ್ನುತ್ತಾರೆ ಅವರು.

‘ಅಮೆರಿಕದ ಸಾಮಾಜಿಕ ವ್ಯವಸ್ಥೆಯಲ್ಲಿ ಹಿರಿಯರನ್ನು ತುಂಬಾ ಗೌರವದಿಂದ ಕಾಣಲಾಗುತ್ತದೆ. ಸರ್ಕಾರಿ ಕಚೇರಿಗಳಿಂದ ಹಿಡಿದು ಖಾಸಗಿ ಆಸ್ಪತ್ರೆಗಳವರೆಗೆ ಹಿರಿಯರನ್ನು ಗಮನದಲ್ಲಿಟ್ಟುಕೊಂಡೇ ವ್ಯವಸ್ಥೆಯನ್ನು ರೂಪಿಸಲಾಗುತ್ತದೆ. ಉದಾಹರಣೆಗೆ ಹಿರಿಯರೊಬ್ಬರು ಗಾಲಿಕುರ್ಚಿ ಬಳಸುವವರಾಗಿದ್ದರೆ ಅಂಥವರಿಗೆ ಮೆಟ್ಟಿಲುಗಳ ಬದಲು ಇಳಿಜಾರಿನ ವ್ಯವಸ್ಥೆ ಇರುತ್ತದೆ. ಇಂಥ ವ್ಯವಸ್ಥೆ ಎಲ್ಲೆಡೆಯೂ ಇರುತ್ತದೆ. ಹೋಟೆಲ್, ಆಸ್ಪತ್ರೆ, ಮನರಂಜನಾ ಕೇಂದ್ರ ಹೀಗೆ ಹಿರಿಯರಿಗೆ ಅನುಕೂಲಕರವಾದ ವ್ಯವಸ್ಥೆ ಇರುತ್ತದೆ. ಭಾರತದಲ್ಲೂ ಇಂಥ ವ್ಯವಸ್ಥೆ ಬೇಕು’ ಎನ್ನುತ್ತಾರೆ ಅಮೆರಿಕದಲ್ಲಿರುವ ಕನ್ನಡಿಗ ಡಾ. ಗಿರೀಶ್ ಮೂಡ್.

‘ಭಾರತದಲ್ಲಿ ಜನಪ್ರತಿನಿಧಿಗಳದ್ದು ತಾವು ಕೊಟ್ಟಿದ್ದೇ ತಗೋಬೇಕು ಅನ್ನೋ ಭಾವನೆ ಇದೆ. ಬಡತನ ರೇಖೆಗಿಂತ ಕೆಳಗಿರುವ ಹಿರಿಯ ನಾಗರಿಕರ ಸ್ಥಿತಿ ದಯನೀಯವಾಗಿದೆ. ಬಡತನದ ಕಾರಣಕ್ಕಾಗಿಯೇ ಇವರು 10–12ನೇ ವರ್ಷದಿಂದಲೇ ಅಪಾಯಕಾರಿ ಕೆಲಸಗಳಲ್ಲಿ ಬಾಲಕಾರ್ಮಿಕರಾಗಿರುತ್ತಾರೆ. ತಮ್ಮ ಜೀವನದ 40ರಿಂದ 50ವರ್ಷಗಳ ಕಾಲ ನಗರ/ಪಟ್ಟಣಗಳು, ದೇಶದ ಅಭಿವೃದ್ಧಿಗೆ ಪರೋಕ್ಷವಾಗಿ ದುಡಿದ ಇವರಿಗೆ ಕನಿಷ್ಠ ವೇತನದ ಅರ್ಧ ಸಂಬಳವಾದರೂ ಪಿಂಚಣಿಯಾಗಿ ನೀಡುವುದು ನ್ಯಾಯವಲ್ಲವೇ? ಕೆಳ ಮಧ್ಯಮವರ್ಗದ ಬಹುತೇಕ ಹಿರಿಯರು ಸಾಯುವ ತನಕವೂ ಸಣ್ಣ ಕೆಲಸವನ್ನಾದರೂ ಮಾಡುತ್ತಿರುತ್ತಾರೆ. ಬೀದಿಬದಿ ವ್ಯಾಪಾರವೋ, ದೇವಸ್ಥಾನಗಳಲ್ಲಿ ಚಪ್ಪಲಿ ಕಾಯುವವರೂ ಇದ್ದಾರೆ. ಹಿರಿಯರ ಹಿನ್ನೆಲೆ ನೋಡದೇ ಎಲ್ಲರಿಗೂ ಆಹಾರ, ಆರೋಗ್ಯದ ಸೌಲಭ್ಯ ಖಾತ್ರಿಯಾಗಬೇಕು’ ಎಂದು ಪ್ರತಿಪಾದಿಸುತ್ತಾರೆ ಫೆಡಿನಾ ಸಂಸ್ಥೆಯ ಟ್ರಸ್ಟಿ ಸೆಬಾಸ್ಟಿಯನ್ ದೇವರಾಜ್.

ಯಾರಿಗೆ ಸಾಲುತ್ತೆ ಪಿಂಚಣಿ?

ಭಾರತದ ಸಂವಿಧಾನದ 41ನೇ ವಿಧಿಯ ಅಡಿಯಲ್ಲಿ ನಾಗರಿಕರ ಯೋಗಕ್ಷೇಮವನ್ನು ಕಡ್ಡಾಯಗೊಳಿಸಲಾಗಿದೆ.ಅಂತೆಯೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಿರಿಯರಿಗಾಗಿ ಅನೇಕ ಯೋಜನೆಗಳನ್ನು ರೂಪಿಸಿವೆ. ಆದರೆ, ಬಹುತೇಕರಿಗೆ ಈ ಯೋಜನೆಗಳ ಅರಿವಿಲ್ಲ. ಈ ಯೋಜನೆಗಳಿಗೆ ಅನುದಾನದ ಮೊತ್ತವೂ ಕಡಿಮೆ ಹಾಗೂ ಅನುಷ್ಠಾನವೂ ಸಮರ್ಪಕವಾಗಿಲ್ಲ.

ಬಡತನ ರೇಖೆಗಿಂತ ಕೆಳಗಿರುವವರಿಗೆ ಕೇಂದ್ರ ಸರ್ಕಾರ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಪಿಂಚಣಿ ಯೋಜನೆ ಹಾಗೂ ರಾಜ್ಯ ಸರ್ಕಾರ ಸಂಧ್ಯಾ ಸುರಕ್ಷಾ ಯೋಜನೆಯನ್ನು ಜಾರಿಗೊಳಿಸಿವೆ. ಇವುಗಳಲ್ಲಿ ಸಿಗುವ ಪಿಂಚಣಿ ಮೊತ್ತ ₹ 1,200. ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುವ ಅಲ್ಪಮೊತ್ತ ಈಗಿನ ‘ದುಬಾರಿ’ಯ ದಿನದಲ್ಲಿ ಯಾವುದಕ್ಕೂ ಸಾಲದು. ‘ಉತ್ತಮ ಉದ್ಯೋಗದಲ್ಲಿದ್ದು, ಹಣ ಉಳಿಸಿ ಕೊಂಡು ಜತೆಗೆ ನಿವೃತ್ತಿ ವೇತನವೂ ಬರುತ್ತಿದ್ದರೆ ಪರವಾಗಿಲ್ಲ. ಆದರೆ, ಕೇವಲ ಸರ್ಕಾರ ನೀಡುವ ಪಿಂಚಣಿಯಲ್ಲೇ ಜೀವನ ಸಾಗಿಸೋದು ಕಷ್ಟ’ ಎನ್ನುತ್ತಾರೆ ಹಿರಿಯ ನಾಗರಿಕರು.

ಪಿಂಚಣಿಯಲ್ಲಿ ಹಿರಿಯರು ಬಹುಪಾಲನ್ನು ಆಹಾರಕ್ಕಾಗಿ, ಕೆಲ ಭಾಗವನ್ನು ಔಷಧಿಗಾಗಿ ಖರ್ಚು ಮಾಡುತ್ತಾರೆ. ಪಿಂಚಣಿ ಮೊತ್ತವು ಅಲ್ಪವಾಗಿದ್ದರೂ, ಶೇ 30ರಷ್ಟು ಫಲಾನುಭವಿಗಳು ಅದನ್ನು ತಮ್ಮ ಕುಟುಂಬ ಸದಸ್ಯರೊಂದಿಗೆ ಹಂಚಿಕೊಳ್ಳುತ್ತಾರೆ. ಮಾಸಿಕ ಪಿಂಚಣಿ ಮೊತ್ತವನ್ನು ಎರಡು ವರ್ಷಕ್ಕೊಮ್ಮೆ ಹಣದುಬ್ಬರಕ್ಕೆ ಹೋಲಿಸಬೇಕು ಮತ್ತು ಪ್ರತಿ ಎರಡು ಮೂರು ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು ಎನ್ನುತ್ತದೆ ಕರ್ನಾಟಕದ ಹಿರಿಯ ನಾಗರಿಕರ ವಸ್ತುಸ್ಥಿತಿ ಅಧ್ಯಯನದ ಮೌಲ್ಯಮಾಪನದ ವರದಿ.



ಹಿರಿಯರ ಪಿಂಚಣಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಗದಿಪಡಿಸಿರುವ ವಾರ್ಷಿಕ ಆದಾಯ ₹ 32 ಸಾವಿರ ಇದೆ. ಬಿಪಿಎಲ್ ಕಾರ್ಡ್‌ನ ವಾರ್ಷಿಕ ಮಿತಿ ₹ 1.20 ಲಕ್ಷ ಇದೆ. ಅಲ್ಲದೇ, ರಾಜ್ಯದಲ್ಲಿ ಈಗಿನ ಸರ್ಕಾರ ಗೃಹಲಕ್ಷ್ಮಿ ಮತ್ತು ಅನ್ನಭಾಗ್ಯ ಯೋಜನೆಯಡಿ ಹಿರಿಯರಿಗೆ ಸಿಗುವ ಆದಾಯದ ಮೊತ್ತವೇ ವಾರ್ಷಿಕ ₹ 33 ಸಾವಿರ ಆಗುತ್ತದೆ. ಇದರಿಂದ ಅರ್ಹರಿಗೆ ಪಿಂಚಣಿ ದೊರೆಯದಂತೆ ಆಗುತ್ತದೆ. ಹಾಗಾಗಿ, ಸರ್ಕಾರ ಪಿಂಚಣಿಗೆ ನಿಗದಿ ಪಡಿಸಿರುವ ವಾರ್ಷಿಕ ಆದಾಯ ಮಿತಿ ಪರಿಷ್ಕರಿಸಬೇಕು’ ಎಂದು ಒತ್ತಾಯಿಸುತ್ತಾರೆ ಹಿರಿಯ ನಾಗರಿಕರು.

‘ಕರ್ನಾಟಕದಲ್ಲಿ ಸುಮಾರು 80 ಲಕ್ಷ ಹಿರಿಯ ನಾಗರಿಕರಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಹಿರಿಯ ನಾಗರಿಕರಿಗೆ ಮಾಸಿಕ ₹ 10 ಸಾವಿರ ಪಿಂಚಣಿ ನೀಡಬೇಕು. ಇದಕ್ಕಾಗಿ ಮಹಾರಾಷ್ಟ್ರದ ಲಾತೂರಿನ ಅರ್ಥಕ್ರಾಂತಿ ಟ್ರಸ್ಟ್ ಯೋಜನೆಯನ್ನೂ ರೂಪಿಸಿದೆ. ಈ ಪ್ರಕಾರ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗದಂತೆ ಪಿಂಚಣಿ ನೀಡಲು ಸಾಧ್ಯವಿದೆ’ ಎನ್ನುತ್ತಾರೆ ಹುಬ್ಬಳ್ಳಿಯ ಹಿರಿಯ ನಾಗರಿಕರ ಅಸೋಸಿಯೇಷನ್ ರಾಜ್ಯ ಘಟಕದ ಅಧ್ಯಕ್ಷ ಎ.ಆರ್. ಪಾಟೀಲ್.

ವೃದ್ಧಾಪ್ಯಕ್ಕೆ ಸಿದ್ಧತೆಯ ಕೊರತೆ

‘ವಯಸ್ಸಾದ ಮೇಲೆ ಆದಾಯಕ್ಕೇನು ಮಾಡಬೇಕು? ಸಾಮಾಜಿಕವಾಗಿ ಬದುಕು ಹೇಗಿರಬೇಕು? ವೃದ್ಧಾಪ್ಯಕ್ಕೆ ತಾವು ಹೇಗೆ ಸಿದ್ಧರಾಗಿರಬೇಕು ಎಂಬ ಅರಿವೇ ಬಹುತೇಕರಿಗೆ ಇರುವುದಿಲ್ಲ. ವರ್ಷಗಟ್ಟಲೇ ಕಷ್ಟಪಟ್ಟು ದುಡೀತಾರೆ. ಆದರೆ, ನಿವೃತ್ತಿಯ ಜೀವನ ಹೇಗಿರಬೇಕೆಂಬ ಯೋಚನೆಯನ್ನೂ ಮಾಡಿರುವುದಿಲ್ಲ’ ಎನ್ನುತ್ತಾರೆ ಆಪ್ತ ಸಲಹೆಗಾರ್ತಿ ಶಾಂತಾ ನಾಗರಾಜ್.

ವೃದ್ಧಾಪ್ಯಕ್ಕೆ ವ್ಯಕ್ತಿಯೊಬ್ಬ ತನ್ನ 50ನೇ ವರ್ಷದಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು. ಮಾನಸಿಕ–ದೈಹಿಕ ಮತ್ತು ಆರ್ಥಿಕ ಸಿದ್ಧತೆ ಅದಾಗಿರಬೇಕು. ವೃದ್ಧಾಪ್ಯದಲ್ಲಿ ಆರೋಗ್ಯ ತುಂಬಾ ಮುಖ್ಯ. ಅದನ್ನು ಕಾಪಾಡಿಕೊಳ್ಳಲು ಆರೋಗ್ಯ ವಿಮೆ ಕಡ್ಡಾಯವಾಗಿ ಮಾಡಿಸಿ ಕೊಳ್ಳಬೇಕು. 50ರಿಂದಲೇ ಪ್ಲಾನ್ ಮಾಡಿದರೆ 60ರ ನಂತರ ವೃದ್ಧಾಪ್ಯವನ್ನು ನೆಮ್ಮದಿಯಿಂದ ಬರಮಾಡಿಕೊಳ್ಳಬಹುದು ಎನ್ನುತ್ತಾರೆ ಅವರು.

ಕರ್ನಾಟಕ ಸರ್ಕಾರವು ಹಿರಿಯರ ಜೀವನ, ಆರೋಗ್ಯ ರಕ್ಷಣೆಗಾಗಿ ವೃದ್ಧಾಶ್ರಮ ಗಳನ್ನು ಸ್ಥಾಪಿಸಲು ಎನ್‌ಜಿಒಗಳಿಗೆ ಹಣಕಾಸಿನ ನೆರವು ನೀಡುತ್ತಿದೆ. ಹಿರಿಯರಿಗೆ ಸಹಾಯವಾಣಿ, ಡೇ ಕೇರ್ ಸೆಂಟರ್ ಕೂಡಾ ರೂಪಿಸಿದೆ. ಆದರೆ, ಇವು ಎಲ್ಲಿವೆ ಎನ್ನುವ ಮಾಹಿತಿಯೂ ಸರಿಯಾಗಿಲ್ಲ. ಮತ್ತೊಂದೆಡೆ ರಾಜ್ಯದ ಎಲ್ಲ ಕಡೆಗಳಲ್ಲೂ ಡೇ ಕೇರ್ ಕೇಂದ್ರಗಳು ನಡೆಯುತ್ತಿಲ್ಲ. ಮತ್ತೆ ಕೆಲವೆಡೆ ವೃದ್ಧಾಶ್ರಮಗಳಲ್ಲಿ ಮೂಲಸೌಕರ್ಯದ ಕೊರತೆ ಇದೆ. ಕೆಲ ಖಾಸಗಿ ವೃದ್ಧಾಶ್ರಮಗಳು ಚೆನ್ನಾಗಿವೆ. ಅದಕ್ಕೆ ತಕ್ಕಂತೆ ಹೆಚ್ಚು ಮೊತ್ತದ ಹಣವನ್ನೂ ಪಾವತಿಸಬೇಕು. ಹಾಗಾಗಿ, ಬಡ, ಮಧ್ಯಮವರ್ಗದವರ ಕೈಗೆಟುಕುವುದಿಲ್ಲ ಎನ್ನುತ್ತಾರೆ ಹಿರಿಯರೊಬ್ಬರು.

ಹಿರಿಯರಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯ ಉಚಿತವಾಗಿ ಸಿಗುವಂತಾಗಬೇಕು. ಅದಕ್ಕೆ ತಕ್ಕಂತೆ ತಜ್ಞ ವೈದ್ಯರ ಕೊರತೆ ನೀಗಿಸಬೇಕಿದೆ. ಹಿರಿಯರ ಕಾಳಜಿ ವಹಿಸುವ ಪಶ್ಚಿಮ ದೇಶಗಳಲ್ಲಿ ಒಳ್ಳೆಯ ಯೋಜನೆಗಳನ್ನು ನಮ್ಮ ಸರ್ಕಾರಗಳು ಅಳವಡಿಸಿಕೊಳ್ಳಬೇಕು. ಹಿರಿಯರಿಗೆ ಗುಣಮಟ್ಟದ ಆಹಾರ ಸೌಲಭ್ಯ, ಸಾಮಾಜಿಕ ಭದ್ರತೆ ಒದಗಿಸಬೇಕಿದೆ. ಸಕಾಲಕ್ಕೆ ಪಿಂಚಣಿ ಹಣವನ್ನು ಬಿಡುಗಡೆ ಮಾಡಬೇಕು ಎಂಬುದು ಹಿರಿಯ ನಾಗರಿಕರ ಬೇಡಿಕೆ.

(ಪೂರಕ ಮಾಹಿತಿ: ಬಿ.ಎಸ್. ಷಣ್ಮುಖಪ್ಪ, ಸಂಧ್ಯಾ ಹೆಗಡೆ, ಆದಿತ್ಯ ಕೆ.ಎ., ಅನಿತಾ ಎಚ್., ವರುಣ ಹೆಗಡೆ, ಕರ್ನಾಟಕದ ಹಿರಿಯ ನಾಗರಿಕರ ವಸ್ತುಸ್ಥಿತಿ ಅಧ್ಯಯನದ ಮೌಲ್ಯಮಾಪನ ವರದಿ 2021, ಯುಎನ್‌ಎಫ್‌ಪಿ ಹಾಗೂ ನೀತಿ ಆಯೋಗದ ವರದಿ)

ಏನಿದೆ ಸೌಲಭ್ಯ?

- ಹಿರಿಯರ ಹಗಲು ಯೋಗಕ್ಷೇಮ ಕೇಂದ್ರ (ಡೇ ಕೇರ್ ಸೆಂಟರ್)
- ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು
- ಜಿಲ್ಲೆಗಳಲ್ಲಿ ವೃದ್ಧಾಶ್ರಮ ನಡೆಸಲು ಎನ್‌ಜಿಒಗಳಿಗೆ ಅನುದಾನ
- 65, ಅದಕ್ಕಿಂತ ಮೇಲ್ಪಟ್ಟವರಿಗೆ ಬಸ್‌ಗಳಲ್ಲಿ ರಿಯಾಯಿತಿ
- ಬಿಪಿಎಲ್ ಕಾರ್ಡ್‌ದಾರರಿಗೆ ಅನ್ನಭಾಗ್ಯ
- 60 ವರ್ಷ ಮೇಲ್ಪಟ್ಟವರಿಗೆ ಪಿಂಚಣಿ

ಹಿರಿಯ ನಾಗರಿಕರಿಗಿಲ್ಲ ಪ್ರತ್ಯೇಕ ಆರೋಗ್ಯ ವಿಮೆ

ರಾಜ್ಯದಲ್ಲಿ ಹಿರಿಯ ನಾಗರಿಕರಿಗೆ ಪ್ರತ್ಯೇಕ ಆರೋಗ್ಯ ವಿಮೆ ಸೌಲಭ್ಯವಿಲ್ಲ. ಆದ್ದರಿಂದ ರಾಜ್ಯದಲ್ಲಿ ಸದ್ಯ ಜಾರಿಯಲ್ಲಿರುವ ‘ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ’ ಮತ್ತು ‘ಯಶಸ್ವಿನಿ’ ಯೋಜನೆಯಡಿಯೇ ವೈದ್ಯಕೀಯ ಸೇವೆ ಪಡೆದುಕೊಳ್ಳಬೇಕಿದೆ. ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹ 1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದೆ. ಈ ವಿಮಾ ಮೊತ್ತ ಇಡೀ ಕುಟುಂಬಕ್ಕೆ ಒಳಪಡಲಿದೆ. ಕುಟುಂಬದ ವ್ಯಕ್ತಿಯೊಬ್ಬರ ಚಿಕಿತ್ಸಾ ವೆಚ್ಚ ನಿಗದಿತ ಮೊತ್ತ ತಲುಪಿದಲ್ಲಿ, ಯೋಜನೆಯಡಿ ಕುಟುಂಬದ ಇನ್ನೊಬ್ಬ ಸದಸ್ಯ ಚಿಕಿತ್ಸೆ ಪಡೆಯಲಾಗದು. ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಸಂಬಂಧಿಸಿದಂತೆಯೂ ಹಿರಿಯ ನಾಗರಿಕರಿಗೆ ಪ್ರತ್ಯೇಕ ವಾರ್ಡ್ ಅಥವಾ ಬೆಡ್ ಮೀಸಲಿಡುವ ವ್ಯವಸ್ಥೆ ರಾಜ್ಯದಲ್ಲಿ ಇಲ್ಲ.

ದುಬಾರಿ ಖಾಸಗಿ ವಿಮೆ: ವಯಸ್ಸಾದಂತೆ ಕಾಯಿಲೆಗಳು ಹೆಚ್ಚು. ಹಾಗಾಗಿ, ಹಿರಿಯರಿಗೆಂದೇ ಇರುವ ಖಾಸಗಿ ವಿಮೆಗಳಿಗೆ ಕಟ್ಟಬೇಕಾದ ಮೊತ್ತವೂ ಹೆಚ್ಚು ಎನ್ನುತ್ತಾರೆ ಖಾಸಗಿ ವಿಮಾ ಕಂಪನಿಯೊಂದರ ಪ್ರತಿನಿಧಿ.

ಖಾಸಗಿ ವಿಮೆಗಳಲ್ಲಿ ಆಯ್ಕೆ ಮಾಡಿಕೊಳ್ಳುವ ಯೋಜನೆ ಆಧಾರದಲ್ಲಿ ಒಟ್ಟು ವಿಮೆ ಮೊತ್ತದ ಆಧಾರದ ಮೇಲೆ ಪ್ರತಿ ವರ್ಷ ಇಂತಿಷ್ಟು ಹಣ ಕಟ್ಟಬೇಕಾಗುತ್ತದೆ. ವಾರ್ಷಿಕ ಪ್ರೀಮಿಯಂ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತದೆ. ಕೆಲ ಖಾಸಗಿ ವಿಮೆಗಳು ಕಟ್ಟಿಸಿಕೊಂಡ ಮೊತ್ತಕ್ಕೆ ತಕ್ಕಂತೆ ಸೇವೆ ಕೊಡುವಲ್ಲಿ ವಿಫಲವಾಗುತ್ತಿವೆ. ಇದರಿಂದ ವಿಮೆಯ ಹಣ ಸದ್ವಿನಿಯೋಗ ಆಗುತ್ತಿಲ್ಲ. ದುಬಾರಿ ಮೊತ್ತ ಪಾವತಿಸಿಯೂ ಆಸ್ಪತ್ರೆಗಳಲ್ಲಿ ಬಿಲ್ ಮರುಪಾವತಿಯಾಗದ ಉದಾಹರಣೆಗಳೂ ಇವೆ. ಉಳ್ಳವರು, ಹೆಚ್ಚು ಮೊತ್ತದ ಪಿಂಚಣಿ ಪಡೆಯುವವರಿಗೆ ಖಾಸಗಿ ವಿಮೆಗಳು ವರವಾಗಬಲ್ಲವೇ ಹೊರತು ಸಾಮಾನ್ಯರಿಗಲ್ಲ ಎಂಬುದು ಕೆಲ ಹಿರಿಯರ ಅನುಭವದ ಮಾತು.

ಜೆರಿಯಾಟ್ರಿಕ್ ತಜ್ಞರ ಕೊರತೆ

ರಾಜ್ಯದಲ್ಲಿ ಹಿರಿಯರ ಆರೋಗ್ಯದ ಕಾಳಜಿ ಮಾಡುವಂಥ ಜೆರಿಯಾಟ್ರಿಕ್ ತಜ್ಞರ ಕೊರತೆ ಇದೆ ಎನ್ನುತ್ತಾರೆ ವಿಜಯಪುರದ ಬಿ.ಎಂ. ಪಾಟೀಲ್ ಮೆಡಿಕಲ್ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯ ಜೆರಿಯಾಟ್ರಿಕ್ ವಿಭಾಗದ ಮುಖ್ಯಸ್ಥ ಡಾ. ಆನಂದ ಅಂಬಲಿ.

ಕೆಲ ಪಿಎಚ್‌ಸಿ, ಸಮುದಾಯ ಆರೋಗ್ಯ ಕೇಂದ್ರಗಳ ಸಿಬ್ಬಂದಿಗೆ ಜೆರಿಯಾಟ್ರಿಕ್ ತರಬೇತಿ ಆಗಿಲ್ಲ. ಬೆಂಗಳೂರಿನ ಬಿಎಂಸಿಯಲ್ಲಿ ವೃದ್ಧರಿಗಾಗಿ ಪ್ರತ್ಯೇಕ ವಿಭಾಗವಿದೆ ಎಂದು ಮಾಹಿತಿ ನೀಡುತ್ತಾರೆ ಅವರು.

ಹಿರಿಯರನ್ನೂ ಬಿಟ್ಟಿಲ್ಲ ವಂಚನೆ



ಕೊನೆಗಾಲದಲ್ಲಿ ಆಸರೆಗಾಗಿ ವೃದ್ಧರು ಕೂಡಿಟ್ಟಿರುವ ಚಿನ್ನಾಭರಣ, ಹಣದ ಮೇಲೆಯೂ ವಂಚಕರ ಕಣ್ಣುಗಳು ಬೀಳುತ್ತಿವೆ. ರಾಜ್ಯದಲ್ಲಿ ಇಂತಹ ಪ್ರಕರಣಗಳಲ್ಲಿ ಲಕ್ಷಾಂತರ ರೂಪಾಯಿ ವಂಚನೆ ನಡೆಯುತ್ತಿದೆ. ಎಟಿಎಂ ಕೇಂದ್ರಗಳಲ್ಲಿ ಹಣ ಡ್ರಾ ಮಾಡಿಕೊಡುವ ನೆಪದಲ್ಲೂ ವೃದ್ಧರಿಂದ ಸುಲಿಗೆ ನಡೆಸಲಾಗುತ್ತಿದೆ.

‘ಧರ್ಮಕ್ಕೆ ನೋಡಿಕೊಳ್ಳಬೇಕಾಗಿಲ್ಲ’



‘ಬಾಳಿನ ಮುಸ್ಸಂಜೆಯಲ್ಲಿ ಪಯಣಿಸುವ ಅಪ್ಪ ಮತ್ತು ಅಮ್ಮನನ್ನು ಮಕ್ಕಳು ಧರ್ಮಕ್ಕೆ ನೋಡಿಕೊಳ್ಳಬೇಕಾಗಿಲ್ಲ. ಅದು ಅವರ ಕಾನೂನು ಬಾಧ್ಯತೆ, ಮಾತ್ರವಲ್ಲ ನೈತಿಕತೆಯ ಆದ್ಯ ಕರ್ತವ್ಯವೂ ಹೌದು’ ಎಂದು ಹೈಕೋರ್ಟ್ 2023ರ ನವೆಂಬರ್ ಎರಡನೇ ವಾರದಲ್ಲಿ ಪ್ರಕರಣವೊಂದರಲ್ಲಿ ಕಟುವಾಗಿ ನುಡಿದಿತ್ತು.

ಪ್ರಕರಣವೊಂದರಲ್ಲಿ ಮಗಳು ಮತ್ತು ಅಳಿಯ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿದ್ದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಹಿರಿಯ ತಂದೆ–ತಾಯಿ ಪೋಷಣೆಗೆ ಸಂಬಂಧಿಸಿದಂತೆ ಮಕ್ಕಳು ಅಸಡ್ಡೆ ತೋರಿದ ಪ್ರಕರಣಗಳಲ್ಲಿ ನ್ಯಾಯಾಲಯಗಳು, ಪ್ರಾಧಿಕಾರಗಳು ಹೆಚ್ಚು ಸಂವೇದನಾಶೀಲತೆ ಹೊಂದಿರಬೇಕು’ ಎಂಬ ಕಾಳಜಿ ವ್ಯಕ್ತಪಡಿಸಿತ್ತು.

‘ತಂದೆ–ತಾಯಿ ಮತ್ತು ಹಿರಿಯ ನಾಗರಿಕರ ಪಾಲನೆ ಪೋಷಣೆ ಮತ್ತು ಕಲ್ಯಾಣ ಅಧಿನಿಯಮ-2007’ ಪರಿಣಾಮಕಾರಿ ಕಾಯ್ದೆಯಾಗಿ ರೂಪುಗೊಂಡಿದೆ. ಆದರೆ, ದೂರು ಸಲ್ಲಿಸುವಾಗ ಕೆಲವು ಹೊರತಾದ ಅಂಶಗಳನ್ನೂ ಗಮನಿಸಬೇಕಾದ್ದು ಅವಶ್ಯ. ಜೀವನ ನಿರ್ವಹಣೆಯ ಮೊತ್ತ ಅಥವಾ ಮಂಜೂರಾದ ಚರಾಸ್ತಿಗಳನ್ನು ದಾನಪತ್ರ ಮಾಡಿಕೊಟ್ಟಿದ್ದರೆ ಅಂತಹ ಪ್ರಕರಣಗಳಲ್ಲಿ ದೂರು ನೀಡಲು ಸಾಧ್ಯವಿಲ್ಲ. ಸಾಧ್ಯವಿರುವ ಪ್ರಕರಣಗಳಲ್ಲಿ ದೂರು ನೀಡಲು ಇರುವ ಕಾನೂನುಬದ್ಧ ವಾಯಿದೆ ಮೂರು ವರ್ಷಗಳವರೆಗೆ ಮಾತ್ರ’.

‘ಈ ಸಂಬಂಧ ಸ್ಥಳೀಯವಾಗಿ ಉಪವಿಭಾಗಾಧಿಕಾರಿಗೆ ದೂರು ಸಲ್ಲಿಸಬಹುದು. ದೂರಿನ ಫಲಿತಾಂಶ ಅವರಿಗೆ ವಿರುದ್ಧವಾಗಿದ್ದರೆ ಅದನ್ನು ಪ್ರಶ್ನಿಸಿ ಆಯಾ ಜಿಲ್ಲಾಧಿಕಾರಿಗೆ ಮೇಲ್ಮನವಿ ಸಲ್ಲಿಸಬಹುದು. ದಾನಪತ್ರವನ್ನು ಅನೂರ್ಜಿತಗೊಳಿಸುವಂತೆಯೂ ಕೋರಬಹುದು. ಅಂತೆಯೇ ಉಪವಿಭಾಗಾಧಿಕಾರಿಯಾಗಲೀ ಅಥವಾ ಜಿಲ್ಲಾಧಿಕಾರಿಯಾಗಲೀ ಈ ಬಗ್ಗೆ ₹ 2 ಲಕ್ಷದವರೆಗೆ ದಂಡ ವಿಧಿಸಿ ಅದನ್ನು ಪರಿಹಾರ ರೂಪದಲ್ಲಿ ಅರ್ಜಿದಾರರಿಗೆ ನೀಡಬಹುದು. ಈ ಎರಡೂ ಅರೆನ್ಯಾಯಿಕ ಕೋರ್ಟ್‌ಗಳಲ್ಲಿ ಪರಿಹಾರ ಸಿಗಲಿಲ್ಲ ಎಂದಾಗ ಅದನ್ನು ಮೂಲಭೂತ ಹಕ್ಕಿನ ಉಲ್ಲಂಘನೆ ಅಡಿಯಲ್ಲಿ ಹೈಕೋರ್ಟ್ ಮೆಟ್ಟಿಲೇರಿ ಪರಿಹಾರ ಪಡೆಯಬಹುದು’ ಎನ್ನುತ್ತಾರೆ ಹೈಕೋರ್ಟ್ ವಕೀಲ ಜಿ. ಲಕ್ಷ್ಮಿಕಾಂತ್. ಇದಕ್ಕೆ ನಿದರ್ಶನವೆಂಬಂತೆ ಹಾವೇರಿ ಜಿಲ್ಲೆಯಲ್ಲಿ ನಡೆದ ಘಟನೆಯಲ್ಲಿ ವೃದ್ಧೆಯೊಬ್ಬರಿಗೆ ಸವಣೂರು ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಆಸ್ತಿ ಮರಳಿಸಿದೆ.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 7-4-1999

● ಹಿಂದುಳಿದ ವರ್ಗದವರಿಗೂ ಬಡ್ತಿ ಮೀಸಲಾತಿಗೆ ಒಪ್ಪಿಗೆ

ಬೆಂಗಳೂರು, ಏ. 6– ಹಿಂದುಳಿದ ವರ್ಗದವರಿಗೂ ಇನ್ನುಮುಂದೆ ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸಲು ಇಂದು ನಡೆದ ಸಚಿವ ಸಂಪುಟದ ಸಭೆ ತಾತ್ವಿಕವಾಗಿ ಒಪ್ಪಿಗೆ ನೀಡಿತು.

ಸಂಪುಟ ಸಭೆಯ ನಂತರ ವಾರ್ತಾ ಮತ್ತು ಪ್ರಸಾರ ಸಚಿವ ಎಂ.ಪಿ. ಪ್ರಕಾಶ್ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿ, ‘ಬಡ್ತಿ ಮೀಸಲಾತಿಗೆ ಸಂಬಂಧಿಸಿದಂತೆ 1997ರಲ್ಲಿ ಹೊರಡಿಸಲಾಗಿದ್ದ ಸರ್ಕಾರಿ ಆದೇಶದಲ್ಲಿದ್ದ ಉತ್ತಮ ಅಂಕಿಅಂಶಗಳು ಕಳೆದ ಫೆಬ್ರುವರಿಯಲ್ಲಿ ಕೈಬಿಟ್ಟು ಹೋಗಿದ್ದರೆ, ಅಂಥವುಗಳನ್ನೂ ಸೇರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದರು.

50 ವರ್ಷಗಳ ಹಿಂದೆ

ಭಾನುವಾರ, 7-4-1974

● ‘ಅವ್ಯವಸ್ಥೆ, ಅಶಾಂತಿ ಸೃಷ್ಟಿಸಿ ರಾಜ್ಯಸರ್ಕಾರಗಳ ಪದಚ್ಯುತಿಗೆ ಸಂಚು’

ಪುಣೆ, ಏ.6– ವ್ಯಾಪಕ ಅವ್ಯವಸ್ಥೆ ಮತ್ತು ಕಾನೂನು ಹಾಗೂ ನೆಮ್ಮದಿ ಪಾಲನೆ ಸಮಸ್ಯೆಗಳನ್ನು ಸೃಷ್ಟಿಸುವ ಮೂಲಕ ರಾಜ್ಯಗಳಲ್ಲಿ ಸರ್ಕಾರಗಳನ್ನು ಉರುಳಿಸುವ ಸಂಚೊಂದನ್ನು ಮಾಡಲಾಗುತ್ತಿದೆಯೆಂದು ಪ್ರಧಾನಿ ಇಂದಿರಾಗಾಂಧಿ ಅವರು ಇಲ್ಲಿ ಇಂದು ಹೇಳಿದರು.

ಇಲ್ಲಿನ ರೇಸ್‌ಕೋರ್ಸ್ ಮೈದಾನದಲ್ಲಿ ಬೃಹತ್ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ‘ನಾವು ಹೊಸ ಅಧ್ಯಕ್ಷರನ್ನು ಚುನಾಯಿಸುವುದಕ್ಕೂ ಮುಂಚೆ ಹೊಸ ಚುನಾವಣೆಗಳನ್ನು ನಡೆಸಲು ಕೇಂದ್ರ ಸರ್ಕಾರವನ್ನು ಒತ್ತಾಯ ಪಡಿಸುವುದೇ ಈ ಸಂಚಿನ ಹಿಂದೆ ಅಡಗಿರುವ ಮುಖ್ಯ ಉದ್ದೇಶ’ ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಏಪ್ರಿಲ್ 7, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ತ್ರಯೋದಶಿ ಗಂ. 06-54 ನಂತರ ಚತುರ್ದಶಿ ಗಂ. 27-22 **ನಕ್ಷತ್ರ:** ಪೂರ್ವಾಭಾದ್ರಾ ಗಂ. 12-58 **ಯೋಗ:** ಬ್ರಹ್ಮ ಗಂ. 22-17 **ಕರಣ:** ವಣಿಜ ಗಂ. 06-54, ಮೀನ ಮಾಸದ 23 ನೇ ದಿನ, **ಮಳೆನಕ್ಷತ್ರ:** ರೇವತಿ 3, **ರಾಹುಕಾಲ:** ಸಾಯಂಕಾಲ 04-30 - 06-00
ಸೂರ್ಯೋದಯ: 06-26 **ಸೂರ್ಯಾಸ್ತ:** 06-39, **ಮುಸ್ಲಿಂ ದಿನಾಂಕ:** 27 ರಂಜಾನ್
ದಿನ ವಿಶೇಷ: ಮಧುಕೃಷ್ಣತ್ರಯೋದಶಿ, ಸಬ್-ಎ-ಖಾದರ್ (ಹಿಂದಿನ ದಿನ) (ಮುಸ್ಲಿಂ)
ಅದೃಷ್ಟ ಸಂಖ್ಯೆ: 5, 3

ಮೇಷ: ಕಳೆದುಹೋಗಿದ್ದ, ಹಳೆಯ ನೆನಪುಗಳನ್ನು ಹೊಂದಿರುವ ವಸ್ತು ಪುನಃ ಕೈ ಸೇರುತ್ತದೆ. ಮನೋವಿಜ್ಞಾನದ ವಿದ್ಯಾರ್ಥಿಗಳು ಉತ್ತಮ ಫಲಿತಾಂಶವನ್ನು ಎದುರು ನೋಡಬಹುದು. ಕಾಲಮಿತಿಯೊಳಗೆ ಕರ್ತವ್ಯ ಪಾಲಿಸಿ.

ವೃಷಭ: ನಿಮ್ಮ ಸುತ್ತಮುತ್ತಲ ಜನರೊಂದಿಗಿನ ಬಾಂಧವ್ಯವು ಉತ್ತಮಗೊಳ್ಳುವುದು. ವೈದ್ಯರು ಅಭ್ಯಾಸದಲ್ಲಿ ತೋರಿದ ಬೇಜವಬ್ದಾರಿತನದಿಂದ ಪ್ರಾಣಾಪಾಯ ಸಂಭವಿಸಬಹುದು. ಕಥೆ-ಕಾದಂಬರಿಯ ಬಗ್ಗೆ ಆಸಕ್ತಿ ಮೂಡಲಿದೆ.

ಮಿಥುನ: ಈ ದಿನದ ಪರಿಸ್ಥಿತಿಗಳು ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ಮನೆಯಲ್ಲಿ ಮಕ್ಕಳಿಂದ ಸಂಭ್ರಮದ ವಾತಾವರಣ ಮೂಡುವುದು. ಗಂಟಲು ಬೇನೆ ಎದುರಾದಲ್ಲಿ ನಿರ್ಲಕ್ಷಿಸುವುದು ಸರಿಯಲ್ಲ.

ಕರ್ಕಾಟಕ: ಸದಾಕಾಲ ಪಕ್ಕದಲ್ಲಿಯೇ ಇರುವ ಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ, ಖಂಡಿತವಾಗಿ ನೀವೇ ಜಯಶಾಲಿಯಾಗುವಿರಿ. ಇಂದು ದೈಹಿಕ ಶ್ರಮವು ಜಾಸ್ತಿಯಾದರೂ ಆದಾಯ ಉತ್ತಮ ಸ್ಥಿತಿಯಲ್ಲಿರುತ್ತದೆ.

ಸಿಂಹ: ವ್ಯವಹಾರದಲ್ಲಿ ಎಲ್ಲಾ ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರಿದರೂ, ಮೋಸ ಹೋಗುವ ಸಂಭವವಿದೆ. ಜಾಗ್ರತರಾಗಿರಿ. ವಿದೇಶಿ ವಸ್ತುಗಳ ಖರೀದಿಗಾಗಿ ಧನ ವ್ಯಯ. ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು.

ಕನ್ಯಾ: ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ನಿಮ್ಮ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸಿಗಲಿದೆ. ಇಂಟೀರಿಯರ್ ಡೆಕೊರೇಟರ್ಸ್‌ಗಳಿಗೆ ಅಧಿಕ ವರಮಾನ ಇರಲಿದ್ದು, ಕಾರ್ಯಕ್ಷೇತ್ರದಲ್ಲಿ ಯಶಸ್ಸನ್ನು ಕಾಣಬಹುದು.

ತುಲಾ: ವ್ಯಕ್ತಿಯನ್ನು ಅವರ ಮೊದಲ ಭೇಟಿಯಲ್ಲಿ ನೋಡಿದ ಸ್ವಭಾವವೆಂದು ತೂಕಹಾಕಿ ತೀರ್ಮಾನಿಸಬೇಡಿ. ಸ್ನೇಹಿತರಲ್ಲಿ ಅನಗತ್ಯವಾಗಿ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ಇತರರನ್ನು ಗೌರವದಿಂದ ನೋಡಿ.

ವೃಶ್ಚಿಕ: ಅವಿವಾಹಿತರಿಗೆ ಕಂಕಣ ಬಲ ಸಂತಸ ತರಲಿದೆ. ಸರಕು ಸಾಗಾಣಿಕೆದಾರರಿಗೆ, ಮತ್ತು ಬಂದರು ಕಾರ್ಮಿಕರಿಗೆ ಉತ್ತಮವಾದ ಪ್ರತಿಫಲ ದೊರೆಯಲಿದೆ. ಮಹಿಳೆಯರಿಗೆ ಆಭರಣ ಕೊಳ್ಳುವಂತಹ ಇಷ್ಟಾರ್ಥ ಸಿದ್ಧಿಯಾಗಲಿದೆ.

ಧನು: ಧಾರ್ಮಿಕವಾಗಿ ಇರುವವರಿಗೆ, ವೇದಾಧ್ಯಯನದಲ್ಲಿರುವವರಿಗೆ ಮಂತ್ರಸಿದ್ಧಿ ಆಗಬಹುದು. ಬೆಳ್ಳಿ ವಸ್ತುಗಳ ಮಾರಾಟ ಮಾಡುವವರಿಗೆ ಹೆಚ್ಚಿನ ಆದಾಯ. ಮಕ್ಕಳಿಂದ ಅನಾವಶ್ಯಕ ಖರ್ಚು ಸಂಭವಿಸಲಿದೆ.

ಮಕರ: ನೀವು ಹಿಂದೆ ಮಗನ ಒಳಿತಿಗಾಗಿ, ಅಭ್ಯುದಯಕ್ಕಾಗಿ ತೆಗೆದುಕೊಂಡ ಕೆಲ ಕಠಿಣ ನಿರ್ಧಾರಗಳಿಂದಾಗಿ ಇಂದು ಉತ್ತಮ ಫಲ ನಿರೀಕ್ಷಿಸಬಹುದಾಗಿದೆ. ಸಂಪರ್ಕ ಸಾರಿಗೆಯಲ್ಲಿ ಸೇವೆ ಸಲ್ಲಿಸುವವರಿಗೆ ಲಾಭವಾಗುವುದು.

ಕುಂಭ: ಗೃಹದಲ್ಲಿ ಸಂತೋಷ ತರುವಂಥ ಶುಭ ಸಮಾರಂಭಗಳು ನಡೆಯುವವು. ನೀವು ಎಲ್ಲವನ್ನೂ ಕಷ್ಟಪಟ್ಟು ಅಥವಾ ಇತರರ ಸಹಾಯದಿಂದ ಸಂಪಾದಿಸಿಕೊಳ್ಳಬೇಕಾಗುತ್ತದೆ. ಮಾನಸಿಕ ಖಿನ್ನತೆಯನ್ನು ದೂರಮಾಡಿ.

ಮೀನ: ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ಆರ್ಥಿಕವಾಗಿ ಮುಂದುವರಿಯಲು ಸಹಾಯವಾಗುತ್ತದೆ. ನಿಮ್ಮ ಮಿತ್ರರೊಬ್ಬರು ನಿಮಗೆ ಎಲ್ಲ ವಿಧದಲ್ಲಿಯೂ ನಿಮಗೆ ಸಹಾಯ ಮಾಡಲಿದ್ದಾರೆ.

ಪದಬಂಧ 5644


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಾದದಲ್ಲಿ ಕೊನೆಗೊಂಡಿರುವ ಚರ್ಚೆ (3)
3.ಮಾನಿನಿಗೆ ಬಂದಿರುವ ಸಂದೇಹ! (3)
5.ಶರಣ ಹಿಡಿದಿರುವ ಬಾಣ (2)
6.ತಿರುಗಿಸಿದರೂ ಇದು ದುರಸ್ತಿಯೇ (3)
7.ಸುಸಮಯದಲ್ಲಿ ಕಾಣಿಸಿಕೊಂಡಿರುವ ನರಕಾಧಿಪತಿ (2)
9.ಹತ್ತಿರದಲ್ಲೇ ಪ್ರತ್ಯಕ್ಷನಾಗಿರುವ ಶಿವ (2)
11.ಹೂವಿನಲ್ಲಿರುವ ಹುಡಿ (3)
13.ವರದಿ ನೋಡುತ್ತಿರುವ ಮದುವೆಗಂಡು (2)
14.ಚಲ್ಲಣ ತೋಯುವಷ್ಟು ಹೆದರಿಕೆ? (3)
15.ಕುಡುಕನನ್ನು ನೋಡಿದ್ದಕ್ಕೇ ಈ ಕಂಪನ (3)

ಮೇಲಿಂದ ಕೆಳಕ್ಕೆ

1.ಕೊನೆಗೆ ಮಾಲೆಯುಳ್ಳ ಬೌದ್ಧ ಭಿಕ್ಷುಗಳ ವಾಸಸ್ಥಾನ (3)
2.ಪ್ರಜ್ವಲಿಸುತ್ತಿರುವ ಬೆಂಕಿ (3)
3.ಹಳೆ ಸಾಮಾನುಗಳನ್ನು ಮಾರುವ ಅಂಗಡಿ (3)
4.ಇದು ನಿರ್ಣಯವಾದುದು (3)
5.ಮಲಗುವ ಮನೆ (5)
8.ಮರದಲ್ಲಿ ಕಾಣುತ್ತಿದೆಯೇ ಚಿತ್ತವಿಕಲ್ಪ? (5)
10.ವಿರಳವಾಗಿ ಕಾಣುತ್ತಿರುವ ರಕ್ತ (3)
11.ಪಣವಿಟ್ಟು ಕೈಗೊಂಡಿರುವ ಪ್ರವಾಸ (3)
12.ಇದು ಸುಲಭಸಾಧ್ಯವಲ್ಲದುದು (3)
13.ತರ್ಕ ಮಾಡುತ್ತಿರುವ ವ್ಯಾಪಾರಿ (3)



5643ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಲವಲವಿಕೆ 3.ಸಂಕುಲ 5.ಕರಾರುವಾಕ್ಕು 7.ಶಕಟ 9.ಬಯಲು 11.ಹರವಿ 13.ಸಮರಸಿಂಹ 15.ಮುದ್ರಣ 16.ದ್ವಾರಪಾಲಕ

ಮೇಲಿಂದ ಕೆಳಕ್ಕೆ:
1.ಲವಲೇಶ 2.ವಿವೇಕ 4.ಕುಮ್ಮಕ್ಕು 6.ರುಮಾಲು 8.ಕಲ್ಕಿ 9.ಬರ್ಬರ 10.ವಾರ 12.ವಿಮರ್ಶಕ 13.ಸಮುದ್ರ 14.ಹತ್ತಿರ

ಸುಡೊಕು 6029

	7			9			6	
1		9	6	4				
	6		5		2		9	
9		2				3		6
	4			5			7	
8		7	2		4	1		9
7			4		5		2	
				2		7		4
		4	1		9		3	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ

6028 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬರ ಪರಿಹಾರ ಅನುದಾನ ಬಿಡುಗಡೆ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸಮರ್ಥನೆ

‘ವಿಳಂಬ ಉದ್ದೇಶಪೂರ್ವಕವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕಕ್ಕೆ ಬರ ಪರಿಹಾರದಅನುದಾನಬಿಡುಗಡೆವಿಳಂಬ ವಾಗಿರುವುದು ಉದ್ದೇಶಪೂರ್ವಕವಲ್ಲ. ಉನ್ನತಾಧಿಕಾರ ಸಮಿತಿ ಸಭೆ ನಡೆಸಲು ಕೇಂದ್ರ ಚುನಾವಣಾ ಆಯೋಗದ ಅನುಮತಿ ಬಾರದಿರುವುದು ವಿಳಂಬಕ್ಕೆ ಕಾರಣ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಮಾಧ್ಯಮ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಂತರ ಸಚಿವಾಲಯ ಅಧಿಕಾರಿಗಳ ತಂಡ ರಾಜ್ಯದಲ್ಲಿ ಬರ ಪರಿಸ್ಥಿತಿ ಕುರಿತು ಅಧ್ಯಯನ ನಡೆಸಿ ಸಲ್ಲಿಸಿದ ವರದಿಯನ್ನು ಕೃಷಿ ಮತ್ತು ಗೃಹ ಸಚಿವಾಲಯಗಳು ಪರಿಶೀಲನೆ ನಡೆಸಿದ್ದವು. ಆದರೆ, ಅಷ್ಟರಲ್ಲೇ ಚುನಾವಣೆ ಘೋಷಣೆ ಯಾಯಿತು. ಆಯೋಗದ ಅನುಮತಿ ದೊರಕದೇ ಉನ್ನತಾಧಿಕಾರ ಸಮಿತಿ ಸಭೆ ನಡೆಸಲು ಸಾಧ್ಯವಾಗಿಲ್ಲ’ ಎಂದರು.

ಕರ್ನಾಟಕ ಮಾತ್ರವಲ್ಲ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ, ಸಿಕ್ಕಿಂ, ಅಸ್ಸಾಂ ಸೇರಿದಂತೆ ಹಲವು ರಾಜ್ಯಗಳಿಗೆ ವಿಪತ್ತು ಪರಿಹಾರ ನಿಧಿಯಡಿ ನೆರವು ನೀಡುವ ಪ್ರಸ್ತಾವಗಳು ಉನ್ನತಾಧಿಕಾರ ಸಮಿತಿ ಮುಂದಿವೆ. ಚುನಾವಣಾ ಆಯೋಗದ ಅನುಮತಿ ಸಿಕ್ಕ ಬಳಿಕ ತೀರ್ಮಾನಿಸಬೇಕಿದೆ ಎಂದು ಹೇಳಿದರು.

ಎನ್‌ಡಿಆರ್‌ಎಫ್ ಕಾಯ್ದೆಯಲ್ಲಿ ಪರಿಹಾರ ವಿತರಣೆ ಅವಕಾಶ ಇಲ್ಲ. ಪರಿಹಾರ, ನೆರವು, ಮಧ್ಯಂತರ ಪರಿಹಾರ ಎಂಬ ಉಲ್ಲೇಖಗಳೇ ಇಲ್ಲ. ಕೇಂದ್ರ ಸರ್ಕಾರ ‘ಇನ್ಪುಟ್ ಸಬ್ಸಿಡಿ’ ಮತ್ತು ‘ಗ್ರಾಚ್ಯುಯಸ್ ಪರಿಹಾರ’ ಮಾತ್ರ ನೀಡುತ್ತದೆ ಎಂದು ಕಾಯ್ದೆ ಓದಿದರು.

ತುರ್ತು ಪರಿಹಾರ ನೀಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು. ಇದಕ್ಕಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಗೆ ಕೇಂದ್ರವು ವಂತಿಗೆ ನೀಡುತ್ತದೆ. ಕರ್ನಾಟಕಕ್ಕೆ ಎರಡೂ ಕಂತುಗಳ ₹629 ಕೋಟಿಯನ್ನು ಮುಂಗಡವಾಗಿ ಬಿಡುಗಡೆ ಮಾಡಲಾಗಿತ್ತು ಎಂದರು.

‘ಕರ್ನಾಟಕದ ಎಲ್ಲ ಕೋರಿಕೆಗಳಿಗೆ ಪ್ರಧಾನಿ ಮೋದಿ ಅವರು ತುರ್ತಾಗಿ ಸ್ಪಂದಿಸಿದ್ದಾರೆ. ಬರ ಪರಿಹಾರದ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದವರ ಟೀಕೆಗಳಿಗೆ ಕರ್ನಾಟಕದ ಜನರು ಕಿವಿಗೊಡುವುದಿಲ್ಲ. ಈ ವಿಷಯ ಚುನಾವಣೆಯ ಮೇಲೆ ಯಾವ ಪರಿಣಾಮ ಬೀರುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ ಪತ್ರಿಕಾಗೋಷ್ಠಿಯಲ್ಲಿದ್ದರು.

‘ಪರ್ಯಾಯ ನಾಯಕನೇ ಇಲ್ಲ’


ನಿರ್ಮಲಾ ಸೀತಾರಾಮನ್

‘ಪ್ರಧಾನಿ ನರೇಂದ್ರ ಮೋದಿಯವರಿಗೆ ಪರ್ಯಾಯ ರಾಜಕೀಯ ನಾಯಕ ಯಾರು ಎಂಬುದೇ ವಿರೋಧ ಪಕ್ಷಗಳ ಮೈತ್ರಿಕೂಟದಲ್ಲಿರುವವರಿಗೆ ಗೊತ್ತಿಲ್ಲ. ಅಲ್ಲಿರುವ 13 ಮಂದಿ ನಾಯಕರೂ ಪ್ರಧಾನಿ ಹುದ್ದೆ ಮೇಲೆ ಕಣ್ಣಿಟ್ಟುಕೊಂಡಿದ್ದಾರೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

‘ಕಾಂಗ್ರೆಸ್‌ನ ನಾಯಕರೆಲ್ಲರೂ ಹಣಕಾಸು ಅಕ್ರಮದಲ್ಲಿ ಭಾಗಿಯಾದ ಆರೋಪದಡಿ ದಾಖಲಾದ ಪ್ರಕರಣಗಳಲ್ಲಿ ಜಾಮೀನು ಪಡೆದು ಹೊರಗಿದ್ದಾರೆ. ಅದೇ ಪಕ್ಷ ಈಗ ‘ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ’ಯನ್ನು ಪರಾಮರ್ಶೆ ಮಾಡುತ್ತೇನೆ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವುದು ಹಾಸ್ಯಾಸ್ಪದ’ ಎಂದರು.

‘ವಿಳಂಬಕ್ಕೆ ರಾಜ್ಯ ಸರ್ಕಾರವೇ ಹೊಣೆ’


ಆರ್. ಅಶೋಕ

ಬೆಂಗಳೂರು: ‘ಮುಂಗಾರು ಅವಧಿಯಲ್ಲಿನ ಬರಗಾಲ ಘೋಷಣೆಯನ್ನು ರಾಜ್ಯ ಸರ್ಕಾರ ಸಕಾಲದಲ್ಲಿ ಮಾಡದಿರುವುದೇ ಕೇಂದ್ರದಿಂದ ಪರಿಹಾರ ಬಿಡುಗಡೆ ವಿಳಂಬವಾಗಲು ಕಾರಣ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ದೂರಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ಬೇಗ ಬರ ಘೋಷಣೆ ಮಾಡಿದ್ದರೆ, ಕೇಂದ್ರವೂ ಇನ್ನಷ್ಟು ಮುಂಚಿತವಾಗಿ ಅಧ್ಯಯನ ತಂಡ ಕಳುಹಿಸುತ್ತಿತ್ತು. ಈಗಲೂ ಹಿಂಗಾರು ಅವಧಿಯ ಬರಗಾಲದ ಕುರಿತೂ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದರು.

ಬರ ಪರಿಹಾರ ವಿತರಣೆಯಲ್ಲಿ ರಾಜ್ಯ ಸರ್ಕಾರ ಸರಿಯಾಗಿ ಕ್ರಮ ಕೈಗೊಂಡಿಲ್ಲ. ಪ್ರತಿ ರೈತರಿಗೆ ₹ 2,000 ಮಾತ್ರ ವಿತರಿಸಲಾಗಿದೆ. ಕೇಂದ್ರ ಸರ್ಕಾರದಿಂದ ಬಂದ ಹಣದಲ್ಲೇ ಪರಿಹಾರ ನೀಡಲಾಗಿದೆ. ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ವಾಗ್ದಾಳಿ ನಡೆಸಿದರು.

ಸಂಸತ್ತಿಗೆ ಹೋಗಬೇಕಿತ್ತು: ‘ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯದ ಕಂದಾಯ ಸಚಿವ ಕೃಷ್ಣ ಬೈರೇಗೌಡರ ಎದುರು ಕೈಕಟ್ಟಿ ನಿಂತುಕೊಂಡು ಉತ್ತರ ಕೊಡಬೇಕಿತ್ತೆ? ಕೃಷ್ಣ ಅವರು ಬುದ್ಧಿವಂತರಾಗಿದ್ದರೆ ಸಂಸತ್ತಿಗೆ ಹೋಗಬೇಕಿತ್ತು’ ಎಂದು ಅಶೋಕ ಹೇಳಿದರು.

‘ಕೇಂದ್ರ ಹಣಕಾಸು ಸಚಿವರನ್ನು ಸಂತೆ ಭಾಷಣಕ್ಕೆ ಕರೆಯುವುದಲ್ಲ. ದೆಹಲಿಗೆ ಹೋಗಿ ರಾಜ್ಯ ಸರ್ಕಾರದ ಮನವಿಯನ್ನು ಅವರಿಗೆ ಸಲ್ಲಿಸಬೇಕಿತ್ತು’ ಎಂದರು.

ಎನ್‌ಡಿಎ ಸರ್ಕಾರದ ಅವಧಿಯಲ್ಲಿ ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂಬ ಕಾಂಗ್ರೆಸ್‌ನವರ ಆರೋಪದಲ್ಲಿ ಹುರುಳಿಲ್ಲ. ಎನ್‌ಡಿಎ ಸರ್ಕಾರದ ಅವಧಿಯಲ್ಲೇ ರಾಜ್ಯಕ್ಕೆ ಹೆಚ್ಚು ಅನುದಾನ, ನೆರವು ದೊರಕಿದೆ ಎಂದರು.

‘ಎಡ್ಯುವರ್ಸ್’ ಶೈಕ್ಷಣಿಕ ಸಂಭ್ರಮ

‘ಪ್ರಜಾವಾಣಿ’, ‘ಡೆಕ್ಕನ್ ಹೆರಾಲ್ಡ್’ನ ಶೈಕ್ಷಣಿಕ ಸಮ್ಮೇಳನ ಆರಂಭ

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ‘ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ’ ಆಯೋಜಿಸಿರುವ 14ನೇ ಶೈಕ್ಷಣಿಕ ಮೇಳ ‘ಎಡ್ಯುವರ್ಸ್’ನಲ್ಲಿ ವಿದ್ಯಾರ್ಥಿ ಮತ್ತು ಪೋಷಕರು ವಿವಿಧ ಕೋರ್ಸ್‌ಗಳ ಮಾಹಿತಿ ಪಡೆದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ನೀಟ್, ಸಿಇಟಿ ಫಲಿತಾಂಶ ಪ್ರಕಟವಾದ ಮೇಲೆ ಉತ್ತಮ ಕಾಲೇಜು ಆಯ್ಕೆ ಹೇಗೆ? ಪ್ರವೇಶ ಶುಲ್ಕ, ಕೋರ್ಸ್‌ಗಳ ಆಯ್ಕೆ, ಭವಿಷ್ಯದಲ್ಲಿನ ಉದ್ಯೋಗಾವಕಾಶಗಳು, ಬ್ಯಾಂಕ್‌ನಿಂದ ಶೈಕ್ಷಣಿಕ ಸಾಲ ಸೌಲಭ್ಯ, ಎಂಜಿನಿಯರಿಂಗ್ – ಮೆಡಿಕಲ್ ಕೋರ್ಸ್‌ಗಳ ಜತೆಗೆ ಬೇರೆ ಯಾವ ಕೋರ್ಸ್‌ಗಳಿವೆ.. ಹೀಗೆ ವಿದ್ಯಾರ್ಥಿಗಳು, ಪೋಷಕರಲ್ಲಿದ್ದ ಅನುಮಾನಗಳನ್ನು ಹೋಗಲಾಡಿಸುವ ಪ್ರಯತ್ನವನ್ನು ಶನಿವಾರದಿಂದ ಆರಂಭವಾದ ‘ಶೈಕ್ಷಣಿಕ ಮೇಳ’ ಮಾಡಿತು.

ಇಲ್ಲಿನ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ ‘ಎಡ್ಯುವರ್ಸ್’ನಲ್ಲಿ ಭಾಗವಹಿಸಿದ್ದ ಸಾವಿರಾರು ವಿದ್ಯಾರ್ಥಿಗಳು ತಮ್ಮಲ್ಲಿದ್ದ ಗೊಂದಲಗಳನ್ನು ಬಗೆಹರಿಸಿಕೊಂಡರು.

ಮೇಳದಲ್ಲಿ ಭಾಗವಹಿಸಿದ್ದ ಸುಮಾರು 60 ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ, ನರ್ಸಿಂಗ್, ಡಿಪ್ಲೊಮಾ, ಬ್ಯುಸಿನೆಸ್ ಮ್ಯಾನೇಜ್‌ಮೆಂಟ್, ಡಿಜಿಟಲ್ ಮಾರ್ಕೆಟಿಂಗ್ ಎಂ.ಬಿ.ಎ, ಬಿ.ಎಸ್‌ಸಿ, ಬಿ.ಟೆಕ್, ರೋಬೋಟಿಕ್ಸ್, ಪ್ರವಾಸೋದ್ಯಮ, ಎಂಸಿಎ, ಫ್ಯಾಷನ್ ಡಿಸೈನ್.. ಹೀಗೆ ವಿವಿಧ ಕೋರ್ಸ್‌ಗಳು ಹಾಗೂ ಕಾಲೇಜುಗಳ ವಿಶೇಷತೆಗಳ ಬಗ್ಗೆ ಮಾಹಿತಿ ಒದಗಿಸಿದವು.

ಪ್ರತಿ ಮಳಿಗೆಯ ಬಳಿ ಬರುತ್ತಿದ್ದ ವಿದ್ಯಾರ್ಥಿಗಳು, ಕುತೂಹಲದಿಂದ ಮಾಹಿತಿ ಪಡೆದುಕೊಂಡಿದ್ದು ಕಾಣಿಸಿತು. ಸಿಬ್ಬಂದಿಯೂ ಅಷ್ಟೇ ಸರಳವಾಗಿ ಮಾಹಿತಿ ನೀಡುವ ಮೂಲಕ ಅನುಮಾನ ಪರಿಹರಿಸಿದರು. ಭಾನುವಾರ ಸಹ ಮೇಳ ನಡೆಯಲಿದ್ದು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾಹಿತಿ ಒದಗಿಸಲಿದೆ.

‘ಜಾಲತಾಣಕ್ಕೆ ಮನಸುಗಳೇ ಮಾಯ’


ವಿಜಯ್ ರಾಘವೇಂದ್ರ

ಮಿತಿ ಇಲ್ಲದ ಜಾಲತಾಣಗಳ ಜಗತ್ತು ಜನರ ಮನಸ್ಸುಗಳನ್ನೇ ಮಾಯ ಮಾಡುತ್ತಿದೆ. ಅಂತಹ ಮನಸ್ಸುಗಳನ್ನು ವಾಸ್ತವಕ್ಕೆ ಮರಳಿ ತಂದು, ಭವಿಷ್ಯದ ಮಾರ್ಗದರ್ಶನ ತೋರುವ ಕೆಲಸವನ್ನು ‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಮಾಡುತ್ತಿವೆ ಎಂದು ಚಿತ್ರ ನಟ ವಿಜಯ್ ರಾಘವೇಂದ್ರ ಹೇಳಿದರು.

ಎಡ್ಯುವರ್ಸ್’ಗೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, ಸ್ಪರ್ಧಾ ಪ್ರಪಂಚದಲ್ಲಿ ಶೈಕ್ಷಣಿಕ ವಿಷಯಗಳ ವಿಸ್ತಾರ ಹೆಚ್ಚುತ್ತಲೇ ಇದೆ. ವಿದ್ಯಾರ್ಥಿಗಳು ಹಾಗೂ ಪೋಷಕರ ಮುಂದೆ ಆಯ್ಕೆಯ ಸವಾಲುಗಳಿವೆ. ಸ್ಪಷ್ಟ ನಿರ್ಧಾರ ಸಾಧ್ಯವಾಗುತ್ತಿಲ್ಲ. ಇಂತಹ ಸಮಯದಲ್ಲಿ ವಿದ್ಯಾರ್ಥಿಗಳ ಅರ್ಹತೆ, ಮನೋಸ್ಥಿತಿಗೆ ಅನುಗುಣವಾಗಿ ಅವರನ್ನು ಸಜ್ಜುಗೊಳಿಸುವ ಕೆಲಸವನ್ನು ಪೋಷಕರು ಹಾಗೂ ಶಿಕ್ಷಕರು ಮಾಡಬೇಕು. ಎಡ್ಯುವರ್ಸ್ ಅದಕ್ಕೆ ತಕ್ಕ ಮಾರ್ಗದರ್ಶನ ಮಾಡುತ್ತದೆ ಎಂದರು.

‘ಪ್ರಜಾವಾಣಿ’ ಮುಖ್ಯ ಉಪ ಸಂಪಾದಕಿ ಎಸ್. ರಶ್ಮಿ ಪ್ರಾಸ್ತಾವಿಕ ಮಾತನಾಡಿದರು. ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ರಾಜೀವ್ ವೇಲೂರ್, ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಕಿರಣ್ ಸುಂದರರಾಜನ್, ಆ್ಯಡ್ 6 ಅಡ್ವರ್ಟೈಸಿಂಗ್ ವ್ಯವಸ್ಥಾಪಕ ನಿರ್ದೇಶಕಿ ಕೆ.ವಿಜಯಕಲಾ ಸುಧಾಕರ್, ‘ನ್ಯೂಸ್‌ಫಸ್ಟ್’ ವಾಹಿನಿಯ ರಕ್ಷಿತ್ ಉಪಸ್ಥಿತರಿದ್ದರು.

ಪಕ್ಷಗಳಿಗೆ ಪರಿಸರ ಪ್ರಣಾಳಿಕೆ ಹಸ್ತಾಂತರ

ಪ್ರಕೃತಿ ವಿಕೋಪಗಳನ್ನು ತಡೆಯುವ ಕ್ರಮಗಳನ್ನು ಘೋಷಿಸಲು ರಾಜಕೀಯ ಪಕ್ಷಗಳಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ


ಬೆಂಗಳೂರಿನಲ್ಲಿ ಶನಿವಾರ ನಡೆದ ‘ಪರಿಸರ ಪ್ರಣಾಳಿಕೆಗಾಗಿ ಬೆಂಗಳೂರು ಸಮಾವೇಶ’ದಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರಿಗೆ ‘ಪರಿಸರಕ್ಕಾಗಿ ನಾವು’ ಸಂಘಟನೆಯ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳು ಪರಿಸರ ಪ್ರಣಾಳಿಕೆ ಪ್ರತಿಯನ್ನು ನೀಡಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಅತಿವೃಷ್ಟಿ, ಅನಾವೃಷ್ಟಿ, ಬಿಸಿ ಅಲೆ ಮುಂತಾದ ಪ್ರಕೃತಿ ವಿಕೋಪಗಳನ್ನು ಎದುರಿಸಲು ಅಧಿಕಾರಕ್ಕೆ ಬರುವವರು ಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ‘ಪರಿಸರಕ್ಕಾಗಿ ನಾವು’ ಸಂಘಟನೆ ಸಿದ್ಧಪಡಿಸಿದ ಪರಿಸರ ಪ್ರಣಾಳಿಕೆಯನ್ನು ವಿವಿಧ ರಾಜಕೀಯ ಪಕ್ಷಗಳಿಗೆ ಹಸ್ತಾಂತರಿಸುವ ಕಾರ್ಯಕ್ರಮ ಶನಿವಾರ ನಡೆಯಿತು.

ಪಕ್ಷಗಳ ಪ್ರಣಾಳಿಕೆಯಲ್ಲಿ ಪರಿಸರ ಪರ ನಿಲುವುಗಳನ್ನು ಘೋಷಣೆ ಮಾಡಬೇಕು ಎಂದು ಸಂಘಟನೆ ಕಾರ್ಯಕರ್ತರು ಒತ್ತಾಯಿಸಿದರು.

ಪರಿಸರ ಕಾರ್ಯಕರ್ತರ ಸಂಘಟನೆ ‘ಪರಿಸರಕ್ಕಾಗಿ ನಾವು’ ಶನಿವಾರ ಇಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಿದ ‘ಪರಿಸರ ಪ್ರಣಾಳಿಕೆಗಾಗಿ ಬೆಂಗಳೂರು ಸಮಾವೇಶ’ ಇದಕ್ಕೆ ಸಾಕ್ಷಿಯಾಯಿತು. ಕಾಂಗ್ರೆಸ್, ಜೆಡಿಎಸ್, ಎಎಪಿ, ಕೆಆರ್‌ಎಸ್, ಸಿಪಿಐ, ಎಸ್‌ಯುಸಿಐ ಪಕ್ಷಗಳ ಪ್ರತಿನಿಧಿಗಳು ‘ಪರಿಸರ ಪ್ರಣಾಳಿಕೆ’ಯನ್ನು ಸ್ವೀಕರಿಸಿದರು. ಬಿಜೆಪಿಯ ಪ್ರತಿನಿಧಿ ಬಂದಿರಲಿಲ್ಲ.

ಶಾಖವರ್ಧಕ ಅನಿಲಗಳ ವಿಸರ್ಜನೆಯನ್ನು ಶೂನ್ಯಕ್ಕೆ ಇಳಿಸುವ ವಾಗ್ದಾನವನ್ನು ಈಡೇರಿಸಲು ಒತ್ತಾಯಿಸಬೇಕು. ಮಾಧವ ಗಾಡ್ಗೀಳ್ ವರದಿಯನ್ನು ಜಾರಿಗೊಳಿಸಬೇಕು. ಪಶ್ಚಿಮ ಘಟ್ಟದ ಸೂಕ್ಷ್ಮ ಪ್ರದೇಶಗಳಲ್ಲಿ ಮತ್ತು ಕರಾವಳಿಯಲ್ಲಿ ಕಲ್ಲಿದ್ದಲು, ಅಣು, ಜಲ ವಿದ್ಯುತ್ ಸ್ಥಾವರ ಸ್ಥಾಪಿಸಬಾರದು. ಗಣಿಗಾರಿಕೆ, ರಸ್ತೆ ವಿಸ್ತರಣೆಗೆ ಅವಕಾಶ ನೀಡಬಾರದು. ಪರಿಸರ ಶಿಕ್ಷಣ, ಬದಲಾದ ಹವಾಗುಣವನ್ನು ಎದುರಿಸಲು ಬೇಕಾದ ಶಿಕ್ಷಣವನ್ನು ಶಾಲೆಗಳಲ್ಲಿ ನೀಡಬೇಕು. ರಸ್ತೆ ಬದಿ ಮರಗಳನ್ನು ಸಮುದಾಯದ ಆಸ್ತಿಯೆಂದು ಘೋಷಿಸಬೇಕು. ಶೇ 33ರಷ್ಟು ಕಾಡು ಬೆಳೆಸಬೇಕು. ಉತ್ತರ ಕರ್ನಾಟಕ ಮರುಭೂಮಿ ಆಗುವುದನ್ನು ತಡೆಯಲು ಹಸಿರುಗೋಡೆ ನಿರ್ಮಿಸಬೇಕು ಎಂದು ಪ್ರಣಾಳಿಕೆ ಪ್ರತಿಪಾದಿಸಿದೆ.

ಕೃಷಿಯಲ್ಲಿ ಕೀಟನಾಶಕ, ಕಳೆನಾಶಕ, ಇತರ ರಾಸಾಯನಿಕಗಳ ಬಳಕೆ ತಗ್ಗಿಸಲು ಬಿಗಿಯಾದ ಕಾನೂನುಗಳನ್ನು ತರಬೇಕು. ಇಂಗಾಲದ ತೆರಿಗೆ ವಿಧಿಸಬೇಕು. ಪ್ಲಾಸ್ಟಿಕ್ ತ್ಯಾಜ್ಯ ಆಮದು ನಿಲ್ಲಿಸಬೇಕು. ಪ್ಲಾಸ್ಟಿಕ್ ಮರುಬಳಕೆ ಕಡ್ಡಾಯ ಮಾಡಬೇಕು. ಬೃಹತ್ ಜಲಾಶಯ ನಿರ್ಮಿಸಬಾರದು. ಇರುವ ಜಲಾಶಯಗಳ ಹೂಳು ಕಾಲಕಾಲಕ್ಕೆ ತೆಗೆಯಬೇಕು. ನದಿಗಳಿಗೆ ಕೈಗಾರಿಕೆಗಳ ನೀರು ನೇರವಾಗಿ ಬಿಡಬಾರದು. ಮಳೆನೀರು ಸಂಗ್ರಹದಿಂದಲೇ ನಗರಗಳಿಗೆ ನೀರು ಪೂರೈಸಬೇಕು. ಉಪ್ಪು ನೀರನ್ನು ಶುದ್ಧ ನೀರನ್ನಾಗಿ ಪರಿವರ್ತಿಸುವ ಘಟಕಗಳನ್ನು ಕರಾವಳಿಯಲ್ಲಿ ಸ್ಥಾಪಿಸಬೇಕು. ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ವಾಹನಗಳಿದ್ದರೆ ಹೆಚ್ಚು ತೆರಿಗೆ ವಿಧಿಸಬೇಕು. ಗ್ರಾಮಸ್ವರಾಜ್ಯ ಜಾರಿಗೊಳಿಸಬೇಕು. ಹವಮಾನ ವೈಪರೀತ್ಯಗಳಿಗೆ ಸಿಲುಕಿದ ಕೃಷಿಕರಿಗೆ, ಕೂಲಿಕಾರ್ಮಿಕರಿಗೆ ಪರಿಹಾರ, ಬದಲಿ ವ್ಯವಸ್ಥೆ ಕಲ್ಪಿಸಬೇಕು ಎಂದು ಪ್ರಣಾಳಿಕೆ ಒತ್ತಾಯಿಸಿದೆ.

ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಪರಿಸರ ಸಂಬಂಧಿ ಪ್ರಶ್ನೆಗಳನ್ನು ಕೇಳಿ, ಸರಿ ಉತ್ತರ ನೀಡಿದವರಿಗೆ ಪುಸ್ತಕಗಳನ್ನು ನೀಡಲಾಯಿತು. ‘ಪರಿಸರಕ್ಕಾಗಿ ನಾವು’ ನಾಗೇಶ ಹೆಗಡೆ, ಆಂಜನೇಯ ರೆಡ್ಡಿ, ಆರ್.ಪಿ. ವೆಂಕಟೇಶಮೂರ್ತಿ, ಎಚ್.ಕೆ. ಗೌಡಯ್ಯ, ಪರಶುರಾಮೇಗೌಡ, ವಿಶಾಲಾಕ್ಷಿ ಶರ್ಮಾ, ಶೋಭಾ ವಿ. ಭಟ್ ಸಹಿತ ಅನೇಕ ಪರಿಸರ ಕಾರ್ಯಕರ್ತರು ಭಾಗವಹಿಸಿದ್ದರು.

ಕುಕ್ಕೆ: ಆದಾಯ ₹ 146.01 ಕೋಟಿ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಇಲ್ಲಿನ ಕುಕ್ಕೆ ಸುಬ್ರಹ್ಮಣ್ಯ ದೇವಾಲಯ 2023-24ನೇ ಆರ್ಥಿಕ ವರ್ಷದಲ್ಲಿ ₹146.01 ಕೋಟಿ ಆದಾಯ ಗಳಿಸಿದೆ ಎಂದು ಮುಜರಾಯಿ ಆಯುಕ್ತರು ತಿಳಿಸಿದ್ದಾರೆ.

ಈ ಮೂಲಕ ಸತತ 13ನೇ ವರ್ಷ ಆದಾಯದಲ್ಲಿ ರಾಜ್ಯದ ಮೊದಲ ದೇವಸ್ಥಾನವಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ದೇವಳವು ₹ 123 ಕೋಟಿ ಆದಾಯ ಗಳಿಸಿತ್ತು.

ರಾಜ್ಯ ಮುಜರಾಯಿ ಇಲಾಖೆ ವ್ಯಾಪ್ತಿಯ ಕೊಲ್ಲೂರು ಮೂಕಾಂಬಿಕಾ ದೇವಳ ₹ 68.23 ಕೋಟಿ, ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನ ₹ 30.73 ಕೋಟಿ, ಸವದತ್ತಿ ರೇಣುಕಾ ಯಲ್ಲಮ್ಮ ದೇವಸ್ಥಾನ ₹ 25.80 ಕೋಟಿ, ಮಂದಾರ್ತಿ ದುರ್ಗಾಪರಮೇಶ್ವರಿ ದೇವಸ್ಥಾನ ₹ 15.27 ಕೋಟಿ, ಕೊಪ್ಪಳ ಜಿಲ್ಲೆಯ ಹುಲಿಗೆಮ್ಮ ದೇವಿ ದೇವಸ್ಥಾನ ₹ 16.29 ಕೋಟಿ, ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ₹ 13.65 ಕೋಟಿ, ಬೆಂಗಳೂರಿನ ಬನಶಂಕರಿ ದೇವಸ್ಥಾನ ₹ 11.37 ಕೋಟಿ ಆದಾಯ ಗಳಿಸಿವೆ.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಗುತ್ತಿಗೆ, ತೋಟದ ಉತ್ಪನ್ನ, ಕಟ್ಟಡ ಬಾಡಿಗೆ, ಕಾಣಿಕೆ, ಕಾಣಿಕೆ ಹುಂಡಿ, ಹರಕೆ ಸೇವೆ, ಅನುದಾನ, ಶಾಶ್ವತ ಸೇವೆಗಳಿಂದ ಆದಾಯ ಬರುತ್ತಿದೆ. ಆದಾಯದ ಲೆಕ್ಕಾಚಾರ ಮುಗಿದಿದೆ. ಸೇವೆ, ಕಾಣಿಕೆ ಮೂಲದ ಆದಾಯದ ವಿಭಜನೆ ನಡೆಯುತ್ತಿದ್ದು, ಈ ಲೆಕ್ಕಾಚಾರ ಇನ್ನೆರಡು ದಿನಗಳಲ್ಲಿ ಸಿಗಲಿದೆ.

ಮೋದಿ ಚಿತ್ರ ಬಳಕೆ: ಈಶ್ವರಪ್ಪ ಕೇವಿಯಟ್

ಒಂದನೇ ಪುಟದಿಂದ...

ಇದು ಬಿಜೆಪಿ ಮುಖಂಡರ ಕಣ್ಣು ಕೆಂಪಾಗಿಸಿದೆ. ಈಚೆಗೆ ಬಿಜೆಪಿ ಅಭ್ಯರ್ಥಿ, ಸಂಸದ ಬಿ.ವೈ.ರಾಘವೇಂದ್ರ ಬಹಿರಂಗವಾಗಿಯೇ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು.

‘ಪ್ರಧಾನಿ ಮೋದಿ ಯಾರಪ್ಪನ ಮನೆಯ ಸ್ವತ್ತೂ ಅಲ್ಲ. ಅವರ ಭಾವಚಿತ್ರ ಬಳಸಿಯೇ ಸಿದ್ಧ’ ಎಂದು ಈಶ್ವರಪ್ಪ ತಿರುಗೇಟು ನೀಡಿದ್ದರು.

‘ಚುನಾವಣೆಯಲ್ಲಿ ಮೋದಿ ಅವರ ಭಾವಚಿತ್ರ ಬಳಕೆ ಮಾಡದಂತೆ ಕಾನೂನು ಕ್ರಮಕ್ಕೆ ಶಿವಮೊಗ್ಗದ ಬಿಜೆಪಿ ಮುಖಂಡರು ಸಿದ್ಧತೆ ನಡೆಸಿರುವ ಮಾಹಿತಿ ದೊರಕಿತ್ತು. ಹೀಗಾಗಿ ಕೇವಿಯಟ್ ಸಲ್ಲಿಸಿದ್ದೇನೆ’ ಎಂದು ಈಶ್ವರಪ್ಪ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ನರೇಂದ್ರ ಮೋದಿ ಈ ದೇಶದ ಪ್ರಧಾನಿ. ಅವರು ಜನರ ಸ್ವತ್ತೇ ಹೊರತು ಯಾವುದೇ ಪಕ್ಷದ ಆಸ್ತಿಯಲ್ಲ. ಹೀಗಾಗಿಯೇ ಮೋದಿ ಅವರ ಭಾವಚಿತ್ರ ಬಳಕೆಗೆ ತಡೆಯಾಜ್ಞೆ ಕೋರಿ ಬಿಜೆಪಿ ಮುಖಂಡರು ಅರ್ಜಿ ಸಲ್ಲಿಸಿದಲ್ಲಿ ನನ್ನ ವಾದವನ್ನೂ ಪರಿಗಣಿಸುವಂತೆ ಕೇವಿಯಟ್ ಮೂಲಕ ನ್ಯಾಯಾಲಯಕ್ಕೆ ಮನವಿ ಮಾಡಿದ್ದೇನೆ’ ಎಂದರು.

‘ಈಶ್ವರಪ್ಪ ಅವರು ನ್ಯಾಯಾಲಯಕ್ಕೆ ಕೇವಿಯಟ್ ಸಲ್ಲಿಸಿರುವುದು ನಮ್ಮ ಗಮನಕ್ಕೆ ಬಂದಿದೆ. ಚುನಾವಣೆ ಮತ್ತು ಮತ ಗಳಿಕೆಯ ಕಾರಣಕ್ಕೆ ಮೋದಿ ಅವರ ಭಾವಚಿತ್ರವನ್ನು ಬಿಜೆಪಿ ಹೊರತಾಗಿ ಮತ್ಯಾರು ಬಳಕೆ ಮಾಡುವಂತಿಲ್ಲ. ಈ ಸಂಬಂಧ ಬಿಜೆಪಿ ಕಾನೂನಾತ್ಮಕ ಹೋರಾಟ ನಡೆಸಲಿದೆ. ಚುನಾವಣಾ ಆಯೋಗಕ್ಕೂ ದೂರು ನೀಡಲಿದ್ದೇವೆ’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಡಿ.ಮೇಘರಾಜ್ ತಿಳಿಸಿದ್ದಾರೆ.

‘ಈಶ್ವರಪ್ಪಗೆ ಅಧಿಕಾರವಿಲ್ಲ’ (ಬೆಂಗಳೂರು ವರದಿ): ‘ಚುನಾವಣಾ ಪ್ರಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭಾವಚಿತ್ರವನ್ನು ಬಳಸುವ ಅಧಿಕಾರ ಕೆ.ಎಸ್. ಈಶ್ವರಪ್ಪ ಅವರಿಗೆ ಇಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಮೋದಿ ಭಾವಚಿತ್ರ ಬಳಕೆಗೆ ಕಾನೂನು ತೊಡಕು ಉಂಟಾಗದಂತೆ ತಡೆಯಲು ಈಶ್ವರಪ್ಪ ನ್ಯಾಯಾಲಯದಲ್ಲಿ ಕೇವಿಯಟ್ ಅರ್ಜಿ ಸಲ್ಲಿಸಿರುವ ಕುರಿತು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, ‘ಚುನಾವಣಾ ಪ್ರಚಾರದಲ್ಲಿ ಮೋದಿಯವರ ಭಾವಚಿತ್ರ ಬಳಸುವ ಅಧಿಕಾರ ಇರುವುದು ಬಿಜೆಪಿಗೆ ಮಾತ್ರ’ ಎಂದರು.

ನಿಧನ ವಾರ್ತೆ

ಶಿವಕಾಂತ ಸಿದ್ನಾಳ



ಬೆಳಗಾವಿ: ವಿಜಯಕಾಂತ ಡೇರಿ ಆದಿತ್ಯ ಮಿಲ್ಕ್ ಸಂಸ್ಥೆಯ ಸಂಸ್ಥಾಪಕ, ಉದ್ಯಮಿ ಶಿವಕಾಂತ ಎಸ್. ಸಿದ್ನಾಳ (49) ಶನಿವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದರು. ದೇಹದ ಅಂತಿಮ ದರ್ಶನಕ್ಕೆ ಕುರಗುಂದ ಗ್ರಾಮದಲ್ಲಿ ವ್ಯವಸ್ಥೆ ಮಾಡಲಾಗಿದೆ. ಏಪ್ರಿಲ್ 7ರಂದು ಮಧ್ಯಾಹ್ನ 3 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.

ಮಾಜಿ ಸಂಸದ ದಿವಂಗತ ಎಸ್.ಬಿ.ಸಿದ್ನಾಳ ಅವರ ಪುತ್ರರಾದ ಶಿವಕಾಂತ, ವಿಆರ್‌ಎಲ್ ಸಂಮೂಹ ಸಂಸ್ಥೆಗಳ ಚೇರ್ಮನ್ ವಿಜಯ ಸಂಕೇಶ್ವರ ಅವರ ಅಳಿಯ ಕೂಡ ಹೌದು.

ಬೈಲಹೊಂಗಲ ತಾಲ್ಲೂಕಿನ ಸಂಪಗಾಂವ ಮೂಲದ ಅವರು, ನೇಗಿನಹಾಳ ಗ್ರಾಮದಲ್ಲಿ ವಿಜಯಕಾಂತ ಡೇರಿ ಆದಿತ್ಯ ಮಿಲ್ಕ್ ಉದ್ಯಮ ಆರಂಭಿಸಿದ್ದರು. ಉತ್ತರ ಕರ್ನಾಟಕದಲ್ಲಿ ಹೈನುಗಾರಿಕೆ ಕ್ಷೇತ್ರದ ಅಭಿವೃದ್ಧಿಗೆ ಕೊಡುಗೆ ನೀಡಿದ್ದರು.


ಹುಸ್ಕೂರು ಮದ್ದೂರಮ್ಮ ದೇವಿ ತೇರು ನೆಲಕ್ಕೆ ಉರುಳಿತು –ಪಿಟಿಐ ಚಿತ್ರ

ಉರುಳಿದ 160 ಅಡಿ ಎತ್ತರದ ತೇರು

ಆನೇಕಲ್: ತಾಲ್ಲೂಕಿನ ಹುಸ್ಕೂರು ಮದ್ದೂರಮ್ಮ ದೇವಿ ಜಾತ್ರೆಗೆ ಶನಿವಾರ ತೆರಳುತ್ತಿದ್ದ ಹೀಲಲಿಗೆ ಗ್ರಾಮದ 160 ಅಡಿ ಎತ್ತರದ ತೇರು ಆಯತಪ್ಪಿ ನೆಲಕ್ಕುರುಳಿದೆ. ಭಕ್ತರು ಓಡಿ, ಅಪಾಯದಿಂದ ಪಾರಾಗಿದ್ದಾರೆ.

60 ಜತೆ ಎತ್ತು ಮತ್ತು ಟ್ರ್ಯಾಕ್ಟರ್ ಮೂಲಕ ನಾಲ್ಕು ದಿಕ್ಕುಗಳಲ್ಲಿಯೂ ಹಗ್ಗಕಟ್ಟಿ ತೇರು ಎಳೆದು ತರಲಾಗುತ್ತಿತ್ತು. ಹೀಲಲಿಗೆಯಿಂದ ಎರಡು ಕಿ.ಮೀ ದೂರ ತೇರು ಸಾಗುತ್ತಿತು. ಅಲ್ಲಿ ತಿರುವಿನಲ್ಲಿ ತೇರಿನ ಒಂದು ಚಕ್ರ ಮಣ್ಣಿನ ರಸ್ತೆಗೆ ಇಳಿಯಿತು. ಹೆಚ್ಚು ಭಾರವಿದ್ದ ತೇರಿನ ಚಕ್ರ ಮಣ್ಣಿನಲ್ಲಿ ಹೂತುಕೊಂಡಿತು. ಇದರಿಂದಾಗಿ ಸಮತೋಲನ ತಪ್ಪಿತು.

ಮುನಿಸು ಮರೆತ ಎಚ್‌ಡಿಕೆ–ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಕೆ.ಆರ್. ನಗರ (ಮೈಸೂರು ಜಿಲ್ಲೆ): ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರನ್ನು ಇಲ್ಲಿನ ನಿವಾಸದಲ್ಲಿ ಶನಿವಾರ ಭೇಟಿಯಾಗಿ ಬೆಂಬಲ ಕೋರಿದರು.

ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ ಪತನದ ನಂತರ ಇಬ್ಬರೂ ದೂರವಾಗಿದ್ದರು. ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ ಮಂಡ್ಯ ಕ್ಷೇತ್ರದ ವ್ಯಾಪ್ತಿಯಲ್ಲಿದೆ.

ಉಭಯ ನಾಯಕರು ಮುನಿಸು ಮರೆತು ಒಂದಾಗಿರುವುದು ಚರ್ಚೆಗೆ ಆಸ್ಪದವಾಗಿದೆ. ಭೇಟಿ ವೇಳೆ ಕುಮಾರಸ್ವಾಮಿ ಅವರೊಂದಿಗೆ ಶಾಸಕ ಜಿ.ಟಿ. ದೇವೇಗೌಡ, ನಾಯಕರಾದ ಸಾ.ರಾ. ಮಹೇಶ್, ಸಿ.ಎಸ್.ಪುಟ್ಟರಾಜು, ಬಂಡೆಪ್ಪ ಕಾಶೆಂಪೂರ ಕೂಡ ಆಗಮಿಸಿದ್ದರು. ವಿಶ್ವನಾಥ್ ಅವರನ್ನು ‘ವಿಶ್ವಣ್ಣ’ ಎಂದು ಕರೆದ ಎಚ್‌ಡಿಕೆ, ಆತ್ಮೀಯವಾಗಿ ಮಾತುಕತೆ ನಡೆಸಿದರು. ಜಂಟಿ ಪತ್ರಿಕಾಗೋಷ್ಠಿಯಲ್ಲಿ ಪರಸ್ಪರ ಹೊಗಳಿಕೆಯ ಮಾತು ಆಡಿದರು.

ವಿಶ್ವನಾಥ್ ಬೆಂಬಲ, ಶಕ್ತಿ ಬಂದಿದೆ: ‘ರಾಜಕೀಯದಲ್ಲಿ ಟೀಕೆ– ಟಿಪ್ಪಣಿ ಸಹಜ. ವಿಶ್ವಣ್ಣ ಎಲ್ಲ ಮರೆತು ಬೆಂಬಲ ಕೊಟ್ಟಿದ್ದಾರೆ. ಮಂಡ್ಯದಲ್ಲಿ ಸ್ಪರ್ಧಿಸುವ ವಿಷಯ ತಿಳಿದು ಕರೆ ಮಾಡಿ ಶುಭಕೋರಿದ್ದರು. ಅವರ ಅಭಿಮಾನಕ್ಕೆ ಸೋತು ಮನೆಗೆ ಬಂದಿದ್ದೇನೆ. ಅವರು ನೇರ–ನಿಷ್ಠುರವಾಗಿ ಮಾತನಾಡುವ ರಾಜಕಾರಣಿ. ಪ್ರಾಮಾಣಿಕವಾಗಿದ್ದಾರೆ. ಅವರು ಬೆಂಬಲ ನೀಡಿರುವುದು ಶಕ್ತಿ ತುಂಬಿದೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಮಂಡ್ಯದಲ್ಲಿ ಚುನಾವಣೆಯನ್ನು ನಮ್ಮ ಮುಖಂಡರು, ಕಾರ್ಯಕರ್ತರೇ ಮಾಡುತ್ತಾರೆ. ನಾನು ಹಿರಿಯರನ್ನು ಭೇಟಿಯಾಗಿ ಬೆಂಬಲ ಕೋರುತ್ತಿದ್ದೇನೆ. ಕೆ.ಆರ್. ನಗರದಲ್ಲಿ ಸಾ.ರಾ. ಮಹೇಶ್ ಸೋಲಿನ ಅನುಕಂಪವೂ ನನಗೆ ನೆರವಾಗಲಿದೆ’ ಎಂದು ಪ್ರತಿಕ್ರಿಯಿಸಿದರು.


ಎಚ್‌.ಡಿ.ಕುಮಾರಸ್ವಾಮಿಯವರು ಮೈಸೂರು ಜಿಲ್ಲೆ ಕೆ.ಆರ್‌.ನಗರದಲ್ಲಿ ಎಚ್‌.ವಿಶ್ವನಾಥ್ ಅವರನ್ನು ಶನಿವಾರ ಭೇಟಿಯಾದರು

> **ನಮಗೆ ಜಾತ್ಯತೀತ ಪದ ತೆಗೆಯಿರಿ ಎಂದವರಿಗೆ ಈಗ ಒಕ್ಕಲಿಗರ ಮೇಲೆ ಪ್ರೀತಿ ಬಂದಿದೆ. ಮೈಸೂರಿನಲ್ಲಿ 47 ವರ್ಷಗಳಿಂದ ಒಕ್ಕಲಿಗರಿಗೆ ಟಿಕೆಟ್ ಕೊಡಬೇಡಿ ಎಂದು ತಡೆದಿದ್ದವರಾರು?**
> **ಎಚ್.ಡಿ.ಕುಮಾರಸ್ವಾಮಿ**
> ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ

> **ರಾಜಕಾರಣ ನಿಂತ ನೀರಲ್ಲ. ಮಾತು–ಸಂಘರ್ಷ ಸಹಜ. ದೇವೇಗೌಡರು ನನಗೆ ಸ್ಮರಣೀಯರು. ನನ್ನ ಹಾಗೂ ಸಾ.ರಾ. ಮಹೇಶ್ ಭಿನ್ನಾಭಿಪ್ರಾಯ ಚಾಮುಂಡಿಬೆಟ್ಟದವರೆಗೆ ಹೋಗಿತ್ತು. ಈಗ ಮರೆತು ಜೊತೆಯಾಗಿದ್ದೇವೆ**
> **ಎಚ್.ವಿಶ್ವನಾಥ್,** ವಿಧಾನ ಪರಿಷತ್ ಸದಸ್ಯ

ಮೈತ್ರಿಗೆ ತಕ್ಕಂತೆ ವರ್ತಿಸಿ: ಜೆಡಿಎಸ್‌ಗೆ ತಾಕೀತು

ಹಾಸನ: ‘ಮೈತ್ರಿ ಅಭ್ಯರ್ಥಿ ಪರ ಪ್ರಚಾರಕ್ಕೆ ಬಿಜೆಪಿಯ ಪ್ರೀತಂಗೌಡರು ಹಿಂದೇಟು ಹಾಕುತ್ತಿದ್ದಾರೆ’ ಎಂದು ಎಚ್.ಡಿ.ದೇವೇಗೌಡರು ಬಿಜೆಪಿ ವರಿಷ್ಠರಿಗೆ ದೂರು ನೀಡಿದ್ದು, ರಾಜ್ಯ ಚುನಾವಣಾ ಉಸ್ತುವಾರಿ ರಾಧಾಮೋಹನ್‌ದಾಸ್ ಅಗರವಾಲ್ ಹಾಸನಕ್ಕೆ ಶನಿವಾರ ದಿಢೀರ್ ಭೇಟಿ ನೀಡಿದರು.

ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಹಾಗೂ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ ಉಪಸ್ಥಿತಿಯಲ್ಲಿ ಉಭಯ ಪಕ್ಷಗಳ ಮುಖಂಡರೊಂದಿಗೆ ಸಮನ್ವಯ ಸಭೆ ನಡೆಸಿದರು. ‘ಮೈತ್ರಿಯಂತೆ ಜೆಡಿಎಸ್ ನಾಯಕರೂ ನಡೆದುಕೊಳ್ಳಬೇಕು’ ಎಂದು ತಾಕೀತು ಮಾಡಿದರು.

ಸಭೆಯಲ್ಲಿ ಮಾತನಾಡಿದ ಅಗರವಾಲ್, ‘ಪ್ರೀತಂಗೌಡರನ್ನು ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ. ಜೆಡಿಎಸ್ ನಾಯಕರು ಅವರ ಜೊತೆ ಏಕೆ ಮಾತನಾಡಿಲ್ಲ. ಅವರನ್ನು ಬಿಟ್ಟು, ಬಿಜೆಪಿಯ ಉಳಿದ ನಾಯಕರನ್ನು ಭೇಟಿ ಮಾಡಿರುವ ಜೆಡಿಎಸ್ ಮುಖಂಡರ ನಡೆಗೆ ಆಕ್ಷೇಪ ವ್ಯಕ್ತಪಡಿಸಿದರು. ಮೈತ್ರಿ ಮುಂದುವರಿಯಲು ಜೆಡಿಎಸ್ ಪಾತ್ರವೂ ಮುಖ್ಯ ಎಂದರು’ ಎಂದು ಮೂಲಗಳು ತಿಳಿಸಿವೆ.

ಅಭ್ಯರ್ಥಿ ಪ್ರಜ್ವಲ್ ರೇವಣ್ಣ, ‘ಅಗರವಾಲ್ ನೇತೃತ್ವದಲ್ಲಿ ಸಭೆ ಯಶಸ್ವಿಯಾಗಿದೆ. ಪ್ರೀತಂಗೌಡರಿಗೆ ಅವರ ಪಕ್ಷ ಮೈಸೂರು ಕ್ಷೇತ್ರದ ಉಸ್ತುವಾರಿ ನೀಡಿದೆ. ಅವರು ಮುಂದೆ ಪ್ರಚಾರಕ್ಕೆ ಬರಲಿದ್ದಾರೆ’ ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣ ● ಸಂಚಿನಲ್ಲಿ ಭಾಗಿಯಾಗಿದ್ದ ಪದವೀಧರ

ತೀರ್ಥಹಳ್ಳಿಯ ಮಾಝ್ ಮುನೀರ್ ಬಂಧನ

ಪ್ರಜಾವಾಣಿ ವಾರ್ತೆ


ಮಾಝ್ ಮುನೀರ್

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣ ತನಿಖೆ ಚುರುಕುಗೊಳಿಸಿರುವ ಎನ್‌ಐಎ ಅಧಿಕಾರಿಗಳು, ಕೃತ್ಯದ ಸಂಚಿನಲ್ಲಿ ಭಾಗಿಯಾಗಿದ್ದ ಎನ್ನಲಾದ ಮತ್ತೊಬ್ಬ ಶಂಕಿತ ಮಾಝ್ ಮುನೀರ್ ಅಹಮದ್‌ನನ್ನು (26) ಬಂಧಿಸಿದ್ದಾರೆ.

‘ತೀರ್ಥಹಳ್ಳಿಯ ಫಿಶ್ ಮಾರ್ಕೆಟ್ ರಸ್ತೆಯ ಮಾಝ್, ಎಂಜಿನಿಯರಿಂಗ್ ಪದವೀಧರ. ಬಾಂಬ್ ಸ್ಫೋಟ ಪ್ರಕರಣದಲ್ಲಿ ಶಂಕಿತ ಮುಜಮಿಲ್ ಶರೀಫ್‌ನನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಈತ ನೀಡಿದ್ದ ಮಾಹಿತಿ ಆಧರಿಸಿ ಮಾಝ್ ಮುನೀರ್ ಅಹಮದ್‌ನನ್ನು ಸೆರೆ ಹಿಡಿಯಲಾಗಿದೆ’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

‘ಭಯೋತ್ಪಾದನಾ ಸಂಘಟನೆಗಳ ಪರವಾಗಿ ಮಂಗಳೂರಿನಲ್ಲಿ ಗೋಡೆ ಬರಹ ಬರೆದಿದ್ದ ಪ್ರಕರಣ ಹಾಗೂ ಶಿವಮೊಗ್ಗದ ತುಂಗಾ ನದಿ ತೀರದಲ್ಲಿ ಬಾಂಬ್‌ಗಳನ್ನು ಪರೀಕ್ಷಾರ್ಥವಾಗಿ ಸ್ಫೋಟಿಸಿದ್ದ ಪ್ರಕರಣದಲ್ಲಿ ಮಾಝ್ ಮುನೀರ್ ಅಹಮದ್‌ನನ್ನು ಈ ಹಿಂದೆಯೇ ಬಂಧಿಸಲಾಗಿತ್ತು. ಈತ, ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿದ್ದ. ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದಲ್ಲಿ ಈತನ ಪಾತ್ರವಿರುವ ಅನುಮಾನದ ಮೇರೆಗೆ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿತ್ತು. ಆದರೆ, ಯಾವುದೇ ಖಚಿತ ಮಾಹಿತಿ ಲಭ್ಯವಾಗಿರಲಿಲ್ಲ. ಹೀಗಾಗಿ, ಮಾಝ್‌ನನ್ನು ವಾಪಸು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಕರ್ನಾಟಕ, ತಮಿಳುನಾಡು ಹಾಗೂ ಉತ್ತರ ಪ್ರದೇಶದ 18 ಕಡೆಗಳಲ್ಲಿ ದಾಳಿ ಮಾಡಿದಾಗ, ಮುಜಮಿಲ್ ಶರೀಫ್ ಬಗ್ಗೆ ಸುಳಿವು ಸಿಕ್ಕಿತ್ತು. ಮುಜಮಿಲ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಮಾಝ್ ಹೆಸರು ಬಾಯ್ಬಿಟ್ಟಿದ್ದ. ಮುಜಮಿಲ್ ಹೇಳಿಕೆ ಹಾಗೂ ಲಭ್ಯವಿರುವ ಪುರಾವೆಗಳನ್ನು ಆಧರಿಸಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದಲ್ಲಿ ಇದೀಗ ಮಾಝ್‌ನನ್ನು ಬಂಧಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಮಾಝ್ ಮೊದಲ ಆರೋಪಿ: ‘ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಸಂಬಂಧ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಮಾಝ್ ಮುನೀರ್ ಅಹಮದ್‌ನನ್ನು ಮೊದಲ ಆರೋಪಿಯನ್ನಾಗಿ ಮಾಡಲಾಗಿದೆ. ಬಾಂಬ್ ಇರಿಸಿದ್ದ ಎನ್ನಲಾದ ತೀರ್ಥಹಳ್ಳಿಯ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಕ್ರಮವಾಗಿ ಎರಡು–ಮೂರನೇ ಆರೋಪಿಗಳಾಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಮುಜಮಿಲ್ ಶರೀಫ್‌ನನ್ನು ನಾಲ್ಕನೇ ಆರೋಪಿಯನ್ನಾಗಿ ಮಾಡಲಾಗಿದೆ. ಬಾಂಬ್ ಸ್ಫೋಟದ ಸಂಚಿನಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಮಾತುಕತೆಗೆ ಆ್ಯಪ್ ಬಳಕೆ: ‘ಮಾಝ್ ಮುನೀರ್ ಅಹಮದ್ ರಾಮೇಶ್ವರಂ ಕೆಫೆ ಸ್ಫೋಟದ ಸಂಚಿನಲ್ಲಿ ಪ್ರಮುಖ ರೂವಾರಿಯೆಂಬ ಮಾಹಿತಿ ಇದೆ. ಮಾಝ್ ಮುನೀರ್ ಹಾಗೂ ಇತರೆ ಶಂಕಿತರು, ಪರಸ್ಪರ ಮಾತುಕತೆ ನಡೆಸಲು ಆ್ಯಪ್ ಬಳಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.





ಪ್ರಗತಿ ಮಾತು ಹೊರಗೆ ಮತದ ಕನಸು ಒಳಗೆ

● ಆರ್. ಮಂಜುನಾಥ್

ಬೆಂಗಳೂರು: ರಾಜಧಾನಿ ಬೆಂಗಳೂರು ನಾಡು, ದೇಶ ಮಾತ್ರವಲ್ಲ; ವಿಶ್ವದ ಗಮನ ಸೆಳೆಯುವ ನಗರ. ಇಲ್ಲಿ ನಡೆಯುವ ವಿದ್ಯಮಾನಗಳು ಅನೇಕ ಬಾರಿ ಜಾಗತಿಕ ಮಟ್ಟದಲ್ಲಿ ಚರ್ಚೆಗೆ ಬಂದಿದ್ದೂ ಉಂಟು. ಹೀಗಾಗಿ, ಬೆಂಗಳೂರಿನ ಅಭಿವೃದ್ಧಿ, ಮೂಲಸೌಕರ್ಯ ವಿಷಯದಲ್ಲಿ 'ತಮ್ಮ ಕೊಡುಗೆಗಳೇ ಅಪಾರ' ಎಂದು ಬಿಂಬಿಸಿಕೊಂಡು ಅದನ್ನು ಮತವಾಗಿ ಪರಿವರ್ತಿಸಿಕೊಳ್ಳಲು ರಾಜಕೀಯ ಪಕ್ಷಗಳು ಪೈಪೋಟಿಗೆ ಇಳಿಯುವುದು ಸಾಮಾನ್ಯ.

ಐದು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿ ಹೊಂದಿರುವ ಬೆಂಗಳೂರಿನಲ್ಲಿ ಇಡೀ ರಾಜ್ಯ, ದೇಶದ ಹಲವು ರಾಜ್ಯಗಳ ಜನ ಇಲ್ಲಿ ವಾಸವಿದ್ದಾರೆ. ಹೀಗಾಗಿ ಇಲ್ಲಿನ 'ಸಾಧನೆ' ಮುಂದಿಟ್ಟುಕೊಂಡು ಮತ ಪ್ರಭಾವಿಸುವ ಯತ್ನ ಹೊಸದೇನೂ ಅಲ್ಲ. ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಾಯಕರು ಬೆಂಗಳೂರಿನ ಅಭಿವೃದ್ಧಿ–ಸಮಸ್ಯೆಗಳನ್ನು ಚುನಾವಣೆಯಲ್ಲಿ ಯಶಸ್ಸು–ವೈಫಲ್ಯದ ದಾಳವಾಗಿ ಈ ಚುನಾವಣೆಯಲ್ಲೂ ಬಳಸುತ್ತಿವೆ. ಸಂಚಾರ ದಟ್ಟಣೆ, ಈಗ ಎದುರಾಗಿರುವ ನೀರಿನ ಸಮಸ್ಯೆಗಳಿಗೆ ಆಡಳಿತ ನಡೆಸಿದ ಎಲ್ಲ ರಾಜಕೀಯ ಪಕ್ಷಗಳ ನೇತಾರರು ಕಾರಣರು. ಹಾಗಿದ್ದರೂ, ಆಡಳಿತಾರೂಢ ಪಕ್ಷದ ವೈಫಲ್ಯ ಎಂದೇ ಬಿಂಬಿಸುವುದು ರಾಜಕೀಯ ಪಕ್ಷಗಳ ಚಾಳಿ. ಅದು ಈಗಲೂ ಮುಂದುವರಿದಿದೆ.

ಬೆಂಗಳೂರಿನ ಅಭಿವೃದ್ಧಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನ ಪಾತ್ರ–ಪಾಲಿದ್ದರೂ, ಅದನ್ನು ಒತ್ತಡ ಹೇರಿಯೇ ಪಡೆದುಕೊಳ್ಳಬೇಕಾದ ಅನಿವಾರ್ಯ ಇಲ್ಲಿದೆ. ಬಿಜೆಪಿ ಸರ್ಕಾರವಿದ್ದಾಗ ಘೋಷಿಸಿದ್ದ ಬೃಹತ್ ಯೋಜನೆಗಳಿಗೆ ಕಾಂಗ್ರೆಸ್ ಸರ್ಕಾರ ತಡೆಹಾಕಿದರೆ, ಅದೇ ರೀತಿಯ ಅಡ್ಡಗಾಲು ಹಾಕುವ ಕೆಲಸವನ್ನು ಬಿಜೆಪಿಯೂ ಮಾಡಿದೆ. ಈ ಎರಡೂ ಪಕ್ಷಗಳು ತಮ್ಮ ಅಧಿಕಾರದ ಕೊನೆಯ ಅವಧಿಯಲ್ಲಿ ಬೃಹತ್ ಯೋಜನೆಗಳನ್ನು ಪ್ರಕಟಿಸಿ, 'ಕ್ರೆಡಿಟ್ ಲೈನ್' ಪಡೆದುಕೊಂಡಿದ್ದರೂ, ಅವುಗಳ ಅನುಷ್ಠಾನದ ತೊಡಕನ್ನು ನಿವಾರಿಸುವಲ್ಲಿ ಯಾರೂ ಮುಂದಾಗಿಲ್ಲ ಎಂಬುದೂ ಇಲ್ಲಿನ ವಾಸ್ತವ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳು ಐದು ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿವೆ. ನಗರದಲ್ಲಾಗುವ ಅಭಿವೃದ್ಧಿ ಯೋಜನೆಗಳು ಗ್ರಾಮಾಂತರ ಕ್ಷೇತ್ರದ ಜನರ ಮೇಲೂ ಪರಿಣಾಮ ಬೀರುತ್ತವೆ. ಆದ್ದರಿಂದಲೇ, ನಗರದ ಹೃದಯಭಾಗದಿಂದ ಹೊರವಲಯದ ಪ್ರದೇಶಗಳನ್ನು ಸಂಪರ್ಕಿಸುವ ₹50 ಸಾವಿರ ಕೋಟಿ ವೆಚ್ಚದ ಸುರಂಗ ರಸ್ತೆ 'ಪರಿಕಲ್ಪನೆ'ಯೂ ಘೋಷಣೆಯಾಗಿದೆ. ₹2 ಸಾವಿರ ಕೋಟಿ ವೆಚ್ಚ ವೈಟ್ ಟಾಪಿಂಗ್‌ಗೆ ಮರುಚಾಲನೆ ನೀಡಲಾಗಿದೆ. 'ಬ್ರ್ಯಾಂಡ್ ಬೆಂಗಳೂರು' ಎಂಬ ಹೆಸರಿನಡಿ ಹಳೆಯ ಯೋಜನೆಗಳಿಗೆ ಹೊಸ ವೇದಿಕೆಯಡಿ ಜನರಿಂದ ಸಲಹೆ ಪಡೆದು ಮರುಜೀವವನ್ನೂ ನೀಡಲಾಗಿದೆ. ಈ ಮೂಲಕ 'ಬ್ರ್ಯಾಂಡ್' ಘೋಷವಾಕ್ಯದಲ್ಲಿ ಹೊಸ ಬೆಂಗಳೂರನ್ನು ನಿರ್ಮಿಸುವ 'ಕ್ರೆಡಿಟ್ ಲೈನ್' ಅನ್ನು ಕಾಂಗ್ರೆಸ್ ಕಳೆದ ಎಂಟು ತಿಂಗಳಿಂದ ಮಾಡುತ್ತಿದೆ. 'ಹಿಂದಿನ ಸರ್ಕಾರ ಕೇವಲ ಘೋಷಣೆ ಮಾಡಲಾಗಿದ್ದ ಯೋಜನೆಗಳಿಗೆ ನಾವು ಹಣ ನೀಡುತ್ತಿದ್ದೇವೆ. ಯೋಜನೆಗಳೆಲ್ಲ ನಮ್ಮವೇ' ಎಂದು ಹೇಳಿಕೊಳ್ಳಲಾಗುತ್ತಿದೆ.

'ಬ್ರ್ಯಾಂಡ್ ಬೆಂಗಳೂರು ರೂಪಿಸುವ ಯೋಜನೆ ನಮ್ಮದು. ಸಾವಿರಾರು ಕೋಟಿಯ ಅನುದಾನವನ್ನು ನೀಡಿ ಬೆಂಗಳೂರಿನಲ್ಲಿ ಮೂಲಸೌಕರ್ಯ ಸೌಕರ್ಯದ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇವೆ. ನಮ್ಮ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡದೆ ಕಾಮಗಾರಿಗಳಿಗೆ ತಡೆಯಾಗಿದ್ದಾರೆ' ಎಂದು ಬಿಜೆಪಿ ನಾಯಕರು ತಮ್ಮ ಹಿಂದಿನ ಯೋಜನೆಗಳನ್ನೇ ಹೇಳುತ್ತಾ, ಮತದಾರರನ್ನು ಎತ್ತಿಕಟ್ಟುವ ಕಾರ್ಯಕ್ಕೆ ಮುಂದಾಗಿದ್ದಾರೆ.

ಬಿಜೆಪಿ ಹಾಗೂ ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಘೋಷಿಸಿದ ಯೋಜನೆಗಳನ್ನು ಜನರ ಮುಂದಿಟ್ಟು ಮತ ಪಡೆದುಕೊಳ್ಳುವ ಯೋಜನೆ ಹೊಂದಿದ್ದರೂ, ನಗರದಲ್ಲಿ ಗುಣಮಟ್ಟದ ವಿದ್ಯುತ್, ನಿತ್ಯವೂ ಕುಡಿಯುವ ನೀರು, ಗುಂಡಿ ಕಾಣದ ರಸ್ತೆಗಳು, ಮಳೆ ನೀರು ಮನೆಗೆ ಹರಿಯದಂತೆ ತಡೆಯುವ ಚರಂಡಿ, ವಾಹನ ದಟ್ಟಣೆಯಿಲ್ಲದ ಸುಗಮ ಸಂಚಾರ ಹತ್ತಾರು ವರ್ಷಗಳಿಂದ ಇನ್ನೂ ಸಾಧ್ಯವಾಗಿಲ್ಲ. ಕನಿಷ್ಠ ಮೂಲಸೌಕರ್ಯವನ್ನು ಯಾವ ಕೊರತೆಯೂ ಇಲ್ಲದಂತೆ ನೀಡುವಲ್ಲಿ ಎಲ್ಲ ಪಕ್ಷಗಳೂ ಅಧಿಕಾರಕ್ಕೆ ಬಂದಾಗ ವಿಫಲವಾಗಿವೆ ಎಂಬುದಂತೂ ಸ್ಪಷ್ಟ. ಇದೆಲ್ಲ ಜನರ ಮನಸ್ಸಿಲ್ಲಿ ಬೇರೂರಿರುವ ವಿಷಯಗಳು ಎಂಬುದರ ಅರಿವು ಪಕ್ಷಗಳಿಗೂ ಇದೆ. ಹೀಗಾಗಿ, ಮತ ಸೆಳೆಯಲು ರಾಷ್ಟ್ರ, ವಿದೇಶಗಳ ಪ್ರಕರಣಗಳನ್ನೂ ಮತದಾರರಿಗೆ ಮುಂದಿಡುವ ಪ್ರಯತ್ನಗಳಾಗುತ್ತಿವೆ. ❖



ಕಲಾವಿದ ಪಾಲ್ ಫೆರ್ನಾಂಡಿಸ್ ಅವರ ಕಲ್ಪನೆಯಲ್ಲಿ ಬೆಂಗಳೂರಿನ ಅಭಿವೃದ್ಧಿ


ಸಾವಿರಾರು ಕೋಟಿ ವೆಚ್ಚದ ಯೋಜನೆಗಳು

ಮತ ಮಂಥನ

ಬಿಜೆಪಿ ಹಾಗೂ ಕಾಂಗ್ರೆಸ್ ಸರ್ಕಾರಗಳು ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಸಾವಿರಾರು ಕೋಟಿ ವೆಚ್ಚ ಯೋಜನೆಗಳನ್ನು ಪ್ರಕಟಿಸಿವೆ. ಮೂಲಸೌಕರ್ಯ ಸೇರಿದಂತೆ ಆಕರ್ಷಕ, ಹೈಟೆಕ್ ವ್ಯವಸ್ಥೆಯುಳ್ಳ ಸೌಲಭ್ಯಗಳ ಅನುಷ್ಠಾನಕ್ಕಾಗಿ ನೂರಾರು ಕೋಟಿ ವೆಚ್ಚದ ನೀಲನಕ್ಷೆಗಳನ್ನಷ್ಟೇ 'ಬೃಹತ್' ಪ್ರಮಾಣದಲ್ಲಿ ವರ್ಷಗಳಿಂದ ತೋರಿಸಲಾಗುತ್ತಿದೆ.


₹52 ಸಾವಿರ ಕೋಟಿ ವೆಚ್ಚದ 100 ಕಿ.ಮೀ ಸುರಂಗ ರಸ್ತೆ, ₹25 ಸಾವಿರ ಕೋಟಿ ವೆಚ್ಚದ 75 ಕಿ.ಮೀ ಉದ್ದದ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್), ₹17 ಸಾವಿರ ಕೋಟಿ ವೆಚ್ಚದ 208 ಕಿ.ಮೀ ಸ್ಯಾಟಲೈಟ್ ಟೌನ್ ರಿಂಗ್ ರೋಡ್ (ಎಸ್‌ಟಿಆರ್‌ಆರ್). ಇದಲ್ಲದೆ, ವೈಟ್ ಟಾಪಿಂಗ್, ಮೇಲ್ಸೇತುವೆ, ಮಳೆಗಾಲದಲ್ಲಿ ಸಂಕಷ್ಟ ನಿವಾರಣೆ, ತ್ಯಾಜ್ಯ ನಿರ್ವಹಣೆಯಲ್ಲಿ ಹೊಸ ತಂತ್ರಜ್ಞಾನ ಎಂದೆಲ್ಲ ಸಾವಿರಾರು ಕೋಟಿ ವೆಚ್ಚದ ಯೋಜನೆಗಳನ್ನು ಪ್ರಕಟಿಸಲಾಗಿದೆ. ಇದರಲ್ಲಿ ಕೆಲವು ಇನ್ನೂ ಆರಂಭವೇ ಆಗಿಲ್ಲ, ಮತ್ತೆ ಕೆಲವು ನಾಲ್ಕಾರು ವರ್ಷದಿಂದ ಕುಂಟುತ್ತಲೇ ಸಾಗಿವೆ. 'ಅನುದಾನ ಬಿಡುಗಡೆ ಆಗಿಲ್ಲ' ಎಂಬ ಪಕ್ಷಗಳ ಪರಸ್ಪರ ವಾಗ್ವಾದ ಮಾತ್ರ ನಿರಂತರವಾಗಿದೆ.

ಐದು ಕ್ಷೇತ್ರ ಪ್ರತಿನಿಧಿಸುವ ಸಂಸದರು



₹30,188.14 ಕೋಟಿ ಬಿಬಿಎಂಪಿಗೆ ರಾಜ್ಯದ ಒಟ್ಟು ಅನುದಾನ

₹2,810.02 ಕೋಟಿ ಬಿಬಿಎಂಪಿಗೆ ಕೇಂದ್ರದ ಒಟ್ಟು ಅನುದಾನ





ಮತ ಪತ್ರ

ಸಂಗೀತದ ಸುಂದರ ಸ್ವರಗುಚ್ಛಗಳು ತಾಳ-ಭಾವಗಳೊಂದಿಗೆ ಸೇರಿ ಮಾಧುರ್ಯವನ್ನು ನಿರ್ಮಿಸುವಂತೆ, ಉತ್ತಮ ಸಂಸ್ಕಾರ, ದೂರದೃಷ್ಟಿ, ಹಾಗು ಕಾರ್ಯಕ್ಷಮತೆಗಳನ್ನು ಹೊಂದಿರುವ ದಕ್ಷ ಜನಪ್ರತಿನಿಧಿಗಳು ಮಾತ್ರ ಸಮರ್ಥ-ಸದೃಢ-ಜವಾಬ್ದಾರಿಯುತ ಸರ್ಕಾರವನ್ನು ನಡೆಸಬಲ್ಲರು.

ರಾಷ್ಟ್ರದ ಹಿತರಕ್ಷಣೆಗಾಗಿ, ಸುಂದರ-ಸ್ವಚ್ಛ ಸಮಾಜದ ನಿರ್ಮಾಣಕ್ಕಾಗಿ, ನಾಡು-ನುಡಿ-ಸಂಸ್ಕೃತಿಗಳನ್ನು ಕಾಯ್ದು ಪೋಷಿಸುವ, ನಿರಂತರವಾಗಿ ಪ್ರಗತಿಯನ್ನು ಸಾಧಿಸಿ ಎಲ್ಲರ ಹಿತವನ್ನು ಕಾಯ್ದು, ಆ ಮೂಲಕ ಜಾಗತಿಕ ವಲಯದಲ್ಲಿ ನಮ್ಮ ರಾಷ್ಟ್ರದ ಗೌರವವನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಪ್ರವರ್ತವಾಗುವ ಸರ್ಕಾರದ ಆಯ್ಕೆ ನಮ್ಮೆಲ್ಲರ ಜವಾಬ್ದಾರಿಯಲ್ಲವೇನು?

ವಿಶ್ವದಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಹಿರಿಮೆ ನಮ್ಮ ರಾಷ್ಟ್ರದ್ದು!

ಬನ್ನಿ. ಉತ್ತಮ ಭವಿಷ್ಯಕ್ಕಾಗಿ, ಸದೃಢ-ಸುಂದರ ರಾಷ್ಟ್ರ ನಿರ್ಮಾಣಕ್ಕಾಗಿ, ಯೋಚಿಸಿ ಮತದಾನ ಮಾಡೋಣ. ಮತದಾನ ನಮ್ಮ ಹಕ್ಕು ಮಾತ್ರವಲ್ಲ. ಅದು ನಮ್ಮೆಲ್ಲರ ಜವಾಬ್ದಾರಿಯೂ ಹೌದು.

ಮೈಸೂರು ಮಂಜುನಾಥ

ಮತ ಆಮಿಷ: ಆಯೋಗದ ವಶ

₹35.05 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹78.77 ಕೋಟಿ
ಮದ್ಯ	₹133.45 ಕೋಟಿ (1.33 ಕೋಟಿ ಲೀ)
ಮಾದಕವಸ್ತು	₹5.48 ಕೋಟಿ (323.62 ಕೆ.ಜಿ.)
ಚಿನ್ನ	₹9.49 ಕೋಟಿ (16.10 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!



ಬಿಜೆಪಿಯವರು ಇಡಿ, ಐಟಿ ಅಧಿಕಾರಿಗಳನ್ನು ಬಳಸಿ ವಿರೋಧ ಪಕ್ಷಗಳನ್ನು ಹೆದರಿಸುವುದು ಹೊಸದೇನಲ್ಲ. 10 ವರ್ಷಗಳಿಂದ ಇದನ್ನೇ ಮಾಡಿದ್ದಾರೆ. ಯಾರ್‍ಯಾರ ಮೇಲೆ ದಾಳಿ ಮಾಡಿಸಿದ್ದರೋ, ಅವರೆಲ್ಲ ಬಿಜೆಪಿ ಸೇರಿದ್ದಾರೆ. ಬಳಿಕ ತನಿಖೆ ಸ್ಥಗಿತಗೊಂಡಿದೆ. ಈಗ ಹೊಸಬರ ಹಿಂದೆ ಬಿದಿದ್ದಾರೆ.

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಕಣ ಸ್ವಾರಸ್ಯ

ಮಾಜಿ ಸಚಿವರಿಗೆ ದೆಹಲಿ ಸೆಳೆತ!

ಬೆಂಗಳೂರು: 'ಸೋಲೇ ಗೆಲುವಿನ ಮೆಟ್ಟಿಲು' ಎಂಬುದನ್ನು ನಂಬಿಕೊಂಡವರು ಹಲವರು. ಮಾಜಿ ಸಚಿವರಿಗೆ ಒಂದೇ ವರ್ಷದಲ್ಲಿ ಅಂತಹ ಉಮೇದು ಬಂದು ಬಿಟ್ಟಿದೆ.

2019–2023ರ ಅವಧಿಯಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿ, ಕ್ಷೇತ್ರದಲ್ಲಿ ಜನಪ್ರಿಯತೆ ಪಡೆದರೂ ವಿಧಾನಸಭೆ ಚುನಾವಣೆಯಲ್ಲಿ ಸೋಲುಕಂಡಿದ್ದರು. ವಿಧಾನಸಭೆಯಲ್ಲಿ ಹೇಗೂ ಪಕ್ಷ ಅಧಿಕಾರಕ್ಕೆ ಬರಲಿಲ್ಲ; ಲೋಕಸಭೆಗಾದರೂ ಹೋಗೋಣ ಎಂಬ ಲೆಕ್ಕಾಚಾರ ಹಾಕಿ, ಯಾವುದೋ ಪ್ರಭಾವ ಬಳಸಿ ಟಿಕೆಟ್ ದಕ್ಕಿಸಿಕೊಂಡಿದ್ದಾರೆ. ಒಂದು ವೇಳೆ ಮತ್ತೆ ಬಿಜೆಪಿ ಸರ್ಕಾರ ಬಂದರೂ ಅವರೆಲ್ಲರಿಗೂ ಸಚಿವರಾಗುವ ಭಾಗ್ಯವೇನೂ ಸಿಗದು. ಆದರೆ, ಇವರ ಆಸೆ ಮಾತ್ರ ಕಮರದು. ಮರಳಿ ಯತ್ನವ ಮಾಡು ಎಂಬಂತೆ ವರ್ಷದೊಪ್ಪತ್ತಿನಲ್ಲೇ ಮತ್ತೊಮ್ಮೆ ಚುನಾವಣೆ ಎದುರಿಸುತ್ತಿದ್ದಾರೆ.

ಹಿಂದಿನ ಅವಧಿಯಲ್ಲಿ ಸಭಾಧ್ಯಕ್ಷರಾಗಿದ್ದ ವಿಶ್ವೇಶ್ವರ ಹೆಗಡೆ ಕೂಡ, ಲೋಕಸಭೆಯತ್ತ ಚಿತ್ತ ನೆಟ್ಟಿದ್ದಾರೆ.

● ಸ್ಪರ್ಧಿಸಿರುವ ಕ್ಷೇತ್ರ ● ವಿಧಾನಸಭೆಯಲ್ಲಿ ಸೋತ ಕ್ಷೇತ್ರ



ಗೋವಿಂದ ಕಾರಜೋಳ
● ಚಿತ್ರದುರ್ಗ ● ಮುಧೋಳ
ಯಡಿಯೂರಪ್ಪ ಸರ್ಕಾರದಲ್ಲಿ ಲೋಕೋಪಯೋಗಿ, ಬಸವರಾಜ ಬೊಮ್ಮಾಯಿ ಸರ್ಕಾರದಲ್ಲಿ ಜಲಸಂಪನ್ಮೂಲ ಸಚಿವ



ವಿ.ಸೋಮಣ್ಣ
● ತುಮಕೂರು
● ವರುಣ ಮತ್ತು ಚಾಮರಾಜನಗರ
ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರದಲ್ಲಿ ವಸತಿ ಸಚಿವ




ಜಗದೀಶ ಶೆಟ್ಟರ್
● ಬೆಳಗಾವಿ ● ಹುಬ್ಬಳ್ಳಿ–ಧಾರವಾಡ ಕೇಂದ್ರ
ಯಡಿಯೂರಪ್ಪ ಸರ್ಕಾರದಲ್ಲಿ ಬೃಹತ್ ಕೈಗಾರಿಕೆ ಸಚಿವ



ಬಿ.ಶ್ರೀರಾಮುಲು
● ಬಳ್ಳಾರಿ
ಯಡಿಯೂರಪ್ಪ ಸರ್ಕಾರದಲ್ಲಿ ಆರೋಗ್ಯ, ಸಮಾಜ ಕಲ್ಯಾಣ ಮತ್ತು ಬೊಮ್ಮಾಯಿ ಸರ್ಕಾರದಲ್ಲಿ ಸಾರಿಗೆ, ಪರಿಶಿಷ್ಟ ಪಂಗಡಗಳ ಸಚಿವ



ಡಾ.ಕೆ. ಸುಧಾಕರ್
● ಚಿಕ್ಕಬಳ್ಳಾಪುರ ● ಚಿಕ್ಕಬಳ್ಳಾಪುರ
ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ



ವಿಶ್ವೇಶ್ವರ ಹೆಗಡೆ ಕಾಗೇರಿ
● ಉತ್ತರ ಕನ್ನಡ ● ಶಿರಸಿ
ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರದ ಅವಧಿಯಲ್ಲಿ ವಿಧಾನಸಭಾಧ್ಯಕ್ಷರಾಗಿದ್ದರು. ವಿಧಾನಸಭೆಯ ಚುನಾವಣೆಯಲ್ಲಿ ಸೋತಿದ್ದರು.

ಕುರುಡುಮಲೆ ಗಣೇಶನಿಗೆ ಪೂಜೆ ಸಲ್ಲಿಸಿ ಕಾಂಗ್ರೆಸ್ ಪ್ರಚಾರಕ್ಕೆ ಅಧಿಕೃತ ಚಾಲನೆ

'ಗ್ಯಾರಂಟಿಗೆ 5 ವರ್ಷ ವಾರಂಟಿ'

ಪ್ರಜಾವಾಣಿ ವಾರ್ತೆ

ಮುಳಬಾಗಿಲು (ಕೋಲಾರ): ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ತಾಲ್ಲೂಕಿನ ಕುರುಡುಮಲೆ ದೇಗುಲದಲ್ಲಿ ಶನಿವಾರ ವಿನಾಯಕನಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಕಾಂಗ್ರೆಸ್ ಪ್ರಚಾರಕ್ಕೆ ಅಧಿಕೃತ ಚಾಲನೆ ಲಭಿಸಿತು.

'ಮೂಡಣ ಬಾಗಿಲು', 'ದೇವಮೂಲೆ' ಎಂದೇ ಪ್ರಸಿದ್ಧಿ ಪಡೆದಿರುವ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು ಹಾಗೂ ಪಕ್ಷದ ಮುಖಂಡರು ಪೂಜೆ, ಪ್ರಾರ್ಥನೆ ಸಲ್ಲಿಸಿದರು.

ನಂತರ ಮುಳಬಾಗಿಲು ನಗರದಲ್ಲಿ ಹೈದರಾಲಿ ದರ್ಗಾಕ್ಕೆ ತೆರಳಿ ಪ್ರಾರ್ಥಿಸಿದರು. ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ತೆರೆದ ವಾಹನವೇರಿ ರೋಡ್ ಶೋ ನಡೆಸುವ ಮೂಲಕ ಶಕ್ತಿ ಪ್ರದರ್ಶಿಸಿದರು. ಸುಡು ಬಿಸಿಲನ್ನು ಲೆಕ್ಕಿಸದೆ ರೋಡ್ ಶೋನಲ್ಲಿ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸಿದ್ದರಾಮಯ್ಯ ಮಾತನಾಡಿ, 'ಕೇಂದ್ರ ಬಿಜೆಪಿ ಸರ್ಕಾರವನ್ನು ಕಿತ್ತೊಗೆದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೆಳಗಿಳಿಸಿ ರಾಹುಲ್ ಗಾಂಧಿ ಅವರನ್ನು ದೇಶದ ಪ್ರಧಾನಿ ಮಾಡಿ' ಎಂದು ಮನವಿ ಮಾಡಿದರು.

'ಬಿಜೆಪಿಯವರು ಮೊದಲಿಗೆ ಗ್ಯಾರಂಟಿ ಜಾರಿ ಸಾಧ್ಯವೇ ಇಲ್ಲ. ಖಜಾನೆ ಖಾಲಿಯಾಗುತ್ತದೆ ಎನ್ನುವ ಸುಳ್ಳು ಸೃಷ್ಟಿಸಿದರು. ಈಗ ಮತ್ತೊಂದು ಹೊಸ ಸುಳ್ಳು ಸೃಷ್ಟಿಸಿ ಲೋಕಸಭೆ ಚುನಾವಣೆ ಬಳಿಕ ಗ್ಯಾರಂಟಿ ಯೋಜನೆಗಳು ನಿಂತು ಹೋಗುತ್ತವೆ ಎನ್ನುತ್ತಿದ್ದಾರೆ. ಯಾವುದೇ ಕಾರಣಕ್ಕೂ ನಮ್ಮ ಗ್ಯಾರಂಟಿಗಳು ನಿಲ್ಲುವುದಿಲ್ಲ. ಕಾಂಗ್ರೆಸ್ ಗ್ಯಾರಂಟಿಗಳಿಗೆ ಐದು ವರ್ಷಗಳ ವಾರಂಟಿ ಇದೆ' ಎಂದರು.

'ಸೋಲುವ ಭೀತಿಯಿಂದ ಬಿಜೆಪಿ ಸೃಷ್ಟಿಸುವ ಸುಳ್ಳುಗಳಿಗೆ ಸೊಪ್ಪು ಹಾಕಬೇಡಿ. ಬಿಜೆಪಿ ರೀತಿ ನಾವು ದ್ರೋಹ, ಮೋಸ ಮಾಡಲ್ಲ. ಕೊಟ್ಟ ಮಾತಿನಂತೆ ನಡೆದುಕೊಂಡು ತಮ್ಮ ಮತಕ್ಕೆ ಘನತೆ ತಂದಿದ್ದೇವೆ. ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಗೆಲ್ಲಿಸಿ. ಆಗ ತಮ್ಮ ಮತಕ್ಕೆ ಮೌಲ್ಯ ತಂದು ಕೊಡುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡುತ್ತದೆ' ಎಂದು ಭರವಸೆ ನೀಡಿದರು.

'ಪ್ರಧಾನಿ ನರೇಂದ್ರ ಮೋದಿ ನುಡಿದಂತೆ ನಡೆದಿದ್ದಾರಾ? ಅಗತ್ಯ ವಸ್ತುಗಳ ಬೆಲೆ ಕಡಿಮೆ ಆಯಿತಾ? ಅಚ್ಛೇ ದಿನ್ ಬಂತಾ? ₹15 ಲಕ್ಷ ಪ್ರತಿ ಕುಟುಂಬಕ್ಕೆ ಬರುತ್ತದೆ. ರೈತರ ಆದಾಯ ದ್ವಿಗುಣವಾಗುತ್ತದೆ. ವಾರ್ಷಿಕ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದಿದ್ದರು. ಯಾವುದಾದರೂ ಮಾಡಿದ್ದಾರಾ' ಎಂದು ಪ್ರಶ್ನಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಸೂರ್ಯ ಹೇಗೆ ಅಸ್ತಂಗತವಾಗುತ್ತದೆಯೋ ಹಾಗೆಯೇ ಕಮಲ ಮುದುಡುತ್ತದೆ, ತೆನೆ ಬಾಡುತ್ತದೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಇನ್ನೂ ಹೆಚ್ಚಿನ ಗ್ಯಾರಂಟಿ ಕೊಡುತ್ತೇವೆ' ಎಂದು ಭರವಸೆ ನೀಡಿದರು.



ಮುಳಬಾಗಿಲು ತಾಲ್ಲೂಕಿನ ಕುರುಡುಮಲೆ ವಿನಾಯಕನಿಗೆ ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪೂಜೆ ಸಲ್ಲಿಸಿ ಕಾಂಗ್ರೆಸ್‌ನ ಚುನಾವಣಾ ಪ್ರಚಾರಕ್ಕೆ ಅಧಿಕೃತ ಚಾಲನೆ ನೀಡಿದರು. ಕೋಲಾರ ಅಭ್ಯರ್ಥಿ ಕೆ.ವಿ.ಗೌತಮ್ ಪಾಲ್ಗೊಂಡಿದ್ದರು

ಮುಖ್ಯಾಂಶಗಳು

- ಮುಳಬಾಗಿಲಿನಲ್ಲಿ ಬೃಹತ್ ರೋಡ್ ಶೋ, ಕೈ ನಾಯಕರು ಭಾಗಿ
- ಬಿಜೆಪಿ, ಜೆಡಿಎಸ್ ವಿರುದ್ಧ ಸಿದ್ದರಾಮಯ್ಯ, ಡಿಕೆಶಿ ವಾಗ್ದಾಳಿ
- ಸಚಿವ ಕೆ.ಎಚ್. ಮುನಿಯಪ್ಪ, ಪುತ್ರಿ ಶಾಸಕಿ ಶಶಿಕಲಾ ಗೈರು

'ಮತ್ತಷ್ಟು ಜನ ಪಕ್ಷ ಸೇರುತ್ತಾರೆ'

'ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 136 ಸ್ಥಾನ ಗೆದ್ದು ಶೇ43ರಷ್ಟು ಮತ ಗಳಿಸಿದೆ. ಬಿಜೆಪಿ 64 ಸ್ಥಾನಗಳೊಂದಿಗೆ ಕೇವಲ ಶೇ36 ಮತ ಪಡೆದಿದೆ. ಜೆಡಿಎಸ್ 19 ಸ್ಥಾನ ಗೆದ್ದಿದೆ. ಇನ್ನಷ್ಟು ಜನ ನಮ್ಮ ಪಕ್ಷ ಸೇರಲಿದ್ದಾರೆ. ಸರ್ಕಾರ ಬಿದ್ದುಹೋಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಲೋಕಸಭಾ ಚುನಾವಣೆ ನಂತರ ರಾಜ್ಯ ಸರ್ಕಾರ ಬಿದ್ದುಹೋಗಲಿದೆ ಎಂಬ ಬಿಜೆಪಿ ಹೇಳಿಕೆಗೆ ಮುಳಬಾಗಿಲಿನಲ್ಲಿ ಶನಿವಾರ ಈ ರೀತಿ ಪ್ರತಿಕ್ರಿಯಿಸಿದರು. '₹5,300 ಕೋಟಿ ನೀಡುವುದಾಗಿ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಹೇಳಿತು. ಇದುವರೆಗೆ ಕೊಟ್ಟಿಲ್ಲ. 15ನೇ ಹಣಕಾಸು ಆಯೋಗದಿಂದ ₹5,495 ಕೋಟಿ ವಿಶೇಷ ಅನುದಾನ ನೀಡುವುದಾಗಿ ಹೇಳಿ ಇನ್ನೂ ಕೊಟ್ಟಿಲ್ಲ. ಬೆಂಗಳೂರಿನ ಹೊರವರ್ತುಲ ರಸ್ತೆಗೆ ₹3ಸಾವಿರ ಕೋಟಿ ನೀಡುವುದಾಗಿ ಹೇಳಿ ಕೊಟ್ಟಿಲ್ಲ' ಎಂದರು.

ಬಾಯ್ತಪ್ಪಿ 'ಕಾಂಗ್ರೆಸ್ ನುಡಿದಂತೆ ನಡೆಯಲ್ಲ' ಎಂದ ಸಿ.ಎಂ

ಮುಳಬಾಗಿಲು ನಗರದಲ್ಲಿ ಕಾಂಗ್ರೆಸ್ ರೋಡ್ ಶೋ ವೇಳೆ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುವಾಗ ಸಿದ್ದರಾಮಯ್ಯ ಬಾಯ್ತಪ್ಪಿ 'ಕಾಂಗ್ರೆಸ್ ಪಕ್ಷ ಯಾವತ್ತೂ ಕೊಟ್ಟ ಮಾತಿನಂತೆ ನಡೆದುಕೊಳ್ಳಲ್ಲ' ಎಂದರು. ಕೂಡಲೇ ಸರಿಪಡಿಸಿಕೊಂಡು 'ಕಾಂಗ್ರೆಸ್ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತದೆ' ಎಂದರು.

'ಅಳಿಯನನ್ನು ಗ್ರಾಮಾಂತರಕ್ಕೆ ತಳ್ಳಿದ್ದಾರೆ'

'ನರೇಂದ್ರ ಮೋದಿ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುತ್ತೇನೆ. ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟುತ್ತೇನೆ ಎಂಬುದಾಗಿ ಎಚ್.ಡಿ.ದೇವೇಗೌಡರು 2019ರಲ್ಲಿ ಹೇಳಿದ್ದರು. ಇದೀಗ ಬಿಜೆಪಿ ಜೊತೆಗೆ ಹೋಗಿದ್ದಾರೆ. ಜೆಡಿಎಸ್ ಪಕ್ಷದವರು ಕೇವಲ 3 ಕ್ಷೇತ್ರ ಪಡೆದಿದ್ದಾರೆ. ಆದರೆ, ತಮ್ಮ ಪಕ್ಷದಲ್ಲಿ ಸೋಲುತ್ತೀಯಾ, ಅಲ್ಲಿಗೆ ಹೋಗು ಎಂದು ಅಳಿಯನನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರಕ್ಕೆ ತಳ್ಳಿದ್ದಾರೆ' ಎಂದು ಸಿದ್ದರಾಮಯ್ಯ ಲೇವಡಿ ಮಾಡಿದರು.

14ರಂದು ದೇವನಹಳ್ಳಿಗೆ ಪ್ರಧಾನಿ ಮೋದಿ

ದೇವನಹಳ್ಳಿ: ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 14ರಂದು ದೇವನಹಳ್ಳಿಗೆ ಆಗಮಿಸಲಿದ್ದಾರೆ. ಅಂದು ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ನಡೆಸಲಿದ್ದಾರೆ ಎಂದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ.ಸುಧಾಕರ್ ತಿಳಿಸಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾವೇಶಕ್ಕೆ ತಯಾರಿ ನಡೆದಿದೆ. ಕಾರ್ಯಕ್ರಮದಲ್ಲಿ ರಾಜ್ಯದ ಬಿಜೆಪಿ ವರಿಷ್ಠರು ಸೇರಿದಂತೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ ಕುಮಾರಸ್ವಾಮಿ, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ದಿಂಗಾಲೇಶ್ವರ ಸ್ವಾಮೀಜಿ ಸೆಳೆಯಲು ಕಾಂಗ್ರೆಸ್ ಯತ್ನ

● ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಧಾರವಾಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಂಸದ ಪ್ರಲ್ಹಾದ ಜೋಶಿ ವಿರುದ್ಧ ಬೇಸರ ಹೊಂದಿರುವ ಗದಗ ಜಿಲ್ಲೆಯ ಶಿರಹಟ್ಟಿಯ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರನ್ನು ಸೆಳೆಯಲು ಕಾಂಗ್ರೆಸ್‌ನ ಒಂದು ಗುಂಪು ಯತ್ನಿಸುತ್ತಿದೆ.


'ಧಾರವಾಡ ಕ್ಷೇತ್ರದ ವ್ಯಾಪ್ತಿಯಲ್ಲಿ ಲಿಂಗಾಯತ ಮುಖಂಡರು ಬೆಳೆಯಲು ಜೋಶಿ ಅವಕಾಶ ನೀಡುತ್ತಿಲ್ಲ' ಎಂದು ಆರೋಪಿಸುವ ದಿಂಗಾಲೇಶ್ವರ ಸ್ವಾಮೀಜಿಗೆ ಭಕ್ತರು, ಹಿತೈಷಿಗಳು ಸೇರಿ ಕೆಲ ರಾಜಕೀಯ ಮುಖಂಡರು ಚುನಾವಣೆಗೆ ಸ್ಪರ್ಧಿಸಲು ಸಲಹೆ ನೀಡಿದ್ದಾರೆ.

ಸ್ಪರ್ಧೆ ಕುರಿತು ಬಗ್ಗೆ ಸ್ವಾಮೀಜಿ ಇನ್ನು ನಿರ್ಣಯ ತೆಗೆದುಕೊಂಡಿಲ್ಲ. ಆದರೆ, ಕಾಂಗ್ರೆಸ್ ಮುಖಂಡರು ಸಂಪರ್ಕದಲ್ಲಿ ಇರುವುದನ್ನು ಅವರು ನಿರಾಕರಿಸುವುದಿಲ್ಲ.

ಲಿಂಗಾಯತ ಲಾಬಿ: ಕ್ಷೇತ್ರದಲ್ಲಿ ಲಿಂಗಾಯತರು ಹೆಚ್ಚಿರುವ ಕಾರಣ ಈ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ನೀಡಲು ಕಾಂಗ್ರೆಸ್‌ನಲ್ಲಿ ಹಲವರು ಒತ್ತಾಯಿಸಿದ್ದರು. ಅವಿಭಜಿತ ಧಾರವಾಡ ಜಿಲ್ಲೆಯ ಭಾಗವಾಗಿದ್ದ ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಲಿಂಗಾಯತ ಸಮುದಾಯದ ಆನಂದಸ್ವಾಮಿ ಗಡ್ಡದೇವರಮಠ ಅವರಿಗೆ ಟಿಕೆಟ್ ನೀಡಿದ್ದರಿಂದ ಧಾರವಾಡ ಕ್ಷೇತ್ರಕ್ಕೆ ಕುರುಬ ಸಮುದಾಯದ ವಿನೋದ ಅಸೂಟಿಗೆ ಟಿಕೆಟ್ ನೀಡಲಾಯಿತು.

ಈ ತೀರ್ಮಾನದಿಂದ ಲಿಂಗಾಯತ ನಾಯಕರು ಬೇಸರಗೊಂಡರೂ ಬಹಿರಂಗವಾಗಿ ತೋರ್ಪಡಿಸಲಿಲ್ಲ. ಈಗ ಜೋಶಿ ವಿರುದ್ಧ ಬಹಿರಂಗವಾಗಿ ಅಸಮಾಧಾನ ಹೊರಹಾಕಿರುವ ಸ್ವಾಮೀಜಿಯವರನ್ನು ತಮ್ಮತ್ತ ಸೆಳೆದುಕೊಳ್ಳಲು ಪ್ರಯತ್ನ ನಡೆಸಿದ್ದಾರೆ.

'ಸ್ವಾಮೀಜಿ ಅವರನ್ನೇ ಪಕ್ಷದ ಅಭ್ಯರ್ಥಿಯಾಗಿಸಿದರೆ ಪ್ರಲ್ಹಾದ ಜೋಶಿ ಅವರಿಗೆ ಪೈಪೋಟಿ ಒಡ್ಡಬಹುದು. ಲಿಂಗಾಯತರ ಮತಗಳನ್ನು ಸೆಳೆದುಕೊಳ್ಳಬಹುದು ಎಂಬುದನ್ನು ವರಿಷ್ಠರ ಗಮನಕ್ಕೆ ತರಲಾಗಿದೆ' ಎಂದು ಕಾಂಗ್ರೆಸ್ ನಾಯಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಕಾಂಗ್ರೆಸ್‌ನ ಕೆಲ ನಾಯಕರು ತಮ್ಮ ಪಕ್ಷದಿಂದ ಧಾರವಾಡ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಕೋರಿದ್ದು ನಿಜ. ನಾನಿನ್ನೂ ಚುನಾವಣೆಗೆ ಸ್ಪರ್ಧಿಸುವ ಬಗ್ಗೆಯೇ ತೀರ್ಮಾನಿಸಿಲ್ಲ.

ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಗದಗ– ಶಿರಹಟ್ಟಿಯ ಭಾವೈಕ್ಯ ಪೀಠ

'ಅಭ್ಯರ್ಥಿ ಬದಲಿಸಿ'

'ಧಾರವಾಡ ಕ್ಷೇತ್ರದ ಅಭ್ಯರ್ಥಿಯಾಗಿ ವಿನೋದ ಅಸೂಟಿ ಅವರನ್ನು ಕಾಂಗ್ರೆಸ್ ಈಗಾಗಲೇ ಘೋಷಿಸಿದೆ. ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಏಪ್ರಿಲ್ 12ರಂದು ಆರಂಭವಾಗಲಿದೆ. ವಿನೋದ ಅಸೂಟಿ ಬದಲು ದಿಂಗಾಲೇಶ್ವರ ಸ್ವಾಮೀಜಿ ಅವರನ್ನೇ ಅಭ್ಯರ್ಥಿಯಾಗಿ ಘೋಷಿಸಿ, ಅವರಿಂದ ನಾಮಪತ್ರ ಸಲ್ಲಿಸಲು ಕಾಲಾವಕಾಶವಿದೆ ಎಂದು ಕಾಂಗ್ರೆಸ್‌ನ ಕೆಲ ಮುಖಂಡರು ಪಕ್ಷದ ವರಿಷ್ಠರನ್ನು ಮನಗಾಣಿಸಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಚುನಾವಣೆಯಲ್ಲಿ ಗೆಲ್ಲದೇ ಇದ್ದರೂ ಕೆಲವೆಡೆ ಫಲಿತಾಂಶವನ್ನು ಏರುಪೇರು ಮಾಡುವ ಸಾಧ್ಯತೆ

ಸಣ್ಣ ಪಕ್ಷಗಳ ಸ್ವತಂತ್ರ ಸ್ಪರ್ಧೆ ಲಾಭ ಯಾರಿಗೆ?

• ಮಂಜುನಾಥ ಹೆಬ್ಬಾರ್

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಹಾಗೂ 'ಇಂಡಿಯಾ' ಮೈತ್ರಿಕೂಟ ನಡುವೆಯೇ ನೇರ ಪೈಪೋಟಿ ಇದೆ. ಕೆಲವೊಂದು ಪ್ರಾದೇಶಿಕ ಪಕ್ಷಗಳು ಎರಡೂ ಮೈತ್ರಿಯಿಂದ ಅಂತರ ಕಾಯ್ದುಕೊಂಡು ಕಣದಲ್ಲಿವೆ. ಇದರ ನಡುವೆ, ಸಣ್ಣ ಪಕ್ಷಗಳು ಅದೃಷ್ಟ ಪರೀಕ್ಷೆಗೆ ಇಳಿದಿವೆ. ಈ ಪಕ್ಷಗಳನ್ನು ಬಿಜೆಪಿಯ 'ಬಿ ಟೀಮ್' ಎಂದು ವಿಪಕ್ಷಗಳು ಜರಿಯುವುದುಂಟು. ಈ ಪಕ್ಷಗಳು ಚುನಾವಣೆಯಲ್ಲಿ ಗೆಲ್ಲದೇ ಇದ್ದರೂ ಕೆಲವೊಂದು ಕಡೆಗಳಲ್ಲಿ ಫಲಿತಾಂಶವನ್ನು ಏರುಪೇರು ಮಾಡುವ ಸಾಮರ್ಥ್ಯ ಹೊಂದಿವೆ. ಇಂತಹ ಪಕ್ಷಗಳ ಸ್ವತಂತ್ರ ಸ್ಪರ್ಧೆಯಿಂದ ಲಾಭ ಯಾರಿಗೆ?

ಉತ್ತರ ಪ್ರದೇಶ: ಹೊಸ ಮೈತ್ರಿಕೂಟದ ಹೊಡೆತ ಯಾರಿಗೆ?




ಉತ್ತರ ಪ್ರದೇಶದ ಕಣದಲ್ಲಿ ಎನ್‌ಡಿಎ ಹಾಗೂ 'ಇಂಡಿಯಾ' ಮೈತ್ರಿಕೂಟದ ನಡುವೆ ನೇರ ಸ್ಪರ್ಧೆ ಇದ್ದಂತೆ ಮೇಲ್ನೋಟಕ್ಕೆ ಕಾಣುತ್ತಿದೆ. ಎರಡೂ ಮೈತ್ರಿಗಳಿಗೆ ಸವಾಲು ಒಡ್ಡುವ ವಿಶ್ವಾಸದಲ್ಲಿ ಬಿಎಸ್‌ಪಿ ಇದೆ. ಇದರ ನಡುವೆಯೇ, ರಾಜ್ಯದಲ್ಲಿ ಹೊಸ ಮೈತ್ರಿಕೂಟವೊಂದು ರಚನೆಯಾಗಿದೆ. ಈ ಮೈತ್ರಿಕೂಟವು 'ಇಂಡಿಯಾ' ಮೈತ್ರಿಕೂಟದ ಮತಗಳನ್ನು ಕಸಿಯುವ ಸಂಭವ ಇದೆ.

ನೂತನ ಮೈತ್ರಿಕೂಟದಲ್ಲಿ ಇರುವ ಪಕ್ಷಗಳು ಎಐಎಂಐಎಂ, ಅಪ್ನಾ ದಳ್ (ಕಾಮೇರವಾಡಿ), ರಾಷ್ಟ್ರೀಯ ಉದಯ್ ಪಾರ್ಟಿ ಹಾಗೂ ಪ್ರಗತಿಶೀಲ ಮಾನವ್ ಸಮಾಜ್ ಪಾರ್ಟಿ. ಮೈತ್ರಿಕೂಟದ ಹೆಸರು 'ಪಿಡಿಎಂ ನ್ಯಾಯ್ ಮೋರ್ಚಾ'. ಹಿಂದುಳಿದವರು, ದಲಿತರು ಹಾಗೂ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವುದಾಗಿ ಮೈತ್ರಿಕೂಟದ ನಾಯಕರು ಹೇಳಿಕೊಂಡಿದ್ದಾರೆ.

ಸಮಾಜವಾದಿ ಪಕ್ಷವು (ಎಸ್‌ಪಿ) ದಲಿತ-ಹಿಂದುಳಿದ ಹಾಗೂ ಮುಸ್ಲಿಂ ಮತಗಳ ಸಮೀಕರಣವನ್ನು ನೆಚ್ಚಿಕೊಂಡಿದೆ. ಈ ಸಮೀಕರಣದ ಬಲದಿಂದಲೇ ಪಕ್ಷವು ರಾಜ್ಯದಲ್ಲಿ ಈ ಹಿಂದೆ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. 2022ರ ವಿಧಾನಸಭಾ ಚುನಾವಣೆಯಲ್ಲಿ ಎಐಎಂಐಎಂ ಹಲವು ಕ್ಷೇತ್ರಗಳಲ್ಲಿ ಎಸ್‌ಪಿ ಗೆಲುವಿಗೆ ಅಡ್ಡಗಾಲು ಹಾಕಿತ್ತು. ಅಧಿಕಾರದ ಚುಕ್ಕಾಣಿ ಹಿಡಿಯುವ ನಿರೀಕ್ಷೆಯಲ್ಲಿದ್ದ ಸಮಾಜವಾದಿ ಪಕ್ಷವು ಗಳಿಸಿದ್ದು 112 ಸ್ಥಾನಗಳನ್ನಷ್ಟೇ. ಅನೇಕ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು 500, 1000 ಮತಗಳ ಅಂತರದಿಂದ ಪರಾಜಯ ಅನುಭವಿಸಿದ್ದರು.

ವಂಚಿತ್ 'ಮಹಾ' ಪ್ರಭಾವವೇನು?

ಮಹಾರಾಷ್ಟ್ರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅವರ 'ವಂಚಿತ್ ಬಹುಜನ ಅಘಾಡಿ (ವಿಬಿಎ)' ಜತೆಗೆ ಮೈತ್ರಿ ಮಾಡಿಕೊಳ್ಳಲು 'ಮಹಾವಿಕಾಸ ಅಘಾಡಿ (ಎಂವಿಎ)' ಒಲವು ತೋರಿತ್ತು. ಈ ಸಂಬಂಧ ಮಾತುಕತೆಗಳು ನಡೆದಿದ್ದವು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೆ ಕನಿಷ್ಠ 40 ಸೀಟುಗಳನ್ನು ನೀಡಬೇಕು ಎಂದು ಪ್ರಕಾಶ್ ಅಂಬೇಡ್ಕರ್ ಪಟ್ಟು ಹಿಡಿದರು. ಇದಕ್ಕೆ ಎಂವಿಎ ಒಪ್ಪಿರಲಿಲ್ಲ. ಅದರ ನಡುವೆಯೇ, ಪ್ರಕಾಶ್ ಅವರು ಮಹಾರಾಷ್ಟ್ರದ 48 ಸ್ಥಾನಗಳ ಪೈಕಿ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದ್ದಾರೆ. ಅಕೋಲಾ ಕ್ಷೇತ್ರದಲ್ಲಿ ಪ್ರಕಾಶ್ ಅವರು ಅಖಾಡದಲ್ಲಿದ್ದಾರೆ.



ಪ್ರಕಾಶ್ ಅಂಬೇಡ್ಕರ್

ವಿಬಿಎ ಸ್ವತಂತ್ರವಾಗಿ ಸ್ಪರ್ಧೆ ಮಾಡುತ್ತಿರುವುದಿಂದ ಬಿಜೆಪಿಗೆ ಅನುಕೂಲವಾಗಲಿದೆ. ಎಂವಿಎ ಮೈತ್ರಿಕೂಟದ ಒಂದಷ್ಟು ಮತಗಳನ್ನು ವಿಬಿಎ ಸೆಳೆಯಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ವಿಬಿಎ ಹಾಗೂ ಎಐಎಂಐಎಂ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸುತ್ತಿದ್ದವು. ಈ ಮೈತ್ರಿಕೂಟವು ಒಂದು ಕ್ಷೇತ್ರದಲ್ಲಿ ಜಯ ಗಳಿಸಿತ್ತು. ಶೇ 7.65ರಷ್ಟು ಮತಗಳನ್ನು ಪಡೆದಿತ್ತು. ಹಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್–ಎನ್‌ಸಿಪಿ ಅಭ್ಯರ್ಥಿಗಳ ಸೋಲಿಗೆ ಕಾರಣವಾಗಿತ್ತು.

ಚುನಾವಣೆಗೆ ಮುನ್ನ 'ಜನನಾಯಕ' ದೂರ



ಹರಿಯಾಣದಲ್ಲಿ ನಾಲ್ಕೂವರೆ ವರ್ಷಗಳಿಂದ ಬಿಜೆಪಿ–ಜನನಾಯಕ ಜನತಾ ಪಾರ್ಟಿ (ಜೆಜೆಪಿ) ಮೈತ್ರಿ ಸರ್ಕಾರ ಅಸ್ತಿತ್ವದಲ್ಲಿತ್ತು. ಲೋಕಸಭಾ ಚುನಾವಣೆಯ ವೇಳಾಪಟ್ಟಿ ಪ್ರಕಟಕ್ಕೆ ಮುನ್ನ ಎರಡೂ ಪಕ್ಷಗಳ ಮೈತ್ರಿ ಮುರಿದು ಬಿದ್ದಿದೆ. ಲೋಕಸಭಾ ಚುನಾವಣೆಯ ಸೀಟು ಹಂಚಿಕೆ ವಿವಾದವೇ ಇದಕ್ಕೆ ಕಾರಣ ಎಂದು ಉಭಯ ಪಕ್ಷಗಳ ನಾಯಕರು ಹೇಳುವರು. ತೆರೆ ಮರೆಯಲ್ಲಿ 'ಹೊಂದಾಣಿಕೆ' ಮಾಡಿಕೊಂಡೇ ಈ ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧೆಗೆ ಅಣಿಯಾಗಿವೆ.

ಹರಿಯಾಣದಲ್ಲಿ ಜಾಟರು ಶೇ 20ರಷ್ಟಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸುತ್ತಿರುವ ರೈತರಲ್ಲಿ ಜಾಟರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಜಾಟರು ಜೆಜೆಪಿಯ ಪ್ರಧಾನ ಮತ ಬ್ಯಾಂಕ್ ಹೌದು. ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಜೆಪಿ ಏಳು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಶೇ 5ರಷ್ಟು ಮತಗಳನ್ನು ಗಳಿಸಿತ್ತು. ಬಿಜೆಪಿ ಎಲ್ಲ 10 ಕ್ಷೇತ್ರಗಳನ್ನೂ ಗೆದ್ದುಕೊಂಡಿತ್ತು. ಈ ಸಲ ಬಿಜೆಪಿ–ಜೆಜೆಪಿ ಜತೆಗೂಡಿ ಸ್ಪರ್ಧಿಸಿದರೆ ಜಾಟರು ದೊಡ್ಡ ಸಂಖ್ಯೆಯಲ್ಲಿ ಕಾಂಗ್ರೆಸ್ ಕಡೆಗೆ ವಾಲಬಹುದು. ಇದರಿಂದ, ಮೈತ್ರಿಕೂಟಕ್ಕೆ ಹಿನ್ನಡೆಯಾಗಬಹುದು ಎಂಬ ಲೆಕ್ಕಾಚಾರವೇ ಉಭಯ ಪಕ್ಷಗಳು ದೂರವಾಗಲು ಕಾರಣ. ಕಾಂಗ್ರೆಸ್ ಜಾಟರು ಹಾಗೂ ರೈತರ ಮತಗಳನ್ನು ನೆಚ್ಚಿಕೊಂಡಿದೆ. ಜಾಟರ ಮತಗಳು ಜೆಜೆಪಿ ಮತ್ತು ಕಾಂಗ್ರೆಸ್ ನಡುವೆ ವಿಭಜನೆಯಾದರೆ ತಮ್ಮ ಪಕ್ಷಕ್ಕೆ ಅನುಕೂಲವಾಗಲಿದೆ ಎಂಬುದು ಕಮಲ ಪಾಳಯದ ನಾಯಕರ ಲೆಕ್ಕಾಚಾರ.

ಕಾಂಗ್ರೆಸ್ ಎಚ್ಚರಿಕೆ ನಡೆ



ರಾಜಸ್ಥಾನ ವಿಧಾನಸಭಾ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮತಗಳನ್ನು ನೆಚ್ಚಿಕೊಂಡು ಬಿಎಸ್‌ಪಿ, ಆಜಾದ್ ಸಮಾಜ್ ಪಾರ್ಟಿ (ಎಎಸ್‌ಪಿ), ಸಿಪಿಎಂ, ಆರ್‌ಎಲ್‌ಪಿ, ಭಾರತೀಯ ಆದಿವಾಸಿ ಪಕ್ಷಗಳು (ಬಿಎಪಿ) ಚುನಾವಣಾ ಕಣಕ್ಕೆ ಇಳಿದಿದ್ದವು. ಈ ಪಕ್ಷಗಳನ್ನು ಕಾಂಗ್ರೆಸ್ ಮತ್ತು ಬಿಜೆಪಿ ಕಡೆಗಣಿಸಿದ್ದವು. ಈ ಪಕ್ಷಗಳು ಒಟ್ಟು ಏಳು ಕ್ಷೇತ್ರಗಳಲ್ಲಿ ಜಯ ಸಾಧಿಸಿದ್ದವು. ಕನಿಷ್ಠ 30 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವನ್ನು ತಡೆದಿದ್ದವು. ಹೊಡೆತದಿಂದ ಪಾಠ ಕಲಿತಿರುವ ಕಾಂಗ್ರೆಸ್ ಪಕ್ಷವು ಲೋಕಸಭಾ ಚುನಾವಣೆಯಲ್ಲಿ ಎಚ್ಚರಿಕೆಯ ಹೆಜ್ಜೆ ಇಟ್ಟಿದೆ. ಆರ್‌ಎಲ್‌ಪಿ ಹಾಗೂ ಸಿಪಿಎಂಗೆ ಸೀಟುಗಳನ್ನು ಬಿಟ್ಟುಕೊಟ್ಟಿದೆ. ಆರ್‌ಎಲ್‌ಪಿ ಮುಖ್ಯಸ್ಥ ಹನುಮಾನ್ ಬೆನಿವಾಲ್ ಅವರು ನಾಗೌರ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಈ ಮೈತ್ರಿಯಿಂದ ಪಕ್ಷಕ್ಕೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಕಾಂಗ್ರೆಸ್ ನಾಯಕರು ಭಾವಿಸಿದ್ದಾರೆ.

ಸುರೇಶ್ ಗೋಪಿ ಆಸ್ತಿ ₹12 ಕೋಟಿ



ತ್ರಿಶ್ಶೂರ್ (ಕೇರಳ) (ಪಿಟಿಐ): ಕಳೆದ ಲೋಕಸಭಾ ಚುನಾವಣೆಯಲ್ಲಿ ತ್ರಿಶ್ಶೂರ್ ಕ್ಷೇತ್ರದಿಂದ ಪರಾಭವಗೊಂಡು, ಈ ಬಾರಿಯೂ ಅದೇ ಕ್ಷೇತ್ರದಿಂದ ಅದೃಷ್ಟ ಪರೀಕ್ಷೆಗಿಳಿದಿರುವ ನಟ ಹಾಗೂ ಬಿಜೆಪಿ ಮುಖಂಡ ಸುರೇಶ್ ಗೋಪಿ, ತಮ್ಮ ಬಳಿ ಒಟ್ಟು ₹12 ಕೋಟಿ ಆಸ್ತಿ ಇದೆ ಎಂದು ಘೋಷಿಸಿದ್ದಾರೆ.

ಎಂಟು ವಾಹನಗಳು, 1,025 ಗ್ರಾಂ. ಚಿನ್ನ ಸೇರಿ ₹ 4 ಕೋಟಿಯ ಚರಾಸ್ತಿ ಹಾಗೂ ಎರಡು ಕೃಷಿ ಭೂಮಿ, ಏಳು ಕೃಷಿಯೇತರ ಜಮೀನುಗಳು, ಏಳು ವಸತಿ ಸಮುಚ್ಚಯಗಳು ಸೇರಿದಂತೆ ₹8.59 ಕೋಟಿಯ ಸ್ಥಿರಾಸ್ತಿಗಳು ಇವೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ವಾಹನ ಸಾಲ, ಬ್ಯಾಂಕ್‌ನಿಂದ ಪಡೆದ ಸಾಲ ಸೇರಿದಂತೆ ₹61 ಲಕ್ಷ ಸಾಲ ಇದೆ ಎಂದೂ ಹೇಳಿದ್ದಾರೆ. 2019ರ ಲೋಕಸಭಾ ಚುನಾವಣೆ ವೇಳೆ ಅವರು ₹10 ಕೋಟಿ ಆಸ್ತಿ ಘೋಷಿಸಿದ್ದರು. ಇವರ ವಿರುದ್ಧ ಎರಡು ಮೋಟರ್ ತೆರಿಗೆ ವಂಚನೆ ಪ್ರಕರಣಗಳು ಸೇರಿದಂತೆ ನಾಲ್ಕು ಕ್ರಿಮಿನಲ್ ಪ್ರಕರಣಗಳಿವೆ.



ಪ್ರಚಾರ ಕಣದಲ್ಲಿ...

ಚೆನ್ನೈ ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪರ ಶನಿವಾರ ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡಿದ್ದ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಮೀನು ಎತ್ತಿಕೊಂಡರು –ಪಿಟಿಐ ಚಿತ್ರ

ಕಾಂಗ್ರೆಸ್ ಪ್ರಣಾಳಿಕೆ

ಪ್ರಧಾನಿ ಮೋದಿ ಆರೋಪ: ಜೈರಾಮ್ ತಿರುಗೇಟು

'ಮುಸ್ಲಿಂ ಲೀಗ್ ಚಿಂತನೆ'

ಸಹಾರನ್‌ಪುರ, ಉತ್ತರ ಪ್ರದೇಶ (ಪಿಟಿಐ): ಕಾಂಗ್ರೆಸ್ ಪಕ್ಷವನ್ನು ಮುಸ್ಲಿಂ ಲೀಗ್‌ನೊಂದಿಗೆ ಸಮೀಕರಿಸಿದ ಪ್ರಧಾನಿ ನರೇಂದ್ರ ಮೋದಿ, 'ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯು ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಮುಸ್ಲಿಂ ಲೀಗ್ ಹೊಂದಿದ್ದ ಅದೇ ಚಿಂತನೆಯನ್ನು ಪ್ರತಿಬಿಂಬಿಸುತ್ತದೆ' ಎಂದು ಟೀಕಿಸಿದರು.



ಉತ್ತರ ಪ್ರದೇಶದ ಸಹಾರನ್‌ಪುರದಲ್ಲಿ ಶನಿವಾರ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿ, 'ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಇದ್ದಂತಹ ಕಾಂಗ್ರೆಸ್ ಈಗ ಅಸ್ತಿತ್ವದಲ್ಲಿ ಇಲ್ಲ. ದಶಕಗಳ ಹಿಂದೆಯೇ ಆ ಪಕ್ಷದ ಅಂತ್ಯ ಸಂಭವಿಸಿದೆ' ಎಂದು ಕುಟುಕಿದರು.

'ಅನೇಕ ಮಹಾನ್ ವ್ಯಕ್ತಿಗಳು ಕಾಂಗ್ರೆಸ್ ಜತೆ ಇದ್ದರು. ಮಹಾತ್ಮಾ ಗಾಂಧಿ ಅವರ ಹೆಸರೂ ಕಾಂಗ್ರೆಸ್‌ನೊಂದಿಗೆ ಸೇರಿಕೊಂಡಿತ್ತು. ಆದರೆ ಈಗ ಉಳಿದುಕೊಂಡಿರುವ ಕಾಂಗ್ರೆಸ್‌ಗೆ ರಾಷ್ಟ್ರದ ಹಿತಾಸಕ್ತಿಯ ಕುರಿತ ನೀತಿ ಅಥವಾ ರಾಷ್ಟ್ರದ ಅಭಿವೃದ್ಧಿಯ ವಿಚಾರದಲ್ಲಿ ದೂರದೃಷ್ಟಿ ಇಲ್ಲ' ಎಂದು ದೂರಿದರು.

'ಕಾಂಗ್ರೆಸ್ ಪಕ್ಷಕ್ಕೆ ದೇಶದ ಜನರ ಭರವಸೆ ಮತ್ತು ಆಶೋತ್ತರಗಳ ಜತೆಗೆ ಯಾವುದೇ ಸಂಬಂಧವಿಲ್ಲ ಎಂಬುದನ್ನು ಆ ಪಕ್ಷದ ಚುನಾವಣಾ ಪ್ರಣಾಳಿಕೆ ಸಾಬೀತುಪಡಿಸಿದೆ' ಎಂದು ಹೇಳಿದರು.

> **ಅಧಿಕಾರಕ್ಕೆ ಬಂದರೆ 'ಕಮಿಷನ್' ಪಡೆಯುವುದು ವಿರೋಧ ಪಕ್ಷಗಳ ಮೈತ್ರಿಕೂಟದ ಲೆಕ್ಕಾಚಾರ ಆಗಿದೆ. ಎನ್‌ಡಿಎ ಸರ್ಕಾರವು ಅಭಿವೃದ್ಧಿಯ 'ಮಿಷನ್' (ಸ್ಪಷ್ಟ ಗುರಿ) ಇಟ್ಟುಕೊಂಡು ಅಧಿಕಾರಕ್ಕೇರಲಿದೆ**
> **ನರೇಂದ್ರ ಮೋದಿ,** ಪ್ರಧಾನಿ

'ಪ್ರಧಾನಿಗೆ ಇತಿಹಾಸ ಗೊತ್ತಿಲ್ಲ'

ನವದೆಹಲಿ (ಪಿಟಿಐ): ಪಕ್ಷದ ಪ್ರಣಾಳಿಕೆ ಸಂಬಂಧ ಪ್ರಧಾನಿ ನೀಡಿರುವ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್, 'ಪ್ರಧಾನಿ ಮೋದಿ ಅವರಿಗೆ ಇತಿಹಾಸ ಗೊತ್ತಿಲ್ಲ' ಎಂದು ತಿರುಗೇಟು ನೀಡಿದೆ.

'ಜನಸಂಘದ ಸ್ಥಾಪಕ ಶ್ಯಾಮ ಪ್ರಸಾದ್ ಮುಖರ್ಜಿ ಅವರು 1940ರ ಆರಂಭದಲ್ಲಿ ಬಂಗಾಳದಲ್ಲಿ ಮುಸ್ಲಿಂ ಲೀಗ್ ಜತೆ ಮೈತ್ರಿ ಸರ್ಕಾರದ ಭಾಗವಾಗಿದ್ದರು ಎಂಬುದು ಮೋದಿ ಅವರಿಗೆ ತಿಳಿದಿಲ್ಲ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.'ಹಿಂದೂ ಮಹಾಸಭಾ ಸಿಂಧ್ ಪ್ರಾಂತ್ಯದಲ್ಲೂ ಮುಸ್ಲಿಂ ಲೀಗ್ ಜತೆ ಮೈತ್ರಿ ಮಾಡಿಕೊಂಡಿತ್ತು. ವಿಭಜಕ ರಾಜಕೀಯದಲ್ಲಿ ನಂಬಿಕೆಯಿರಿಸಿಕೊಂಡು ಅದನ್ನು ಕಾರ್ಯರೂಪಕ್ಕೆ ತರುತ್ತಿರುವುದು ಬಿಜೆಪಿಯೇ ಹೊರತು, ಕಾಂಗ್ರೆಸ್ ಅಲ್ಲ' ಎಂದು ಟೀಕಿಸಿದರು.

'ಚುನಾವಣಾ ಬಾಂಡ್: ಜಗತ್ತಿನ ಅತಿ ದೊಡ್ಡ ಹಗರಣ'



ಹೈದರಾಬಾದ್: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಚುನಾವಣಾ ಬಾಂಡ್ ಯೋಜನೆಯು ಜಗತ್ತಿನ ಅತಿ ದೊಡ್ಡ ಹಗರಣವಾಗಿದೆ ಎಂದು ಶನಿವಾರ ಆರೋಪಿಸಿದರು.

ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಆಯೋಗದಲ್ಲಿ 'ತಮ್ಮ' ವ್ಯಕ್ತಿಗಳನ್ನು ಇಟ್ಟಿದ್ದಾರೆ ಎಂದು ಆರೋಪಿಸಿದರು. ಶ್ರೀಮಂತರ ₹16 ಲಕ್ಷ ಕೋಟಿ ಸಾಲ ಮನ್ನಾ ಮಾಡಿದ ಮೋದಿ, ಬಡವರ ಒಂದು ರೂಪಾಯಿ ಸಾಲವನ್ನೂ ಮನ್ನಾ ಮಾಡಲಿಲ್ಲ ಎಂದು ಹೇಳಿದರು.

'ಪ್ರಜಾಪ್ರಭುತ್ವ ಅಪಾಯದಲ್ಲಿದೆ' (ಜೈಪುರ ವರದಿ): 'ದೇಶದಲ್ಲಿ ಇಂದು ಪ್ರಜಾಪ್ರಭುತ್ವಕ್ಕೆ ಅಪಾಯ ಎದುರಾಗಿದೆ. ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ನಾಶಪಡಿಸಲಾಗುತ್ತಿದೆ. ಸಂವಿಧಾನವನ್ನು ಬದಲಿಸಲು ವ್ಯವಸ್ಥಿತ ಸಂಚು ರೂಪಿಸಲಾಗಿದೆ' ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಇಲ್ಲಿ ಆರೋಪಿಸಿದರು.

ಖಜುರಾಹೊ: ಕಣದಲ್ಲಿರುವ ಅಭ್ಯರ್ಥಿಗೆ 'ಇಂಡಿಯಾ' ಬೆಂಬಲ

ಭೋಪಾಲ್ (ಪಿಟಿಐ): ಖಜುರಾಹೊ ಲೋಕಸಭಾ ಕ್ಷೇತ್ರದಿಂದ ಸಮಾಜವಾದಿ ಪಕ್ಷದ (ಎಸ್‌ಪಿ) ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಮೀರಾ ಯಾದವ್ ಅವರ ನಾಮಪತ್ರ ತಿರಸ್ಕೃತಗೊಂಡಿರುವುದರಿಂದ ಕ್ಷೇತ್ರದಲ್ಲಿ ಉಳಿದವರ ಪೈಕಿ ಒಬ್ಬರನ್ನು ಬೆಂಬಲಿಸುವುದಾಗಿ ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಶನಿವಾರ ಹೇಳಿಕೆ ನೀಡಿದೆ.

ಮೈತ್ರಿ ಒಪ್ಪಂದದ ಭಾಗವಾಗಿ ಕಾಂಗ್ರೆಸ್ ಈ ಕ್ಷೇತ್ರವನ್ನು ಎಸ್‌ಪಿಗೆ ಬಿಟ್ಟುಕೊಟ್ಟಿತ್ತು. ಶುಕ್ರವಾರ ಚುನಾವಣಾಧಿಕಾರಿಯು ಮೀರಾ ಅವರ ನಾಮಪತ್ರ ತಿರಸ್ಕರಿಸಿದ್ದರು. 'ಬಿಜೆಪಿ ವಿರುದ್ಧವಾಗಿ ಯಾರಾದರೊಬ್ಬ ಅಭ್ಯರ್ಥಿಯನ್ನು ನಾವು ಬೆಂಬಲಿಸುತ್ತೇವೆ. ಬಿಜೆಪಿಗೆ ಪಾಠ ಕಲಿಸುತ್ತೇವೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದರು.

ಕಾಂಗ್ರೆಸ್: 6 ಅಭ್ಯರ್ಥಿಗಳ ಘೋಷಣೆ

ಭೋಪಾಲ್/ ಪಣಜಿ (ಪಿಟಿಐ): ಕಾಂಗ್ರೆಸ್ ಪಕ್ಷವು ಮಧ್ಯಪ್ರದೇಶದ ಮೂರು ಮತ್ತು ಗೋವಾದ ಎರಡು ಲೋಕಸಭಾ ಕ್ಷೇತ್ರಗಳಿಗೆ ಶನಿವಾರ ಅಭ್ಯರ್ಥಿಗಳನ್ನು ಪ್ರಕಟಿಸಿತು.



ಮಧ್ಯಪ್ರದೇಶದ ಖಂಡ್ವಾ ಕ್ಷೇತ್ರಕ್ಕೆ ನರೇಂದ್ರ ಪಟೇಲ್, ಗ್ವಾಲಿಯರ್‌ಗೆ ಮಾಜಿ ಶಾಸಕ ಪ್ರವೀಣ್ ಪಾಠಕ್ ಮತ್ತು ಮೊರೆನಾಗೆ ಇನ್ನೊಬ್ಬ ಮಾಜಿ ಶಾಸಕ ಸತ್ಯಪಾಲ್ ಸಿಂಗ್ ಸಿಕರ್ವಾರ್ ಅವರನ್ನು ಅಭ್ಯರ್ಥಿಗಳಾಗಿ ಘೋಷಿಸಿದೆ.

ಇದರೊಂದಿಗೆ ಮಧ್ಯಪ್ರದೇಶದ 29 ಲೋಕಸಭಾ ಕ್ಷೇತ್ರಗಳಲ್ಲಿ 28ಕ್ಕೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ. ಇಲ್ಲಿನ ಒಂದು ಕ್ಷೇತ್ರವನ್ನು (ಖಜುರಾಹೊ) ಸಮಾಜವಾದಿ ಪಕ್ಷಕ್ಕೆ ಬಿಟ್ಟುಕೊಟ್ಟಿದೆ. ಪಾಠಕ್ ಅವರು ಗ್ವಾಲಿಯರ್‌ನಲ್ಲಿ ಬಿಜೆಪಿಯ ಭರತ್ ಸಿಂಗ್ ಕುಶ್ವಾಹ ವಿರುದ್ಧ ಪೈಪೋಟಿ ನಡೆಸುವರು.

ಕೇಂದ್ರದ ಮಾಜಿ ಸಚಿವ ರಮಾಕಾಂತ್ ಖಲಪ್ ಅವರನ್ನು ಉತ್ತರ ಗೋವಾ ಮತ್ತು ವಿರಿಯಾಟೊ ಫೆರ್ನಾಂಡಿಸ್ ಅವರನ್ನು ದಕ್ಷಿಣ ಗೋವಾ ಕ್ಷೇತ್ರದಲ್ಲಿ ಕಣಕ್ಕಿಳಿಸಿದೆ.

ದಾದ್ರಾಕ್ಕೆ ಅಜಿತ್ ಮಹ್ಲಾ: ದಾದ್ರಾ ಮತ್ತು ನಗರಹವೇಲಿ ಲೋಕಸಭಾ ಕ್ಷೇತ್ರಕ್ಕೆ (ಎಸ್‌ಸಿ ಮೀಸಲು) ಅಜಿತ್ ಮಹ್ಲಾ ಅವರನ್ನು ಕಾಂಗ್ರೆಸ್ ತನ್ನ ಅಭ್ಯರ್ಥಿಯಾಗಿ ಘೋಷಿಸಿದೆ.

ಮಣಿಪುರ: ಚುನಾವಣಾ ಚಟುವಟಿಕೆ ವಿರಳ

ಇಂಫಾಲ್ (ಪಿಟಿಐ): ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ದೇಶದಾದ್ಯಂತ ಪ್ರಚಾರ ಬಿರುಸು ಪಡೆದುಕೊಳ್ಳುತ್ತಿದೆ. ಆದರೆ, ಹಿಂಸಾಚಾರಪೀಡಿತ ಮಣಿಪುರದಲ್ಲಿ ಮಾತ್ರ ಚುನಾವಣಾ ಸಂಬಂಧಿ ಚಟುವಟಿಕೆಗಳು ವಿರಳವಾಗಿವೆ. ರಾಜ್ಯದಲ್ಲಿ ಚುನಾವಣೆಯ ಸುಳಿವು ನೀಡುವ ಏಕೈಕ ಅಂಶ ಎಂದರೆ, ಅದು ಮತದಾನವನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ಚುನಾವಣಾ ಆಯೋಗ ಅಲ್ಲಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳು.

ಪ್ರಮುಖ ಪಕ್ಷಗಳ ನಾಯಕರು ರಾಜ್ಯಕ್ಕೆ ಪ್ರಚಾರಕ್ಕಾಗಿ ಬಾರದಿರುವುದು ಕೂಡ ಮಣಿಪುರದ ಉತ್ಸಾಹಹೀನ ಸ್ಥಿತಿಗೆ ಕಾರಣವಾಗಿದೆ. ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಯಾವುದೇ ಪಕ್ಷದ ತಾರಾ ಪ್ರಚಾರಕರು ಇದುವರೆಗೆ ಮಣಿಪುರಕ್ಕೆ ಭೇಟಿ ನೀಡಿಲ್ಲ.

ನೀತಿಸಂಹಿತೆಯ ಚೌಕಟ್ಟಿನ ಒಳಗೆ ಪ್ರಚಾರದ ಮೇಲೆ ಯಾವುದೇ ನಿರ್ಬಂಧ ಇಲ್ಲ ಎಂದು ಚುನಾವಣಾ ಆಯೋಗ ಹೇಳುತ್ತಿದ್ದರೂ, ರಾಜ್ಯದಲ್ಲಿನ ಸೂಕ್ಷ್ಮಪರಿಸ್ಥಿತಿಯಿಂದಾಗಿ ಪಕ್ಷಗಳ ಪ್ರತಿನಿಧಿಗಳು ಸಂಯಮದ ಚುನಾವಣಾ ಚಟುವಟಿಕೆಗಳ ಮೊರೆ ಹೋಗಿದ್ದಾರೆ.

ಇಂಥ ಸೂಕ್ಷ್ಮ ವಾತಾವರಣದ ನಡುವೆಯೇ ಕೆಲವು ಅಭ್ಯರ್ಥಿಗಳು ಮತದಾರರನ್ನು ತಲುಪಲು ಅಸಾಂಪ್ರದಾಯಿಕ ವಿಧಾನದ ಮೊರೆ ಹೋಗಿದ್ದಾರೆ. ಅಭ್ಯರ್ಥಿಗಳು ತಮ್ಮ ಮನೆಗಳಲ್ಲಿ, ಪಕ್ಷದ ಕಚೇರಿಗಳಲ್ಲಿ ಸಭೆ ನಡೆಸುತ್ತಿದ್ದರೆ, ಅವರ ಬೆಂಬಲಿಗರು ಮನೆ ಮನೆ ಭೇಟಿ ಮೂಲಕ ಪ್ರಚಾರ ಮಾಡುತ್ತಿದ್ದಾರೆ.

ರಾಜ್ಯದ ಶಿಕ್ಷಣ ಮತ್ತು ಕಾನೂನು ಸಚಿವರಾದ ಬಸಂತಕುಮಾರ್ ಸಿಂಗ್ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ತಮ್ಮ ಮನೆ ಮತ್ತು ಪಕ್ಷದ ಕಚೇರಿಯಲ್ಲಿ ಸಭೆಗಳನ್ನು ನಡೆಸುತ್ತಿದ್ದಾರೆ. ಇದೇ ರೀತಿ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಕಾಂಗ್ರೆಸ್ ಅಭ್ಯರ್ಥಿ ಅಂಗೋಮ್ಚಾ ಬಿಮೊಲ್ ಅಕೊಯಿಜಮ್ ಅವರು ಬಹುತೇಕ ತಮ್ಮ ಮನೆಯಲ್ಲಿಯೇ ಮತದಾರರನ್ನು ಭೇಟಿ ಮಾಡುತ್ತಿದ್ದಾರೆ.

ಸದ್ಯ ಪರಿಸ್ಥಿತಿ ಹತೋಟಿಯಲ್ಲಿರುವಂತೆ ಕಾಣುತ್ತಿದ್ದರೂ, ಯಾವುದೇ ರೀತಿಯ ಅಬ್ಬರದ ಪ್ರಚಾರವು ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡಬಹುದು. ಹಾಗಾಗಿ ಯಾವುದೇ ಪಕ್ಷ ಅಪಾಯ ತಂದುಕೊಳ್ಳಲು ಸಿದ್ಧವಿಲ್ಲ ಎಂದು ರಾಜ್ಯದ ಹಿರಿಯ ಅಧಿಕಾರಿಯೊಬ್ಬರು ಪ್ರತಿಪಾದಿಸಿದರು.

ಇದೇ ರೀತಿ ಕುಕಿಗಳ ಪ್ರಾಬಲ್ಯದ ಮೋರೆಹ್ ಮತ್ತು ಚುರಚಾಂದ್‌ಪುರ ಪ್ರಾಂತ್ಯಗಳಲ್ಲಿಯೂ ಚುನಾವಣಾ ಸಂಬಂಧಿ ಚಟುವಟಿಕೆಗಳು ವಿರಳ. ಕೆಲವು ಕುಕಿ ಗುಂಪುಗಳು ಚುನಾವಣೆಯನ್ನು ಬಹಿಷ್ಕರಿಸುವಂತೆಯೂ ಕರೆ ನೀಡಿವೆ.

ಮೈತೇಯಿಗಳು ಹೆಚ್ಚಾಗಿರುವ ಇಂಫಾಲ್ ಕಣಿವೆಯಲ್ಲಿ ವ್ಯಾಪಾರ ಚಟುವಟಿಕೆ ಮತ್ತು ಸಂಸ್ಥೆಗಳು ಪುನರಾರಂಭಗೊಳ್ಳುತ್ತಿವೆ. ಆದರೂ ರಕ್ಷಣಾ ಪಡೆಗಳು ಬೀಡು ಬಿಟ್ಟಿರುವುದು ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿರುವುದನ್ನು ಸೂಚಿಸುತ್ತಿದೆ. ಮಣಿಪುರವು ಶಾಂತಿ ಮತ್ತು ಸ್ಥಿರತೆಯನ್ನು ಬಯಸುತ್ತಿದ್ದು, ರಾಜ್ಯದಲ್ಲಿ ನಡೆಯುತ್ತಿರುವ ನಿಯಂತ್ರಿತ ಚುನಾವಣಾ ಚಟುವಟಿಕೆಗಳು ಕೂಡ ಅದನ್ನೇ ಪ್ರತಿಬಿಂಬಿಸುತ್ತಿವೆ.



ಮಣಿಪುರದಲ್ಲಿ ಚುನಾವಣಾ ಆಯೋಗವು ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಮತದಾನವನ್ನು ಪ್ರೋತ್ಸಾಹಿಸಲು ಜಾಹೀರಾತು ಫಲಕ ಅಳವಡಿಸಿರುವುದು –ಪಿಟಿಐ ಚಿತ್ರ

> ಮಣಿಪುರದಲ್ಲಿ ಭಿತ್ತಿಪತ್ರಗಳು ಕಾಣುತ್ತಿಲ್ಲ, ಬೃಹತ್ ರ‍್ಯಾಲಿಗಳಿಲ್ಲ, ನಾಯಕರ ಪ್ರಚಾರ ಸಭೆಗಳಿಲ್ಲ. ಲೋಕಸಭಾ ಚುನಾವಣೆಯ ವಾತಾವರಣವೇ ಇಲ್ಲಿ ಕಾಣುತ್ತಿಲ್ಲ.

ನಿರಾಶ್ರಿತರ ಶಿಬಿರದಲ್ಲಿರುವವರ ನಿರಾಸಕ್ತಿ

ಕಳೆದ ವರ್ಷದ ಮೇ 3ರಂದು ಮೈತೇಯಿ ಸಮುದಾಯದ ಮೀಸಲಾತಿ ಬೇಡಿಕೆ ವಿರೋಧಿಸಿ ಕುಕಿಗಳು 'ಬುಡಕಟ್ಟು ಏಕತಾ ರ‍್ಯಾಲಿ' ನಡೆಸಿದ ನಂತರ ಆರಂಭವಾಗಿದ್ದ ಹಿಂಸಾಚಾರದಿಂದ ಇದುವರೆಗೆ ಮಣಿಪುರದಲ್ಲಿ ಕನಿಷ್ಠ 219 ಮಂದಿ ಸಾವನ್ನಪ್ಪಿದ್ದಾರೆ. ಐದು ಬಯಲ ಜಿಲ್ಲೆಗಳು ಮತ್ತು ಮೂರು ಬೆಟ್ಟ ಶ್ರೇಣಿ ಜಿಲ್ಲೆಗಳ 50 ಸಾವಿರಕ್ಕೂ ಹೆಚ್ಚು ಮಂದಿ ನಿರಾಶ್ರಿತರ ಶಿಬಿರಗಳಲ್ಲಿ ಬದುಕುತ್ತಿದ್ದಾರೆ.

ರಾಜ್ಯದಲ್ಲಿ ಏಪ್ರಿಲ್ 19 ಮತ್ತು 26ರಂದು ಎರಡು ಹಂತದಲ್ಲಿ ಲೋಕಸಭಾ ಚುನಾವಣೆ ನಡೆಯಲಿದ್ದು, ನಿರಾಶ್ರಿತರ ಶಿಬಿರಗಳಲ್ಲಿಯೇ ಮತಗಟ್ಟೆಗಳನ್ನು ನಿರ್ಮಿಸಲಾಗಿದೆ. ಆದರೆ, ಸಂತ್ರಸ್ತರು ಚುನಾವಣೆಯ ಬಗ್ಗೆ ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ.

> **ನಮಗೆ ಚುನಾವಣೆ ಮುಖ್ಯ. ಆದರೆ, ರ‍್ಯಾಲಿಗಳನ್ನು ನಡೆಸುವ ಮೂಲಕ ಜನರ ಗಾಯದ ಮೇಲೆ ಉಪ್ಪು ಸುರಿಯಲು ಆಗಲ್ಲ. ಚುನಾವಣಾ ಹಬ್ಬವನ್ನು ಅಬ್ಬರದಿಂದ ಆಚರಿಸಲು ಆಗುತ್ತಿಲ್ಲ**
> **ಎ.ಶಾರದಾ ದೇವಿ,** ಮಣಿಪುರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷೆ

> **ನಾನು ರ‍್ಯಾಲಿ, ಸಾರ್ವಜನಿಕ ಸಭೆ ನಡೆಸಿದ್ದರೆ ಉತ್ತಮವಾಗಿರುತ್ತಿತ್ತು. ಆದರೆ, ನಿಯಂತ್ರಿತ ಚುನಾವಣಾ ಪ್ರಚಾರದ ಮಾದರಿಯನ್ನು ಅನುಸರಿಸಲು ನಿರ್ಧರಿಸಿದ್ದೇನೆ**
> **ಮಹೇಶ್ವರ್ ತೌನೋಜಮ್,** ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಅಭ್ಯರ್ಥಿ

ಚುಟುಕು

ಕಲ್ಯಾಣ್: ಏಕನಾಥ ಶಿಂದೆ ಪುತ್ರ ಕಣಕ್ಕೆ



ಶ್ರೀಕಾಂತ್ ಶಿಂದೆ

ನಾಗಪುರ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಮಗ, ಹಾಲಿ ಸಂಸದರೂ ಆಗಿರುವ ಶ್ರೀಕಾಂತ್ ಶಿಂದೆ ಅವರು ಕಲ್ಯಾಣ್ ಲೋಕಸಭಾ ಕ್ಷೇತ್ರದಲ್ಲಿ 'ಮಹಾಯುತಿ' ಮೈತ್ರಿಕೂಟದ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ.

ಕಲ್ಯಾಣ್ ಮತ್ತು ಠಾಣೆ ಕ್ಷೇತ್ರಗಳನ್ನು ತನಗೆ ಬಿಟ್ಟು ಕೊಡಬೇಕು ಎಂದು ಬಿಜೆಪಿ ಪಟ್ಟುಹಿಡಿದಿತ್ತು. ಇದು 'ಮಹಾಯುತಿ' ಮೈತ್ರಿಯಲ್ಲಿ ಬಿಕ್ಕಟ್ಟಿಗೆ ಕಾರಣವಾಗಿತ್ತು. ಆದರೆ, ಈ ಕ್ಷೇತ್ರವನ್ನು ತನ್ನಲ್ಲೇ ಉಳಿಸಿಕೊಳ್ಳಲು ಶಿವಸೇನಾ ಯಶಸ್ವಿಯಾಗಿದೆ.

ವೃತ್ತಿಯಲ್ಲಿ ವೈದ್ಯರಾಗಿರುವ ಶ್ರೀಕಾಂತ್ ಅವರು ಶಿವಸೇನಾದ (ಯುಬಿಟಿ) ವೈಶಾಲಿ ದರೇಕರ್ ರಾಣೆ ಅವರನ್ನು ಎದುರಿಸಲಿದ್ದಾರೆ. ಶ್ರೀಕಾಂತ್, 2014 ಮತ್ತು 2019 ರಲ್ಲಿ ಇದೇ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾಗಿದ್ದರು. ಶ್ರೀಕಾಂತ್ ಅವರನ್ನು ಕಣಕ್ಕಿಳಿಸುವುದಕ್ಕೆ ಕಲ್ಯಾಣ್ ಕ್ಷೇತ್ರದ ಬಿಜೆಪಿಯ ಕೆಲವು ನಾಯಕರು ಈಚೆಗೆ ವಿರೋಧ ವ್ಯಕ್ತಪಡಿಸಿದ್ದರು. ಮಹಾರಾಷ್ಟ್ರ ಉಪ ಮುಖ್ಯಮಂತ್ರಿ, ಬಿಜೆಪಿಯ ದೇವೇಂದ್ರ ಫಡಣವೀಸ್ ಅವರೇ ಶ್ರೀಕಾಂತ್ ಹೆಸರು ಘೋಷಿಸಿದರು. 'ಶ್ರೀಕಾಂತ್ ಶಿಂದೆ ಅವರು ಕಲ್ಯಾಣ್ ಕ್ಷೇತ್ರದ ಮಹಾಯುತಿ ಅಭ್ಯರ್ಥಿಯಾಗಿದ್ದಾರೆ. ನಾವೆಲ್ಲರೂ ಅವರ ಜತೆಗಿದ್ದೇವೆ. ಅವರನ್ನು ಕಣಕ್ಕಿಳಿಸುವುದಕ್ಕೆ ಯಾವುದೇ ವಿರೋಧ ಇಲ್ಲ' ಎಂದು ಫಡಣವೀಸ್ ಅವರು ಹೇಳಿದರು.

'ಕಚ್ಚತೀವು: ರಾಜಕೀಯ ದಾಳ'

ಚೆನ್ನೈ (ಪಿಟಿಐ): ಪರಿಹಾರವಾಗಿರುವ ಕಚ್ಚತೀವು ಸಮಸ್ಯೆಯನ್ನು ಬಿಜೆಪಿಯು ಮುಂದಿನ ಲೋಕಸಭಾ ಚುನಾವಣೆ ದೃಷ್ಟಿಯಿಂದ ರಾಜಕೀಯ ದಾಳವಾಗಿ ಬಳಸಿಕೊಳ್ಳುತ್ತಿದ್ದು, ಇದರಿಂದ ಯಾವುದೇ ಉಪಯೋಗವಾಗುವುದಿಲ್ಲ ಎಂದು ಕೇಂದ್ರ ಮಾಜಿ ಸಚಿವ ಪಿ.ಚಿದಂಬರಂ ಶನಿವಾರ ತಿಳಿಸಿದ್ದಾರೆ.

'ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಎಸ್.ಜೈಶಂಕರ್ ಅವರು ತಾವು ತಮಿಳರು ಎಂದು ಹೇಳಿಕೊಳ್ಳುತ್ತಾರೆ. ಹಾಗಾದರೆ ಅವರು ತಮಿಳ್ ಇಸೈ ಸೌಂದರರಾಜನ್, ಎಲ್.ಮುರುಗನ್ ಮತ್ತು ಕೆ.ಅಣ್ಣಾಮಲೈ ಅವರಂತೆ ತಮಿಳುನಾಡಿನಿಂದಲೇ ಚುನಾವಣೆಗೆ ಸ್ಪರ್ಧಿಸಿ, ಕಚ್ಚತೀವು ವಿಷಯದ ಬಗ್ಗೆ ಚರ್ಚಿಸಲಿ. ಯಾಕೆ ಅವರು ಇಲ್ಲಿಂದ ಸ್ಪರ್ಧಿಸಲ್ಲ. ಯಾಕೆ ಪ್ರಧಾನಿ ನರೇಂದ್ರ ಮೋದಿಯವರ ಹಿಂದೆ ಅವಿತುಕೊಂಡು ಈ ವಿಷಯದ ಬಗ್ಗೆ ಮಾತನಾಡುತ್ತಾರೆ' ಎಂದು ಪ್ರಶ್ನಿಸಿದರು.

ಜಗಿ–ನೆಗೆದಾಟ

ವೈಎಸ್‌ಆರ್‌ಸಿಪಿ ಶಾಸಕ ಕಾಂಗ್ರೆಸ್‌ಗೆ

ಕಡಪ (ಆಂಧ್ರ ಪ್ರದೇಶ): ಪೂತಲಪಟ್ಟು ಕ್ಷೇತ್ರದ ಶಾಸಕ ಎಂ.ಎಸ್. ಬಾಬು ಅವರು ಆಡಳಿತಾರೂಢ ವೈಎಸ್‌ಆರ್‌ಸಿಪಿ ತೊರೆದು ಶನಿವಾರ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ಎಪಿಸಿಸಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಅವರ ಸಮ್ಮುಖದಲ್ಲಿ ಬಾಬು ಅವರು ಪಕ್ಷಕ್ಕೆ ಸೇರಿದರು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಾಬು ಅವರಿಗೆ ವೈಎಸ್‌ಆರ್‌ಸಿಪಿ ಟಿಕೆಟ್ ನಿರಾಕರಿಸಿತ್ತು.

ಚುನಾವಣೆಗೂ ಮುನ್ನ ಬಾಬು ಅವರು ಕಾಂಗ್ರೆಸ್‌ಗೆ ಸೇರಿರುವುದರಿಂದ ವೈಎಸ್‌ಆರ್‌ಸಿಪಿಗೆ ಹಿನ್ನಡೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಶರ್ಮಿಳಾ ಅವರು ಬಾಬು ಅವರನ್ನು ಪಕ್ಷಕ್ಕೆ ಆಹ್ವಾನಿಸಿದ್ದರು ಎಂದೂ ಹೇಳಿವೆ.

ಎಂಥಾ ಮಾತು!



ಆಡಳಿತಾರೂಢ ಬಿಜೆಪಿಯು ರಾಮನ ಹೆಸರಿನಲ್ಲಿ ನಾಥೂರಾಮ್‌ನ ಕೋಮುವಾದಿ ಕಾರ್ಯಸೂಚಿಯನ್ನು ಪ್ರಚಾರ ಮಾಡುತ್ತಿದೆ. ವ್ಯಕ್ತಿವಾದವು ಪರಿವಾರವಾದಕ್ಕಿಂತಲೂ ಹೆಚ್ಚು ಅಪಾಯಕಾರಿ. ಗಾಂಧಿ–ನೆಹರೂ ಕುಟುಂಬದ ಕೊಡುಗೆಗಳನ್ನು ಕಡೆಗಣಿಸುವ ಯತ್ನ ನಡೆಯುತ್ತಿದೆ. ಬಿಜೆಪಿಯು ಹಿಂದೂ ಧರ್ಮದ ಹಿರಿಮೆಗೆ ಚ್ಯುತಿ ತರಲು ಯತ್ನಿಸುತ್ತಿದೆ. ರಾಮನ ಪರಿಕಲ್ಪನೆಯಲ್ಲಿ ದ್ವೇಷಕ್ಕೆ ಸ್ಥಾನವಿಲ್ಲ. ಬಿಜೆಪಿಯು ರಾಮನನ್ನು ನಂಬುವ ಜನರಿಗೆ ಮೋಸ ಮಾಡುತ್ತಿದೆ

ಕನ್ಹಯ್ಯ ಕುಮಾರ್, ಕಾಂಗ್ರೆಸ್ ನಾಯಕ

ಕ್ಷೇತ್ರ ಮಹಾತ್ಮೆ



ಅಸ್ಸಾಂನ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ಜೋರ್ಹಾಟ್ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಮತ್ತು ಕಾಂಗ್ರೆಸ್ ಪ್ರಬಲ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿದೆ. ಕಳೆದ ಚುನಾವಣೆಯಲ್ಲಿ ಜಯಭೇರಿ ಬಾರಿಸಿದ್ದ ತಪನ್ ಕುಮಾರ್ ಗೊಗೋಯಿ ಅವರನ್ನು ಬಿಜೆಪಿ ಮತ್ತೆ ಅಖಾಡಕ್ಕಿಳಿಸಿದರೆ, ಅವರಿಗೆ ಪ್ರತಿಸ್ಪರ್ಧಿಯಾಗಿ ಕಾಂಗ್ರೆಸ್ ಪಕ್ಷವು ಪ್ರಮುಖ ನಾಯಕ ಗೌರವ್ ಗೊಗೋಯಿ ಅವರನ್ನು ಸ್ಪರ್ಧಿಯನ್ನಾಗಿಸಿದೆ. ಕಳೆದೆರಡು ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆದ್ದಿರುವುದರಿಂದ ಬಿಜೆಪಿಯು ಈ ಬಾರಿಯೂ ಗೆಲುವಿನ ನಿರೀಕ್ಷೆಯಲ್ಲಿದೆ. 2019ರ ಚುನಾವಣೆಯಲ್ಲಿ ತಪನ್ ಕುಮಾರ್ ಅವರು 82,653 ಮತಗಳ ಅಂತರದಿಂದ ಎದುರಾಳಿ, ಕಾಂಗ್ರೆಸ್‌ನ ಸುಶಾಂತ್ ಬೊರ್ಗೊಹೈನ್ ಅವರನ್ನು ಮಣಿಸಿದ್ದರು. 2009ರ ಲೋಕಸಭಾ ಚುನಾವಣೆಯಲ್ಲಿ ಈ ಕ್ಷೇತ್ರದ ಗೆಲುವು ಕಾಂಗ್ರೆಸ್ ಪಾಲಾಗಿತ್ತು. ಅಸ್ಸಾಂನ ಮಾಜಿ ಮುಖ್ಯಮಂತ್ರಿ ತರುಣ್ ಗೊಗೋಯಿ ಅವರ ಪುತ್ರರಾಗಿರುವ ಗೌರವ್, ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪನಾಯಕರೂ ಹೌದು. ರಾಜ್ಯ ಮತ್ತು ರಾಷ್ಟ್ರ ಮಟ್ಟದ ರಾಜಕಾರಣದಲ್ಲಿ ಚಿರಪರಿಚಿತರಾಗಿದ್ದಾರೆ. ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರ ಘಟನೆಯಿಂದಾಗಿ ಈಶಾನ್ಯ ರಾಜ್ಯಗಳ ಜನರು ಬಿಜೆಪಿ ಸರ್ಕಾರದ ವಿರುದ್ಧ ಅಸಮಾಧಾನಗೊಂಡಿದ್ದು, ಈ ಬಾರಿ ತಮ್ಮ ಕೈಹಿಡಿಯಲಿದ್ದಾರೆ ಎಂಬುದು ಗೌರವ್ ಅವರ ವಿಶ್ವಾಸವಾಗಿದೆ. ತಪನ್ ಕುಮಾರ್ ಅವರು ರಾಜ್ಯ ಸಚಿವರಾಗಿಯೂ ಕಾರ್ಯನಿರ್ವಹಿಸಿರುವ ಅನುಭವ ಹೊಂದಿದ್ದು, ಈ ಬಾರಿ ಜನರು ಯಾರ ಕಡೆಗೆ ವಾಲಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.

ಮುಖಾಮುಖಿ


ತ್ರಿಪುರಾ ಪಶ್ಚಿಮ



ವಿಪ್ಲವ್ ಕುಮಾರ್ ದೇವ್ (ಬಿಜೆಪಿ)

ಸಿಪಿಎಂನ ಭದ್ರಕೋಟೆಯಾಗಿದ್ದ ತ್ರಿಪುರಾದಲ್ಲಿ ಪ್ರಬಲ ಹಿಂದುತ್ವ ನಾಯಕರಾಗಿ ಮುಂಚೂಣಿಗೆ ಬಂದಿರುವ ವಿಪ್ಲವ್ ಕುಮಾರ್ ದೇವ್ ಅವರು ತ್ರಿಪುರಾ ಪಶ್ಚಿಮ ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆಗಿಳಿದಿದ್ದಾರೆ. ರಾಜ್ಯದಲ್ಲಿ ಆಡಳಿತ ನಡೆಸಿದ್ದ ಎಡರಂಗದ ಜೊತೆಗೆ ಸೆಣಸಿ 2018ರಲ್ಲಿ ಬಿಜೆಪಿ ಸರ್ಕಾರ ರಚಿಸುವಲ್ಲಿ ವಿಪ್ಲವ್ ಅವರು ಮಹತ್ವದ ಪಾತ್ರ ವಹಿಸಿದ್ದಾರೆ. ಇದೇ ಕಾರಣಕ್ಕೆ ಅವರಿಗೆ ಬಿಜೆಪಿಯು ಮುಖ್ಯಮಂತ್ರಿ ಸ್ಥಾನವನ್ನು ನೀಡಿತ್ತು. ಸದಾ ವಿವಾದಾತ್ಮಕ ಹೇಳಿಕೆಗಳ ಮೂಲಕ ಚರ್ಚೆಯಲ್ಲಿರುತ್ತಿದ್ದ ವಿಪ್ಲವ್ ಅವರು ಅನಂತರ ಪಕ್ಷಕ್ಕೂ ತಲೆನೋವಾಗಿ ಪರಿಣಮಿಸಿದ್ದರು. ಈ ಕಾರಣಕ್ಕಾಗಿಯೇ 2022ರಲ್ಲಿ ವಿಪ್ಲವ್ ಅವರ ಬದಲಿಗೆ ಪಕ್ಷದ ಹಿರಿಯ ನಾಯಕ ಮಾಣಿಕ್ ಸಹಾ ಅವರನ್ನು ಮುಖ್ಯಮಂತ್ರಿಯಾಗಿ ಬಿಜೆಪಿ ನೇಮಕ ಮಾಡಿತ್ತು. ವಿಪ್ಲವ್ ಅವರು ಬಿಜೆಪಿ ತ್ರಿಪುರಾ ಘಟಕದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು.

V/S



ಆಶಿಶ್ ಕುಮಾರ್ ಸಹಾ (ಕಾಂಗ್ರೆಸ್)

ತ್ರಿಪುರಾ ಪಶ್ಚಿಮ ಕ್ಷೇತ್ರದಲ್ಲಿ ಈ ಬಾರಿ ಗೆಲುವಿನ ನಿರೀಕ್ಷೆಯಲ್ಲಿರುವ ಕಾಂಗ್ರೆಸ್, ಅಭ್ಯರ್ಥಿಯಾಗಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಆಶಿಶ್ ಕುಮಾರ್ ಸಹಾ ಅವರನ್ನು ಸ್ಪರ್ಧೆಗಿಳಿಸಿದೆ. ಇವರು ಸ್ಥಳೀಯವಾಗಿ ಪ್ರಭಾವಿ ನಾಯಕರಾಗಿರುವುದು ಕಾಂಗ್ರೆಸ್‌ನ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಸಿಪಿಎಂ ಜೊತೆ ಮೈತ್ರಿ ಮಾಡಿಕೊಂಡದ್ದನ್ನು ವಿರೋಧಿಸಿ 2016ರಲ್ಲಿ ಪಕ್ಷ ತೊರೆದು ಟಿಎಂಸಿಗೆ ಸೇರ್ಪಡೆಗೊಂಡಿದ್ದ ಆಶಿಶ್, 2016ರಲ್ಲಿ ಕಮಲ ಪಾಳಯಕ್ಕೆ ಸೇರಿದ್ದರು. 2018ರಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಶಾಸಕರಾಗಿಯೂ ಆಯ್ಕೆಯಾಗಿದ್ದರು. 2022ರಲ್ಲಿ ಕಾಂಗ್ರೆಸ್‌ಗೆ ಮರಳಿದ್ದರು. 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಟೌನ್ ಬೋರ್ಡೋವಾಲಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಮಾಣಿಕ್ ಸಹಾ ವಿರುದ್ಧ ಸ್ಪರ್ಧಿಸಿ ಸೋತಿದ್ದರು.

ಎನ್‌ಐಎ ಮೇಲೆ ಹಳ್ಳಿಗರಿಂದ ದಾಳಿ–ದೂರು • ಗ್ರಾಮಸ್ಥರ ವಿರುದ್ಧ ದಾಳಿ ನಡೆಸಿದ್ದು ಎನ್‌ಐಎ– ಮಮತಾ ಆರೋಪ

ಭೂಪತಿನಗರ: ಇಬ್ಬರು ಸಂಚುಕೋರರು ವಶಕ್ಕೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ಶನಿವಾರ ಶೋಧ ಕಾರ್ಯ ನಡೆಸುತ್ತಿದ್ದ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ತಂಡದ ಮೇಲೆ ಸ್ಥಳೀಯರ ಗುಂಪು ದಾಳಿ ನಡೆಸಿದ್ದು, ಒಬ್ಬ ಅಧಿಕಾರಿಗೆ ಗಾಯವಾಗಿದೆ. ಇದರ ನಡುವೆಯೂ ಎನ್‌ಐಎ ತಂಡ, 2022ರ ಸ್ಫೋಟ ಪ್ರಕರಣದ ಇಬ್ಬರು ಪ್ರಮುಖ ಸಂಚುಕೋರರನ್ನು ಬಂಧಿಸಿದೆ.

ಎನ್‌ಐಎ ನಡೆಯನ್ನು ತೀವ್ರವಾಗಿ ಖಂಡಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, 'ಎನ್‌ಐಎ ಅಧಿಕಾರಿಗಳೇ ಭೂಪತಿನಗರದಲ್ಲಿ ಗ್ರಾಮಸ್ಥರ ಮೇಲೆ ದಾಳಿ ನಡೆಸಿದ್ದಾರೆ. ಈ ಅಧಿಕಾರಿಗಳು ಮಧ್ಯರಾತ್ರಿ ಹಲವಾರು ಮನೆಗಳಿಗೆ ನುಗ್ಗಿದ್ದಾರೆ. ಆಗ ಗ್ರಾಮಸ್ಥರು ಆತ್ಮರಕ್ಷಣೆಗೆ ಯತ್ನಿಸಿದ್ದಾರೆ' ಎಂದು ಸಮರ್ಥಿಸಿಕೊಂಡಿದ್ದಾರೆ.

ಇನ್ನೊಂದೆಡೆ, ಬಿಜೆಪಿಯ ರಾಷ್ಟ್ರೀಯ ವಕ್ತಾರ ಶೆಹಜಾದ್ ಪೂನಾವಾಲಾ ಅವರು, ಎನ್‌ಐಎ ಮೇಲಿನ ದಾಳಿಯನ್ನು ರಾಜ್ಯ ಪ್ರಾಯೋಜಿತ ದಾಳಿ ಎಂದು ಬಣ್ಣಿಸಿದ್ದಾರೆ. ಅಲ್ಲದೆ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೇ ಹಿಂಸಾಚಾರವನ್ನು ಪ್ರಚೋದಿಸುತ್ತಿದ್ದಾರೆ ಎಂದೂ ಆರೋಪಿಸಿದ್ದಾರೆ.

ಘಟನೆ ವಿವರ: 'ಪಶ್ಚಿಮ ಬಂಗಾಳದ ಭೂಪತಿನಗರದ ಮನೆಯೊಂದರಲ್ಲಿ 2022ರ ಡಿಸೆಂಬರ್‌ನಲ್ಲಿ ನಡೆದಿದ್ದ ಸ್ಫೋಟ ಪ್ರಕರಣದಲ್ಲಿ ಮೂವರು ಮೃತಪಟ್ಟಿದ್ದರು. ಈ ಪ್ರಕರಣ ಕುರಿತು ದೊರೆತಿದ್ದ ಮಹತ್ವದ ಮಾಹಿತಿ ಮೇರೆಗೆ ಮೇದಿನಿಪುರ ಜಿಲ್ಲೆಗೆ ಎನ್‌ಐಎ ತಂಡ ತೆರಳಿದ್ದಾಗ, ಅಲ್ಲಿನ ಕೆಲವರ ಗುಂಪು ತೀವ್ರ ವಿರೋಧ ವ್ಯಕ್ತಪಡಿಸಿತು. ಇದರ ನಡುವೆಯೂ ಇಬ್ಬರು ಪ್ರಮುಖ ಸಂಚುಕೋರರನ್ನು ಬಂಧಿಸಲಾಗಿದೆ' ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

'ಬಾಲೈ ಚರಣ್ ಮೈತಿ ಮತ್ತು ಮನೋಬ್ರತಾ ಜಾನಾ ಬಂಧಿತರು. ಇವರ ಬಂಧನಕ್ಕೂ ಮುನ್ನ ಎನ್‌ಐಎ ತಂಡ ಜಾನಾ ಅವರ ಮನೆ ಸೇರಿದಂತೆ ಐದು ಸ್ಥಳಗಳಲ್ಲಿ ವ್ಯಾಪಕ ಶೋಧ ನಡೆಸಿತ್ತು. ಈ ವೇಳೆಯೇ ಜನರ ಗುಂಪು ಎನ್‌ಐಎ ತಂಡದ ಮೇಲೆ ದಾಳಿ ನಡೆಸಿತು. ಈ ದಾಳಿಯಲ್ಲಿ ಒಬ್ಬ ಅಧಿಕಾರಿಗೆ ಗಾಯಗಳಾಗಿದ್ದು, ತನಿಖಾ ಸಂಸ್ಥೆಗೆ ಸೇರಿದ ವಾಹನ ಹಾನಿಗೊಂಡಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ದಾಳಿ ಕುರಿತು ಎನ್‌ಐಎ ಭೂಪತಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದೆ. ಘಟನೆಯ ನಂತರ ಪರಿಸ್ಥಿತಿಯನ್ನು ನಿಯಂತ್ರಿಸಲು ಹೆಚ್ಚಿನ ಪೊಲೀಸ್ ಪಡೆಯನ್ನು ಅಲ್ಲಿ ನಿಯೋಜಿಸಲಾಗಿದೆ.

ಇತ್ತೀಚೆಗೆ ಪಡಿತರ ವಿತರಣೆಯ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಆಡಳಿತಾರೂಢ ಟಿಎಂಸಿ ನಾಯಕ ಶಾಜಹಾನ್ ಶೇಖ್ ಅವರ ಮನೆ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ತಂಡ ಶೋಧ ನಡೆಸಿತ್ತು. ಆ ವೇಳೆ ಸಂದೇಶ್‌ಖಾಲಿಯಲ್ಲಿನ ಜನರ ಗುಂಪು ಇ.ಡಿಯ ಮೂವರು ಅಧಿಕಾರಿಗಳ ಮೇಲೆ ದಾಳಿ ನಡೆಸಿತ್ತು. ಅದರ ನೆನಪು ಮಾಸುವ ಮುನ್ನವೇ ಈ ಘಟನೆ ನಡೆದಿದೆ.

ಭೂಪತಿನಗರ ಸ್ಫೋಟಕ್ಕೆ ಸಂಬಂಧಿಸಿದಂತೆ ಆರಂಭದಲ್ಲಿ ಪಶ್ಚಿಮ ಬಂಗಾಳ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಈ ಪ್ರಕರಣವನ್ನು ಎನ್‌ಐಎಗೆ ವರ್ಗಾಯಿಸುವಂತೆ ಕೋರಿ ಕಲ್ಕತ್ತ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಕೆಯಾಗಿತ್ತು. ಆ ಬಳಿಕ ಅದು ಎನ್‌ಐಎಗೆ ಹಸ್ತಾಂತರವಾಗಿತ್ತು.



ಪಶ್ಚಿಮ ಬಂಗಾಳದ ಭೂಪತಿನಗರದಲ್ಲಿ ಎನ್‌ಐಎ ತಂಡದ ಮೇಲೆ ದಾಳಿ ನಡೆಸಲು ಮುಂದಾದ ಮಹಿಳೆಯರನ್ನು ತಡೆಯಲು ಯತ್ನಿಸಿದ ಭದ್ರತಾ ಸಿಬ್ಬಂದಿ –ಪಿಟಿಐ ಚಿತ್ರ

ಎನ್‌ಐಎ ಅಧಿಕಾರಿಗಳ ಮೇಲಿನ ದಾಳಿ ಅತ್ಯಂತ ಗಂಭೀರ ವಿಷಯ. ಇದು ಒಪ್ಪತಕ್ಕದ್ದಲ್ಲ. ಈ ಕುರಿತು ಕಠಿಣ ಕ್ರಮ ತೆಗೆದುಕೊಳ್ಳಬೇಕು

ಸಿ.ವಿ.ಆನಂದ ಬೋಸ್
ರಾಜ್ಯಪಾಲ, ಪಶ್ಚಿಮ ಬಂಗಾಳ

ಮಮತಾ ಬ್ಯಾನರ್ಜಿ ಹೇಳಿದ್ದು...



- ಇದು ಎನ್‌ಐಎ ವಿರುದ್ಧ ಭೂಪತಿನಗರದ ಮಹಿಳೆಯರು ನಡೆಸಿದ ದಾಳಿಯಲ್ಲ; ಎನ್‌ಐಎ ತಂಡವೇ ಈ ಗ್ರಾಮಸ್ಥರ ಮೇಲೆ ನಡೆಸಿದ ದಾಳಿ. ಅಷ್ಟಕ್ಕೂ ಎನ್‌ಐಎ ಮಧ್ಯರಾತ್ರಿ ದಾಳಿ ಮಾಡಿದ್ದು ಏಕೆ? ಇದಕ್ಕೆ ಪೊಲೀಸರ ಅನುಮತಿ ಇತ್ತೆ?
- ಚುನಾವಣೆಗೆ ಮುನ್ನ ಅವರು ಜನರನ್ನು ಏಕೆ ಬಂಧಿಸುತ್ತಿದ್ದಾರೆ. ಇದಕ್ಕೆ ಬಿಜೆಪಿ ಏನು ಹೇಳುತ್ತದೆ? ಅವರೇನು ನಮ್ಮ ಪ್ರತಿ ಬೂತ್ ಏಜೆಂಟರನ್ನು ಬಂಧಿಸುತ್ತಾರೆಯೇ?
- ಬಿಜೆಪಿಯು ಚುನಾವಣೆಯಲ್ಲಿ ಗೆಲ್ಲಲು ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದೆ. ಚುನಾವಣಾ ಆಯೋಗವು ಬಿಜೆಪಿಯ ಆಯೋಗವಾಗಿ ಬದಲಾಗಬಾರದು.
- ಬಿಜೆಪಿಗೆ ಎನ್‌ಐಎ, ಸಿಬಿಐ ಸಹೋದರರಾಗಿದ್ದರೆ, ಇ.ಡಿ ಮತ್ತು ಆದಾಯ ತೆರಿಗೆ ಇಲಾಖೆಯು ಹಣದ ಪೆಟ್ಟಿಗೆಗಳಾಗಿ ಮಾರ್ಪಟ್ಟಿವೆ.
- ತಾಕತ್ತಿದ್ದರೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಡಿ, ಚುನಾವಣೆಯಲ್ಲಿ ಗೆಲ್ಲಿ. ಅದನ್ನು ಬಿಟ್ಟು ಟಿಎಂಸಿಯ ಬೂತ್ ಮಟ್ಟದ ಕಾರ್ಯಕರ್ತರು ಮತ್ತು ಚುನಾವಣಾ ಏಜೆಂಟರನ್ನು ಬಂಧಿಸಬೇಡಿ.

ಬಿಜೆಪಿ ಪ್ರತಿಪಾದಿಸಿದ್ದು...

- ಬಾಂಬ್ ಸ್ಫೋಟ ಪ್ರಕರಣದ ತನಿಖೆಗೆ ಅಡ್ಡಿಪಡಿಸಲು ರಾಜ್ಯವು ಸಂದೇಶ್‌ಖಾಲಿ 2.0 ಅನ್ನು ರೂಪಿಸಿ, ಎನ್‌ಐಎ ಅಧಿಕಾರಿಗಳ ಮೇಲೆ ದಾಳಿ ನಡೆಸುವಂತೆ ಮಾಡಿದೆ.
- ಇದು ಕಾಕತಾಳೀಯವಾಗಿ ನಡೆದದ್ದಲ್ಲ; ಯೋಚಿಸಿ ನಡೆಸಿದ ಪ್ರಯೋಗ. ಇದು ಟಿಎಂಸಿಯ ತಾಲಿಬಾನಿ ಸಂಸ್ಕೃತಿಗೆ ಸಾಕ್ಷಿ.
- ಎರಡು ದಿನಗಳ ಹಿಂದೆ ಕೂಚ್ ಬೆಹಾರ್‌ನ ರ‍್ಯಾಲಿಯಲ್ಲಿ ಮಮತಾ ಬ್ಯಾನರ್ಜಿ ಅವರು, ಎನ್‌ಐಎ ಅಧಿಕಾರಿಗಳ ವಿರುದ್ಧ ಹಿಂಸಾಚಾರವನ್ನು ಪ್ರಚೋದಿಸಿ ಹೇಳಿಕೆಗಳನ್ನು ನೀಡಿದ್ದರು. ಇಂದು ದಾಳಿಕೋರರಿಗೆ 'ಕ್ಲೀನ್ ಚಿಟ್' ನೀಡಿದ್ದಾರೆ.

ಮೂವರು ನಕ್ಸಲರ ಸಾವು

ರಾಯಪುರ: ತೆಲಂಗಾಣದ ಗಡಿ ಹಂಚಿಕೊಂಡಿರುವ ಛತ್ತೀಸಗಢದ ಬಿಜಾಪುರ ಜಿಲ್ಲೆಯ ದಟ್ಟ ಅರಣ್ಯದಲ್ಲಿ ಶನಿವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಮೂವರು ನಕ್ಸಲರು ಹತರಾಗಿದ್ದಾರೆ.

ತೆಲಂಗಾಣದ ನಕಲರ ನಿಗ್ರಹ ಪಡೆಯಾದ 'ಗ್ರೇಹೌಂಡ್ಸ್' ತಂಡ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ, ಅಂತರರಾಜ್ಯ ಗಡಿಯಲ್ಲಿ ಇರುವ ಉಸೂರು ಪೊಲೀಸ್ ಠಾಣೆಯ ವ್ಯಾಪ್ತಿಯ ಡೊಳ್ಳಿಗುಡ ಗ್ರಾಮದ ಬಳಿ ಬೆಳಿಗ್ಗೆ 5.30ರ ಸುಮಾರಿಗೆ ಗುಂಡಿನ ಚಕಮಕಿ ನಡೆದಿದೆ ಎಂದು ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಈ ವೇಳೆ 'ಗ್ರೇಹೌಂಡ್ಸ್' ತಂಡಕ್ಕೆ ಛತ್ತೀಸಗಢದ ಪೊಲೀಸರ ನೆರವೂ ದೊರೆತಿದೆ ಎಂದು ಅವರು ಹೇಳಿದ್ದಾರೆ.

'ಗುಂಡಿನ ಚಕಮಕಿ ನಿಂತ ಬಳಿಕ, ಮೂವರು ನಕ್ಸಲರ ದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ ಅವರ ಬಳಿ ಇದ್ದ ಒಂದು ಎಕೆ-47, ಒಂದು ಎಲ್‌ಎಂಜಿ (ಲೈಟ್ ಮಷಿನ್ ಗನ್) ಹಾಗೂ ಇತರ ಶಸ್ತ್ರಾಸ್ತ್ರಗಳು, ಮದ್ದು-ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ. ಈ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಈ ವಾರದ ಆರಂಭದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಮೂವರು ಮಹಿಳೆಯರು ಸೇರಿ 13 ನಕ್ಸಲರು ಹತರಾಗಿದ್ದರು.

ಯುಪಿ, ಬಿಹಾರದಲ್ಲಿ ಎನ್‌ಐಎ ದಾಳಿ

ನವದೆಹಲಿ (ಪಿಟಿಐ): ದೇಶ ವಿರೋಧಿ ಪಿತೂರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾವೋವಾದಿಗಳ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಉತ್ತರ ಪ್ರದೇಶ ಹಾಗೂ ಬಿಹಾರದ ಹಲವು ಸ್ಥಳಗಳಲ್ಲಿ ಶನಿವಾರ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳು ಮತ್ತು ಶಂಕಿತರಿಗೆ ಸೇರಿರುವ ಉತ್ತರ ಪ್ರದೇಶದ ಬಲಿಯಾ ಜಿಲ್ಲೆಯ 11 ಸ್ಥಳಗಳಲ್ಲಿ ಹಾಗೂ ಬಿಹಾರದ ಕೈಮೂರ್ ಜಿಲ್ಲೆಯ ಒಂದು ಸ್ಥಳದಲ್ಲಿ ಎನ್‌ಐಎ ತಂಡಗಳು ಶೋಧ ನಡೆಸಿವೆ.

ಮೊಬೈಲ್ ಫೋನ್‌ಗಳು, ಸಿಮ್ ಕಾರ್ಡ್‌ಗಳು ಹಾಗೂ ಡಿಜಿಟಲ್ ಸಾಧನಗಳು ಸೇರಿದಂತೆ ನಿಷೇಧಿತ ನಕ್ಸಲ್ ಸಂಘಟನೆಯ ಕರಪತ್ರಗಳಂತಹ ದೋಷಾರೋಪಣೆಯ ದಾಖಲೆಗಳನ್ನು ಕಾರ್ಯಾಚರಣೆಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಬಲಿಯಾದಲ್ಲಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡು ಐವರನ್ನು ಬಂಧಿಸಿದ ಪ್ರಕರಣದ ತನಿಖೆಯನ್ನು ಎನ್‌ಐಎ 2023ರ ನ.10ರಂದು ವಹಿಸಿಕೊಂಡಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳ ವಿರುದ್ಧ 2024ರ ಫೆ. 9ರಂದು ದೋಷಾರೋಪ ಪಟ್ಟಿ ಸಲ್ಲಿಸಿದೆ.

ಎನ್‌ಸಿಇಆರ್‌ಟಿ ಕ್ರಮ ಐತಿಹಾಸಿಕ ಸಂಗತಿ ಅಳಿಸುವ ಕೆಲಸ: ಕೇರಳ

ತಿರುವನಂತಪುರ (ಪಿಟಿಐ): ಬಾಬರಿ ಮಸೀದಿ ಧ್ವಂಸ ಹಾಗೂ ಗುಜರಾತ್ ಗಲಭೆಗಳಲ್ಲಿ ಮುಸ್ಲಿಮರ ಹತ್ಯೆಯ ಕುರಿತ ಉಲ್ಲೇಖಗಳನ್ನು ಕೈಬಿಡಲು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ ಕೈಗೊಂಡ ತೀರ್ಮಾನವನ್ನು ಟೀಕಿಸಿರುವ ಕೇರಳ ಸರ್ಕಾರ, 'ಇದು ಪಠ್ಯಪುಸ್ತಕಗಳಿಂದ ಐತಿಹಾಸಿಕ ಸಂಗತಿಗಳನ್ನು' ಅಳಿಸುವ ಕೆಲಸ ಎಂದಿದೆ.

ಈ ವಿಚಾರದಲ್ಲಿ ಕೇರಳದ ನಿಲುವು ದೃಢವಾಗಿದೆ ಎಂದು ಅಲ್ಲಿನ ಶಿಕ್ಷಣ ಸಚಿವ ವಿ. ಶಿವನ್ ಕುಟ್ಟಿ ಹೇಳಿದ್ದಾರೆ. 'ಎನ್‌ಸಿಇಆರ್‌ಟಿ ಈ ಹಿಂದೆಯೂ ಇಂಥದ್ದೇ ಯತ್ನ ನಡೆಸಿತ್ತು. ಇತಿಹಾಸ, ಸಮಾಜ ವಿಜ್ಞಾನ ಮತ್ತು ರಾಜ್ಯಶಾಸ್ತ್ರದ ಪಠ್ಯಪುಸ್ತಕಗಳಿಂದ ಕೆಲವು ಅಂಶಗಳನ್ನು ಕೈಬಿಟ್ಟಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಕೇರಳ ಸರ್ಕಾರವು, ಕೈಬಿಟ್ಟ ಅಂಶಗಳನ್ನು ಒಳಗೊಂಡ ಹೆಚ್ಚುವರಿ ಪಠ್ಯಪುಸ್ತಕವನ್ನು ಆಗ ಮುದ್ರಿಸಿತ್ತು' ಎಂದು ತಿಳಿಸಿದ್ದಾರೆ.

ಜಾರಿ ನಿರ್ದೇಶನಾಲಯಕ್ಕೆ ದೆಹಲಿ ಸಚಿವೆ ಆತಿಶಿ ಒತ್ತಾಯ

'ಬಿಜೆಪಿ ವಿರುದ್ಧವೂ ತನಿಖೆ ಮಾಡಿ'

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕರ ವಿರುದ್ಧವೂ ಕ್ರಮ ಕೈಗೊಳ್ಳುವಂತೆ ಎಎಪಿ ನಾಯಕಿ, ದೆಹಲಿ ಸಚಿವೆ ಆತಿಶಿ ಶನಿವಾರ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಒತ್ತಾಯಿಸಿದ್ದಾರೆ.



ಆತಿಶಿ ಸಿಂಗ್

ಚುನಾವಣಾ ಆಯೋಗವು ತಮಗೆ ನೋಟಿಸ್ ನೀಡಿದ ಮರುದಿನ, ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಚುನಾವಣಾ ಆಯೋಗವು ಈಗ ಬಿಜೆಪಿಯ ಹಿತಾಸಕ್ತಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದರು.

'ಬಿಜೆಪಿಗೆ ಸೇರಬೇಕು, ಇಲ್ಲವಾದಲ್ಲಿ ತಿಂಗಳಲ್ಲಿ ಇ.ಡಿ ನಿಮ್ಮನ್ನು ಬಂಧಿಸಲಿದೆ ಎಂದು ತಮ್ಮನ್ನು ಸಂಪರ್ಕಿಸಿದ್ದ ಬಿಜೆಪಿ ನಾಯಕರು ಹೇಳಿದ್ದರು' ಎಂದು ಅತಿಶಿ ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ಆಯೋಗ ನೋಟಿಸ್ ಜಾರಿ ಮಾಡಿತ್ತು.

ಕೇವಲ ಅನುಮಾನದ ಆಧಾರದಲ್ಲಿ ಎಎಪಿ ನಾಯಕರಾದ ಸಂಜಯ್ ಸಿಂಗ್, ಮನೀಷ್ ಸಿಸೋಡಿಯಾ, ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರನ್ನು ಇ.ಡಿ ಬಂಧಿಸಿದೆ. ಅವರ ವಿರುದ್ಧ ಯಾವುದೇ ವಿಚಾರಣೆ ನಡೆದಿಲ್ಲ ಎಂದು ಹೇಳಿದರು.

ಹಣ ಅಕ್ರಮ ವರ್ಗಾವಣೆ ಆಗಿದೆ ಎಂದು ಇ.ಡಿ ಸಾಕ್ಷ್ಯ ಸಂಗ್ರಹಿಸಿರುವ ಪ್ರಕರಣಗಳಲ್ಲಿ ಬಿಜೆಪಿ ನಾಯಕರ ವಿರುದ್ಧ ಯಾವ ಕ್ರಮವನ್ನು ಕೈಗೊಂಡಿದೆ ಎಂದು ಪ್ರಶ್ನಿಸಿದರು. ಮತ್ತೊಂದು ಸುದ್ದಿಗೋಷ್ಠಿಯಲ್ಲಿ ಎಎಪಿ ನಾಯಕ ಜಾಸ್ಮೀನ್ ಶಾ, ಈ ಪ್ರಕರಣದಲ್ಲಿ ಸಾಕ್ಷಿಗಳಾಗಿ ಪರಿವರ್ತಿತರಾಗಿರುವವರು ಹಿಂದೆ ಆರೋಪಿಗಳಾಗಿದ್ದವರು. ಅವರ ಮತ್ತು ಬಿಜೆಪಿ ಸಂಬಂಧದ ಕುರಿತೂ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

'ಹೆಚ್ಚು ಓದಿದೆ; ಕುಟುಂಬದವರನ್ನು ನಗಿಸುತ್ತಿದ್ದೆ'

ನವದೆಹಲಿ (ಪಿಟಿಐ): 'ಆರಂಭದ 11 ದಿನ ಕಷ್ಟಕರವಾಗಿದ್ದವು. ಸಣ್ಣ ಕೊಠಡಿಯೊಳಗೆ ಬಂಧಿಯಾಗಿದ್ದೆ. ಹೊರಗೆ ಬಂದು, ತಿರುಗಾಡಲು ಅನುಮತಿಯಿರಲಿಲ್ಲ. ಸಾಮಾನ್ಯ ಕೈದಿಯ ಹಕ್ಕುಗಳನ್ನು ಕೊಡುವಂತೆ ಕೋರಿ ಜೈಲು ಆಡಳಿತದ ಜೊತೆ ಮಾತನಾಡಿದೆ...'

'ನಂತರ, ಪೊಲೀಸ್ ಭದ್ರತೆಯೊಂದಿಗೆ ಓಡಾಡಲು ಅವಕಾಶ ನೀಡಿದರು. ಊಟದ ಸಮಸ್ಯೆ ಪರಿಹರಿಸಿದರು' ಎಂದು ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಬಂಧನಕ್ಕೊಳಗಾಗಿ ಆರು ತಿಂಗಳು ತಿಹಾರ್ ಜೈಲಿನಲ್ಲಿದ್ದ ಎಎಪಿಯ ಸಂಸದ ಸಂಜಯ್ ಸಿಂಗ್ ಜಾಮೀನಿನ ಮೇಲೆ ಬಿಡುಗಡೆಗೊಂಡ ಬಳಿಕ, ಸುದ್ದಿಸಂಸ್ಥೆಗೆ ಶನಿವಾರ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದಾರೆ. 'ಹೆಚ್ಚು ಪುಸ್ತಕಗಳನ್ನು ಓದಿದ್ದರಿಂದ ನೈತಿಕವಾಗಿ ಸದೃಢಗೊಂಡೆ' ಎಂದಿದ್ದಾರೆ.



ಸಂಜಯ್

'ಕುಟುಂಬದವರೊಟ್ಟಿಗೆ ತಮಾಷೆ ಮಾತುಗಳನ್ನಾಡುವ ಮೂಲಕ ಅವರನ್ನು ನಗಿಸುತ್ತಿದ್ದೆ. ಅಳಲು ಅವಕಾಶ ಮಾಡಿಕೊಡಲಿಲ್ಲ' ಎಂದು ತಾವು ಜೈಲಿನಲ್ಲಿದ್ದಾಗ ಕುಟುಂಬಕ್ಕೆ ಕಾಡಿದ ತಮ್ಮ ಅನುಪಸ್ಥಿತಿಯನ್ನು ನಿಭಾಯಿಸಿದ ಬಗ್ಗೆಯೂ ತಿಳಿಸಿದರು.

ಸಿಸೋಡಿಯಾ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕ ಮನೀಷ್ ಸಿಸೋಡಿಯಾ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಇಲ್ಲಿನ ವಿಶೇಷ ಕೋರ್ಟ್ ಏಪ್ರಿಲ್ 18ರ ವರೆಗೆ ವಿಸ್ತರಿಸಿದೆ.

ಅಬಕಾರಿ ಗುತ್ತಿಗೆ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಬಂಧನಕ್ಕೆ ಒಳಗಾಗಿರುವ ಸಿಸೋಡಿಯಾ ಅವರ ಬಂಧನದ ಅವಧಿಯನ್ನು ಸಿಬಿಐ ಹಾಗೂ ಇ.ಡಿ. ಪ್ರಕರಣಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಶನಿವಾರ ವಿಸ್ತರಿಸಿದರು.

ಇತ್ತೀಚೆಗೆ ಸುಪ್ರೀಂ ಕೋರ್ಟ್‌ನಿಂದ ಜಾಮೀನು ಪಡೆದಿರುವ ಪ್ರಕರಣದ ಇನ್ನೊಬ್ಬ ಆರೋಪಿ ಸಂಜಯ್ ಸಿಂಗ್ ಅವರೂ ಶನಿವಾರ ವಿಶೇಷ ನ್ಯಾಯಾಲಯದಲ್ಲಿ ಹಾಜರಿದ್ದರು. ವಿಚಾರಣೆಗೆ ಸಿಸೋಡಿಯಾ ಅವರು ಸಹಕರಿಸುತ್ತಿಲ್ಲ ಎಂದು ಇ.ಡಿ ಹೇಳಿತು. ಪ್ರಕರಣದ ವಿಚಾರಣೆಯನ್ನು ಏಪ್ರಿಲ್ 10ಕ್ಕೆ ನ್ಯಾಯಾಲಯ ಮುಂದೂಡಿತು

ವಲಸೆ ಕಾರ್ಮಿಕನ ಹತ್ಯೆ 10 ಮಂದಿ ಬಂಧನ

ಕೊಚ್ಚಿ (ಪಿಟಿಐ): ಕೇರಳದ ಮೂವಾಟ್ಟುಪುಳದಲ್ಲಿ ವಲಸೆ ಕಾರ್ಮಿಕರೊಬ್ಬರನ್ನು ಗುಂಪೊಂದು ಥಳಿಸಿ ಹತ್ಯೆಗೈದ ಶಂಕಿತ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ವ್ಯಕ್ತಿಯನ್ನು ಅರುಣಾಚಲ ಪ್ರದೇಶದ ಅಶೋಕ್ ದಾಸ್ (24) ಎಂದು ಗುರುತಿಸಲಾಗಿದೆ. ಉದ್ಯೋಗ ಅರಸಿ ಕೇರಳಕಕ್ಕೆ ಬಂದಿದ್ದ ಅಶೋಕ್, ಮೂವಾಟ್ಟುಪುಳ ಸಮೀಪದ ವಾಳಕಂ ಎಂಬಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು.

ಎಫ್‌ಐಆರ್ ಪ್ರಕಾರ ಗುರುವಾರ ರಾತ್ರಿ ಅಶೋಕ್ ಅವರು, ಅದೇ ಪ್ರದೇಶದಲ್ಲಿದ್ದ ತಮ್ಮ ಸ್ನೇಹಿತೆಯರನ್ನು ಭೇಟಿಯಾಗಲು ತೆರಳಿದ್ದರು. ಆಗ ಸ್ಥಳೀಯರ ಗುಂಪೊಂದು ಅವರನ್ನು ಕಂಬಕ್ಕೆ ಕಟ್ಟಿಹಾಕಿ, ವಿಚಾರಣೆ ನಡೆಸಿ, ಬಳಿಕ ತೀವ್ರವಾಗಿ ಹಲ್ಲೆ ಮಾಡಿದೆ ಎಂದು ಮೂಲಗಳು ಹೇಳಿವೆ.

ಅಶೋಕ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಅವರು ಶುಕ್ರವಾರ ಮೃತಪಟ್ಟರು. ಗುಂಪು ಅಮಾನುಷವಾಗಿ ಹಲ್ಲೆ ನಡೆಸಿದ್ದರಿಂದ ತೀವ್ರವಾಗಿ ಗಾಯಗೊಂಡಿದ್ದ ಅವರು ಕೊನೆಯುಸಿರೆಳೆದರು ಎಂದು ಮೂಲಗಳು ತಿಳಿಸಿವೆ.

ಪೊಲೀಸರ ವಿರುದ್ಧ ತನಿಖೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೂರುದಾರರ ಪರ ಸಾಕ್ಷಿ ಹೇಳಲು ಬಂದಿದ್ದವರಿಗೆ ಹೇಗೆ ಸಾಕ್ಷಿ ಹೇಳಬೇಕು ಎಂದು ಹೇಳಿಕೊಟ್ಟ ಪೊಲೀಸರ ವಿರುದ್ಧ ತನಿಖೆ ನಡೆಸುವಂತೆ ತಮಿಳುನಾಡು ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.ಪೊಲೀಸರ ಈ ಕೃತ್ಯವು 'ನಿರ್ಲಜ್ಜ' ಮತ್ತು 'ಆತಂಕಕಾರಿ' ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

2007ರಲ್ಲಿ ನಡೆದಿದ್ದ ಬಾಲಮುರುಗನ್ ಎಂಬುವವರ ಹತ್ಯೆಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. ಪ್ರಕರಣದ ಪ್ರಮುಖ ಆರೋಪಿಗಳಾದ ಮಣಿಕಂದನ್, ಮತ್ತೊಬ್ಬ ವ್ಯಕ್ತಿಯನ್ನು ಬಿಡುಗಡೆಗೊಳಿಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್. ಒಕಾ ಮತ್ತು ಉಜ್ವಲ್ ಭುಯಿಯಾ ಅವರಿದ್ದ ನ್ಯಾಯ ಪೀಠವು ಏ.5ರಂದು ಹೀಗೆ ಹೇಳಿದೆ.

ಮೃತವ್ಯಕ್ತಿ ಪರ ಐವರನ್ನು, ಅವರು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುವ ಹಿಂದಿನ ದಿನ ಪೊಲೀಸ್ ಠಾಣೆಗೆ ಕರೆಸಿಕೊಂಡು, ಆರೋಪಿ ವಿರುದ್ಧ ಹೇಗೆ ಸಾಕ್ಷಿ ಹೇಳಬೇಕು ಎಂದು ಪೊಲೀಸರು ಹೇಳಿಕೊಟ್ಟಿದ್ದರು. ಆದರೆ, ಅವರು ಹೇಳಿರುವ ಸಾಕ್ಷಿಯು ಪೊಲೀಸರು ಹೇಳಿಕೊಟ್ಟಿರುವ ಸಾಕ್ಷಿ ಆಗಿರುವ ಸಾಧ್ಯತೆ ಇರುವುದರಿಂದ ಅವರ ಸಾಕ್ಷಿಗಳನ್ನು ಪರಿಗಣಿಸಲಾಗಿಲ್ಲ ಎಂದು ಪೀಠ ಹೇಳಿದೆ.

ಲೈಂಗಿಕ ಕಿರುಕುಳ, ಕೊಲೆ: ಪೊಲೀಸ್ ಅಧಿಕಾರಿ ವಜಾ

ಗುವಾಹಟಿ (ಪಿಟಿಐ): ದರಂಗ್ ಜಿಲ್ಲೆಯಲ್ಲಿ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ರಾಜ್ ಮೋಹನ್ ರಾಯ್ ಅವರನ್ನು ಸೇವೆಯಿಂದ ವಜಾ ಮಾಡಲಾಗಿದೆ. ಭವಿಷ್ಯದಲ್ಲಿ ಉದ್ಯೋಗಕ್ಕೆ ಸೇರದಂತೆ ಅನರ್ಹಗೊಳಿಸಲಾಗಿದೆ ಎಂದು ಡಿಜಿಪಿ ಜಿ.ಪಿ ಸಿಂಗ್ ತಿಳಿಸಿದ್ದಾರೆ.

ಜೂನ್ 2022ರಲ್ಲಿ ಕೃಷ್ಣ ಕಮಾಲ್ ಬರುವಾದಲ್ಲಿ ಮನೆಗೆಲಸಕ್ಕಿದ್ದ 13 ವರ್ಷದ ಬಾಲಕಿ ಮೇಲೆ ಲೈಂಗಿಕ ಕಿರುಕುಳ ಮತ್ತು ಹತ್ಯೆ ನಡೆದಿತ್ತು. ಆಗ ರಾಯ್ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದರು. ಘಟನೆಯ ಸಾಕ್ಷ್ಯಗಳ ಫೋಟೊ ಮತ್ತು ವಿಡಿಯೊ ಪಡೆಯುವಲ್ಲಿ ಪೊಲೀಸರು ಕರ್ತವ್ಯಲೋಪ ಎಸಗಿದ್ದರು ಎಂಬ ಆರೋಪ ಕೇಳಿಬಂದಿತ್ತು.

ನಿರ್ಮಲಾ ವಾದವೇನು?

ಒಂದನೇ ಪುಟದಿಂದ....

- ಹಣಕಾಸು ಆಯೋಗದ ಮಧ್ಯಂತರ ವರದಿಯಲ್ಲಿ ಕರ್ನಾಟಕ ಮಾತ್ರವಲ್ಲ ತೆಲಂಗಾಣ, ಮಿಜೋರಾಂ ರಾಜ್ಯಗಳಿಗೂ ವಿಶೇಷ ಅನುದಾನಕ್ಕೆ ಶಿಫಾರಸು ಮಾಡಲಾಗಿತ್ತು. ಆದರೆ, ಅಂತಿಮ ವರದಿಯಲ್ಲಿ ಆ ವಿಷಯವೇ ಇಲ್ಲದ ಕಾರಣ ಎರಡೂ ರಾಜ್ಯಗಳು ಕೇಳಿಲ್ಲ.
- ರಾಜ್ಯ ಸರ್ಕಾರಗಳು ಬಂಡವಾಳ ವೆಚ್ಚ ಮಾಡಲು ಕೇಂದ್ರ ಸರ್ಕಾರ ನೆರವು ಕೊಡಬೇಕೆಂಬ ಶಿಫಾರಸು ಹಣಕಾಸು ಆಯೋಗದ ವರದಿಯಲ್ಲಿ ಇರಲಿಲ್ಲ. ಆದರೆ, ಪ್ರಧಾನಿ ನರೇಂದ್ರ ಮೋದಿಯವರ ನಿರ್ಧಾರದಂತೆ 50 ವರ್ಷಗಳ ಮರುಪಾವತಿ ಅವಧಿಗೆ ರಾಜ್ಯಗಳಿಗೆ ಬಡ್ಡಿರಹಿತ ಸಾಲ ನೀಡಲಾಗಿದೆ. ಕರ್ನಾಟಕಕ್ಕೆ ₹ 8,035 ಕೋಟಿ ಬಡ್ಡಿರಹಿತ ಸಾಲ ದೊರಕಿದೆ.
- ಈಗ ಹೊಸ ಹಣಕಾಸು ಆಯೋಗ ಅಸ್ತಿತ್ವದಲ್ಲಿದೆ. ಕರ್ನಾಟಕವೂ ಸೇರಿದಂತೆ ಎಲ್ಲ ರಾಜ್ಯಗಳ ಅಹವಾಲುಗಳನ್ನು ಆಯೋಗ ಆಲಿಸುತ್ತದೆ. ರಾಜ್ಯ ಸರ್ಕಾರ ತನ್ನ ವಾದವನ್ನು ಆಯೋಗದ ಮುಂದೆ ಮಂಡಿಸಿ, ಪರಿಹಾರ ಪಡೆಯಲು ಅವಕಾಶ ಇದೆ.

ಕೃಷ್ಣ ಬೈರೇಗೌಡ ವಾದವೇನು?

- ಕೇಂದ್ರದ ತೆರಿಗೆ ಪಾಲಿನ ಅನುದಾನವನ್ನು 15ನೇ ಹಣಕಾಸು ಆಯೋಗ ಶೇ 4.731ರಿಂದ ಶೇ 3.617ಕ್ಕೆ (ಶೇ 23) ಇಳಿಸಿದೆ. ಇದರ ಪರಿಣಾಮ ಪ್ರತಿವರ್ಷ ₹12 ಸಾವಿರದಿಂದ ₹13 ಸಾವಿರ ಕೋಟಿ ನಷ್ಟವಾಗುತ್ತಿದೆ. 15ನೇ ಹಣಕಾಸು ಆಯೋಗದ ಅವಧಿ 2026ರ ವರೆಗಿದ್ದು ಕನಿಷ್ಠ ₹62,098 ಕೋಟಿ ನಷ್ಟವಾಗುತ್ತದೆ.
- ದೇಶದಲ್ಲಿ ತೆರಿಗೆ ಪಾವತಿಯಲ್ಲಿ ರಾಜ್ಯ 2ನೇ ಸ್ಥಾನದಲ್ಲಿದ್ದರೂ ಕೇಂದ್ರ ಸರ್ಕಾರ ದೊಡ್ಡ ಬರೆ ಹಾಕುತ್ತಿದೆ.
- ಕೇಂದ್ರಕ್ಕೇ ಸೆಸ್–ಸರ್‌ಚಾರ್ಜ್ ಹೋಗುತ್ತಿದ್ದು, ರಾಜ್ಯಕ್ಕೆ ಇದರಿಂದ ₹ 53,382 ಕೋಟಿ ನಷ್ಟವಾಗಿದೆ. ವಿಶೇಷ ಅನುದಾನದಲ್ಲಿ ₹ 11,495 ಕೋಟಿ ಸಹ ಲಭಿಸಿಲ್ಲ.
- ಜಿಎಸ್‌ಟಿ, ಹಣಕಾಸು ಆಯೋಗದಿಂದ ಅನುದಾನ ಕಡಿತ, ಸೆಸ್ ಹಾಗೂ ಸರ್ಚಾಜ್, ವಿಶೇಷ ಅನುದಾನದಲ್ಲಿ ಒಟ್ಟಾರೆ ರಾಜ್ಯಕ್ಕೆ ₹ 1,85,468 ಕೋಟಿ ನಷ್ಟವಾಗಿದೆ.
- ಕೇಂದ್ರದ ಹಲವು ಯೋಜನೆಗಳಿಗೆ ರಾಜ್ಯವು ಶೇ 50 ಕ್ಕಿಂತ ಹೆಚ್ಚಿನ ಅನುದಾನ ನೀಡುತ್ತಿದೆ. ಆದರೆ, ಎಲ್ಲ ಯೋಜನೆಗಳಿಗೂ ಪ್ರಧಾನಿ ಅವರ ಹೆಸರನ್ನೇ ನಾಮಕರಣ ಮಾಡಿಕೊಳ್ಳಲಾಗಿದೆ.

ಅತ್ಯಾಚಾರ ಪ್ರಕರಣ ರದ್ದು

ನವದೆಹಲಿ (ಪಿಟಿಐ): ಮಹಿಳೆಯು ಪರಿಣಾಮಗಳ ಬಗ್ಗೆ ಆಲೋಚಿಸಿ ದೈಹಿಕ ಸಂಪರ್ಕ ಹೊಂದಿದ್ದಾಗ, ಪುರುಷನು ಮದುವೆ ಆಗುವುದಾಗಿ ಸುಳ್ಳು ಭರವಸೆ ನೀಡಿದ್ದ ಎಂದು ಹೇಳುವುದಕ್ಕೆ ಸ್ಪಷ್ಟವಾದ ಆಧಾರಗಳು ಇಲ್ಲದಿದ್ದಾಗ, ತಪ್ಪುಗ್ರಹಿಕೆಯ ಆಧಾರದಲ್ಲಿ ಆಕೆ 'ಸಮ್ಮತಿ' ಸೂಚಿಸಿದ್ದಳು ಎನ್ನಲಾಗದು ಎಂಬ ಮಾತನ್ನು ದೆಹಲಿ ಹೈಕೋರ್ಟ್ ಹೇಳಿದೆ.

ಪುರುಷನೊಬ್ಬನ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಪ್ರಕರಣವನ್ನು ರದ್ದುಪಡಿಸುವ ಸಂದರ್ಭದಲ್ಲಿ, ಪುರುಷ ಮತ್ತು ಮಹಿಳೆಯ ನಡುವೆ ಪ್ರಕರಣವು ಸೌಹಾರ್ದಯುತವಾಗಿ ಬಗೆಹರಿದಿದೆ. ಅವರಿಬ್ಬರೂ ಈಗ ಮದುವೆ ಆಗಿದ್ದಾರೆ ಎಂಬುದನ್ನು ದಾಖಲಿಸಿಕೊಂಡ ನ್ಯಾಯಮೂರ್ತಿ ಅನೂಪ್ ಕುಮಾರ್ ಮೆಂದೀರತ್ತಾ ಅವರು ಈ ಮಾತು ಹೇಳಿದ್ದಾರೆ.

'ಮಹಿಳೆಯು ಪರಿಣಾಮಗಳನ್ನು ಪೂರ್ತಿಯಾಗಿ ಅರ್ಥ ಮಾಡಿಕೊಂಡು, ಸಕಾರಣಗಳೊಂದಿಗೆ ದೈಹಿಕ ಸಂಪರ್ಕಕ್ಕೆ ಮುಂದಾಗಿದ್ದ ಸಂದರ್ಭಗಳಲ್ಲಿ, ಭರವಸೆ ನೀಡಿದ್ದ ವ್ಯಕ್ತಿಯು ಭರವಸೆಯನ್ನು ಈಡೇರಿಸುವ ಉದ್ದೇಶವನ್ನು ಹೊಂದಿರಲೇ ಇಲ್ಲ ಎಂಬುದನ್ನು ಸಾಬೀತುಪಡಿಸಲು ಬಹಳ ಸ್ಪಷ್ಟವಾದ ಆಧಾರಗಳು ಇಲ್ಲದೆ ಇದ್ದರೆ, ವಾಸ್ತವ ಸಂಗತಿಗಳನ್ನು ಮಹಿಳೆಯು ತಪ್ಪಾಗಿ ಗ್ರಹಿಸಿ ಸಮ್ಮತಿ ನೀಡಿದ್ದಳು ಎಂದು ಹೇಳಲಾಗದು' ಎಂದು ನ್ಯಾಯಮೂರ್ತಿ ವಿವರಿಸಿದ್ದಾರೆ. 'ಮಹಿಳೆಯೊಬ್ಬಳು ಪುರುಷನ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿದ್ದಳು. ಆತ ಮದುವೆ ಆಗುವುದಾಗಿ ಹೇಳಿ ತನ್ನ ಜೊತೆ ಮತ್ತೆ ಮತ್ತೆ ದೈಹಿಕ ಸಂಪರ್ಕ ಸಾಧಿಸಿದ್ದ. ಆದರೆ ನಂತರದಲ್ಲಿ ಮದುವೆ ಆಗಲು ನಿರಾಕರಿಸಿದ. ಕುಟುಂಬದವರು ಬೇರೊಬ್ಬಳ ಜೊತೆ ಮದುವೆ ನಿಶ್ಚಯ ಮಾಡಿದ್ದಾರೆ ಎಂದು ಹೇಳಿದ' ಎಂದು ಆಕೆ ದೂರಿನಲ್ಲಿ ತಿಳಿಸಿದ್ದಳು.

ತಾನು ಆ ಪುರುಷನ ಜೊತೆ ಸಂತೋಷದಿಂದ ಬಾಳ್ವೆ ನಡೆಸುತ್ತಿರುವುದಾಗಿ ಮಹಿಳೆಯು ಹೈಕೋರ್ಟ್‌ಗೆ ತಿಳಿಸಿದ್ದಳು. ಅಲ್ಲದೆ, ಪುರುಷನ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಲು ತಾನು ಬಯಸುವುದಿಲ್ಲ ಎಂದು ಹೇಳಿದಳು. ಪುರುಷನು ಮೊದಲು ಕುಟುಂಬದ ಒತ್ತಡದ ಕಾರಣದಿಂದಾಗಿ 'ತಪ್ಪು ಗ್ರಹಿಕೆ'ಯಿಂದಾಗಿ ಎಫ್‌ಐಆರ್ ದಾಖಲಿಸಲಾಗಿತ್ತು ಎಂದೂ ತಿಳಿಸಿದರು.

ತನಿಖೆ ನಡೆಯುತ್ತಿದ್ದ ಸಂದರ್ಭದಲ್ಲಿ ಪುರುಷನು ಸ್ವಇಚ್ಛೆಯಿಂದ ಈಕೆಯನ್ನು ಮದುವೆ ಆಗಿದ್ದಾನೆ. ಹೀಗಾಗಿ, ಆತ ಮೊದಲು ಮಾತು ಕೊಟ್ಟಿದ್ದು, ಅದನ್ನು ಮೀರುವ ಉದ್ದೇಶದಿಂದ ಎಂದು ಹೇಳಲು ಸಾಧ್ಯವಿಲ್ಲ ಎಂದಿದೆ.

ಜೈಲಿನಲ್ಲೇ ವಿಚಾರಣೆ ವಿರೋಧಿಸಿ ಕವಿತಾ ಅರ್ಜಿ

ನವದೆಹಲಿ (ಪಿಟಿಐ): ತಿಹಾರ ಜೈಲಿನಲ್ಲಿಯೇ ತಮ್ಮನ್ನು ವಿಚಾರಣೆಗೆ ಒಳಪಡಿಸುವುದಾಗಿ ಸಿಬಿಐ ಸಲ್ಲಿಸಿರುವ ಅರ್ಜಿ ವಿರೋಧಿಸಿ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರು ಶನಿವಾರ ದೆಹಲಿಯ ನ್ಯಾಯಾಲಯವೊಂದರ ಮೆಟ್ಟಿಲೇರಿದ್ದಾರೆ.



ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಕವಿತಾ ಈಗ ತಿಹಾರ ಜೈಲಿನಲ್ಲಿದ್ದಾರೆ.

ತಿಹಾರ ಜೈಲಿನಲ್ಲಿಯೇ ಕವಿತಾ ಅವರನ್ನು ವಿಚಾರಣೆಗೆ ಒಳಪಡಿಸಲು ನ್ಯಾಯಾಲಯವು ಸಿಬಿಐಗೆ ಶುಕ್ರವಾರ ಅನುಮತಿ ನೀಡಿತ್ತು.

'ಕವಿತಾ ಅವರ ಬೆನ್ನಹಿಂದೆ ಅರ್ಜಿ ಸಲ್ಲಿಸುವ ಮೂಲಕ ಸಿಬಿಐ ಕಾನೂನು ಪ್ರಕ್ರಿಯೆಗೆ ಅಡ್ಡಿಪಡಿಸುತ್ತಿದೆ ಎಂದು ನ್ಯಾಯಾಲಯದಲ್ಲಿ ಹಾಜರಿದ್ದ ಕವಿತಾ ಪರ ವಕೀಲರು ಹೇಳಿದರು. ಕವಿತಾ ಅವರ ಅರ್ಜಿ ವಿಚಾರಣೆ ನಡೆಯುವವರೆಗೆ ಸಿಬಿಐನ ಅರ್ಜಿಗೆ ಸಂಬಂಧಿಸಿ ಆದೇಶ ನೀಡದಂತೆ ಮನವಿ ಮಾಡಿದರು.

ಅರ್ಜಿಯ ಮುಂದಿನ ವಿಚಾರಣೆಯನ್ನು ನ್ಯಾಯಾಲಯವು ಮುಂದಿನ ಶನಿವಾರ ನಡೆಸುವ ಸಾಧ್ಯತೆ ಇದೆ.

ಸಂಕ್ಷಿಪ್ತ ಸುದ್ದಿ

ಓದದ್ದಕ್ಕೆ ಮಗಳನ್ನೇ ಕೊಂದ

ಜೈಪುರ (ಪಿಟಿಐ): ಶಾಲಾ ಪರೀಕ್ಷೆಗೆ ಸಿದ್ಧತೆ ನಡೆಸದ ಕಾರಣಕ್ಕೆ ರಾಜಸ್ಥಾನದ ಸಿರೋಹಿ ಜಿಲ್ಲೆಯ ವ್ಯಕ್ತಿಯೊಬ್ಬ ತನ್ನ 17 ವರ್ಷದ ಮಗಳನ್ನು ಥಳಿಸಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಪ್ರೇಮ್ ನಗರದ ಫತೇ ಮೊಹಮ್ಮದ್‌ನನ್ನು (42) ಬಂಧಿಸಲಾಗಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಪುಷ್ಪೇಂದ್ರ ವರ್ಮಾ ಮಾಹಿತಿ ನೀಡಿದ್ದಾರೆ.

'11ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮಗಳು ಶಾಲಾ ಪರೀಕ್ಷೆಗೆ ಸರಿಯಾಗಿ ಸಿದ್ಧತೆ ನಡೆಸುತ್ತಿರಲಿಲ್ಲ. ಇದರಿಂದ ಕೋಪಗೊಂಡ ಫತೇ, ಗುರುವಾರ ಕೋಲಿನಿಂದ ಹೊಡೆದಿದ್ದಾನೆ' ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ ಎಂದಿದ್ದಾರೆ.

ಸೇನೆಯಿಂದ ಗುಂಡಿನ ದಾಳಿ

ರಜೌರಿ/ಜಮ್ಮು (ಪಿಟಿಐ): ಜಮ್ಮು ಕಾಶ್ಮೀರದ ರಜೌರಿ ಜಿಲ್ಲೆಯ ಸೇನಾ ಶಿಬಿರದ ಬಳಿ ಶನಿವಾರ ಮುಂಜಾನೆ ಸಂಶಯಾಸ್ಪದ ಚಟುವಟಿಕೆ ಕಂಡುಬಂದದ್ದರಿಂದ ಭದ್ರತಾ ಪಡೆಯು ಗುಂಡಿನ ದಾಳಿ ನಡೆಸಿ, ಶೋಧ ಕಾರ್ಯಾಚರಣೆಯನ್ನು ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದರ್ಹಾಲ್ ಪ್ರದೇಶದ ಶ್ರೋತ ಮೊರ್ಹಾ ಗ್ರಾಮದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕತ್ತಲೆಯ ಸಮಯದಲ್ಲಿ ಅಪರಿಚಿತ ವ್ಯಕ್ತಿಗಳ ಗುಂಪೊಂದು ಶಿಬಿರದ ಕಡೆಗೆ ಚಲಿಸುತ್ತಿರುವುದನ್ನು ಗಮನಿಸಿದ ಕಾವಲುಗಾರನು ಕೆಲವು ಸುತ್ತು ಗುಂಡು ಹಾರಿಸಿದ್ದಾನೆ ಎಂದು ಅವರು ಹೇಳಿದರು.

ಲಾವೋಸ್‌ನಲ್ಲಿ 17 ಭಾರತೀಯರ ರಕ್ಷಣೆ: ಎಸ್.ಜೈಶಂಕರ್

ನವದೆಹಲಿ (ಪಿಟಿಐ): 'ಲಾವೋಸ್‌ನಲ್ಲಿ ಅಸುರಕ್ಷಿತ ಮತ್ತು ನಿಯಮಬಾಹಿರ ಕೆಲಸಗಳಿಗೆ ನಿಯೋಜಿಸಲಾಗಿದ್ದ 17 ಮಂದಿ ಭಾರತೀಯರನ್ನು ತಾಯ್ನಾಡಿಗೆ ಕರೆತರಲಾಗುತ್ತಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಇಲ್ಲಿ ತಿಳಿಸಿದ್ದಾರೆ.



ದೇಶ ಮತ್ತು ವಿದೇಶಗಳಲ್ಲೂ ಮೋದಿ ಕೀ ಗ್ಯಾರಂಟಿ ಫಲ ನೀಡಲಿದೆ. ಅಲ್ಲಿನ ಭಾರತೀಯ ರಾಯಭಾರ ಕಚೇರಿಯ ಶ್ರಮ ಶ್ಲಾಘನೀಯ. ಎಂದು ಈ ಸಂಬಂಧ ಅವರು 'ಎಕ್ಸ್' ಜಾಲತಾಣದಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಕಾಂಬೋಡಿಯಾದಲ್ಲಿ ಉದ್ಯೋಗಾವಕಾಶ ಕುರಿತು ಆಮಿಷ ಒಡ್ಡುವ ಮಾನವ ಕಳ್ಳಸಾಗಣೆ ಕುರಿತು ಜಾಗ್ರತೆ ಇರಬೇಕು. ಉದ್ಯೋಗದಾತರ ಹಿನ್ನೆಲೆ ಪರಿಶೀಲಿಸಬೇಕು ಎಂದು ವಿದೇಶಗಳಲ್ಲಿ ಉದ್ಯೋಗದ ನಿರೀಕ್ಷೆಯಲ್ಲಿರುವ ಭಾರತೀಯರಿಗೆ ಸಚಿವಾಲಯವು ಸಲಹೆ ಮಾಡಿದೆ.

ಅಪಘಾತ: 3 ಮಂದಿ ಸಾವು, 26 ಯೋಧರಿಗೆ ಗಾಯ

ಸಿವನಿ, ಮಧ್ಯಪ್ರದೇಶ (ಪಿಟಿಐ): ವಿಶೇಷ ಸೇನಾಪಡೆಯ (ಎಸ್‌ಎಎಫ್) ಯೋಧರಿದ್ದ ಬಸ್ ಮತ್ತು ಕಾರಿನ ನಡುವೆ ಶನಿವಾರ ಬೆಳಿಗ್ಗೆ ಸಂಭವಿಸಿದ ಅಪಘಾತದಲ್ಲಿ ಮೂವರು ಮೃತಪಟ್ಟಿದ್ದು, 26 ಯೋಧರು ಗಾಯಗೊಂಡರು.

ಸಿವನಿ–ಮಂಡಲಾ ರಾಜ್ಯ ಹೆದ್ದಾರಿಯಲ್ಲಿ ಧನಗಢ ಬಳಿ ಅಪಘಾತ ಸಂಭವಿಸಿದೆ. ಗಾಯಗೊಂಡಿರುವ ಯೋಧರೊಬ್ಬರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಎಸ್‌ಎಎಫ್‌ನ 35ನೇ ಬೆಟಾಲಿಯನ್‌ಗೆ ಸೇರಿದ ಬಸ್ ಮಂಡಲಾದಿಂದ ಪಾಂಢುರಣಾಗೆ ತೆರಳುತ್ತಿತ್ತು. ಕಾರಿನಲ್ಲಿದ್ದ, ಮಂಡಲಾ ನಿವಾಸಿಗಳಾದ ಮೂವರು ಮೃತಪಟ್ಟರು. ಬಸ್ ಮುಗುಚಿ, 26 ಯೋಧರು ಗಾಯಗೊಂಡರು ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯಸಭೆ: ಪ್ರಮಾಣ ವಚನ ಸ್ವೀಕರಿಸಿದ ನಡ್ಡಾ

ನವದೆಹಲಿ (ಪಿಟಿಐ): ಹೊಸದಾಗಿ ರಾಜ್ಯಸಭೆಗೆ ಆಯ್ಕೆ ಆಗಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಇತರ ಐವರು ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು.

ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಅವರು ಅವರಿಗೆ ಪ್ರಮಾಣ ವಚನ ಬೋಧಿಸಿದರು.

ನಡ್ಡಾ ಅವರ ಜೊತೆ ಅಶೋಕ್‌ರಾವ್ ಶಂಕರ್‌ರಾವ್ ಚವ್ಹಾಣ್ (ಮಹಾರಾಷ್ಟ್ರ), ಚುನ್ನೀಲಾಲ್ ಗರಾಸಿಯಾ (ರಾಜಸ್ಥಾನ), ಅನಿಲ್ ಕುಮಾರ್ ಯಾದವ್ ಮಂದಡಿ (ತೆಲಂಗಾಣ), ಸುಶ್ಮಿತಾ ದೇವ್ ಮತ್ತು ಮೊಹಮ್ಮದ್ ನದಿಮುಲ್ ಹಕ್ (ಪಶ್ಚಿಮ ಬಂಗಾಳ) ಅವರೂ ಪ್ರಮಾಣ ವಚನ ಸ್ವೀಕರಿಸಿದರು.

ದೆಹಲಿ: ಕಳ್ಳಸಾಗಣೆ ಜಾಲ ಬಯಲು- ಏಳು ಮಂದಿ ಬಂಧನ

ಸಿಬಿಐನಿಂದ ನವಜಾತ ಶಿಶುಗಳ ರಕ್ಷಣೆ

ಮುಖ್ಯಾಂಶಗಳು

- **ದೆಹಲಿ ಮತ್ತು ಹರಿಯಾಣದ ಏಳು ಸ್ಥಳಗಳಲ್ಲಿ ಶೋಧ**
- **ಒಂದೂವರೆ, 15 ದಿನಗಳ ಶಿಶುಗಳ ರಕ್ಷಣೆ**

ನವದೆಹಲಿ (ಪಿಟಿಐ): ಮಕ್ಕಳ ಕಳ್ಳಸಾಗಣೆ ಜಾಲವನ್ನು ಭೇದಿಸಿದ ಸಿಬಿಐ, 3 ನವಜಾತ ಶಿಶುಗಳನ್ನು ರಕ್ಷಿಸಿ, 7 ಮಂದಿಯನ್ನು ಬಂಧಿಸಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ದೇಶದಾದ್ಯಂತ ಮಕ್ಕಳ ಕಳ್ಳ ಸಾಗಣೆ ಜಾಲ ಹರಡಿರುವ ಬಗೆಗಿನ ಖಚಿತ ಮಾಹಿತಿ ಮೇರೆಗೆ ಕೇಂದ್ರ ತನಿಖಾ ಸಂಸ್ಥೆಯ ಅಧಿಕಾರಿಗಳು ಶುಕ್ರವಾರ ಸಂಜೆ ದೆಹಲಿ ಮತ್ತು ಹರಿಯಾಣದ 7 ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ.

ಒಂದೂವರೆ ದಿನ ಮತ್ತು 15 ದಿನಗಳ ಹಿಂದೆ ಜನಿಸಿದ್ದ ಎರಡು ಗಂಡು ಶಿಶುಗಳು ಮತ್ತು ಒಂದು ತಿಂಗಳಿನ ಹೆಣ್ಣುಮಗುವನ್ನು ಅಧಿಕಾರಿಗಳು ರಕ್ಷಿಸಿದ್ದಾರೆ. ಇದರೊಂದಿಗೆ ₹5.5 ಲಕ್ಷ ಹಣ ಮತ್ತು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಮಗುವನ್ನು ಮಾರಾಟ ಮಾಡಿದ ಮಹಿಳೆ ಮತ್ತು ಖರೀದಿಸಿದ ವ್ಯಕ್ತಿ ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಜೊತೆಗೆ ಇತರ ಶಂಕಿತರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ತನಿಖಾ ಸಂಸ್ಥೆ ಅಧಿಕಾರಿಗಳು ತಿಳಿಸಿದರು.



ಆರೋಪಿಗಳು ಸಾಮಾಜಿಕ ಜಾಲ ತಾಣಗಳಾದ ಫೇಸ್‌ಬುಕ್ ಪೇಜ್ ಮತ್ತು ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಜಾಹೀರಾತು ನೀಡುವ ಮೂಲಕ ಮಕ್ಕಳಿಲ್ಲದ ದಂಪತಿಗಳನ್ನು ಸಂಪರ್ಕಿಸುತ್ತಿದ್ದರು.

ಮಕ್ಕಳು ಬೇಡವೆನ್ನುವ ಪೋಷಕರು ಮತ್ತು ಬಾಡಿಗೆ ತಾಯಂದಿರಿಂದ ಮಕ್ಕಳನ್ನು ಖರೀದಿಸಿ ₹4 ಲಕ್ಷದಿಂದ 6 ಲಕ್ಷ ಹಣಕ್ಕೆ ಮಾರಾಟ ಮಾಡುತ್ತಿದ್ದರು. ಇದರೊಂದಿಗೆ ಆರೋಪಿಗಳು ದತ್ತು ಪ್ರಕ್ರಿಯೆಗೆ ಸಂಬಂಧಿಸಿದ ನಕಲಿ ದಾಖಲೆಗಳನ್ನು ಸೃಷ್ಟಿಸಿ ಹಲವು ದಂಪತಿಗಳಿಗೆ ಲಕ್ಷಾಂತರ ರೂಪಾಯಿ ಹಣ ವಂಚಿಸಿದ್ದಾರೆ ಎನ್ನುವ ಆರೋಪಗಳಿವೆ.

ಬಂಧಿತರಲ್ಲಿ ನೀರಜ್ ಎಂಬಾತ ಹರಿಯಾಣ ಮೂಲದವನಾಗಿದ್ದು, ಇಂದು ಪವಾರ್, ಅಸ್ಲಾಮ್, ಪೂಜಾ ಕಶ್ಯಪ್, ರಿತು, ಅಂಜಲಿ ಮತ್ತು ಕವಿತಾ ದೆಹಲಿ ಮೂಲದವರು.



ಮೊದಲ ವಿಕೆಟ್‌ಗೆ ಶತಕದ ಜೊತೆಯಾಟ • ರಾಜಸ್ಥಾನಕ್ಕೆ ಸವಾಲಿನ ಗುರಿ ನೀಡಿದ ಆರ್‌ಸಿಬಿ

'ವಿರಾಟ್' ಆಟವಾಡಿದ ಕೊಹ್ಲಿ

ಜೈಪುರ (ಪಿಟಿಐ): ರನ್ ಯಂತ್ರ ವಿರಾಟ್ ಕೊಹ್ಲಿ ಅವರು ಐಪಿಎಲ್‌ನ 17ನೇ ಆವೃತ್ತಿಯಲ್ಲಿ ಮೊದಲ ಶತಕ ಹೊಡೆದ ಗೌರವಕ್ಕೆ ಪಾತ್ರರಾದರು. ರಾಜಸ್ಥಾನ ರಾಯಲ್ಸ್ ವಿರುದ್ಧ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅವರ ಅಜೇಯ 113 ರನ್‌ಗಳ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 3 ವಿಕೆಟ್‌ಗೆ 183 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು.

ಇದು ಐಪಿಎಲ್‌ನಲ್ಲಿ ಕೊಹ್ಲಿ ಅವರಿಗೆ ಎಂಟನೇ ಶತಕ. ವಿಶೇಷ ಎಂದರೆ ಇದು ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ಐಪಿಎಲ್‌ನಲ್ಲಿ ದಾಖಲಾದ ಕೇವಲ ಎರಡನೇ ಶತಕ. ಅಜಿಂಕ್ಯ ರಹಾನೆ 2019ರಲ್ಲಿ ಡೆಲ್ಲಿ ವಿರುದ್ಧ 105 ರನ್ ಗಳಿಸಿದ್ದು ಮೊದಲನೆಯದು. 72 ಎಸೆತಗಳನ್ನು ಎದುರಿಸಿದ ಅವರು 12 ಬೌಂಡರಿ, 4 ಸಿಕ್ಸರ್‌ಗಳನ್ನು ಬಾರಿಸಿದರು.

ಬ್ಯಾಟಿಂಗಿಗೆ ಕಳುಹಿಸಲ್ಪಟ್ಟ ರಾಯಲ್ ಚಾಲೆಂಜರ್ಸ್ ತಂಡ ಈ ಋತುವಿನಲ್ಲಿ ಇದೇ ಮೊದಲ ಬಾರಿ ಉತ್ತಮ ಆರಂಭ ಪಡೆಯಿತು. ಕೊಹ್ಲಿ ಮತ್ತು ನಾಯಕ ಫಫ್ ಡುಪ್ಲೆಸಿ (44, 33 ಎಸೆತ) ಮೊದಲ ವಿಕೆಟ್‌ಗೆ 77 ಎಸೆತಗಳಲ್ಲಿ 125 ರನ್ ಸೇರಿಸಿದ್ದರು.

ಆದರೆ ಬೆಂಗಳೂರು ತಂಡ ನಂತರ ರನ್ ವೇಗ ಹೆಚ್ಚಿಸಲಾಗಲಿಲ್ಲ. ಮಧ್ಯಮ ಹಂತದಲ್ಲಿ ಸ್ಪಿನ್ನರ್‌ಗಳಾದ ರವಿಚಂದ್ರನ್ ಅಶ್ವಿನ್ ಮತ್ತು ಚಾಹಲ್ ಜೋಡಿ ರನ್ ವೇಗಕ್ಕೆ ಲಗಾಮು ಹಾಕಿತು. ಅನುಭವಿ ಅಶ್ವಿನ್ ನಾಲ್ಕು ಓವರುಗಳಲ್ಲಿ 28 ರನ್ ನೀಡಿದರು. ಚಾಹಲ್ 34 ರನ್ ನೀಡಿದರೂ ಎರಡು ವಿಕೆಟ್ ಪಡೆದರು. ಕೊಹ್ಲಿ 67 ರನ್ ಗಳಿಸಿದ್ದಾಗ, ಅವರ ಬೌಲಿಂಗ್‌ನಲ್ಲಿ ಬರ್ಗರ್ ಅವರಿಂದ ಜೀವದಾನ ಪಡೆದಿದ್ದರು.

ಚಾಹಲ್ ಮಾಡಿದ್ದ 14ನೇ ಓವರ್‌ನಲ್ಲಿ ಬೌಲ್ಟ್ ಅವರು ಸುಲಭ ಕ್ಯಾಚ್ ಬಿಟ್ಟರೂ, ಡುಪ್ಲೆಸಿ, ಅದರ ಲಾಭ ಪಡೆಯಲಿಲ್ಲ, ಮರು ಎಸೆತದಲ್ಲೇ ಲಾಂಗ್‌ಆನ್‌ನಲ್ಲಿ ಬಟ್ಲರ್ ಒಳ್ಳೆಯ ಕ್ಯಾಚ್ ಹಿಡಿದರು.

ಆದರೆ ಕೊಹ್ಲಿ ಅವರಿಗೆ ಉಳಿದವರಿಂದ ಬೆಂಬಲ ಸಿಗಲಿಲ್ಲ. ಮ್ಯಾಕ್ಸ್‌ವೆಲ್ ಮತ್ತೊಮ್ಮೆ ವಿಫಲರಾದರು. ಒಂದೇ ರನ್ ಗಳಿಸಿದ ಅವರು ಬರ್ಗರ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಮೊದಲ ಪಂದ್ಯ ಆಡುವ ಅವಕಾಶ ಪಡೆದ ಸೌರವ್ ಚೌಹಾನ್ ಒಂದು ಸಿಕ್ಸರ್ ಎತ್ತಿದರೂ ಹೆಚ್ಚು ಹೊತ್ತು ನಿಲ್ಲಲಿಲ್ಲ. 19ನೇ ಓವರ್‌ನಲ್ಲಿ (18.4) ಕೊಹ್ಲಿ ಅವರು ಬರ್ಗರ್ ಬೌಲಿಂಗ್‌ನಲ್ಲಿ ಬೌಲರ್ ತಲೆಯ ಮೇಲಿಂದ ಚೆಂಡನ್ನು ಎತ್ತಿ ಒಂದು ರನ್ ಗಳಿಸಿ ಶತಕ ಪೂರೈಸಿ ಸಂಭ್ರಮಿಸಿದರು. ಇದು ಕಳೆದ ಏಳು ಐಪಿಎಲ್ ಇನಿಂಗ್ಸ್‌ಗಳಲ್ಲಿ ಅವರಿಗೆ ಮೂರನೇ ಶತಕ. ಕೊನೆಯ ಐದು ಓವರುಗಳಲ್ಲಿ 54 ರನ್‌ಗಳು ಬಂದವು.

'ನಾನು ತುಂಬಾ ಆಕ್ರಮಣಕಾರಿಯಾಗಲು ಬಯಸಿರಲಿಲ್ಲ. ಬೌಲರ್‌ಗಳು ಯೋಚಿಸುವಂತೆ ಆಡಿದ್ದೆ. ಅವರು ಆಕ್ರಮಣಕಾರಿ ಆಟಕ್ಕೆ ಹೋಗಿ ನಾನು ವಿಕೆಟ್ ನೀಡಬಹುದೆಂದು ಯೋಚಿಸುತ್ತಿದ್ದರು' ಎಂದು ಇನಿಂಗ್ಸ್ ನಂತರ ಕೊಹ್ಲಿ ಪ್ರತಿಕ್ರಿಸಿದರು.

ಕೊಹ್ಲಿ ಸದ್ಯ ಐದು ಪಂದ್ಯಗಳಿಂದ 316 ರನ್ ಗಳಿಸಿ ಬ್ಯಾಟರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ.


ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಐಪಿಎಲ್‌ನಲ್ಲಿ ಗರಿಷ್ಠ ಶತಕ ಗಳಿಸಿದವರು

ಆಟಗಾರ	ಪಂದ್ಯ	ಶತಕ
ವಿರಾಟ್ ಕೊಹ್ಲಿ	242	8
ಕ್ರಿಸ್ ಗೇಲ್	142	6
ಜೋಸ್ ಬಟ್ಲರ್	100	5
ಕೆ.ಎಲ್.ರಾಹುಲ್	121	4
ಶೇನ್ ವಾಟ್ಸನ್	145	4
ಡೇವಿಡ್ ವಾರ್ನರ್	180	4

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 3ಕ್ಕೆ183 (20 ಓವರುಗಳಲ್ಲಿ)
ಕೊಹ್ಲಿ ಔಟಾಗದೆ 113 (72ಎ, 4x12, 6x4)
ಡುಪ್ಲೆಸಿ ಸಿ ಬಟ್ಲರ್ ಬಿ ಚಾಹಲ್ 44 (33, 4x2, 6x2)
ಮ್ಯಾಕ್ಸ್‌ವೆಲ್ ಬಿ ಬರ್ಗರ್ 1 (3)
ಸೌರವ್ ಸಿ ಜೈಸ್ವಾಲ್ ಬಿ ಚಾಹಲ್ 9 (6ಎ, 6x1)
ಗ್ರೀನ್ ಔಟಾಗದೆ 5 (6ಎ)
ಇತರೆ: 11 (ಲೆಗ್ ಬೈ 2, ವೈಡ್ 9)
ವಿಕೆಟ್ ಪತನ: 1–125 (ಫಫ್ ಡುಪ್ಲೆಸಿ, 13.6), 2–128 (ಗ್ಲೆನ್ ಮ್ಯಾಕ್ಸ್‌ವೆಲ್, 14.5), 3–155 (ಸೌರವ್ ಚೌಹಾನ್, 17.2)
ಬೌಲಿಂಗ್: ಟ್ರೆಂಟ್ ಬೌಲ್ಟ್ 3–0–30–0; ನಾಂದ್ರೆ ಬರ್ಗರ್ 4–0–33–1; ರವಿಚಂದ್ರನ್ ಅಶ್ವಿನ್ 4–0–28–0; ಆವೇಶ್ ಖಾನ್ 4–0–46–0; ಯಜುವೇಂದ್ರ ಚಾಹಲ್ 4–0–34–2; ರಿಯಾನ್ ಪರಾಗ್ 1–0–10–0


ಲಖನೌ ಸೂಪರ್‌ಜೈಂಟ್ಸ್ ತಂಡದ ಮಾಯಂಕ್ ಯಾದವ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	3	3	0	6	2.518
ರಾಜಸ್ಥಾನ ರಾಯಲ್ಸ್	3	3	0	6	1.249
ಚೆನ್ನೈ ಸೂಪರ್ ಕಿಂಗ್ಸ್	4	2	2	4	0.517
ಲಖನೌ ಸೂಪರ್ ಜೈಂಟ್ಸ್	3	2	1	4	0.483
ಸನ್‌ರೈಸರ್ಸ್ ಹೈದರಾಬಾದ್	4	2	2	4	0.409
ಪಂಜಾಬ್ ಕಿಂಗ್ಸ್	4	2	2	4	-0.220
ಗುಜರಾತ್ ಟೈಟನ್ಸ್	4	2	2	4	-0.580
ರಾಯಲ್ ಚಾಲೆಂಜರ್ಸ್ ಬೆಂಗಳೂರು	4	1	3	2	-0.876
ಡೆಲ್ಲಿ ಕ್ಯಾಪಿಟಲ್ಸ್	4	1	3	2	-1.347
ಮುಂಬೈ ಇಂಡಿಯನ್ಸ್	3	0	3	0	-1.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (316 ರನ್)
ಪರ್ಪಲ್ ಕ್ಯಾಪ್: ಯಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (8 ವಿಕೆಟ್)

ಸೂಪರ್‌ಜೈಂಟ್ಸ್– ಗುಜರಾತ್ ಟೈಟನ್ಸ್ ಪಂದ್ಯ ಇಂದು

ಮಯಂಕ್, ಮೋಹಿತ್ ಮೇಲೆ ಕಣ್ಣು

ಲಖನೌ (ಪಿಟಿಐ): ವೇಗದ ಬೌಲಿಂಗ್‌ನ ಯುವತಾರೆ ಮಯಂಕ್ ಯಾದವ್ ಅವರ ಅಮೋಘ ದಾಳಿಯಿಂದಾಗಿ ಸತತ ಎರಡು ಪಂದ್ಯಗಳಲ್ಲಿ ಜಯಿಸಿರುವ ಲಖನೌ ಸೂಪರ್ ಜೈಂಟ್ಸ್ ಭಾನುವಾರ ಗುಜರಾತ್ ಟೈಟನ್ಸ್ ವಿರುದ್ಧ ಕಣಕ್ಕಿಳಿಯಲಿದೆ.

ಕೆ.ಎಲ್. ರಾಹುಲ್ ನಾಯಕತ್ವದ ತಂಡವು ಹ್ಯಾಟ್ರಿಕ್ ಗೆಲುವಿನ ವಿಶ್ವಾಸದಲ್ಲಿದೆ. ಶರವೇಗದ ಎಸೆತಗಳನ್ನು ಪ್ರಯೋಗಿಸುವ ಮೂಲಕ ಮಯಂಕ್ ಎಲ್ಲರ ಗಮನ ಸೆಳೆದಿದ್ದಾರೆ. 21 ವರ್ಷದ ಮಯಂಕ್ ಪಂಜಾಬ್ ಕಿಂಗ್ಸ್ ಎದುರು (27ಕ್ಕೆ3) ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು (14ಕ್ಕೆ3) ಮಿಂಚಿದ್ದರು. ಪಂಜಾಬ್ ತಂಡದ ಅನುಭವಿ ಬ್ಯಾಟರ್ ಜಾನಿ ಬೆಸ್ಟೊ ಹಾಗೂ ಆರ್‌ಸಿಬಿಯ ಗ್ಲೆನ್ ಮ್ಯಾಕ್ಸ್‌ವೆಲ್ (151 ಕಿ.ಮೀ) ವಿಕೆಟ್‌ಗಳನ್ನು ಗಳಿಸಿದ್ದ ಅವರ ಎಸೆತಗಳಿಗೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಭಾರತ ತಂಡದ ಭವಿಷ್ಯದ ವೇಗಿ ಎಂದೂ ಅವರನ್ನು ಬಣ್ಣಿಸಲಾಗುತ್ತಿದೆ.

ಇನ್ನಷ್ಟು ಉನ್ನತ ಸ್ಥಾನಕ್ಕೇರಲು ಅವರಿಗೆ ಎರಡೇ ಪಂದ್ಯಗಳ ಸಾಧನೆ ಮಾತ್ರ ಅವರಿಗೆ ಸಾಕಾಗದು. ಮುಂಬರುವ ಕಠಿಣ ಹಣಾಹಣಿಗಳಲ್ಲಿಯೂ ಅವರು ತಮ್ಮ ಸಾಮರ್ಥ್ಯ ಮೆರೆಯುವುದುಅನಿವಾರ್ಯವಾಗಲಿದೆ.

ಲಖನೌ ತಂಡದ ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್, ಮಧ್ಯಮಕ್ರಮಾಂಕದಲ್ಲಿ ನಿಕೋಲಸ್ ಪೂರನ್, ದೇವದತ್ತ ಪಡಿಕ್ಕಲ್, ಕೃಣಾಲ್ ಪಾಂಡ್ಯ ಮತ್ತು ಆಸ್ಟ್ರೇಲಿಯಾ ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್ ಅವರಿರುವ ಬ್ಯಾಟಿಂಗ್ ವಿಭಾಗವು ಬಲಾಢ್ಯವಾಗಿದೆ. ಯಾದವ್ ಅವರೊಂದಿಗೆ ಮೊಹಸಿನ್ ಖಾನ್, ಲೆಗ್‌ಸ್ಪಿನ್ನರ್ ರವಿ ಬಿಷ್ಣೋಯಿ ಹಾಗೂ ನವೀನ್ ಉಲ್ ಹಕ್ ಅವರಿರುವ ಬೌಲಿಂಗ್ ವಿಭಾಗವೂ ಸಮರ್ಥವಾಗಿದೆ. ಆದರೆ ರಾಹುಲ್ ತಮ್ಮ ಬ್ಯಾಟಿಂಗ್‌ನಲ್ಲಿ ಲಯಕ್ಕೆ ಮರಳಬೇಕಿದೆ.

ಲಖನೌ ತಂಡವು ಟೂರ್ನಿಯಲ್ಲಿ ಮೂರು ಪಂದ್ಯಗಳನ್ನು ಆಡಿದೆ. ಅದರಲ್ಲಿ ಎರಡರಲ್ಲಿ ಗೆದ್ದು ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಇನ್ನೊಂದೆಡೆ ಹೊಸ ನಾಯಕ ಶುಭಮನ್ ಗಿಲ್ ಟೂರ್ನಿಯಲ್ಲಿ ಇದುವರೆಗೆ ಮಿಶ್ರಫಲ ಪಡೆದಿದ್ದಾರೆ. ನಾಲ್ಕು ಪಂದ್ಯಗಳಲ್ಲಿ ಎರಡು ಗೆದ್ದಿರುವ ತಂಡವು ಇನ್ನೆರಡರಲ್ಲಿ ಸೋತಿದೆ.

ಕಳೆದ ಪಂದ್ಯದಲ್ಲಿ 48 ಎಸೆತಗಳಲ್ಲಿ 89 ರನ್‌ಗಳನ್ನು ಹೊಡೆದಿರುವ ಗಿಲ್ ಲಯಕ್ಕೆ ಮರಳಿದರು. ಬಿ. ಸಾಯಿ ಸುದರ್ಶನ್ ಉತ್ತಮವಾಗಿ ಆಡಿದ್ದಾರೆ. ಆದರೆ ವೃದ್ಧಿಮಾನ್ ಸಹಾ ಹಾಗೂ ವಿಜಯಶಂಕರ್ ಲಯಕ್ಕೆ ಮರಳಬೇಕಿದೆ.

ಅನುಭವಿ ಬೌಲರ್ ಮೋಹಿತ್ ಶರ್ಮಾ ಅವರು ಉತ್ತಮವಾಗಿ ಆಟವಾಡುತ್ತಿರುವುದು ಗುಜರಾತ್ ತಂಡಕ್ಕೆ ಹೆಚ್ಚಿನ ಬಲ ಬಂದಂತಾಗಿದೆ. ಉಮೇಶ್ ಯಾದವ್, ರಶೀದ್ ಖಾನ್ ಮತ್ತು ನೂರ್ ಅಹಮದ್ ಅವರೂ ತಂಡದ ಬೌಲಿಂಗ್ ವಿಭಾಗದ ಪ್ರಮುಖರಾಗಿದ್ದಾರೆ. ಪಂಜಾಬ್ ಕಿಂಗ್ಸ್ ಎದುರಿನ ಪಂದ್ಯದಲ್ಲಿ ಆಗಿದ್ದ ಲೋಪ ಸುಧಾರಿಸಿಕೊಂಡು ಕಣಕ್ಕಿಳಿಯುವ ಸವಾಲು ಗುಜರಾತ್ ಬೌಲರ್‌ಗಳ ಮುಂದಿದೆ.

ಪಂದ್ಯ ಆರಂಭ: ರಾತ್ರಿ 7.30


ಗುಜರಾತ್ ಟೈಟನ್ಸ್ ತಂಡದ ಬೌಲರ್ ಮೋಹಿತ್ ಶರ್ಮಾ –ಪಿಟಿಐ ಚಿತ್ರ

ಮುಂಬೈ ಇಂಡಿಯನ್ಸ್– ಡೆಲ್ಲಿ ಕ್ಯಾಪಿಟಲ್ಸ್ ಮುಖಾಮುಖಿ ಇಂದು

ಪ್ರಖರವಾಗಿ ಬೆಳಗುವರೇ 'ಸೂರ್ಯಕುಮಾರ್'?

ಮುಂಬೈ (ಪಿಟಿಐ): ಫಿಟ್ ಆಗಿ ತಂಡಕ್ಕೆ ಮರಳಿರುವ ಟಿ20 ಪರಿಣತ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರಿಂದ ಮುಂಬೈ ತಂಡ ಈಗ ಒಳ್ಳೆಯ ಕೊಡುಗೆ ನಿರೀಕ್ಷಿಸುತ್ತಿದೆ. ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಭಾನುವಾರ ಮಧ್ಯಾಹ್ನ ನಡೆಯುವ ಐಪಿಎಲ್ ಪಂದ್ಯದಲ್ಲಿ ಎದುರಿಸಲಿರುವ ಮುಂಬೈ ಇಂಡಿಯನ್ಸ್ ಆರಂಭದ ಹಿನ್ನಡೆಯಿಂದ ಹೊರಬರುವ ಯತ್ನದಲ್ಲಿದೆ.

ಮುಂಬೈ ತಂಡ ಸತತ ಮೂರು ಸೋಲುಗಳೊಡನೆ ಈ ಋತುವನ್ನು ಶುರು ಮಾಡಿದ್ದು, ಇಂಥ ಆರಂಭ ತಂಡಕ್ಕೆ ಹೊಸದೇನಲ್ಲ. ಈಗ ಪಾಯಿಂಟ್ ಪಟ್ಟಿಯಲ್ಲಿ ಮುಂಬೈ ತಳದಲ್ಲಿದ್ದರೆ, ಡೆಲ್ಲಿ ಕ್ಯಾಪಿಟಲ್ಸ್ ಒಂಬತ್ತನೇ ಸ್ಥಾನದಲ್ಲಿದೆ. ಡೆಲ್ಲಿ ತನ್ನ ಕೊನೆಯ ಪಂದ್ಯದಲ್ಲಿ ಕೆಕೆಆರ್ ಕೈಲಿ ಹೀನಾಯವಾಗಿ ಸೋತಿತ್ತು. ಆಡಿದ ನಾಲ್ಕರಲ್ಲಿ ಮೂರು ಸೋತಿದೆ.

ಟಿ20 ವಿಶ್ವಕಪ್ ಹತ್ತಿರದಲ್ಲೇ ಇರುವುದರಿಂದ ಸೂರ್ಯ ಅವರ ಪ್ರದರ್ಶನದ ಮೇಲೆ ಎಲ್ಲರ ಕಣ್ಣಿದೆ. ಅವರ ಲಯ ಮತ್ತು ಫಿಟ್ನೆಸ್ ಎರಡೂ ಭಾರತ ತಂಡದ ಅಭಿಯಾನದಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಪಾದದ ಗಾಯ ಮತ್ತು ಸ್ಪೋರ್ಟ್ಸ್ ಹರ್ನಿಯಾದಿಂದ ಅವರು ಮೂರು ತಿಂಗಳು ಕ್ರಿಕೆಟ್‌ನಿಂದ ದೂರವಿದ್ದರು.

ಶುಕ್ರವಾರ ತಂಡದ ಜೊತೆ ಮೊದಲ ಬಾರಿ ಸಿದ್ಧತೆಯಲ್ಲಿ ಕಾಣಿಸಿಕೊಂಡರು. ಆದರೆ ಬ್ಯಾಟಿಂಗ್ ವೇಳೆ ಅವರು ತೊಂದರೆಯಲ್ಲಿದ್ದಂತೆ ಕಾಣಲಿಲ್ಲ. ಈಗ ತಂಡದ ಪ್ರಮುಖ ಬ್ಯಾಟರ್‌ಗಳು ಪರದಾಡುತ್ತಿರುವ ವೇಳೆ ಸೂರ್ಯ ಹೆಗಲ ಮೇಲೆ ಹೆಚ್ಚಿನ ಭಾರವಿದೆ.

ತಂಡಕ್ಕೆ ಓಪನರ್‌ಗಳಾಗಿ ರೋಹಿತ್ ಶರ್ಮಾ ಮತ್ತು ಇಶಾನ್ ಕಿಶನ್ ಅಂಥ ತಾರೆಗಳಿದ್ದರೂ, ಇಬ್ಬರೂ ದೊಡ್ಡ ಮೊತ್ತ ಗಳಿಸಿಲ್ಲ. ತಿಲಕ್ ವರ್ಮಾ ಮತ್ತು ನಮನ್ ಧೀರ್ ಕೂಡ ನಿರೀಕ್ಷಿತ ಮಟ್ಟದಲ್ಲಿ ಆಡಿಲ್ಲ. ಹಾರ್ದಿಕ್ ಪಾಂಡ್ಯ ಅವರಿಗೂ ತಂಡದಲ್ಲಿ ಸ್ಫೂರ್ತಿಯ ವಾತಾವರಣ ಮೂಡಿಸಲು ಆಗಿಲ್ಲ. ಪಾಂಡ್ಯ ಅವರೇ ಪ್ರೇಕ್ಷಕರ ಮೂದಲಿಕೆಗೆ ಒಳಗಾಗಿದ್ದಾರೆ. ಭಾನುವಾರ ಪಂದ್ಯಕ್ಕೆ 20,000 ಮಕ್ಕಳು ಬರುವುದರಿಂದ ಅವರು ಸ್ವಲ್ಪ ನಿರಾಶರಾಗಬಹುದು.

ಈ ಹಿಂದಿನ ಪಂದ್ಯದಲ್ಲಿ ಆಕಾಶ್ ಮಧ್ವಾಲ್ ಅವರು ಪಡೆದ ಮೂರು ವಿಕೆಟ್‌ಗಳು ತಂಡದ ಪಾಲಿಗೆ ಬೆಳ್ಳಿಗೆರೆಯಂತೆ ಮೂಡಿದವು. ಬೂಮ್ರಾ ಅವರನ್ನು ಹಿಂದಿ ನಂತೆ ಆರಂಭದಲ್ಲೇ ಬಳಸುತ್ತಿಲ್ಲ. ಕಳೆದ ಪಂದ್ಯ ದಲ್ಲಿ ಅವರು ಬೇಗ ಬೌಲಿಂಗ್ ಮಾಡಿದರೂ, ಎದುರಾಳಿ ರಾಜಸ್ತಾನ ರಾಯಲ್ಸ್‌ಗೆ ಗುರಿ ದೊಡ್ಡದಿರಲಿಲ್ಲ.

ಡೆಲ್ಲಿ ತಂಡದ ಸ್ಟಾರ್ ಆಟಗಾರ ರಿಷಭ್ ಪಂತ್ (152 ರನ್) ನಿಧಾನವಾಗಿ ಲಯಕಂಡಿದ್ದಾರೆ. ಆದರೆ ಕೆಕೆಆರ್ ವಿರುದ್ಧದ ಪಂದ್ಯದಲ್ಲಿ ಡೆಲ್ಲಿ ಬೌಲರ್‌ಗಳ ಪ್ರದರ್ಶನ ಸಪ್ಪೆಯಾಗಿದ್ದು, ಕೆಕೆಆರ್ ತಂಡ 7 ವಿಕೆಟ್‌ಗೆ 272 ರನ್‌ಗಳ ದೊಡ್ಡ ಮೊತ್ತ ಪೇರಿಸಿತ್ತು. ನಂತರ ಡೆಲ್ಲಿ ಬ್ಯಾಟರ್‌ಗಳು ಅಷ್ಟೇನೂ ಹೋರಾಟ ತೋರಿರಲಿಲ್ಲ. ಡೇವಿಡ್ ವಾರ್ನರ್ (148), ಟ್ರಿಸ್ಟನ್ ಸ್ಟಬ್ಸ್ ಕೆಲಮಟ್ಟಿಗೆ ಆಡಿದ್ದಾರೆ. ಆದರೆ ತಂಡ ಪೃಥ್ವಿ ಶಾ ಅವರಿಂದ ದೊಡ್ಡ ಇನಿಂಗ್ಸ್‌ನ ನಿರೀಕ್ಷೆಯಲ್ಲಿದೆ. ಮಿಚೆಲ್ ಮಾರ್ಷ್ ಇದುವರೆಗೆ ನಿರಾಸೆ ಮೂಡಿಸಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್


ಮುಂಬೈ ತಂಡದ ಸೂರ್ಯಕುಮಾರ್ ಯಾದವ್


ಡೆಲ್ಲಿ ಕ್ಯಾಪಿಟಲ್ಸ್ ನಾಯಕ ರಿಷಭ್ ಪಂತ್

ಉತ್ತಮ ಫಾರ್ಮ್‌ನಲ್ಲಿ ರಿಷಭ್ ಪಂತ್: ಗಂಗೂಲಿ


ಮುಂಬೈ (ಪಿಟಿಐ): ವಿಕೆಟ್ ಕೀಪರ್–ಬ್ಯಾಟರ್ ರಿಷಭ್ ಪಂತ್ ಸಂಪೂರ್ಣವಾಗಿ ಫಿಟ್ ಆಗಿದ್ದಾರೆ. ಆದರೆ, ವೆಸ್ಟ್‌ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ಗಾಗಿ ಭಾರತದ ತಂಡದ ಆಯ್ಕೆಗೆ ತಮ್ಮನ್ನು ಸಿದ್ಧಪಡಿಸಲು ಅವರಿಗೆ ಸ್ವಲ್ಪ ಸಮಯ ನೀಡಬೇಕು ಎಂದು ಭಾರತ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಹೇಳಿದರು.

2022ರ ಡಿಸೆಂಬರ್‌ನಲ್ಲಿ ಸಂಭವಿಸಿದ ಕಾರು ಅಪಘಾತದ ಬಳಿಕ ವೃತ್ತಿಪರ ಕ್ರಿಕೆಟ್‌ಗೆ ಮರಳಿದ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿದ್ದಾರೆ. ಐಪಿಎಲ್‌ನಲ್ಲಿ ಸತತ ಅರ್ಧ ಶತಕ ಗಳಿಸುವ ಮೂಲಕ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಭಾರತ ತಂಡಕ್ಕೆ ಆಯ್ಕೆಯಾಗಲು ಪಂತ್ ಸಿದ್ಧರಾಗಿದ್ದಾರೆ ಎಂದು ಭಾವಿಸುತ್ತೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡೆಲ್ಲಿ ಕ್ಯಾಪಿಟಲ್ಸ್ ನಿರ್ದೇಶಕ ಗಂಗೂಲಿ, 'ಇನ್ನೂ ಕೆಲವು ಪಂದ್ಯಗಳು ನಡೆಯಲಿ. ಅವರು ಉತ್ತಮವಾಗಿ ಆಟವಾಡುತ್ತಿದ್ದಾರೆ. ಇನ್ನೊಂದು ವಾರ ಬಿಡಿ, ನಾನು ಆ ಪ್ರಶ್ನೆಗೆ ಉತ್ತರಿಸಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

ಪಂತ್ ಪ್ರಸ್ತುತ ಐಪಿಎಲ್‌ನಲ್ಲಿ ನಾಲ್ಕನೇ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದಾರೆ. ನಾಲ್ಕು ಪಂದ್ಯಗಳಲ್ಲಿ ಸುಮಾರು 160 ಸ್ಟ್ರೈಕ್ ರೇಟ್‌ನಲ್ಲಿ 152 ರನ್ ಗಳಿಸಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು
100ಕ್ಕೆ ₹440
12 ಕ್ಕೆ ₹60
ಮೈಸೂರು
100ಕ್ಕೆ ₹440

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್‌-4 ₹181
ಆರ್‌ಎಸ್‌ಎಸ್‌-5 ₹174
ಗುಡ್ ಲಾಟ್ ₹164.50
(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹200-450
ದ್ವಿತಳಿ (ಬಿ.ವಿ) ₹325-557

ಆಗಸ್ಟ್ 8ಕ್ಕೆ ರೋಬೊ ಟ್ಯಾಕ್ಸಿ ಅನಾವರಣ: ಇಲಾನ್ ಮಸ್ಕ್ ಪ್ರಕಟ

ಟೆಸ್ಲಾದಿಂದ ಚಾಲಕರಹಿತ ಕಾರು

ಸ್ಯಾನ್‌ಫ್ರಾನ್ಸಿಸ್ಕೊ (ಎಎಫ್‌ಪಿ/ ರಾಯಿಟರ್ಸ್): ಅಮೆರಿಕದ ಎಲೆಕ್ಟ್ರಿಕ್ ಕಾರು ತಯಾರಿಕಾ ಕಂಪನಿ ಟೆಸ್ಲಾ ಅಭಿವೃದ್ಧಿಪಡಿಸಿರುವ ಚಾಲಕರಹಿತ ರೋಬೊ ಟ್ಯಾಕ್ಸಿಯು ಆಗಸ್ಟ್ 8ರಂದು ಅನಾವರಣಗೊಳ್ಳಲಿದೆ.


ಇಲಾನ್ ಮಸ್ಕ್

ಟೆಸ್ಲಾ ಮುಖ್ಯಸ್ಥ ಇಲಾನ್ ಮಸ್ಕ್ ಅವರು ಶನಿವಾರ ಈ ಬಗ್ಗೆ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಇದರ ಬೆನ್ನಲ್ಲೇ ಷೇರುಪೇಟೆಯಲ್ಲಿ ಕಂಪನಿಯ ಷೇರಿನ ಮೌಲ್ಯ ಶೇ 3ರಷ್ಟು ಏರಿಕೆಯಾಗಿದೆ.

ಸ್ವಯಂಚಾಲಿತ ರೋಬೊ ಟ್ಯಾಕ್ಸಿಯು ಉತ್ತಮ ಸಾಮರ್ಥ್ಯ ಹೊಂದಿದೆ ಎಂಬ ಮಸ್ಕ್ ಅವರ ಭರವಸೆಯ ಹೊರತಾಗಿಯೂ, ಈ ಕಾರಿನ ವೇಗಮಿತಿ ಮತ್ತು ಸುರಕ್ಷತೆ ಬಗ್ಗೆ ಅಲ್ಲಿನ ಸಾರ್ವಜನಿಕರಲ್ಲಿ ಕಳವಳ ವ್ಯಕ್ತವಾಗಿದೆ.

ಟೆಸ್ಲಾ ಕಾರುಗಳಲ್ಲಿ ಇರುವ ಸ್ವಯಂಚಾಲಿತ ವ್ಯವಸ್ಥೆಗೆ 'ಆಟೊಪೈಲಟ್' ಎಂದು ಕರೆಯ ಲಾಗುತ್ತದೆ. ಈ ತಂತ್ರಜ್ಞಾನ ಹೊಂದಿರುವ ಕಾರುಗಳನ್ನು ಸಮೂಹ ಸಾರಿಗೆ ವ್ಯವಸ್ಥೆಯಾಗಿ ಜನಪ್ರಿಯಗೊಳಿಸುವುದು ಮಸ್ಕ್ ಅವರ ಯೋಜನೆಯಾಗಿದೆ.

ಅಗ್ಗದ ದರದ ಸಣ್ಣ ಕಾರುಗಳ ಉತ್ಪಾದನೆ ಮತ್ತು ಮಾರಾಟಕ್ಕೆ ಟೆಸ್ಲಾ ಮುಂದಾಗಿತ್ತು. ಮಸ್ಕ್ ಅವರ ದೀರ್ಘಕಾಲದ ಈ ಯೋಜನೆಯನ್ನು ಸದ್ಯ ಕಂಪನಿಯು ಕೈಬಿಟ್ಟಿದೆ ಎಂದು ಹೇಳಲಾಗಿದೆ. ಆದರೆ, ಮಸ್ಕ್ ಇದನ್ನು ನಿರಾಕರಿಸಿದ್ದಾರೆ.

ಗೂಗಲ್ ಕಂಪನಿಯ ಸ್ವಯಂಚಾಲಿತ 'ವೇಮೊ' ಕಾರುಗಳು ಈಗಾಗಲೇ ಅಮೆರಿಕದ ರಸ್ತೆಗಳಲ್ಲಿ ಸಂಚರಿಸುತ್ತಿವೆ. ಇವುಗಳ ವಿರುದ್ಧ ಟ್ಯಾಕ್ಸಿ ಚಾಲಕರಿಂದ ವಿರೋಧವೂ ವ್ಯಕ್ತವಾಗಿದೆ. ಅಡ್ಡಾದಿಡ್ಡಿಯಾಗಿ ಚಲಿಸಿದ ಕೆಲವು ಕಾರುಗಳು ಜನರ ಆಕ್ರೋಶಕ್ಕೆ ತುತ್ತಾಗಿ ಬೆಂಕಿಗಾಹುತಿಯಾಗಿವೆ. ಈ ನಡುವೆಯೇ ಜಿಎಂ ಮೋಟರ್ಸ್ ತನ್ನ ಒಡೆತನದ ಸ್ವಯಂಚಾಲಿತ ಕಾರು 'ಕ್ರೂಸ್' ಸೇವೆಯನ್ನು ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಸ್ಥಗಿತಗೊಳಿಸಿದೆ.

ಯೋಜನೆಗೆ ವಿಳಂಬ ಏಕೆ?

2019ರಲ್ಲಿ ಮಸ್ಕ್ ಅವರು ರೋಬೊ ಟ್ಯಾಕ್ಸಿ ಬಗ್ಗೆ ಪ್ರಕಟಿಸಿದ್ದರು. ಈ ಕಾರು ಖರೀದಿಸುವ ಮಾಲೀಕರು ಟ್ಯಾಕ್ಸಿ ಸೇವೆಗೂ ಇದನ್ನು ಬಳಸಬಹುದಾಗಿದೆ ಎಂದು ಹೇಳಿದ್ದರು. 2020ರಲ್ಲಿ ಅಮೆರಿಕದ ರಸ್ತೆಗಳಿಗೆ ಈ ಕಾರುಗಳು ಇಳಿಯಲಿವೆ ಎಂದು ಹೇಳಲಾಗಿತ್ತು.

ಆದರೆ, ಟೆಸ್ಲಾದ ಆಟೊಪೈಲಟ್ ತಂತ್ರಜ್ಞಾನಕ್ಕೆ ಸರ್ಕಾರದ ಪರವಾನಗಿ ಸಿಕ್ಕಿರಲಿಲ್ಲ. ಕಾರಿನ ಸ್ವಯಂಚಾಲಿತ ಬೀಟಾ ಸಾಫ್ಟ್‌ವೇರ್‌ನಲ್ಲಿ ದೋಷವಿರುವ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಸಂಚಾರ ಸುರಕ್ಷತಾ ಆಡಳಿತವು (ಎನ್‌ಎಚ್‌ಟಿಎಸ್‌ಎ) ಆಕ್ಷೇಪ ವ್ಯಕ್ತಪಡಿಸಿತ್ತು.

ಕಾರಿನ ವೇಗದ ಮಿತಿಗೆ ಧಕ್ಕೆ ಅಥವಾ ಅಸುರಕ್ಷಿತ ಚಾಲನೆಗೆ ಈ ಸಾಫ್ಟ್‌ವೇರ್ ಕಾರಣವಾಗಲಿದೆ ಎಂದು ಹೇಳಿತ್ತು. ಹಾಗಾಗಿ, ಕಾರನ್ನು ಮಾರುಕಟ್ಟೆಗೆ ಪರಿಚಯಿಸಲು ವಿಳಂಬವಾಗಿದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭೆ ಚುನಾವಣೆ ಗುರಿಯಾಗಿಸಿ ಚೀನಾ ಎ.ಐ ದುರ್ಬಳಕೆ ಸಾಧ್ಯತೆ

ನ್ಯೂಯಾರ್ಕ್ (ಪಿಟಿಐ): ಚೀನಾ ತನ್ನ ಹಿತಾಸಕ್ತಿಗಾಗಿ ಭಾರತ ಮತ್ತು ಅಮೆರಿಕ ಹಾಗೂ ದಕ್ಷಿಣ ಕೊರಿಯಾದ ಚುನಾವಣೆಗಳನ್ನು ಗುರಿಯಾಗಿಸಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎ.ಐ) ದುರುಪಯೋಗ ಮಾಡಿಕೊಳ್ಳಬಹುದು ಎಂದು ತಂತ್ರಜ್ಞಾನ ವನ್ನು ದೈತ್ಯ ಮೈಕ್ರೊಸಾಫ್ಟ್ ಎಚ್ಚರಿಕೆ ನೀಡಿದೆ.

ಭಾರತದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುತ್ತಿರುವಾಗ ಚೀನಾ ತನ್ನ ಭೌಗೋಳಿಕ ರಾಜಕೀಯ ಹಿತಾಸಕ್ತಿಗೆ ಪೂರಕವಾಗುವಂತೆ, ಜನಾಭಿಪ್ರಾಯ ರೂಪಿಸಲು ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಿದ ವಿಷಯಗಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಹರಿಬಿಡುವ ಸಾಧ್ಯತೆ ಇದೆ. ಸಾರ್ವತ್ರಿಕ ಚುನಾವಣೆ ಮೇಲೆ ಪರಿಣಾಮ ಬೀರುವಂತಹ ಈ ಕೃತ್ಯವನ್ನು ಚೀನಾವು ಉತ್ತರ ಕೊರಿಯಾದ ಜತೆ ಸೇರಿ ನಡೆಸುತ್ತಿದೆ ಎಂದು ಅದು ಎಚ್ಚರಿಸಿದೆ.



'ಈ ವರ್ಷ ಪ್ರಪಂಚದಾದ್ಯಂತ, ಅದರಲ್ಲೂ ವಿಶೇಷವಾಗಿ ಭಾರತ, ದಕ್ಷಿಣ ಕೊರಿಯಾ ಮತ್ತು ಅಮೆರಿಕದಲ್ಲಿ ಪ್ರಮುಖ ಚುನಾವಣೆಗಳು ನಡೆಯುತ್ತಿವೆ. ಚೀನಾ ತನ್ನ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಎ.ಐ.ನಿಂದ ಸೃಷ್ಟಿಸಲಾದ ಒಂದಿಷ್ಟು ವಿಷಯಗಳನ್ನು ಹರಿಯಬಿಡಬಹುದೆಂದು ನಾವು ಅಂದಾಜಿಸಿದ್ದೇವೆ' ಎಂದು ಮೈಕ್ರೊಸಾಫ್ಟ್ ಥ್ರೆಟ್ ಅನಾಲಿಸಿಸ್ ಸೆಂಟರ್‌ನ (ಎಂಟಿಎಸಿ) ಪ್ರಧಾನ ವ್ಯವಸ್ಥಾಪಕ ಕ್ಲಿಂಟ್ ವಾಟ್ಸ್ ಅವರು ಬ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ.

ಹಾರ್ಕಿವ್ ಮೇಲೆ ಕ್ಷಿಪಣಿ ದಾಳಿ: 8 ಸಾವು

ಕೀವ್ (ಎಪಿ): ಉಕ್ರೇನ್‌ನ ದೊಡ್ಡ ನಗರ ಹಾರ್ಕಿವ್ ಮೇಲೆ ಶುಕ್ರವಾರ ರಾತ್ರಿ ರಷ್ಯಾ ಪಡೆಗಳು ಡ್ರೋನ್ ಮತ್ತು ಕ್ಷಿಪಣಿಗಳಿಂದ ದಾಳಿ ನಡೆಸಿವೆ. ಈ ದಾಳಿಯಲ್ಲಿ 8 ನಾಗರಿಕರು ಹತರಾಗಿ, 12 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಕ್ಷಿಪಣಿ ದಾಳಿಯಿಂದ ಜನವಸತಿ ಕಟ್ಟಡಗಳು, ಗ್ಯಾಸ್ ಸ್ಟೇಷನ್, ಶಿಶುವಿಹಾರ, ಕೆಫೆ, ಅಂಗಡಿಗಳು ಹಾಗೂ ಕಾರುಗಳು ಹಾನಿಗೀಡಾಗಿವೆ ಎಂದು ಹಾರ್ಕಿವ್ ನಗರದ ಗವರ್ನರ್ ಒಲೆಹ್ ಸಿನಿಹುಬೊವ್ ಹೇಳಿದ್ದಾರೆ.

'ಇರಾನಿ ನಿರ್ಮಿತ 32 ಶಾಹಿದ್ ಡ್ರೋನ್‌ಗಳು ಮತ್ತು ಆರು ಕ್ಷಿಪಣಿಗಳನ್ನು ರಷ್ಯಾ ಶುಕ್ರವಾರ ರಾತ್ರಿ ಉಡಾಯಿಸಿದೆ. ಇದರಲ್ಲಿ ಮೂರು ಕ್ರೂಸ್ ಕ್ಷಿಪಣಿಗಳು ಮತ್ತು 28 ಡ್ರೋನ್‌ಗಳನ್ನು ನಮ್ಮ ರಕ್ಷಣಾ ಪಡೆಗಳು ಹೊಡೆದುರುಳಿಸಿವೆ' ಎಂದು ಉಕ್ರೇನ್ ಸೇನೆಯ ಲೆಫ್ಟಿನೆಂಟ್ ಜನರಲ್ ಮೈಕೊಲ ಒಲೆಶ್‌ಚುಕ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ರಷ್ಯಾ ಸೇನೆಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಉಕ್ರೇನ್ ಶನಿವಾರ ಬೆಳಿಗ್ಗೆ ರಷ್ಯಾದ ಮೇಲೆ ಕ್ಷಿಪಣಿಗಳನ್ನು ಉಡಾಯಿಸಿದೆ. ಇದರಲ್ಲಿ 10 ಕ್ಷಿಪಣಿಗಳನ್ನು ದೇಶದ ಗಡಿ ಭಾಗದಲ್ಲಿ ವಾಯು ರಕ್ಷಣಾ ವ್ಯವಸ್ಥೆಗಳಿಂದ ಹೊಡೆದುರುಳಿಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

₹263 ಕೋಟಿ ತೆರಿಗೆ: ಯುನೈಟೆಡ್ ಬ್ರೀವರೀಸ್‌ಗೆ ನೋಟಿಸ್

ನವದೆಹಲಿ (ಪಿಟಿಐ): ಬಿಯರ್ ತಯಾರಿಸುವ ಕಂಪನಿ ಯುನೈಟೆಡ್ ಬ್ರೀವರೀಸ್ ಲಿಮಿಟೆಡ್‌ಗೆ ತೆರಿಗೆ, ಬಡ್ಡಿ ಹಾಗೂ ದಂಡ ಸೇರಿ ಒಟ್ಟು ₹263 ಕೋಟಿ ಮೊತ್ತ ಪಾವತಿಸುವಂತೆ ಮಹಾರಾಷ್ಟ್ರದ ಸರಕು ಮತ್ತು ಸೇವಾ ಇಲಾಖೆಯು ನೋಟಿಸ್ ನೀಡಿದೆ.

2019–20ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಜಿಎಸ್‌ಟಿ ವಿಭಾಗದ ಉಪ ಆಯುಕ್ತರು ನೋಟಿಸ್ ನೀಡಿದ್ದಾರೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ತೆಲಂಗಾಣ ರಾಜ್ಯ ಪಾನೀಯ ನಿಗಮ, ಕರ್ನಾಟಕ ರಾಜ್ಯ ಪಾನೀಯ ನಿಗಮ, ಆಂಧ್ರಪ್ರದೇಶ ರಾಜ್ಯ ಪಾನೀಯ ನಿಗಮಕ್ಕೆ ಕಂಪನಿಯಿಂದ ಸಲ್ಲಿಸಿರುವ ಡೆಬಿಟ್ ನೋಟ್ ದಾಖಲೆಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ಶೇ 60ರಷ್ಟು ಕೇಂದ್ರ ಸೇವಾ ತೆರಿಗೆಯ ಮೊತ್ತ ಇದಾಗಿದೆ ಎಂದು ವಿವರಿಸಿದೆ.



ಈ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು. ನೋಟಿಸ್‌ನಿಂದ ಕಂಪನಿಯ ಆರ್ಥಿಕ ಚಟುವಟಿಕೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಎಂದು ತಿಳಿಸಿದೆ.

2018–19ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿ ₹275 ಕೋಟಿ ತೆರಿಗೆ ಪಾವತಿಸುವಂತೆ ಇಲಾಖೆಯು ನೋಟಿಸ್ ನೀಡಿತ್ತು. ಇದರ ವಿರುದ್ಧವೂ ಮೇಲ್ಮನವಿ ಸಲ್ಲಿಸಲಾಗಿತ್ತು ಎಂದು ತಿಳಿಸಿದೆ.

ಶೇ 15ರಷ್ಟು ಉದ್ಯೋಗಿಗಳ ವಜಾ: ಜೀ ನಿರ್ಧಾರ

ನವದೆಹಲಿ (ಪಿಟಿಐ): ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಜೆಡ್‌ಇಇಎಲ್), ವೆಚ್ಚ ಕಡಿತದ ಭಾಗವಾಗಿ ಶೇ15ರಷ್ಟು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿದೆ.

ಕಂಪನಿಯ ಬ್ರಾಡ್‌ಕಾಸ್ಟ್, ಡಿಜಿಟಲ್, ಸಿನಿಮಾ ಹಾಗೂ ಸಂಗೀತ ವಿಭಾಗವನ್ನು ಗ್ರಾಹಕರ ಹತ್ತಿರ ಮತ್ತಷ್ಟು ಕೊಂಡೊಯ್ಯಬೇಕಿದೆ. ಹಾಗಾಗಿ, ತಂಡದ ದಕ್ಷತೆ ಹೆಚ್ಚಿಸುವ ಮೂಲಕ ಕಂಪನಿಯ ಗುರಿ ಸಾಧನೆಗೆ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಪುನಿತ್ ಗೋಯೆಂಕಾ ಅವರು, ಷೇರುಪೇಟೆಗೆ ಮಾಹಿತಿ ನೀಡಿದ್ದಾರೆ.

2022–23ನೇ ಸಾಲಿನ ವಾರ್ಷಿಕ ವರದಿ ಅನ್ವಯ ಕಂಪನಿಯಲ್ಲಿ 3,437 ಕಾಯಂ ಉದ್ಯೋಗಿಗಳು ಇದ್ದಾರೆ.

ವಿಸ್ತಾರಾ: ಒಪ್ಪಂದಕ್ಕೆ ಪೈಲಟ್‌ಗಳ ಸಹಿ

ನವದೆಹಲಿ (ಪಿಟಿಐ): ಪರಿಷ್ಕೃತ ವೇತನ ಒಪ್ಪಂದಕ್ಕೆ ಶೇ98ರಷ್ಟು ಪೈಲಟ್‌ಗಳು ಸಹಿ ಹಾಕಿದ್ದಾರೆ. ಹಾಗಾಗಿ, ಈ ವಾರಾಂತ್ಯದೊಳಗೆ ವಿಸ್ತಾರಾ ಏರ್‌ಲೈನ್ಸ್ ಕಾರ್ಯಾಚರಣೆಯು ಸರಿಯಾದ ಹಳಿಗೆ ಮರಳಲಿದೆ ಎಂದು ಕಂಪನಿಯ ಸಿಇಒ ವಿನೋದ್ ಕಣ್ಣನ್ ಹೇಳಿದ್ದಾರೆ.

'ಕಳೆದ ಮೂರು ದಿನಗಳ ಹಿಂದೆ ವ್ಯತ್ಯಯವಾಗಿದ್ದ ವಿಮಾನ ಸೇವೆಯು ಯಥಾಸ್ಥಿತಿಗೆ ಮರಳುತ್ತಿದೆ. ಕೆಲವು ಪೈಲಟ್‌ಗಳು ಹೊಸ ಒಪ್ಪಂದ ಕುರಿತು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ. ಅವರ ಆತಂಕವನ್ನು ದೂರ ಸರಿಸುವ ಪ್ರಯತ್ನ ನಡೆದಿದೆ' ಎಂದು ತಿಳಿಸಿದ್ದಾರೆ. ವಿಸ್ತಾರಾ ಕಂಪನಿಯಲ್ಲಿ ಒಂದು ಸಾವಿರ ಪೈಲಟ್‌ಗಳಿದ್ದಾರೆ. ಪರಿಷ್ಕೃತ ವೇತನದ ಬಗ್ಗೆ ಕೆಲವು ಪೈಲಟ್‌ಗಳು ಆಕ್ಷೇಪ ವ್ಯಕ್ತಪಡಿಸಿ ಅನಾರೋಗ್ಯದ ರಜೆ ಮೇಲೆ ತೆರಳಿದ್ದರು. ಇದರಿಂದ 100ಕ್ಕೂ ವಿಮಾನಗಳ ಹಾರಾಟ ರದ್ದಾಗಿತ್ತು.

ವಿಪ್ರೊ ಸಿಇಒ ಡೆಲಾಪೋರ್ಟ್ ರಾಜೀನಾಮೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಐ.ಟಿ. ಕಂಪನಿ ವಿಪ್ರೊ ಲಿಮಿಟೆಡ್‌ನ ಸಿಇಒ ಥಿಯರಿ ಡೆಲಾಪೋರ್ಟ್ ಅವರು, ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಹೊಸ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಆಗಿ ಶ್ರೀನಿವಾಸ್ ಪಲ್ಲಿಯಾ ನೇಮಕವಾಗಿದ್ದು, ಭಾನುವಾರ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಡೆಲಾಪೋರ್ಟ್ ಅವರನ್ನು ಮೇ 31ರಂದು ಕಂಪನಿಯ ಉದ್ಯೋಗದಿಂದ ಮುಕ್ತಗೊಳಿಸಲಾಗುವುದು ಎಂದು ವಿಪ್ರೊ ತಿಳಿಸಿದೆ.

ಆಡಳಿತ ಮಂಡಳಿಯ ಸಭೆಯು ಶ್ರೀನಿವಾಸ್ ಅವರ ನೇಮಕಕ್ಕೆ ಒಪ್ಪಿಗೆ ನೀಡಿದೆ. ಮುಂದಿನ ಐದು ವರ್ಷಗಳ ಕಾಲ ಈ ಹುದ್ದೆಯಲ್ಲಿ ಅವರು ಕಾರ್ಯ ನಿರ್ವಹಿಸಲಿದ್ದಾರೆ. ಸಭೆಯ ನಿರ್ಧಾರವು ಷೇರುದಾರರು ಮತ್ತು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಸಂಕ್ಷಿಪ್ತ ಸುದ್ದಿ

ಅಮೆರಿಕದಲ್ಲಿ ಭೂಕಂಪನ

ನ್ಯೂಯಾರ್ಕ್ (ಎಪಿ): ಅಮೆರಿಕದಲ್ಲಿ ಶುಕ್ರವಾರ ಭೂಕಂಪನ ಸಂಭವಿಸಿದ್ದು, ಅನೇಕ ಗಗನಚುಂಬಿ ಕಟ್ಟಡಗಳು ಮತ್ತು ಸುತ್ತಮುತ್ತಲಿನ ಉಪನಗರಗಳನ್ನು ಅಲುಗಾಡಿಸಿದೆ. ಭೂಕಂಪನದ ಕೇಂದ್ರ ಬಿಂದು ನ್ಯೂಯಾರ್ಕ್ ಮತ್ತು ಫಿಲಾಡೆಲ್ಫಿಯಾ ನಗರಗಳ ಮಧ್ಯದಲ್ಲಿದೆ.

'ನ್ಯೂಜೆರ್ಸಿಯ ವೈಟ್‌ಹೌಸ್ ಸ್ಟೇಷನ್ ಬಳಿ ಶುಕ್ರವಾರ ಬೆಳಿಗ್ಗೆ 4.8 ತೀವ್ರತೆಯ ಭೂಕಂಪನ ಸಂಭವಿಸಿದೆ' ಎಂದು ಅಮೆರಿಕದ ಭೌಗೋಳಿಕ ಸರ್ವೇಕ್ಷಣಾ ಸಂಸ್ಥೆ ಹೇಳಿದೆ.

ರಾಜನಾಥ್ ಸಿಂಗ್ ಹೇಳಿಕೆ: ಪಾಕ್ ಟೀಕೆ

ಇಸ್ಲಾಮಾಬಾದ್ (ಪಿಟಿಐ): ಭಾರತದಲ್ಲಿ ಭಯೋತ್ಪಾದಕ ದಾಳಿಗಳನ್ನು ನಡೆಸಿ ಭಯೋತ್ಪಾದಕರು ನೆರೆಯ ರಾಷ್ಟ್ರ ಪಾಕಿಸ್ತಾನಕ್ಕೆ ಓಡಿಹೋದರೆ ಅಲ್ಲಿಗೂ ನುಗ್ಗಿ ಅವರನ್ನು ಸದೆಬಡಿಯುತ್ತೇವೆ ಎಂದು ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೀಡಿರುವ ಹೇಳಿಕೆಯನ್ನು ಪಾಕಿಸ್ತಾನ ಶನಿವಾರ ಟೀಕಿಸಿದೆ.

'ಚುನಾವಣಾ ಲಾಭಕ್ಕಾಗಿ ಇಂತಹ ದ್ವೇಷದ ಹೇಳಿಕೆಯನ್ನು ಭಾರತ ಸರ್ಕಾರದ ಸಚಿವರು ನೀಡಿದ್ದಾರೆ. ಈ ಬೇಜವಾಬ್ದಾರಿ ನಡವಳಿಕೆಯು ಪ್ರಾದೇಶಿಕ ಶಾಂತಿಯನ್ನು ಹಾಳುಮಾಡುತ್ತದೆ. ಮಾತ್ರವಲ್ಲದೆ, ರಚನಾತ್ಮಕ ಪಾಲ್ಗೊಳ್ಳುವಿಕೆಯ ನಿರೀಕ್ಷೆಗಳಿಗೆ ಅಡ್ಡಿಯಾಗುತ್ತದೆ' ಎಂದು ಪಾಕಿಸ್ತಾನ ವಿದೇಶಾಂಗ ಕಚೇರಿ ಹೇಳಿಕೆ ಬಿಡುಗಡೆ ಮಾಡಿದೆ.

ಭಾರತೀಯ ವಿದ್ಯಾರ್ಥಿನಿ ಸಾವು

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಒಹಿಯೊ ರಾಜ್ಯದ ಕ್ಲೀವ್‌ಲೆಂಡ್‌ನಲ್ಲಿ ಭಾರತೀಯ ವಿದ್ಯಾರ್ಥಿನಿಯೊಬ್ಬರು ಮೃತಪಟ್ಟಿದ್ದಾರೆ. ಪ್ರಕರಣದ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಅಲ್ಲಿಯ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಉಮಾ ಸತ್ಯ ಸಾಯಿ ಗದ್ದೆ ಮೃತ ವಿದ್ಯಾರ್ಥಿನಿ.



ಹಿಮಾಲಯನ್ ಸತ್ಯಾಗ್ರಹ

ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಸೋನಂ ವಾಂಗ್‌ಚುಕ್ ಅವರು ಹಿಮಾಲಯ ಪರ್ವತ ಪ್ರದೇಶಗಳ ಉಳಿವಿಗಾಗಿ ಈಚೆಗೆ 21 ದಿನಗಳು ಉಪವಾಸ ಸತ್ಯಾಗ್ರಹ ನಡೆಸಿದರು. ಅತ್ಯಂತ ಸೂಕ್ಷ್ಮ ಜೀವವೈವಿಧ್ಯವನ್ನು ಒಡಲಲ್ಲಿ ಇಟ್ಟುಕೊಂಡಿರುವ ಪರ್ವತ ಶ್ರೇಣಿ ಉತ್ತರ ಭಾರತದ ಹಲವು ನದಿಗಳಿಗೆ, ವಿಶೇಷ ಬುಡಕಟ್ಟು ಜನಾಂಗಗಳಿಗೆ, ವೈವಿಧ್ಯ ಜೀವರಾಶಿಗಳಿಗೆ ಆಶ್ರಯ ನೀಡಿದ್ದು, ಇದೀಗ ಸಂಕಷ್ಟಕ್ಕೆ ಸಿಲುಕಿದೆ.

ಚಿತ್ರ-ಲೇಖನ: ಕೃಪಾಕರ ಸೇನಾನಿ

ಮಾರ್ಚ್ ಕಡೆಯ ವಾರ. ಮುಂಜಾನೆ ನಾವು 'ಲೇಹ್'ನ ವಿಮಾನ ನಿಲ್ದಾಣದಲ್ಲಿ ಇಳಿದಾಗ ಚಳಿ ಹೆಪ್ಪುಗಟ್ಟಿತ್ತು. ಹಿಂದಿನ ರಾತ್ರಿ ಸುರಿದಿದ್ದ ಹಿಮಪಾತ ಪರ್ವತಗಳಿಗೆ ಬಿಳಿಯ ಚಾದರ ಹೊದಿಸಿತ್ತು. ಚಾಲಕ 'ನೋರ್ಬು' ನಮಗಾಗಿ ಕಾದಿದ್ದ. ನಾವು ಇನ್ನೇನು ಅಲ್ಲಿಂದ ಹೊರಡಬೇಕೆಂದಿರುವಾಗ ಪಕ್ಕದ ಟ್ಯಾಕ್ಸಿ ಚಾಲಕ ಇಪ್ಪತ್ತರ ಹರೆಯದ ಯುವಕನೊಬ್ಬ ಹಿಂಜರಿಕೆಯಿಂದ ಮೆಲ್ಲನೆ ನಮ್ಮತ್ತ ಬಂದು 'ನೀವು ಎಲ್ಲಿಂದ ಬಂದಿದ್ದು' ಎಂದು ವಿನಯದಿಂದ ಕೇಳಿದ.

'ಕರ್ನಾಟಕ',

'ಬಂದ ಉದ್ದೇಶ?'

'ಒಂದು ದಿನ ನಿಮ್ಮ ಉಪವಾಸದಲ್ಲಿ ಭಾಗವಹಿಸೋಣ ಎಂದೆನಿಸಿ ಬಂದಿದ್ದೇವೆ'

'ಅದಕ್ಕಾಗಿ ಅಷ್ಟು ದೂರದಿಂದ ಬಂದಿದ್ದೀರಾ?' ಎಂದ ಮೆಲುದನಿಯಲ್ಲಿ.

ಬಹುಶಃ ನಮ್ಮ ಚಾಲಕ 'ನೋರ್ಬು' ಅವನಿಗೆ ನಾವು ಬಂದಿರುವ ಉದ್ದೇಶದ ಬಗ್ಗೆ ತಿಳಿಸಿದ್ದನೇನೊ. 'ಹೌದು' ಎಂದೆವು. ಆತನ ಕಣ್ಣಾಲಿಗಳು ಒದ್ದೆಯಾದವು. ಧ್ವನಿ ಮಾತಾಗಲಿಲ್ಲ. ತನ್ನ ಕೈಗಳನ್ನು ಜೋಡಿಸಿ ತಲೆಬಾಗಿ ನಮಿಸುತ್ತಾ ಏನನ್ನೋ ಹೇಳಲೆತ್ನಿಸುತ್ತಾ ಗದ್ಗದಿತನಾದ.

ಆ ಭಾವನಾತ್ಮಕ ಸನ್ನಿವೇಶದಿಂದ ಹೊರಬರಲು ನಾವು ಬೇರೆ ಏನೇನೋ ಮಾತನಾಡಲು ಯತ್ನಿಸುತ್ತಿದ್ದೆವು. ಆದರೆ ಆತ ಮಾತ್ರ ನಮ್ಮ ಕೈಗಳನ್ನು ಹಿಡಿದುಕೊಂಡು 'ಥ್ಯಾಂಕ್ ಯು ಸಾರ್... ಥ್ಯಾಂಕ್ಯು ಸಾ...' ಎಂದು ಭಾವಪರವಶನಾಗಿ ಅಸ್ಪಷ್ಟವಾಗಿ ಉಸುರುತ್ತಿದ್ದ. ಆತ ಇಡೀ ಲಡಾಖ್‌ನ ನೋವಿನ ರೂಪಕದಂತೆ ಕಂಡ.

ಭಾರತದ ನೆತ್ತಿಯಲ್ಲಿರುವ 'ಲಡಾಖ್'- ಚೀನಾ ಮತ್ತು ಪಾಕಿಸ್ತಾನ ದೇಶಗಳ ಗಡಿಗಳಿಗೆ ಹೊಂದಿಕೊಂಡಿರುವ ಪ್ರದೇಶ. ಹೆಚ್ಚು ಕಡಿಮೆ ಮಳೆಯೇ ಬೀಳದ ಈ 'ತಣ್ಣನೆಯ ಮರುಭೂಮಿ' ಅತ್ಯಂತ ಸೂಕ್ಷ್ಮವಲಯ. ಮಂಜುಗಡ್ಡೆಗಳನ್ನು ಹೊದ್ದು ಮಲಗಿರುವ ಗಗನಚುಂಬಿ ಪರ್ವತಗಳದ್ದೇ ಇಲ್ಲಿ ಕಾರುಬಾರು. ಇವುಗಳ ನಡುವೆ ಚದುರಿದಂತೆ ಮೂರ್ನಾಲ್ಕು ಮನೆಗಳ ಪುಟ್ಟ ಹಳ್ಳಿಗಳು. ಇಲ್ಲಿ ವ್ಯವಸಾಯಕ್ಕೆ ದಕ್ಕುವ ಭೂಮಿಯೂ ಅತ್ಯಲ್ಪ. ನಡುಮಧ್ಯಾಹ್ನ ಹರಿಯುವ ಝರಿಗಳು ಸಂಜೆಯ ಬಳಿಕ ಚಲನೆ ಕಳೆದುಕೊಂಡು ಮಂಜುಗಡ್ಡೆಗಳಾಗಿ ಮಲಗಿಬಿಡುತ್ತವೆ. ತೀವ್ರವಾದ ಚಳಿ, ಕಡಿದಾದ ಪರ್ವತಗಳು, ಸಂಪನ್ಮೂಲಗಳ ಕೊರತೆಯ ನಡುವೆ ಸಾವಿರಾರು ವರ್ಷಗಳಿಂದ ವಿಕಸನ ಹೊಂದಿರುವ ಈ ಜೀವ ಪರಿಸರದಲ್ಲಿ ಇಲ್ಲಿನ ಜನರು ಸುಸ್ಥಿರ ಬದುಕನ್ನು ಕಟ್ಟಿಕೊಂಡಿದ್ದಾರೆ. ಈ ಜೀವಪರಿಸರದ ರೂಪರಚನೆಗಳನ್ನು ಅರ್ಥಮಾಡಿಕೊಳ್ಳದ, ಗಡಿಯಾಚೆಯಿಂದ ತರುವ ಕಾರ್ಪೋರೇಟ್ ಅಭಿವೃದ್ಧಿ ಮಾದರಿಗಳಾಗಲಿ, ಚಿಂತನೆಗಳಾಗಲಿ ಇಲ್ಲಿ ದುರಂತಗಳನ್ನೇ ಸೃಷ್ಟಿಸುವುದು ಖಚಿತವೆಂದು ವಿಜ್ಞಾನಿಗಳು ಮೇಲಿಂದ ಮೇಲೆ ಹೇಳುತ್ತಲೇ ಬಂದಿದ್ದಾರೆ.

ಹಿಮ ಚಿರತೆಗಳ ಹುಡುಕಾಟದಲ್ಲಿ ಹಲವು ವರ್ಷಗಳ ಕಾಲ ಲಡಾಖ್‌ನಲ್ಲಿ ಅಲೆದಾಡಿಕೊಂಡಿದ್ದ ನಮಗೆ ಈ ಜನರ ಸಂಸ್ಕೃತಿಯ ಪರಿಚಯ ಸ್ವಲ್ಪಮಟ್ಟಿಗಿದೆ. ಪ್ರತಿಕಾರ ಮನೋಭಾವ ಇಲ್ಲದ, ಭ್ರಷ್ಟಾಚಾರ, ಕುತಂತ್ರಗಳ ಅರಿವೇ ಇಲ್ಲದ ಈ ಸಮುದಾಯದ ಸಂಸ್ಕೃತಿ ಹೇಗೆ ವಿಕಸಿಸಿರಬಹುದೆಂದು ನಾವು ಬಹಳ ಬಾರಿ ಯೋಚಿಸಿದ್ದೆವು. ಬಹುಶಃ ಹಿಮಾಲಯದ ಅಗಾಧತೆ ಮತ್ತು ಜೀವಿಗಳ ಅಸ್ತಿತ್ವಕ್ಕೇ ಸವಾಲೆಸೆಯುವ ಹವಾಮಾನ ವೈಪರೀತ್ಯಗಳು ಈ ಸಂಸ್ಕೃತಿಯನ್ನು ರೂಪಿಸಿರಬಹುದು.

ಇಂತಹ ಹಿನ್ನೆಲೆಯುಳ್ಳ ಲಡಾಖ್ ಮಂದಿ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ ಎಂಬ ಸುದ್ದಿ ತಲುಪಿದಾಗ ಆತಂಕಕ್ಕೊಳಗಾದೆವು. ಈ ಸಜ್ಜನರ ನಾಡಿನಲ್ಲಿ ಏನಾಗಿರಬಹುದೆಂದು ಅರಿಯಲು ಮತ್ತು ನಾವು ನಿಮ್ಮೊಂದಿಗಿದ್ದೇವೆಂದು ತಿಳಿಸುವ ಕನಿಷ್ಠ ಸೌಜನ್ಯಕ್ಕಾಗಿ ನಾವು 'ಲೇಹ್'ಗೆ ಹೋಗಿದ್ದೆವು.

ಅಂದು, ನಾವು 'ಲೇಹ್'ನ ತೆರೆದಬಯಲಿಗೆ ತಲುಪಿದಾಗ ಅಲ್ಲಿ ನೂರಾರು ಮಂದಿ ಕುಳಿತಿದ್ದರು. ಅಲ್ಲಿ ಗದ್ದಲವಿರಲಿಲ್ಲ, ರೋಷ-ದ್ವೇಷಗಳ ಕುರುಹು ಕೂಡ ಇರಲಿಲ್ಲ. ಬೆರಳುಗಳು ಸರದಲ್ಲಿದ್ದ ಮಣಿಗಳನ್ನು ಮೆಲ್ಲಗೆ ತಿರುವುತ್ತಿದ್ದವು. ಪ್ರಾರ್ಥನೆಯ ಚಕ್ರಗಳು ತಿರುಗುತ್ತಿದ್ದವು. ಇನ್ನು ಹಲವರು ಯಾವುದೋ ಗ್ರಂಥಗಳನ್ನು ಓದುತ್ತಿದ್ದರು. ಆ ಉಪವಾಸ ಪ್ರತಿರೋಧದ ಸಂಕೇತವಾಗಿತ್ತು ಎಂಬುದು ನಿಜ. ಆದರೂ, ಸಿಟ್ಟು-ಪ್ರತಿಕಾರಗಳ ಚಿಂತನೆಗಳಿಲ್ಲದೆ ನ್ಯಾಯ ಕೇಳುವ ಆ ಪರಿ ನಮ್ಮನ್ನು ಮಂತ್ರಮುಗ್ಧಗೊಳಿಸಿದ್ದವು. ಸಭೆಯ ಮೈದಾನದಲ್ಲಿ ಬಣ್ಣಬಣ್ಣದ ಬಟ್ಟೆಯ ತೋರಣಗಳಿದ್ದವು. ಅವುಗಳಲ್ಲಿ ಲಡಾಖಿ ಅಕ್ಷರಗಳು. ಅದರಲ್ಲಿ 'ಹಿಂಸೆ, ದ್ವೇಷ ವಂಚನೆಗಳಿಂದ ಜಗತ್ತು ಮುಕ್ತವಾಗಲಿ, ಭೂಮಿಯ ಸಕಲಜೀವಿಗಳಿಗೂ ಒಳ್ಳೆಯದಾಗಲಿ' ಎಂಬ ಸಂದೇಶವಿತ್ತು. ಬೀಸುವ ಗಾಳಿ ಕ್ಷಣಕಾಲ ನಿಂತು ಅಕ್ಷರಗಳನ್ನೆಲ್ಲ ಓದಿ ಜಗತ್ತಿನೆಲ್ಲೆಡೆಗೆ ಹೊತ್ತೊಯ್ಯುತ್ತದೆ ಎಂಬುದು ಇಲ್ಲಿನ ನಂಬಿಕೆ' ಎಂದು ಜೀವವಿಜ್ಞಾನಿ 'ಟ್ಸೆವಾಂಗ್ ನಾಮ್ಗ್ಯಾಲ್' ವಿವರಿಸಿದರು.

ಮೈದಾನದ ನಡುವೆ ಕೊರೆಯುವ ಚಳಿಯಲ್ಲಿ ಸಂತನಂತೆ ಒಬ್ಬರು ಕುಳಿತಿದ್ದರು. ಹತ್ತಿರದಲ್ಲಿ ರವೀಂದ್ರನಾಥ ಠಾಗೋರರ 'ಗೀತಾಂಜಲಿ'ಯಿಂದ 'ಎಲ್ಲಿ ಮನಸ್ಸು ಭಯವನ್ನರಿಯದೋ... ಆ ಸ್ವಾತಂತ್ರದ ಸ್ವರ್ಗದಲ್ಲಿ ನನ್ನ ದೇಶವು ಎಚ್ಚರಗೊಳ್ಳಲಿ' ಎಂಬ ಕವಿತೆಯಿದ್ದ ಚಿತ್ರಪಟ.

ನಾವು ಸೋನಂ ವಾಂಗ್‌ಚುಕ್‌ರ ಬಗ್ಗೆ ಬಹಳಷ್ಟು ಕೇಳಿದ್ದೆವು, ಓದಿದ್ದೆವು. ಆದರೆ ಅವರನ್ನು ಕಂಡಿದ್ದು ಅದೇ ಮೊದಲು.

ವಾಂಗ್‌ಚುಕ್, ವ್ಯಾಸಂಗದ ಬಳಿಕ ಲಡಾಖ್‌ಗೆ ಮರಳಿ ತನ್ನ ಸುತ್ತಮುತ್ತಲಿನ ಪರ್ವತಗಳ, ಜೀವಸಂಕುಲಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡರು. ನವೀನ ವೈಜ್ಞಾನಿಕ ಆವಿಷ್ಕಾರಗಳ ಮೂಲಕ ಅಲ್ಲಿಯ ರೈತರ, ಸೈನಿಕರ ಬದುಕು ಸಹನೀಯವಾಗುವಂತೆ ಮಾಡಿದರು. ಶಾಲಾ ಪಠ್ಯಗಳಲ್ಲಿ ವೈಜ್ಞಾನಿಕ ದೃಷ್ಟಿಕೋನಗಳನ್ನು ಪರಿಚಯಿಸಿ, ಸಾಂಸ್ಕೃತಿಕ ಆಂದೋಲನಗಳಿಗೆ ಮುನ್ನುಡಿ ಬರೆದರು. ಇದೇ ಹಿನ್ನೆಲೆಯಲ್ಲಿ 2018ರ ಮ್ಯಾಗ್ಸೆಸೆ ಪ್ರಶಸ್ತಿಗೆ ಪಾತ್ರರಾದರು. ಇದಲ್ಲದೆ 2009ರಲ್ಲಿ ಅಪಾರ ಯಶಸ್ಸುಕಂಡ '3 ಇಡಿಯಟ್ಸ್' ಸಿನಿಮಾದ ಅಮೀರ್ ಖಾನ್ ಅವರ ಪಾತ್ರಕ್ಕೆ ವಾಂಗ್‌ಚುಕ್ ವ್ಯಕ್ತಿತ್ವವೇ ಪ್ರೇರಣೆ.



ಸೋನಂ ವಾಂಗ್‌ಚುಕ್

12ನೇ ಪುಟಕ್ಕೆ...

ನಾವು ಬೆಂಗಳೂರು ಬಂಧುಗಳು



ಸರ್ವಜನಾಂಗದ ಶಾಂತಿಯ ತೋಟದಲ್ಲಿ ನಾವು...

ಅಬ್ದುಲ್ ರಹಿಮಾನ್

'ಓದಿಗಾಗಿ ಬೆಂಗಳೂರಿಗೆ ಬಂದೆ. ಇಲ್ಲಿನ ಜನ, ಸ್ಥಳ ಎಲ್ಲವೂ ಹೊಸದು. ಕಾಲೇಜು, ಪಿ.ಜಿ ವಾತಾವರಣ ಹಿಂಸೆ ಎನಿಸುತ್ತಿತ್ತು. ಒಂಟಿತನದಿಂದ ಮಾನಸಿಕವಾಗಿ ಜರ್ಜರಿತನಾಗಿದ್ದೆ. ವಿ ಪ್ಲೇ ಬೆಂಗಳೂರು ಎನ್ನುವ ಗುಂಪಿನ ಬಗ್ಗೆ ಸ್ನೇಹಿತೆಯಿಂದ ತಿಳಿದುಕೊಂಡು ಅಲ್ಲಿಗೆ ಹೋದೆ. ಅಲ್ಲಿ ಹಲವರ ಪರಿಚಯವಾಯಿತು. ಬೇರೆ ಪಿ.ಜಿ ಹುಡುಕಲು ಸಹಾಯ ಮಾಡಿದರು. ಈಗ ಬೆಂಗಳೂರು ಸ್ವಂತ ಊರಿನಂತಾಗಿದೆ. ಕನ್ನಡ ನನ್ನ ಭಾಷೆಯಾಗಿದೆ. ಹೊಸ ಭರವಸೆ ಮೂಡಿದೆ'- ಹೀಗೆ ಖುಷಿಯಿಂದಲೇ ಮಾತನಾಡುತ್ತಿದ್ದರು ಮಹಾರಾಷ್ಟ್ರದ ನಾಸಿಕ್‌ನ ಪರಿಮಳ್. ಅವರ ಮಾತು ಇನ್ನೂ ಮುಗಿದಿರಲೇ ಇಲ್ಲ. ಅಷ್ಟರಲ್ಲಿ ಬಿಹಾರದ ಔರಂಗಾಬಾದ್‌ನ ಸತ್ಯಶೀಲ್ ಅವರು ಏನನ್ನೋ ಹೇಳುವ ಉತ್ಸಾಹ ತೋರಿಸಿದರು.

'ನಾನೂ ಕೂಡ ಆಸೆಗಣ್ಣಿನಿಂದ ಬೆಂಗಳೂರಿಗೆ ಕಾಲಿಟ್ಟವನು. ಕೆಲವೇ ದಿನಗಳಲ್ಲಿ ಲಾಕ್‌ಡೌನ್ ಆಯಿತು. ಕಾಂಕ್ರಿಟ್ ಕಾಡಲ್ಲಿ ಒಂಟಿಯಾದೆ. ಲಾಕ್‌ಡೌನ್ ಬಳಿಕ ಏಕತಾನತೆ ನಿವಾರಿಸಿಕೊಳ್ಳಲು ಏನಾದರೂ ಮಾಡಬೇಕು ಎನ್ನುವಾಗ ವಿ ಪ್ಲೇ ತಂಡ ಸಿಕ್ಕಿತು. ಕುಸಿದಿದ್ದ ನನ್ನಲ್ಲಿ ಹೊಸ ಭರವಸೆ ಮೂಡಿತು. ಈಗ ನನ್ನ ಕುಟುಂಬದಂತೆ ದೊಡ್ಡ ತಂಡವೇ ಇದೆ. ಅಪಘಾತವಾಗಿ ಆಸ್ಪತ್ರೆಯಲ್ಲಿದ್ದಾಗಲೂ ನನ್ನ ಜತೆಗೆ ನಿಂತಿದ್ದು ಇಲ್ಲಿನ ಸ್ನೇಹಿತರು' ಇಷ್ಟು ಹೇಳುವ ಹೊತ್ತಿಗೆ ಸತ್ಯಶೀಲ್ ಕಣ್ಣಲ್ಲಿ ನೀರಿತ್ತು.

ಬೆಂಗಳೂರಿನ ಸಿಂಗಲ್ ಪೇರೆಂಟ್ ವಾರಿಜಾ(ಹೆಸರು ಬದಲಿಸಲಾಗಿದೆ) ಅವರದು ಬೇರೆಯೇ ಕತೆ. ಇವರು 31 ವರ್ಷಕ್ಕೆ ಪತಿಯಿಂದ ದೂರವಾದರು. ಮಡಿಲಲ್ಲಿ ಆರು ವರ್ಷದ ಮಗನಿದ್ದ. ಆತನಿಗಾಗಿ ನಿತ್ಯ ಕೋರ್ಟ್‌ಗೆ ಅಲೆದಾಡಬೇಕಾಗಿತ್ತು. ಒಂಟಿ ಜೀವನ, ಮಾನಸಿಕ ತೊಳಲಾಟ, ಕಾನೂನು ಸಮರದಿಂದಾಗಿ ಜೀವನವೇ ಸಾಕಾಗಿ ಹೋಗಿತ್ತು. ಅವರ ಬದುಕಲ್ಲಿ ಹೊಸ ಆಸೆ ಚಿಗುರೊಡೆಯುವಂತೆ ಮಾಡಿದ್ದು ಇದೇ ವಿ ಪ್ಲೇ ತಂಡ.

ಬೆಂಗಳೂರಿನ ಇಬ್ಬರು ಯುವಕರ ವಿಭಿನ್ನ ಆಲೋಚನೆಯಿಂದ ರೂಪುಗೊಂಡ 'ವಿ ಪ್ಲೇ ಬೆಂಗಳೂರು' ತಂಡವು ಹೆಮ್ಮೆಪಟ್ಟುಕೊಳ್ಳುವ ಇಂತಹ ಹತ್ತಾರು ನಿದರ್ಶನಗಳಿಗೆ ಸಾಕ್ಷಿಯಾಗಿದೆ.

11ನೇ ಪುಟಕ್ಕೆ...

ಒಂದೇ ತೋಟದ ಹೂವುಗಳು


2023ರಲ್ಲಿ ಬಾಲೇಶ್ವರ ರೈಲು ದುರಂತವಾಗಿದ್ದರಿಂದ, ಹಲವು ಮಂದಿ ಊರಿಗೆ ಹೋಗಲು ಕಾಯ್ದಿರಿಸಿದ್ದ ರೈಲು ಟಿಕೆಟ್‌ಗಳು ರದ್ದಾಗಿದ್ದವು. ಅದೇ ವೇಳೆ ದೀಪಾವಳಿ ಬಂದಿತ್ತು. ಕುಟುಂಬದ ಜೊತೆ ಹಬ್ಬ ಮಾಡಲಾಗದ ಬೇಸರವನ್ನು ಇಲ್ಲವಾಗಿಸಲು ಎಲ್ಲರೂ ಒಂದೆಡೆ ಸೇರಿದೆವು. ಬಂದವರು ಅವರ ಊರಿನ ತಿಂಡಿ-ತಿನಿಸು ತಯಾರಿಸಿ ತಂದಿದ್ದರು. ಇಡ್ಲಿ-ಚಟ್ನಿ, ಛೋಲೆ ಭಟೂರೆ, ಪರೋಟ, ದಾಲ್-ಢೋಕ್ಲ.. ಹೀಗೆ ವಿವಿಧ ಭಾಗಗಳ ಆಹಾರವನ್ನು ಹಂಚಿಕೊಂಡು ತಿಂದೆವು. ಅವರ ಸಂಸ್ಕೃತಿಯಲ್ಲಿನ ಹಬ್ಬ ಆಚರಣೆಗಳ ಬಗ್ಗೆ ಮಾಹಿತಿ ಹಂಚಿಕೊಂಡರು. ಉತ್ತರ-ದಕ್ಷಿಣದ ಭೇದವಿಲ್ಲದೇ ಸ್ವಂತಮನೆಯಲ್ಲೇ ದೀಪಾವಳಿ ಆಚರಿಸಿದಷ್ಟು ಖುಷಿ. ಇಲ್ಲಿಗೆ ಬಂದವರು ಫ್ಲ್ಯಾಟ್‌ಮೇಟ್‌ಗಳಾಗಿದ್ದಾರೆ. ಸುಮಾರು 70 ಮಂದಿಗೆ ಕೆಲಸ ಸಿಕ್ಕಿದೆ. ಸಂಗಾತಿಗಳನ್ನು ಹುಡುಕಿಕೊಂಡು ಮದುವೆ ಆದವರೂ ಇದ್ದಾರೆ. ಇವೆಲ್ಲವನ್ನೂ ಪ್ರಜ್ವಲ್ ಒಂದೇ ಉಸಿರಿಗೆ ಹೇಳಿದರು.



ಕೇಕ್ ಮೀಟ್ ಅಪ್

ಆತ್ಮವಿಶ್ವಾಸದ ಕಡಲು...

ಅಭಿಲಾಷ್ ಪಿ.ಎಸ್.



ವಿಶ್ವಾಸ್

ಬಿ.ಕಾಂ ಪದವೀಧರ ಉದ್ಯೋಗದ ಕನಸು ಹೊತ್ತು ಸಂದರ್ಶನಕ್ಕೆ ಹಾಜರಾದರು. ಸಂದರ್ಶಕರು ಇವರನ್ನು ನೋಡಿ, 'ನಿಮಗೆ ಎರಡೂ ಕೈಗಳಿಲ್ಲ. ಹೇಗೆ ಕೆಲಸ ಮಾಡುತ್ತೀರಿ' ಎಂದು ಪ್ರಶ್ನಿಸಿದರು. ದುಃಖದಿಂದಲೇ ಹೊರಬಂದ ಆ ಯುವಕ ಖಿನ್ನತೆಗೆ ಜಾರಿದರು. ತಮಗೆ ಎರಡೂ ಕೈಗಳಿಲ್ಲ ಎನ್ನುವುದನ್ನು ಮೊದಲು ತಾವೇ ಒಪ್ಪಿಕೊಳ್ಳಬೇಕು ಎಂದು ನಿರ್ಧರಿಸಿದರು. ಆಮೇಲೆ ನಡೆದಿದ್ದೆಲ್ಲಾ ಪವಾಡ!

ಹೌದು, ಇದು ಅಂತರರಾಷ್ಟ್ರೀಯ ಪ್ಯಾರಾ ಈಜುಪಟು ವಿಶ್ವಾಸ್ ಕೆ.ಎಸ್. ಅವರ ಬದುಕಿನ ಪ್ರೇರಣಾದಾಯಕ ಕಥನ.

ಉದ್ಯೋಗವೂ ಇಲ್ಲ, ಬದುಕಿನಲ್ಲಿ ವಿಶ್ವಾಸವೂ ಇಲ್ಲದ ಸಮಯದಲ್ಲಿ ಇವರು ಅಚಾನಾಕ್ ಆಗಿ ಆಯ್ದುಕೊಂಡಿದ್ದು ಈಜು! 'ಈಸಬೇಕು ಇದ್ದು ಜಯಿಸಬೇಕು' ಅಂತಾರಲ್ಲ ಹಾಗೆಯೇ. ಈಜುಕೊಳಕ್ಕೆ ಒಮ್ಮೆ ಧುಮುಕಿದ ಮೇಲೆ ತಮಗೆ ಎರಡೂ ಕೈಗಳಿಲ್ಲ ಎನ್ನುವ ಸಂಗತಿಯನ್ನೇ ಮರೆತುಬಿಟ್ಟರು. 'ಎರಡೂ ಕೈಯಿಲ್ಲದ ವ್ಯಕ್ತಿಗೆ ಹೇಗಪ್ಪಾ ಈಜು ಕಲಿಸುವುದು' ಎನ್ನುವ ಪ್ರಶ್ನೆ ಮೊದಲು ತರಬೇತುದಾರರಿಗೂ ಬಂದಿತ್ತು. ಇವರಿಗೂ ಈಜು ಬರುತ್ತಿರಲಿಲ್ಲ. ವಿಜಯನಗರ ಅಕ್ವಾಟಿಕ್ ಸೆಂಟರ್‌ನಲ್ಲಿ ಎಸ್.ಆರ್. ಸಿಂಧ್ಯಾ ಅವರು ಏಳೆಂಟು ತಿಂಗಳು ನಿರಂತರ ತರಬೇತಿ ನೀಡಿದರು. ಇವರೊಳಗಿನ ಆಸಕ್ತಿ, ಛಲ ಕಂಡು ಬೆಂಬಲಕ್ಕೆ ನಿಂತರು. ಮೀನಿನಂತೆ ಈಜುವುದು ಕಲಿತು, ಪದಕಗಳನ್ನು ಕೊರಳಿಗೇರಿಸಿಕೊಂಡರು.

'ಮನೆಯಲ್ಲಿ ಟಿ.ವಿ, ಫ್ರಿಡ್ಜು, ವಾಷಿಂಗ್ ಮಷಿನ್ ಇರ್ತಾವಲ್ಲಾ...ನಾನೂ ಅದೇ ರೀತಿ ಒಂದು ವಸ್ತುವಿನಂತೆ ಆಗಿಹೋಗಿದ್ದೆ. ಕುಳಿತು, ಮಲಗಿ ದಿನ ಕಳೆಯುತ್ತಿದ್ದೆ. ಅಪ್ಪ-ಅಮ್ಮ ಇದ್ದಾಗ ಜೀವನ ಹೇಗೋ ನಡೆಯುತ್ತಿತ್ತು. ಅವರನ್ನು ಕಳೆದುಕೊಂಡು ಒಬ್ಬಂಟಿಯಾದೆ. ಜೀವನದಲ್ಲಿ ಹೊಡೆತಗಳು ಮೇಲಿಂದ ಮೇಲೆ ಬಿದ್ದವು. ಅವುಗಳಿಂದ ಹೊರಬರಲು ಈಜುತ್ತಾ ಸಾಗಿದವನು ಇದೀಗ ಸಪ್ತ ಸಾಗರ ದಾಟಿದ್ದೇನೆ...' ಎಂದು ವಿಶ್ವಾಸ್ ನಕ್ಕರು.

ವಿಶ್ವಾಸ್, ಅಂತರರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿ ಒಂಬತ್ತು ಪದಕಗಳನ್ನು ಗೆದ್ದಿದ್ದಾರೆ. ಮಾರ್ಷಲ್ ಆರ್ಟ್ಸ್‌ನಲ್ಲಿ ರೆಡ್‌ಬೆಲ್ಟ್ ಪಡೆದಿದ್ದಾರೆ. ರಿಯಾಲಿಟಿ ಶೋಗಳಲ್ಲಿ ಗೆಸ್ಟ್ ಪರ್ಫಾಮೆನ್ಸ್ ನೀಡಿದ್ದಾರೆ. 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್'ನ ಕಳೆದ ಆವೃತ್ತಿಯಲ್ಲಿ ಪ್ರದರ್ಶನ ನೀಡಿ ಸೈ ಎನಿಸಿಕೊಂಡಿದ್ದಾರೆ. ಕಾಲಲ್ಲೇ ಅಡುಗೆ ಮಾಡುತ್ತಾರೆ, ಬರೆಯುತ್ತಾರೆ, ಮೊಬೈಲ್ ಫೋನ್ ಆಪರೇಟ್ ಮಾಡುತ್ತಾರೆ, ಬಟ್ಟೆ ಕೂಡ ಒಗೆಯುತ್ತಾರೆ. ಅಲ್ಲದೇ ಜನಪ್ರಿಯ 'ಟೆಡ್ ಟಾಕ್'ನಲ್ಲೂ ಸ್ಫೂರ್ತಿದಾಯಕ ಮಾತುಗಳಿಂದ ಮಿಂಚಿದ್ದಾರೆ.

13ನೇ ಪುಟಕ್ಕೆ...

ಅಸಾಧಾರಣ ಕಲಾತಪಸ್ವಿ: ರುಕ್ಮಿಣಿ ದೇವಿ ಅರುಂಡೇಲ್


ರುಕ್ಮಿಣಿ ದೇವಿ

ಡಾ. ವಿ ಆರ್ ದೇವಿಕಾ

ರುಕ್ಮಿಣಿ ದೇವಿ ಅರುಂಡೇಲ್ ಒಂದು ವಿಸ್ಮಯ. ಅಸಾಧ್ಯವಾದದ್ದನ್ನೆಲ್ಲಾ ಸಾಧ್ಯವಾಗಿಸುವ ಮಾಂತ್ರಿಕತೆ ಅವರ ಚೈತನ್ಯದಲ್ಲಿ ಅಡಕವಾಗಿತ್ತು. ಅವರ ಬಹುಮುಖೀ ವ್ಯಕ್ತಿತ್ವದ ಆಳ-ಅಗಲ ಚೆನ್ನೈನ ಥಿಯೊಸೊಫಿಕಲ್ ಸೊಸೈಟಿಯಲ್ಲಿರುವ ಆಲದಮರದಷ್ಟು. ಥಿಯೊಸೊಫಿಸ್ಟ್, ಭರತನಾಟ್ಯ ಕಲಾವಿದೆ, ಶಾಸ್ತ್ರೀಯ ನೃತ್ಯ ಪ್ರಕಾರವನ್ನು, ಸಾಂಪ್ರದಾಯಿಕ ಭಾರತೀಯ ಕಲೆಗಳು ಮತ್ತು ಕರಕುಶಲಗಳನ್ನು ಪುನರುಜ್ಜೀವನಗೊಳಿಸಿದ ಸಾಧಕಿ, ಕಲಾಕ್ಷೇತ್ರ ಫೌಂಡೇಶನ್ ಸ್ಥಾಪಕಿ, ಪ್ರಾಣಿ ಕಲ್ಯಾಣದ ಕಾರ್ಯಕರ್ತೆ, ರಾಜ್ಯಸಭೆಯ ಸದಸ್ಯರಾಗಿ ನಾಮನಿರ್ದೇಶಕಗೊಂಡ ಮೊದಲ ಮಹಿಳೆ- ಹೀಗೆ ಹಲವು ಕ್ಷೇತ್ರಗಳ ಅಸಾಧಾರಣ ಪ್ರತಿಭೆ.

> ರುಕ್ಮಿಣಿ ದೇವಿ ನೃತ್ಯ ಪ್ರಪಂಚದಲ್ಲಿ ಮರೆಯಲಾಗದ ಹೆಸರು. ಅವರ ಸಾಧನೆಗಳನ್ನು ಮೆಲುಕು ಹಾಕುವ 'ರುಕ್ಮಿಣಿ ದೇವಿ ಅರುಂಡೇಲ್: ಆರ್ಟ್ಸ್ ರಿವೈವಲಿಸ್ಟ್ ಆ್ಯಂಡ್ ಇನ್‌ಸ್ಟಿಟ್ಯೂಷನ್ ಬಿಲ್ಡರ್' ಕೃತಿ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ...

120 ವರ್ಷಗಳ ಹಿಂದೆ ಅಧಿಕ ವರ್ಷದಲ್ಲಿ ಫೆಬ್ರುವರಿ 29ರಂದು ಜನಿಸಿದ ರುಕ್ಮಿಣಿ ದೇವಿ ಅವರನ್ನು, ತಂದೆ ನೀಲಕಂಠ ಶಾಸ್ತ್ರಿಯ ಅಪಾರ ಪಾಂಡಿತ್ಯ, ತಾಯಿ ಶೇಷಮ್ಮಾಳ್ ಅವರ ಸಂಗೀತ ಕಲೆ, ಅಣ್ಣ ನೀಲಕಂಠ ಶ್ರೀರಾಮ್ ಅವರ ಥಿಯೊಸೊಫಿಕಲ್ ಸೊಸೈಟಿಯ ನಂಟು ಜೊತೆಗೆ ಅನ್ನಿ ಬೆಸೆಂಟ್‌ನ ಸಖ್ಯ ಎಲ್ಲವೂ ಪೋಷಿಸಿ ರೂಪಿಸಿದವು. ಆಧುನಿಕ ಭಾರತವನ್ನು ರೂಪಿಸಿದ ನೂರು ಜನರಲ್ಲಿ ರುಕ್ಮಿಣಿ ದೇವಿ ಒಬ್ಬರು ಎಂದು ದಾಖಲಿಸಲಾಗಿದೆ. ವಿಶ್ವಭಾರತಿ ವಿಶ್ವವಿದ್ಯಾಲಯದ ದೇಶಿಕೋತ್ತಮ, ಕಾಳಿದಾಸ ಸಮಾನ, ಪ್ರಾಣಿಮಿತ್ರ ಬಿರುದು, ಕ್ವೀನ್ ವಿಕ್ಟೋರಿಯಾ ಸಿಲ್ವರ್ ಮೆಡಲ್, ಅಮೆರಿಕಾದ ವೈನ್ ಸ್ಟೇಟ್ ಯುನಿವರ್ಸಿಟಿಯ ಗೌರವ ಡಾಕ್ಟರೇಟ್ ಇತ್ಯಾದಿ ಸನ್ಮಾನಗಳಿಗೆ ಬಾಧ್ಯರಾದವರು.

ರುಕ್ಮಿಣಿ ದೇವಿ ಅವರನ್ನು ಬದಲಾವಣೆಯ ಹರಿಕಾರರು ಎಂದೇ ಪರಿಚಯಿಸಲಾಗುತ್ತಿತ್ತು. ಪ್ರಾಚೀನ ಭಾರತೀಯ ಕಲೆ ಮತ್ತು ತತ್ತ್ವಶಾಸ್ತ್ರೀಯ ಪಾಶ್ಚಿಮಾತ್ಯ ದೃಷ್ಟಿಕೋನ ಇವೆರಡರ ಮೇಳೈಕೆಯಿಂದ, ಧಾರ್ಮಿಕ ಸಿದ್ಧಾಂತದ ಕಟ್ಟುಪಾಡುಗಳಿಂದ ಬಿಡಿಸಿಕೊಂಡು ನವ ಆಧ್ಯಾತ್ಮಿಕತೆಯ ದಾರಿಯಲ್ಲಿ ಸಾಗುವ ಧೈರ್ಯ ಮಾಡಿದ ಧೀಮಂತ ಮಹಿಳೆ. ತಮ್ಮ 16ನೇ ವಯಸ್ಸಿನಲ್ಲಿ 42 ವಯಸ್ಸಿನ ಬಿಷಪ್ ಅರುಂಡೇಲ್ ಅವರನ್ನು ಮದುವೆಯಾಗಿ ಥಿಯೊಸೊಫಿಕ್ ಹಾದಿಯಲ್ಲಿ ನಡೆಯುತ್ತಾ ಜಗತ್ ಪರ್ಯಟನೆ ಮಾಡಿ ಆ ನೆಲೆಯಲ್ಲಿ ಅನ್ನಾ ಪ್ಲಾವಲೋವಾ, ಮರಿಯಾ ಮಾಂಟೆಸ್ಸರಿ, ಜೇಮ್ಸ್ ಕಸಿನ್ಸ್ ನಂತಹ ವ್ಯಕ್ತಿಗಳ ಸಹವಾಸದಲ್ಲಿ ಸತತವಾಗಿ ಕಲಿಯುತ್ತಾ ಭಾರತೀಯ ಮಹಿಳೆಯರು ಹಿಂದೆಂದೂ ಅನುಭವಿಸದ ಹೊಸ ವಿಮೋಚನೆಗೆ ರುಕ್ಮಿಣಿ ದೇವಿ ಸಂಕೇತವಾದರು.

ಭರತನಾಟ್ಯ ನೃತ್ಯ ನಾಟಕ ಎನ್ನುವ ಪರಿಕಲ್ಪನೆಯನ್ನು ಪರಿಚಯಿಸಿದ ಕೀರ್ತಿ ರುಕ್ಮಿಣಿ ದೇವಿ ಅವರಿಗೆ ಸಲ್ಲುತ್ತದೆ. 'ಸೀತಾ ಸ್ವಯಂವರಂ' 'ಶ್ರೀರಾಮ ವನಾಗಮನಂ', 'ಪಾದುಕಾ ಪಟ್ಟಾಭಿಷೇಕಂ' 'ಶಬರಿ ಮೋಕ್ಷಮ್', 'ಮಹಾಪಟ್ಟಾಭಿಷೇಕಂ'ಗಳನ್ನು ಸಂಯೋಜಿಸಿ ಅವುಗಳಿಗೆ ಸಂಗೀತಕ್ಕಾಗಿ ಮೈಸೂರು ವಾಸುದೇವಾಚಾರ್ಯ, ಪಾಪನಾಶನ್ ಶಿವನ್ ಮುಂತಾದ ಮಹಾನ್ ಪ್ರತಿಭೆಗಳನ್ನು ಆಹ್ವಾನಿಸಿದ್ದು ಚರಿತ್ರೆಯಲ್ಲಿ ಉಲ್ಲೇಖವಾಗಿದೆ. ರುಕ್ಮಿಣಿ ದೇವಿ ನೃತ್ಯ ಸಂಯೋಜಿಸಿದ 25 ನೃತ್ಯ ನಾಟಕಗಳೂ ಇವತ್ತು ಕ್ಲಾಸಿಕ್ ಎಂದು ಪರಿಗಣಿತವಾಗಿವೆ.

ಮೈಸೂರು ವಾಸುದೇವಾಚಾರ್ಯರನ್ನು ಮದ್ರಾಸಿಗೆ ಕರೆಯಲು ರುಕ್ಮಿಣಿ ದೇವಿ ಮೈಸೂರಿಗೆ ಬಂದಾಗ ವಾಸುದೇವಾಚಾರ್ಯರಿಗೆ 88 ವರ್ಷ. ರುಕ್ಮಿಣಿ ದೇವಿಯವರು ಅತ್ಯಂತ ವಿನಯದಿಂದ 'ಬರುತ್ತೀರಾ' ಎಂದು ಕೇಳಿದಾಗ, 'ಮಹಾರಾಜರು ಅನುಮತಿಸಿದರೆ ಖಂಡಿತಾ ಬರುತ್ತೇನೆ. ಆದರೆ ಆಗಲೂ ನನ್ನನ್ನು ನಾನು ಮೈಸೂರಿನ ಆಸ್ಥಾನ ವಿದ್ವಾನ್ ಎಂದು ಪರಿಗಣಿಸುತ್ತೇನೆ' ಎಂದರು. ರುಕ್ಮಿಣಿ ದೇವಿಯವರು ಮೈಸೂರು ಮಹಾರಾಜರನ್ನೇ ವಿನಂತಿಸಿಕೊಂಡರು. ಕಲಾಭಿಮಾನಿಗಳಾದ ಜಯಚಾಮರಾಜೇಂದ್ರ ಒಡೆಯರ್ ಅವರು ರಾಮಾಯಣಕ್ಕೆ ಸಂಗೀತ ಸಂಯೋಜಿಸಲು ವಾಸುದೇವಾಚಾರ್ಯ ಅವರು ಮದ್ರಾಸಿಗೆ ಹೋಗುವುದು ಒಳ್ಳೆಯದು ಎಂದು ಭಾವಿಸಿ ಕಳಿಸಿಕೊಟ್ಟರು. ರುಕ್ಮಿಣಿ ದೇವಿಯವರ ಅಚಲ ಶ್ರದ್ಧೆ ಎಷ್ಟು ಗಟ್ಟಿಯಾಗಿತ್ತೆಂದರೆ ವಾಸುದೇವಾಚಾರ್ಯ ತಮಗೆ ಜೊತೆಯಾಗಿ ಮೊಮ್ಮಗ ರಾಜಾರಾಮ್ ಬರಬೇಕೆಂದು ಕೇಳಿದಾಗ, ಅವರು ಹರಸಾಹಸದಿಂದ ಧಾರವಾಡ ಆಕಾಶವಾಣಿಯಲ್ಲಿ ಜಲತರಂಗ ಕಲಾವಿದರಾಗಿದ್ದ ರಾಜಾರಾಮ್ ಅವರನ್ನು ಮದ್ರಾಸಿಗೆ ವರ್ಗ ಮಾಡಿಸುವಲ್ಲಿ ಯಶಸ್ವಿಯಾದರು. ವಾಸುದೇವಾಚಾರ್ಯ ಅವರ ಸಂಗೀತ ಸಂಯೋಜನೆ ಇಂದಿಗೂ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ನೃತ್ಯ ನಾಟಕದ ಹೊಸಪರಿಕಲ್ಪನೆಗೆ ಪೂರಕವಾಗಿ ಸಂಗೀತ ಮಾತ್ರವಲ್ಲಾ, ರಂಗಪರಿಕರ, ವೇಷಭೂಷಣಗಳಲ್ಲೂ ರುಕ್ಮಿಣಿ ದೇವಿ ಕ್ರಾಂತಿಯನ್ನೇ ಮಾಡಿದರು. ಇಂದಿಗೂ ಕಲಾಕ್ಷೇತ್ರದ ಎಲ್ಲಾ ವಿದ್ಯಾರ್ಥಿಗಳಿಗೂ ರುಕ್ಮಿಣಿ ದೇವಿ 'ಅತ್ತೈ' ಆಗಿರುವುದು ಬರಿ ಬಾಯಿಮಾತಿಗಲ್ಲ. ಹುಡುಗಿಯರು ಮಾತ್ರ ನರ್ತಿಸುತ್ತಾರೆ, ಹುಡುಗರಲ್ಲ ಎನ್ನುವ ನಂಬಿಕೆ ಇದ್ದ ಕಾಲದಲ್ಲಿ ಅಡ್ಯಾರ್ ಕೆ. ಲಕ್ಷ್ಮಣ್ಣನ್ ನಂತಹ ಹುಡುಗರನ್ನು 'ಇದು ದೈಹಿಕ ವ್ಯಾಯಾಮ' ಎಂದು ನಂಬಿಸಿ ನೃತ್ಯಕ್ಕೆ ಕರೆದುತಂದರು.

ರುಕ್ಮಿಣಿ ದೇವಿ ಅವರ ಮೇಲೆ ನಂತರದ ಪೀಳಿಗೆಯವರು ಹಲವಾರು ಆರೋಪಗಳನ್ನು ಮಾಡಿದರು. ಅವರು ಸಾಂಪ್ರದಾಯಿಕ ಸಾದಿರ್ ನ ಶೃಂಗಾರವನ್ನು ತೆಗೆದುಹಾಕಿ 'ಶುದ್ಧಗೊಳಿಸಿದರು' ಎನ್ನುವುದು ಒಂದು. ದೇವದಾಸಿಯರಲ್ಲದೇ ಬೇರೆ 'ಕುಲೀನ' ಮನೆತನದ ಹೆಂಗಸರು ನೃತ್ಯವನ್ನು ಕಲಿಯುವುದು ಮತ್ತು ಅದಕ್ಕೂ ಹೆಚ್ಚಾಗಿ ಸಾರ್ವಜನಿಕವಾಗಿ ಪ್ರದರ್ಶಿಸುವುದನ್ನು ಊಹಿಸಿಕೊಳ್ಳಲೂ ಆಗದ ಕಾಲದಲ್ಲಿ ರುಕ್ಮಿಣೀದೇವಿ ಅದನ್ನು ಸಾಧ್ಯವಾಗಿಸಿದರು ಮತ್ತು ನಂತರದ ಪೀಳಿಗೆಯವರಿಗೆ ದಾರಿ ಮಾಡಿಕೊಟ್ಟರು. ಇಲ್ಲದಿದ್ದರೆ ಇವತ್ತು ಸಾದಿರ್ ಕಾಲನ ಕತ್ತಲೆಯಲ್ಲಿ ಕರಗೇ ಹೋಗುತ್ತಿತ್ತು ಎನ್ನುವ ಮಹತ್ವದ ಸಂಗತಿಯನ್ನು ಈ ಟೀಕಾಕಾರರು ಗ್ರಹಿಸಲೇ ಇಲ್ಲ. ರುಕ್ಮಿಣಿ ದೇವಿಯವರ ಸಾಧನೆಗಳ ಬಗ್ಗೆ ಒಂದು ನಿರ್ದಿಷ್ಟ ವಿಶ್ಲೇಷಣೆಯ ಅಗತ್ಯವಿತ್ತು ಮತ್ತು ಟೀಕೆಗಳನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುವ ಅನಿವಾರ್ಯವಿತ್ತು ಎನ್ನಿಸಿದ್ದರಿಂದ 'ರುಕ್ಮಿಣಿ ದೇವಿ ಅರುಂಡೇಲ್: ಆರ್ಟ್ಸ್ ರಿವೈವಲಿಸ್ಟ್ ಆ್ಯಂಡ್ ಇನ್‌ಸ್ಟಿಟ್ಯೂಷನ್ ಬಿಲ್ಡರ್' ಕೃತಿಯನ್ನು 'ಪಯನಿರ್ಸ್ ಆಫ್ ಮಾರ್ಡರ್ನ್ ಇಂಡಿಯಾ' ಸರಣಿಯಲ್ಲಿ ರಚಿಸಲು ನಿಯೋಗಿ ಬುಕ್ಸ್ ನಿಯೋಜಿಸಿತು. ಅವರ ಜೀವನ ಸಾಧನೆ ಕುರಿತು ಹಲವಾರು ಪುಸ್ತಕಗಳು ಪ್ರಕಟವಾಗಿವೆ. ಆದರೂ ಇನ್ನೂ ಬರೆಯಲು ಸರಕು ಬಹಳ ಇದೆ.



ಬಂಜಾರರ ಬದುಕಿನ ಸಂಕಥನ 'ಗೋರ್‌ಮಾಟಿ'

ಮಂಜುಶ್ರೀ ಎಂ. ಕಡಕೋಳ

ರಂಗಭೂಮಿ

ಬಣ್ಣದ ಬಟ್ಟೆಗಳ ಸಣ್ಣ ಸಣ್ಣ ತುಂಡುಗಳನ್ನು ಸೇರಿಸಿ ಹೊಲಿದಾಗ ರೂಪುಗೊಳ್ಳುವ ಚಿತ್ತಾರದ 'ಕೌದಿ'ಯ ಸೌಂದರ್ಯಕ್ಕೆ ಮನ ಸೋಲದವರು ಅಪರೂಪ. ವರ್ಣಮಯ ಉಡುಗೆ, ತೊಡುಗೆ, ಹಾಡುಗಬ್ಬ ಸೇರಿದಂತೆ ಸಾಂಸ್ಕೃತಿಕ ಶ್ರೀಮಂತಿಕೆಯ ಬಂಜಾರರ ಬದುಕು ಕೂಡಾ 'ಕೌದಿ'ಯ ನೇಯ್ಗೆಯಂತಿದೆ. ಲಮಾಣಿ, ಬಂಜಾರ, ಲಂಬಾಣಿ, ಲಮಾಣ್, ಲದಣಿಯಾ- ಹೀಗೆ ನಾನಾ ಹೆಸರುಗಳಿಂದ ಕರೆಯಲಾಗುವ ಈ ಸಮುದಾಯದ ಇತಿಹಾಸದ ಜಾಡು ಹಿಡಿದು ಹೊರಟರೆ ಅದು ಹರಪ್ಪ ಮೊಹೆಂಜಾದರೋಕ್ಕೆ ತಲುಪುತ್ತದೆ.

ಕಾಡು-ಮೇಡು, ಬೆಟ್ಟ-ಗುಡ್ಡ, ನೀರು ಇರುವಲ್ಲಿ ತಾಂಡಾ ಕಟ್ಟಿಕೊಂಡು ಜೀವಿಸುತ್ತಿದ್ದ ಈ ಸಮುದಾಯ ದೇಶದೆಲ್ಲೆಡೆ ಬೇರೆ ಬೇರೆ ಹೆಸರುಗಳಲ್ಲಿ ಹಂಚಿಹೋಗಿದೆ. ಪ್ರಪಂಚದ ನಾನಾ ದೇಶಗಳಲ್ಲೂ ಬಂಜಾರರ ಮೂಲನೆಲೆಯ ಐತಿಹ್ಯಗಳಿವೆ. ಇಂಥ ಅಪರೂಪದ ಸಮುದಾಯದ ಸಂಕಥನವನ್ನು ಕಟ್ಟಿಕೊಡುತ್ತದೆ ಮೈಸೂರು ರಂಗಾಯಣ ಪ್ರಸ್ತುತಪಡಿಸಿದ 'ಗೋರ್‌ಮಾಟಿ' ನಾಟಕ.

ಮೊದಲಾರ್ಧದಲ್ಲಿ ಬಂಜಾರ ಸಮುದಾಯದ ಇತಿಹಾಸ, ಮೂಲಪುರುಷ, ಬ್ರಿಟಿಷರ ದೌರ್ಜನ್ಯವನ್ನು ತೆರೆದಿಡುತ್ತದೆ. ಭಾರತದ ಉದ್ದಗಲಕ್ಕೂ ವ್ಯಾಪಾರಕ್ಕಾಗಿ ಸಂಚರಿಸುತ್ತಿದ್ದ ಲಂಬಾಣಿಗರು ಇವತ್ತಿನ ರಾಷ್ಟ್ರೀಯ ಹೆದ್ದಾರಿಗಳ ಮೂಲ ಮಾರ್ಗಕಾರರು. ಸೇನೆಗಳಿಗೆ ದವಸ-ಧಾನ್ಯ ಸರಬರಾಜು ಮಾಡಿ ನಂಬಿಕಸ್ಥರಾಗಿದ್ದ ಈ ಸಮುದಾಯ ಎಲ್ಲಿ ಆರ್ಥಿಕವಾಗಿ ಸಬಲವಾಗಿ ತಮಗೆ ಪ್ರತಿಸ್ಪರ್ಧಿಗಳಾಗುವರೋ ಎಂಬ ಭೀತಿಯಲ್ಲಿ 'ಅಪರಾಧಿ ಬುಡಕಟ್ಟು' ಎಂಬ ಪಟ್ಟ ಕಟ್ಟುವ ಬ್ರಿಟಿಷರ ಕುತಂತ್ರ, ನೆಲೆ ನಿಲ್ಲದ ಅತಂತ್ರ ಬದುಕಿನಲ್ಲೇ ಸಾಗುವ ಬಂಜಾರರ ಸ್ಥಿತಿಗತಿಯ ಬಗ್ಗೆ ನಾಟಕ ಬೆಳಕು ಚೆಲ್ಲುತ್ತದೆ.

ಮೂಲತಃ ಪಶುಪಾಲಕರಾದ ಬಂಜಾರರ ಕೊಳಲಿನ ನಾದಕ್ಕೆ ಮನಸೋಲುವ ಕೃಷ್ಣ, ತನಗೂ ಅಂಥದ್ದೇ ಕೊಳಲು ಬೇಕೆಂದು ಸ್ನೇಹಿತ ದಾದಾಮೋಲನಿಗೆ ಗಂಟು ಬೀಳುತ್ತಾನೆ. ಬಂಜಾರರಿಂದ ಕೊಳಲು ಪಡೆಯುವ ಕೃಷ್ಣ ಮುಂದೆ ಅದರ ಮೋಹಕ್ಕೆ ಬಿದ್ದು ಸಾಗುವ ಹಾದಿಯೇ ಬೇರೆಯಾಗುತ್ತದೆ. ಕೃಷ್ಣನಿಗೆ ಕೊಟ್ಟ ಮಾತಿನಂತೆ ದಾದಾಮೋಲ ಮತ್ತು ರಾಧೆ ಬಂಜಾರರ ಮೂಲ ಪುರುಷ-ಸ್ತ್ರೀಯರಾಗುತ್ತಾರೆ. ಸಮುದಾಯದ ನೆಲೆಗಳನ್ನು ಹುಡುಕಿದಾಗ ಕಾಮಿಡಿಯನ್ ಚಾರ್ಲಿ ಚಾಪ್ಲಿನ್, ಪಾಕಿಸ್ತಾನದ ಗಾಯಕಿ ರೇಷ್ಮಾ, ಭಾರತದ ಓಟಗಾರ ಮಿಲ್ಖಾ ಸಿಂಗ್, ಮೈಸೂರಿನವರೇ ಆದ ನೃತ್ಯಗಾರ್ತಿ ವೆಂಕಟಲಕ್ಷ್ಮಮ್ಮ ಬಂಜಾರ ಸಮುದಾಯದವರು ಎಂಬುದನ್ನು ನಾಟಕ ಬೆಳಕಿಗೆ ತರುತ್ತದೆ. ಶ್ರಮಜೀವಿಗಳೂ, ಪ್ರತಿಭಾವಂತರೂ ಆದ ಬಂಜಾರರ ಜೀವನಶೈಲಿಯನ್ನೂ ರಂಗದ ಮೇಲೆ ಸೊಗಸಾಗಿ ತರಲಾಗಿದೆ. ಮುಖ್ಯವಾಗಿ ಸಮುದಾಯದವರ ಆರಾಧ್ಯದೈವ ಸಂತ ಸೇವಾಲಾಲ್, ಮರಿಯಮ್ಮ ಅವರ ಸಂದೇಶ, ಮಾತೃಪ್ರಧಾನ ಮೌಲ್ಯವನ್ನೂ ನಾಟಕ ಪ್ರತಿಬಿಂಬಿಸುತ್ತದೆ.

ತಾಂಡಾದ ಕಾರ್‌ಬಾರಿಗಳ ಪಂಚಾಯಿತಿ ಸಭೆಯಲ್ಲಿ ಕಾಯಿಲೆಪೀಡಿತ ಗಂಡನ ಪತ್ನಿ, ಪರ ಪುರುಷನ ಪ್ರೀತಿಗೆ ಹಂಬಲಿಸುವುದು, ಆತನೂ ಆಕೆಯ ಮೋಹಕ್ಕೊಳಗಾಗಿ, ಪತ್ನಿ ಮತ್ತು ಮಕ್ಕಳನ್ನು ಬಿಟ್ಟು ಬರುವ ದೃಶ್ಯಕ್ಕಿಂತಲೂ ಬಂಜಾರರ ವೈಚಾರಿಕ ಪ್ರಜ್ಞೆಗೆ ಸಾಕ್ಷಿಯಂತಿರುವ 'ವಿಧವಾ ವಿವಾಹ' ಪದ್ಧತಿಗೆ ಆದ್ಯತೆ ನೀಡಿದ್ದರೆ ನಾಟಕ ಮತ್ತಷ್ಟು ಅರ್ಥಪೂರ್ಣವಾಗುತ್ತಿತ್ತು. ಅಂತೆಯೇ ಮೈಸೂರು ಮಹಾರಾಜರ ಆಸ್ಥಾನದಲ್ಲಿ ನರ್ತಕಿಯಾಗಿದ್ದ ವೆಂಕಟಲಕ್ಷ್ಮಮ್ಮ ಅವರನ್ನು ಪರಿಚಯಿಸುವ ಜೊತೆಗೆ, ಬಂಜಾರ ಸಮುದಾಯಕ್ಕೆ ಮೊದಲ ಬಾರಿಗೆ ರಾಜಕೀಯ ಪ್ರಾತಿನಿಧ್ಯ ನೀಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಉಲ್ಲೇಖವೂ ಇದ್ದಿದ್ದರೆ ಸೂಕ್ತವಾಗುತ್ತಿತ್ತು.

ಲೇಖಕ ಶಿರಗಾನಹಳ್ಳಿ ಶಾಂತನಾಯಕ್ ಅವರ 'ಗೋರ್‌ಮಾಟಿ', ಸಾಹಿತಿ ಬಿ.ಟಿ. ಲಲಿತಾ ನಾಯಕ್ ಅವರ 'ಹಬ್ಬ ಮತ್ತು ಬಲಿ' ಹಾಗೂ 'ತಾಂಡಾಯಣ' ಕೃತಿಗಳಲ್ಲಿನ ಅಂಶಗಳನ್ನು ಹೆಕ್ಕಿ ತೆಗೆದಿರುವ ನಿರ್ದೇಶಕರು ಅವುಗಳನ್ನು ಸನ್ನಿವೇಶಕ್ಕೆ ತಕ್ಕಂತೆ ಚಿತ್ರಿಸಿದ್ದಾರೆ. ಮೊಘಲ್ ದೊರೆ ಔರಂಗಜೇಬನಿಂದ ಹತನಾಗುವ ಸಿಖ್ಖರ 9ನೇ ಗುರು ತೇಜ್ ಬಹಾದ್ದೂರ್ ಅವರ ಅಂತ್ಯಸಂಸ್ಕಾರ ನಡೆಸುವ ಲಕ್ಕಿ ಸಾ ಬಂಜಾರ ಅವರ ಶೌರ್ಯ, ಹೈದರಾಬಾದ್‌ನಲ್ಲಿನ ಜಂಗಿ-ಭಂಗಿ ಸಹೋದರರ ಕಥನವನ್ನೂ ನಾಟಕ ಒಳಗೊಂಡಿದೆ. ಲಕ್ಕಿ ಸಾ ಬಂಜಾರನ ಶೌರ್ಯದ ಕಥನ ಹೇಳಲು ನಾಟಕದಲ್ಲಿ ಪ್ರಥಮ ಬಾರಿಗೆ ಶ್ಯಾಡೊಪಪೆಟ್ ಬಳಸಿಕೊಂಡಿರುವ ರೀತಿ ಆಕರ್ಷಕವಾಗಿದೆ.

ನಾಟಕದ ಮೊದಲಾರ್ಧ ಬಂಜಾರರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಮಹಾರೂಪಕದಂತೆ ಬಿಂಬಿಸಿದರೆ, ದ್ವಿತೀಯಾರ್ಧ ಬಂಜಾರರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಯನ್ನು ಬಿಂಬಿಸುತ್ತದೆ. ಕೊನೆಯಲ್ಲಿ ಚಾರ್ಲಿ ಚಾಪ್ಲಿನ್ ಅವರ ಮಾತುಗಳು ಪ್ರಸಕ್ತ ರಾಜಕಾರಣದ ಸ್ಥಿತಿಗೆ ಕನ್ನಡಿ ಹಿಡಿಯುತ್ತವೆ.


'ಗೋರ್‌ಮಾಟಿ' ನಾಟಕದ ದೃಶ್ಯ

ಸಮುದಾಯವೊಂದರ ಸಂಕಥನವನ್ನು ಎರಡು ಗಂಟೆಗಳಲ್ಲಿ ರಂಗರೂಪದಲ್ಲಿ ಕಟ್ಟಿಕೊಡುವುದು ಸುಲಭವಲ್ಲ. ಆದರೆ, ನಿರ್ದೇಶಕ ಸಿ. ಬಸವಲಿಂಗಯ್ಯ ಅವರು, ಬಂಜಾರರ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಸ್ಥಿತಿಗಳನ್ನು ಸೂಕ್ಷ್ಮವಾಗಿ ತೆರೆದಿಡುತ್ತಲೇ ಇತಿಹಾಸ, ವರ್ತಮಾನದ ತಲ್ಲಣಗಳನ್ನೂ ಅನಾವರಣಗೊಳಿಸಿದ್ದಾರೆ.

ಲಂಬಾಣಿ ಸಮುದಾಯದ ಉಡುಗೆ-ತೊಡುಗೆ ವಸ್ತ್ರವಿನ್ಯಾಸ (ಪ್ರಮೋದ್ ಶಿಗ್ಗಾಂವ್, ಶಶಿಕಲಾ ಬಿ.ಎನ್.), ರಂಗಸಜ್ಜಿಕೆ (ಶಶಿಧರ ಅಡಪ), ನೃತ್ಯ ಸಂಯೋಜನೆ (ನೇಸರ ಮೈಮ್ ರಮೇಶ್), ಬೆಳಕು ವಿನ್ಯಾಸ (ಕೃಷ್ಣಕುಮಾರ್ ನಾರ್ಣಕಜೆ) ಹಾಗೂ ಸಂಗೀತ ನಿರ್ವಹಣೆ (ಧನಂಜಯ ಆರ್.ಸಿ) ಸೇರಿದಂತೆ ನೇಪಥ್ಯ ಕಲಾವಿದರ ಪರಿಶ್ರಮ ನಾಟಕಕ್ಕೆ ಪೂರಕವಾಗಿವೆ. ಮುಖ್ಯವಾಗಿ ತಮ್ಮದಲ್ಲದ ಸಮುದಾಯವೊಂದರ ಭಾಷೆ, ಸಂಸ್ಕೃತಿಯನ್ನು ಅರಿತು ಅದನ್ನು ರಂಗದ ಮೇಲೆ ಪ್ರಸ್ತುತಪಡಿಸಿದ ಕಲಾವಿದರ ಶ್ರಮ ನಾಟಕದ ಉದ್ದಕ್ಕೂ ಗೋಚರಿಸುತ್ತದೆ. ಅಲೆಮಾರಿ, ಬುಡಕಟ್ಟು ಸಮುದಾಯವೊಂದರ ಸಂಕಥನವನ್ನು ರಂಗದ ಮೇಲೆ ತರಲು ಕಾರಣವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಯತ್ನ ಶ್ಲಾಘನೀಯ.

ಬೆಂಗಳೂರು ಬಂಧುಗಳು

10ನೇ ಪುಟದಿಂದ...

ಕುಟುಂಬ, ಸ್ನೇಹಿತರನ್ನು ಬಿಟ್ಟು, ದೇಶದ ಹಲವು ಭಾಗಗಳಿಂದ ಕನಸುಗಳನ್ನು ಹೊತ್ತು ಬರಿಗೈಯಲ್ಲಿ ಬೆಂಗಳೂರಿಗೆ ಬಂದ ಹಲವರಿಗೆ ಈ 'ಕಮ್ಯೂನಿಟಿ' ಬದುಕಲು ಸ್ಫೂರ್ತಿ ತುಂಬಿದೆ. ಮರುಭೂಮಿಯ ಓಯಸಿಸ್‌ನಂತೆ ಹಲವರ ಪಾಲಿಗೆ ನೆಮ್ಮದಿಯ ತಾಣವಾಗಿದೆ.

ನಾನಲ್ಲ, ನಾವು


ಅನಘಾ ಮಂಜುನಾಥ್

ವಾಸ್ತುಶಿಲ್ಪಿಗಳಾದ ಬೆಂಗಳೂರಿನ ಅನಘಾ ಮಂಜುನಾಥ್ ಹಾಗೂ ಪ್ರಜ್ವಲ್ ತಲೆಯಲ್ಲಿ ಎರಡು ವರ್ಷದ ಹಿಂದೆ ಹುಟ್ಟಿದ ಯೋಚನೆಯಿದು. ಬೆಂಗಳೂರಿನಲ್ಲಿ ಒಬ್ಬಂಟಿಯಾಗಿರುವ, ಸ್ನೇಹಕ್ಕಾಗಿ ಹಂಬಲಿಸುವ, ಜನರೊಂದಿಗೆ ಬೆರೆಯಬಯಸುವ, ಜನರ ಸಾಂಗತ್ಯ ಬಯಸುವವರಿಗಾಗಿ ಹುಟ್ಟಿದ್ದೆ 'ವಿ ಪ್ಲೇ ಬೆಂಗಳೂರು'.

'ಕಾಲೇಜು ಮುಗಿಸಿದ ಬಳಿಕ ನನ್ನ ಸ್ನೇಹಿತರಲ್ಲಿ ಕೆಲವರು ಉನ್ನತ ಶಿಕ್ಷಣಕ್ಕಾಗಿ ಬೇರೆಡೆ ಹೋದರು. ಮದುವೆಯಾಗಿ ಕೆಲವರು ಚದುರಿದರು. ಸ್ನೇಹಿತರ ಬಳಗ ದೂರಾವಾಯಿತು. ಜೊತೆಯಲ್ಲಿ ಕೆಲಸ ಮಾಡುವವರಿಂದ ಗೆಳೆತನ ಸಿಗಲಿಲ್ಲ. ಕೋವಿಡ್ ಬಳಿಕ ಬದುಕಿನ ಚಿತ್ರಣವೇ ಬದಲಾಯಿತು. ಮಾನಸಿಕ ನೆಮ್ಮದಿ ಕಳೆದುಕೊಂಡ ಹಲವರು ಸಿಕ್ಕರು. ಭಾಷೆ, ಸಂಸ್ಕೃತಿಯ ಕಾರಣಕ್ಕೆ ಒಂಟಿಯಾದವರೂ ಇದ್ದರು. ಅಂಥವರಿಗೆಲ್ಲಾ ವೇದಿಕೆ ಸಿದ್ಧಪಡಿಸಿದರೆ ಹೇಗೆ ಅಂದುಕೊಂಡಾಗ ಆರಂಭವಾಗಿದ್ದೇ ವಿ ಪ್ಲೇ ಬೆಂಗಳೂರು. ನನಗೆ ಸಾಥ್ ನೀಡಿದ್ದು ಸಹೋದ್ಯೋಗಿ ಪ್ರಜ್ವಲ್' ಎನ್ನುತ್ತಾರೆ ಅನಘಾ.

'ಬೆಂಗಳೂರಿನಲ್ಲಿ ನಿಮಗೆ ಹೊಸ ಸ್ನೇಹಿತರು ಬೇಕೇ? ಹಾಗಿದ್ದರೆ ನಮ್ಮನ್ನು ಸಂಪರ್ಕಿಸಿ' ಎಂದು ಸೋಶಿಯಲ್ ಮಿಡಿಯಾ ಪೋಸ್ಟ್ ಹಾಕಿದೆ. ಮೊದಲಿಗೆ ಪ್ರತಿಕ್ರಿಯೆ ನೀರಸವಾಗಿತ್ತು. ನಿಧಾನಕ್ಕೆ ಪ್ರತಿಕ್ರಿಯೆ ಬರತೊಡಗಿದವು. ವಾರಾಂತ್ಯದಲ್ಲಿ ಭೇಟಿಯಾಗುವುದರಿಂದ ಹಾಗೂ ಯಾವುದೇ ಪ್ರವೇಶ ಶುಲ್ಕ ಇರದಿರುವುದರಿಂದ ನಮಗೆ ನಿಭಾಯಿಸಲಾಗದಷ್ಟು ಮಂದಿ ಬರತೊಡಗಿದರು. ಬರುವವರ ಸಂಖ್ಯೆ ನಿಯಂತ್ರಿಸಲು ನೋಂದಣಿ ವ್ಯವಸ್ಥೆ ಆರಂಭಿಸಿದೆವು. ಶುಕ್ರವಾರ ಸಂಜೆ ಇನ್‌ಸ್ಟಾಗ್ರಾಂ ಮೂಲಕ ನೋಂದಣಿ ಮಾಡಿಸಿಕೊಳ್ಳುತ್ತೇವೆ. ಕೆಲವೇ ನಿಮಿಷಗಳಲ್ಲಿ 10 ಸಾವಿರಕ್ಕೂ ಅಧಿಕ ಮಂದಿ ನೋಂದಾಯಿಸುತ್ತಾರೆ. ಮೊದಲ 200 ಮಂದಿಗಷ್ಟೇ ಅವಕಾಶ ಕೊಡುತ್ತೇವೆ. ಇನ್‌ಸ್ಟಾಗ್ರಾಮ್‌ನಲ್ಲಿ ನಮ್ಮ ಪೇಜ್ ಈಗ ಲಕ್ಷ ಫಾಲೋವರ್ಸ್ ದಾಟಿದೆ' ಎಂದು ಅನಘಾ ಹೆಮ್ಮೆಯಿಂದ ಹೇಳಿದರು.

ಹೊಸ ಸ್ನೇಹಿತರು.. ಆಟ.. ಖುಷಿ..

ಭಾನುವಾರ ಕಬ್ಬನ್ ಪಾರ್ಕ್‌ನಲ್ಲಿ ಸೇರುವ ಈ ತಂಡಕ್ಕೆ ದೇಶದ ವಿವಿಧ ಭಾಗಗಳ, ವಿಭಿನ್ನ ಸಂಸ್ಕೃತಿ ಹಾಗೂ ಭಾಷೆಗಳ ಜನ ಬರುತ್ತಾರೆ. ಪರಸ್ಪರ ಪರಿಚಯ ಮಾಡಿಕೊಳ್ಳುತ್ತಾರೆ. ಬಂದವರನ್ನು ತಂಡಗಳಾಗಿ ವಿಭಜಿಸಿ ವಿವಿಧ ಒಳಾಂಗಣ ಆಟಗಳನ್ನು ಆಡಿಸುತ್ತಾರೆ. ನೃತ್ಯ, ಸಂಗೀತ, ಹಾಡು, ಕವನ, ಚಿತ್ರಕಲೆ, ಅಭಿನಯ, ಬೆಂಕಿ ಇಲ್ಲದೆ ಅಡುಗೆ ತಯಾರಿಕೆ, ಪಾಟ್ ಲಕ್, ಟ್ರೆಷರ್ ಹಂಟ್- ಹೀಗೆ ಹಲವು ಬಗೆಯ ಚಟುವಟಿಕೆಗಳನ್ನು ಮಾಡಿಸಲಾಗುತ್ತದೆ. ಭಾಷೆ, ಪ್ರಾದೇಶಿಕತೆ, ವರ್ಗ, ಲಿಂಗ, ವಯಸ್ಸು, ಧರ್ಮದ ಹಂಗಿಲ್ಲದೆ ಬೆರೆಯುತ್ತಾರೆ. ಅಪರಿಚಿತರಾಗಿ ಬಂದವರು ಸ್ನೇಹಿತರಾಗಿ ಹಿಂದಿರುಗುತ್ತಾರೆ. ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ರಚಿಸಿಕೊಂಡು ಸಂಪರ್ಕದಲ್ಲಿರುತ್ತಾರೆ.

> ಗಿಫ್ಟ್ ಬಾಕ್ಸ್‌ಗಳ ಆರ್ಡರ್ ತೆಗೆದುಕೊಳ್ಳುವ ಸಣ್ಣದೊಂದು ಸ್ಟಾರ್ಟಪ್ ನನ್ನದು. ವಿ ಪ್ಲೇಗೆ ಬಂದ ಬಳಿಕ ಹೆಚ್ಚಿನ ಜನರ ಪರಿಚಯವಾಯಿತು. ನನ್ನ ಬ್ಯುಸಿನೆಸ್ ಬಗ್ಗೆ ಅಲ್ಲಿದ್ದವರಿಗೆ ಹೇಳಿದೆ. ಈ ತಂಡದಿಂದ ಪರಿಚಯವಾದವರಿಂದಲೇ ನನಗೆ ಲಕ್ಷಾಂತರ ಮೌಲ್ಯದ ಆರ್ಡರ್ ಸಿಕ್ಕಿತು.
> ಮಯೂರಿ ಜಿಂದಾಲಿಯಾ, ಅಸ್ಸಾಂ

ವಿ ಪ್ಲೇನಲ್ಲಿ ಆಯಾ ಕಾರ್ಯಕ್ರಮಕ್ಕೆ ತಗಲುವ ಖರ್ಚನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಮೊಬೈಲ್, ಅಂತಸ್ತು, ಇತ್ಯಾದಿಗಳನ್ನು ಬದಿಗಿಟ್ಟು ಸಂಭ್ರಮಿಸುತ್ತಾರೆ. ಆಗಾಗ್ಗೆ ಪ್ರವಾಸಕ್ಕೂ ಹೋಗುತ್ತಾರೆ. ನೊಂದವರಿಗೆ ಹೆಗಲಾಗುತ್ತಾರೆ. ಸಂಭ್ರಮದಲ್ಲಿ ಜೊತೆಯಾಗುತ್ತಾರೆ. ಗರ್ಭಕಂಠದ ಕ್ಯಾನ್ಸರ್, ನೀರಿನ ಸಂರಕ್ಷಣೆ ಬಗ್ಗೆ ಜಾಗೃತಿಯೂ ನಡೆದಿದೆ. ಹಲವರ ಬದುಕಿಗೆ ಸ್ಫೂರ್ತಿ ಸಿಕ್ಕಿದೆ. ವ್ಯಕ್ತಿತ್ವ ವಿಕಸನಕ್ಕೆ ವೇದಿಕೆಯಾಗಿದೆ. ಕತ್ತಲ ಬದುಕಿಗೆ ಮಿಂಚುಹುಳುವಿನಂತಿದೆ ಈ ತಂಡ.

ಮುನ್ನೋಟ 7-04-2024 ರಿಂದ -13-04-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ನಿಮ್ಮೆಲ್ಲ ನಡವಳಿಕೆಗಳು ನಿಮ್ಮ ವೈಯುಕ್ತಿಕ ಅಭಿವೃದ್ಧಿಗೆ ಸೀಮಿತವಾಗಿರುತ್ತದೆ. ಸಂಸಾರದಲ್ಲಿ ಸುಖವಿದ್ದರೂ ಅದನ್ನು ಅನುಭವಿಸುವ ಮನಸ್ಸಿರುವುದಿಲ್ಲ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಮಧ್ಯಮ ಫಲಿತಾಂಶವಿರುತ್ತದೆ. ಸಂಗಾತಿಯ ಸೌಕರ್ಯಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ. ತಂದೆಯಿಂದ ಸಹಾಯ ದೊರೆಯುತ್ತದೆ.

ವೃಷಭರಾಶಿ — ಕೃತಿಕಾ2 3 4 ರೋಹಿಣಿ, ಮೃಗಶಿರಾ1 2
ಕೆಲವೊಮ್ಮೆ ನಿಮ್ಮ ಬುದ್ಧಿವಂತಿಕೆಗಳು ಕಳೆದು ಹೋದಂತೆ ಅನಿಸುತ್ತದೆ. ಆದಾಯವು ನಿರೀಕ್ಷಿತ ಮಟ್ಟದಲ್ಲಿ ಇರುವುದಿಲ್ಲ. ವಂಶದ ಹಿರಿಯರು ನಿಮ್ಮ ಬಗ್ಗೆ ಬಹಳ ಗೌರವವನ್ನು ಇಟ್ಟುಕೊಂಡಿರುತ್ತಾರೆ. ಸರ್ಕಾರ ಅಥವಾ ಸಂಘ ಸಂಸ್ಥೆಗಳ ಕಡೆಯಿಂದ ಭೂಮಿ ಅಥವಾ ನಿವೇಶನ ಹೊಂದುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಮಧ್ಯಮಗತಿಯ ಫಲಿತಾಂಶವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವ್ಯವಹಾರಿಕತೆಯಲ್ಲಿ ಬಹಳ ಉತ್ಸುಕತೆಯನ್ನು ತೋರುವಿರಿ. ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಉತ್ತಮವಾಗಿ ಮಾತನಾಡುವವರಿಗೆ ಹೊಸ ಹೊಸ ವೇದಿಕೆಗಳು ದೊರೆಯುತ್ತವೆ. ಉದ್ಯೋಗ ಮಾಡುವ ಸ್ಥಳದಲ್ಲಿ ನಿಮ್ಮ ಚಟುವಟಿಕೆಯಿಂದ ಎಲ್ಲರ ಗಮನ ಸೆಳೆಯುವಿರಿ. ಸ್ಥಿರಾಸ್ತಿಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಡಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಅನುಕೂಲ ಉಂಟಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಒಂದು ರೀತಿಯ ನಿಧಾನಗತಿಯ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ಯಾವುದೇ ಕೆಲಸವನ್ನು ಮಾಡುವಾಗ ಧರ್ಮ ಸೂಕ್ಷ್ಮವಾಗಿ ನಿಮ್ಮವರು ನಿಮಗೆ ಅಡ್ಡಿಮಾಡುವರು. ನಿಮ್ಮ ಸ್ಥಿರಾಸ್ತಿ ಮಾಡುವ ಆಸೆಗೆ ಹಿರಿಯರು ಸಹಕಾರ ನೀಡುವರು. ವಿದ್ಯಾರ್ಥಿಗಳಿಗೆ ನಿರೀಕ್ಷೆಗಿಂತ ಕಡಿಮೆ ಯಶಸ್ಸು ಇರುತ್ತದೆ. ವೃತ್ತಿಯ ಸ್ಥಳದಲ್ಲಿದ್ದ ಸಾಲಸೋಲಗಳನ್ನು ಈಗ ತೀರಿಸಿಕೊಳ್ಳಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಜನಸಮೂಹದಲ್ಲಿ ಗುರುತಿಸಿಕೊಳ್ಳಲು ಪ್ರಯತ್ನ ಪಡುವಿರಿ. ಆದಾಯವು ಮಂದಗತಿಯಲ್ಲಿರುತ್ತದೆ. ಮಾತನಾಡುವಾಗ ಮಾತಿನ ಬಗ್ಗೆ ಎಚ್ಚರವಿರಲಿ. ನಿಮ್ಮ ಕೆಲಸಕಾರ್ಯಗಳಿಗೆ ಸ್ತ್ರೀಯರಿಂದ ಅಡ್ಡಿ ಬರಬಹುದು. ಕೃಷಿಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಸೂಕ್ತ ಗುರುಗಳು ದೊರೆತು ಅಧ್ಯಯನದಲ್ಲಿ ಯಶಸ್ಸು ಸಿಗುತ್ತದೆ. ಮೂಳೆಮುರಿತ ಆಗಿರುವವರಿಗೆ ಪರಿಹಾರ ಸ್ವಲ್ಪ ನಿಧಾನವಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಧರ್ಮ ಕಾರ್ಯಗಳ ಬಗ್ಗೆ ಹಾಗೂ ಧರ್ಮ ಆಚರಣೆಯ ಬಗ್ಗೆ ಆಸಕ್ತಿ ಹೆಚ್ಚುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಮಾತನಾಡುವಾಗ ಬಳಸುವ ಕೆಲವು ಭಾಷೆ ಕೆಲವರನ್ನು ನಿಮ್ಮಿಂದ ದೂರ ಮಾಡುತ್ತದೆ. ಬಂಧುಗಳ ಸಂಬಂಧಗಳನ್ನು ಸುಧಾರಿಸಿಕೊಳ್ಳುವುದು ನಿಮಗೆ ಒಳಿತು. ಆಸ್ತಿ ವಿಚಾರಗಳಲ್ಲಿ ಬಂಡವಾಳ ಹೆಚ್ಚಾಗುವ ಸಾಧ್ಯತೆಯಿದೆ.ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಅಸಾಧ್ಯ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಆದಾಯವು ನಿರೀಕ್ಷೆಯ ಮಟ್ಟಕ್ಕೆ ಇರುವುದಿಲ್ಲ. ನಿಮ್ಮ ನಡವಳಿಕೆಗಳಲ್ಲಿ ಸಾಕಷ್ಟು ವ್ಯವಹಾರಿಕತೆಯನ್ನು ಕಾಣಬಹುದು. ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅಷ್ಟು ಯಶಸ್ಸು ಇರುವುದಿಲ್ಲ. ಕೆಲವೊಂದು ಸಾಲಗಳನ್ನು ತೀರಿಸಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಗುತ್ತದೆ. ಸಂಗಾತಿಯು ಜಾಣತನದಿಂದ ನಿಮ್ಮಿಂದ ಹಣ ವಸೂಲು ಮಾಡಲು ಪ್ರಯತ್ನ ಪಡುವರು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸ್ವಲ್ಪ ಆತ್ಮ ಗೌರವ ಜಾಸ್ತಿ ಇರುತ್ತದೆ. ಆದಾಯವು ಮಂದಗತಿಯಲ್ಲಿರುತ್ತದೆ. ಬಹಳ ಕಷ್ಟಪಟ್ಟು ಕೆಲಸ ಮಾಡುವಿರಿ. ಕೃಷಿ ಪಂಡಿತರಿಗೆ ಉತ್ತಮ ಬೇಡಿಕೆ ಬರುತ್ತದೆ. ನಿಮ್ಮೊಡನೆ ಇರುವ ನೆಂಟರುಗಳೇ ನಿಮಗೆ ಶತ್ರುಗಳಾಗುವರು. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಮಧ್ಯಮ ಫಲಿತಾಂಶ ಇರುತ್ತದೆ. ಆಭರಣ ತಯಾರಕರಿಗೆ ವ್ಯವಹಾರದಲ್ಲಿ ಏರಿಳಿತವಿರುವುದಿಲ್ಲ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಹೊಸ ಹುಮ್ಮಸ್ಸಿನಿಂದ ಕಾರ್ಯ ಪ್ರವೃತ್ತರಾಗುವಿರಿ. ಆದಾಯವು ಕಡಿಮೆ ಇದ್ದರೂ ಅದನ್ನು ಸರಿಯಾಗಿ ನಿಭಾಯಿಸುವಿರಿ. ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಬರುವವರನ್ನು ಸದ್ದಿಲ್ಲದೆ ಹಿಂದಿರುಗುವಂತೆ ಮಾಡುವಿರಿ. ಆಸ್ತಿ ವಿಚಾರದಲ್ಲಿ ಮುಂದುವರಿಯಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ಇರುತ್ತದೆ. ಸಂಗಾತಿಯ ಆದಾಯ ಸ್ವಲ್ಪ ಹೆಚ್ಚುವ ಸಾಧ್ಯತೆ ಇದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನೀವು ದೃಢಮನಸ್ಕರಾಗಿ ಕೆಲಸ ಮಾಡುತ್ತಿದ್ದರೂ ನಿಮ್ಮನ್ನು ಕೆಣಕುವ ಕೆಲಸವನ್ನು ಕೆಲವರು ಮಾಡುವರು. ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ನಿಮ್ಮ ಕೆಲಸವನ್ನು ಮುಂದುವರಿಸಿರಿ. ಆದಾಯವು ಕಡಿಮೆ ಇದ್ದರೂ ಅದರಲ್ಲೇ ತೂಗಿಸುವಿರಿ. ಭೂಮಿ ವ್ಯಾಪಾರವನ್ನು ಮಾಡುವರಿಗೆ ಅಧಿಕ ಲಾಭವಿರುತ್ತದೆ. ಸಂಗಾತಿಯ ಕಡೆಯವರಿಗಾಗಿ ಸ್ವಲ್ಪ ಹಣ ಖರ್ಚಾಗುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಬಲಯುತವಾದ ದೇಹವನ್ನು ಪಡೆಯುವ ಕಡೆಗೆ ಗಮನಹರಿಸುವಿರಿ. ಹಿರಿಯರ ಮಾತಿನಲ್ಲಿ ದೃಢತೆ ಇದ್ದರೂ ಸಹ ಅದರಲ್ಲಿ ವ್ಯಂಗ್ಯವಿರುವುದಿಲ್ಲ. ಹಿರಿಯರು ಸಮಾಜಕ್ಕೆ ಸಹಕಾರಿಯಾಗುವ ರೀತಿಯಲ್ಲಿ ನಡೆದುಕೊಳ್ಳುವರು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶದ ಯೋಗವಿದೆ. ಶ್ವಾಸಕೋಶ ಮತ್ತು ಕಫದ ತೊಂದರೆ ಇರುವವರು ಎಚ್ಚರವಹಿಸಿರಿ. ಸಂಗಾತಿಯಿಂದ ಸ್ವಲ್ಪ ಆದಾಯ ಬರುವ ನಿರೀಕ್ಷೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಮನಸ್ಸಿನಲ್ಲಿ ಸಾಕಷ್ಟು ದ್ವಂದ್ವಗಳಿರುತ್ತವೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಹೆಚ್ಚು ಅಲಂಕಾರಿಕವಾಗಿ ಕಾಣಿಸಿಕೊಳ್ಳುವ ಪ್ರಯತ್ನ ಮಾಡುವಿರಿ. ಆಸ್ತಿ ವ್ಯವಹಾರ ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ. ಉಸಿರಾಟದ ತೊಂದರೆ ಇರುವವರು ಹೆಚ್ಚು ಎಚ್ಚರ ವಹಿಸಿರಿ. ಸಂಗಾತಿ ಆದಾಯದಲ್ಲಿ ಕಡಿಮೆಯಾಗಬಹುದು. ಅನಿರೀಕ್ಷಿತವಾಗಿ ಒಡವೆ ಕೊಳ್ಳುವ ಯೋಗವಿದೆ.

ಪದಬಂಧ 2836



ಮೇಲಿನಿಂದ ಕೆಳಕ್ಕೆ
1. ಪ್ರಾಣಿಗಳ ನೀರಿನ ಆಸೆ ಹುಟ್ಟಿಸುವ ಮರೀಚಿಕೆ 4
2. ಹೆಣ್ಣಿಗೆ ಮನೆಯೊಡತಿ ಪಟ್ಟ 5
3. ಹಕ್ಕಿಗಳನ್ನು ಒಟ್ಟಾಗಿಸುವ ಜಾತಿ 5
4. ಕಬ್ಬಿಣ ಕುಲುಮೆ ಕೆಲಸಗಾರ 3
6. ಬರವಣಿಗೆಯ ಕೃಷಿ ಮಾಡುವ ಲೇಖಕ 3
8. ಕೆಲಸದಿಂದ ಕೂಡಲೇ ತೆಗೆದುಹಾಕುವ ಕ್ರಮ 2
11. ಮನೆಯನ್ನು ನಿಭಾಯಿಸುವ ಹೆಣ್ಣು 3
13. ದೇವಾಲಯದ ಶಿಖರದಲ್ಲಿ ಶೋಭಿಸುವ ಕುಂಭ 3
14. ಕಾಡಿನಲ್ಲಿ ನಡೆವ ಯಜ್ಞದ ಕೊನೆಯಲ್ಲಿ ಶೂನ್ಯ ಆವರಿಸಿದೆ 3
15. ಸರಳವಾಗಿ ಹಾಡಬಹುದಾದ ಹಾಡು 5
16. ಅಸುರರನ್ನು ಒಟ್ಟಾಗಿಸುವ ವಂಶ 5
17. ತಂದೆ ಸಮಾನರಿಗೆ ಮಾತಿನ ಒಕ್ಕಣೆ ತಲೆಕೆಳಗು 2
20. ವ್ಯಾಜ್ಯವನ್ನು ಪರಿಹರಿಸಿ ತೀರ್ಪು ಕೊಡಿಸುವ ದೇವತೆ 4
21. ಆಕಾಶವನ್ನು ನೋಡುತ್ತಾ ಬಟ್ಟೆ ತೊಳೆಯುವವ 3

ಎಡದಿಂದ ಬಲಕ್ಕೆ
1. ಸಾವನ್ನು ದೂರಹಾಕಿ ಗೆಲುವನ್ನು ಕರುಣಿಸುವ ಪರಮೇಶ್ವರ 4
3. ಒಂದು ರೀತಿ ಸಂಸಾರವನ್ನು ತ್ಯಜಿಸಿ ಸಂನ್ಯಾಸಿಯಾಗಿರುವ ಆಚಾರ್ಯ 5
5. ಜಗತ್ತಿನ ಕುಟುಂಬದ ತಿರುಳು ಹೀಗಿರುತ್ತೆ 5
7. ವಿಷ್ಣು ಪಂಥಕ್ಕೆ ಸೇರಿದವ 3
9. ಇದು ಜಾರಿದ ಕೂಡಲೇ ಬೆಳಗು 3
10. ಜಾತಿಯಲ್ಲಿ ಮೂಡುವ ಎಚ್ಚರ 3
12. ಲಕ್ಷಾಧಿಪತಿಯನ್ನು ಹಿಂದಿಯಲ್ಲಿ ಸರಳವಾಗಿ ಹೀಗೆನ್ನುತ್ತಾರೆ 4
14. ಎಲ್ಲವನ್ನೂ ಒಪ್ಪವಾಗಿ ಜೊತೆಮಾಡು 4
16. ಹರಿ ಭಕ್ತ ಮನೆ ಬಾಗಿಲಿಗೆ ಹಾಡುತ್ತಾ ಬರುತ್ತಾನೆ 3
18. ಕೈಗೆ ಮನಸ್ಸಿಗೆ ಎಟುಕದ ಎತ್ತರ 3
19. ಸಾಧುವಾದದೂ ಅಲ್ಲ ಕಟ್ಟಳೆ ರೀತಿ ಸರಿಯಾದದೂ ಅಲ್ಲ 3
21. ಕೊನೆಯೇ ಕಾಣದ ದಶರಥ ಪುತ್ರ 5
22. ಎಲ್ಲರ ಒಪ್ಪಿಗೆಯ ಓಟು ಬಿದ್ದರೆ ಆಯ್ಕೆ 5
23. ಪೂಜೆಗೆ ಪಾತ್ರಳಾದ ಹಣದೇವತೆ 4

ಪದಬಂಧ ಉತ್ತರ -2835

ಮೇಲಿಂದ ಕೆಳಕ್ಕೆ
1.ವಿಕಾಸ 2.ನವಾಜ 3.ಕಾಳಿಕಾ 4.ಯಥಾರ್ಥ 8.ಸತ್ಯಪ್ರಪಂಚ 10.ತಾಮಸ 11.ಮಗಸಂ 12.ಕರುಣೆ 13.ನವವಸಂತ 14.ನಯನ 16.ಭ್ರಮರ 18.ಚಾಕರಿ 19.ಮಸಣ 20.ವಿಚಾರ 21.ಸುಪ್ರಜ

ಎಡದಿಂದ ಬಲಕ್ಕೆ
1.ವಿಶ್ರಾಂತಜೀವನ 3.ಕಾರ್ತಿಕೇಯ 5.ವಾಚಾಳಿ 6.ಸಮಾನಸಮಾಜ 9.ಕಾಮಿತಾರ್ಥ 11.ಮಹಾವಿಪ್ರ 12.ಕಠಿನಶಾಸನ 15.ಸಂಭ್ರಮಾಚರಣೆ 17.ವಯೋಮಾನ 18.ಚಾರಧಾಮ 20.ವಿಕೃತಮನಸು 22.ಸಲೀಚಾ 23.ರಿಪುಗಣ 24.ರವಿಕುಲತೇಜ

ಕಲ್ಯಾಣ ಕರ್ನಾಟಕದ ಸಾಕ್ಷಿಪ್ರಜ್ಞೆ ಶಾಂತರಸ

ದಸ್ತಗೀರಸಾಬ್ ದಿನ್ನಿ

‘ಜಿಗಿದು ಹೋದವು ತಾರೆ ಎಂದೋ ನೀಲಾಂಬರದ ಅಂಗಳಕೆ ಯಾರು ತರುವರು ಮರಳಿ ಈ ನೆಲಕೆ ರಂಗೋಲಿ ಹಾಕಲಿಕೆ’

ಕಲ್ಯಾಣ ಕರ್ನಾಟಕದ ಕದಡಿ ಹೋದ ಕನಸು, ದುರಂತ, ಹಾಡುಪಾಡು, ಆಶಾವಾದವನ್ನು ಗಜಲ್‌ಗಳ ಮೂಲಕ ರೂಪಕನಿಷ್ಠವಾಗಿ ತೋಡಿಕೊಂಡ ಕವಿ ಶಾಂತರಸ.

ಲೇಖಕ, ಕಥೆಗಾರ, ನಾಟಕಕಾರ, ಸಂಶೋಧಕ, ಹೋರಾಟಗಾರ–ಹೀಗೆ ಹಲವು ರೂಪಗಳಲ್ಲಿ ಕಾಣಿಸಿಕೊಂಡಿದ್ದ ಅವರು, ರಾಯಚೂರು ಜಿಲ್ಲೆಯ ಹೆಂಬೇರಾಳ ಗ್ರಾಮದ ಚನ್ನಬಸವಯ್ಯ ಹಿರೇಮಠ ಮತ್ತು ಸಿದ್ದಲಿಂಗಮ್ಮನವರ ಪುತ್ರ. ಅವರ ಮೊದಲು ಹೆಸರು ಶಾಂತಯ್ಯ. ಬಾಲ್ಯದಲ್ಲಿಯೇ ಚುರುಕಾಗಿದ್ದರು. ಹೊಟ್ಟೆಪಾಡಿಗಾಗಿ ಪಂಚಾಂಗ ಹೇಳುವ, ದೆವ್ವ ಬಿಡಿಸುವ, ಕರ್ಮಠ ವಿಧಿವಿಧಾನಗಳನ್ನು ಅನುಸರಿಸುವ ತಂದೆಯ ಕೆಲಸಗಳನ್ನು ಪ್ರಶ್ನಿಸುವ ಗುಣವನ್ನು ಬೆಳೆಸಿಕೊಂಡಿದ್ದರು.

ಶಾಂತರಸರು ರಾಯಚೂರಿನಲ್ಲಿ ನೆಲೆಯೂರಿದ್ದರು. ಅಧ್ಯಾಪನ, ಬರವಣಿಗೆಗೆ ತಮ್ಮ ಬದುಕನ್ನು ಸೀಮಿತಗೊಳಿಸದೆ ನಿತ್ಯ ನಡೆಯುವ ಮೋಸ, ತಾರತಮ್ಯ ನೀತಿಯ ತಲ್ಲಣಗಳಿಗೆ ನಿರಂತರವಾಗಿ ಪ್ರತಿರೋಧ ಒಡ್ಡುತ್ತಿದ್ದರು. ಕನ್ನಡ ನಾಡು-ನುಡಿ, ನೆಲ–ಜಲ, ಪರಿಸರಕ್ಕೆ ಹಾನಿಯಾದರೆ ಸಿಡಿಮಿಡಿಗೊಳ್ಳುತ್ತಿದ್ದರು. ಮಲತಾಯಿ ಧೋರಣೆಯನ್ನು ಎಂದೂ ಸಹಿಸುತ್ತಿರಲಿಲ್ಲ.

ಅವರು ‘ಸಂಗಡಿಗರ ಸಮಿತಿ’ಯನ್ನು ಹುಟ್ಟುಹಾಕಿ ಉಪನ್ಯಾಸ, ಸಂಗೀತ, ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ರಾಯಚೂರು ಸುತ್ತಮುತ್ತಲಿನ ಸಾಂಪ್ರದಾಯಿಕ ಮಠಗಳಲ್ಲಿ ‘ಬಸವ ಜಯಂತಿ’ಯನ್ನು ಆಚರಿಸಿ ಅಸಮಾನತೆ, ಅಸ್ಪೃಶ್ಯತೆಯ ವಿರುದ್ಧ ಸಂಘರ್ಷಕ್ಕೆ ಇಳಿದರು. ‘ಸತ್ಯಸ್ನೇಹಿ’ ಪ್ರಕಾಶನವನ್ನು ಆರಂಭಿಸಿ ಎಲೆಮರೆಕಾಯಿಯಂತಿರುವ ಲೇಖಕರ ಕನಸು, ಕನವರಿಕೆ, ಪಿಸುಮಾತುಗಳ ಸೃಜನಶೀಲ ಅಭಿವ್ಯಕ್ತಿಗೆ ಪ್ರಕಟಣೆ ಭಾಗ್ಯವನ್ನು ಕಲ್ಪಿಸಿದರು. ಇದು ಕಲ್ಯಾಣ ಕರ್ನಾಟಕದ ಸಾಹಿತಿಗಳ ಬೆಳವಣಿಗೆಗೂ ಕಾರಣವಾಯಿತು. ಸಿರವಾರದ ‘ಉಮಾಪತಿ ಚುಕ್ಕಿ ಪ್ರತಿಷ್ಠಾನ’ದಿಂದ ಲೇಖಕರಿಗೆ ಪುಸ್ತಕ ಪ್ರಶಸ್ತಿ ನೀಡುತ್ತಿದ್ದರು. ಸಿದ್ದರಾಮ ಜಂಬಲದಿನ್ನಿ, ಗಜಲ್ ಗುಂಡಮ್ಮರಿಂದ ಸಂಗೀತ, ತತ್ವಪದ ಗಾಯನ ನಡೆಯುವಂತೆ ನೋಡಿಕೊಂಡರು. ತಾವಿದ್ದ ನೆಲದಲ್ಲಿ ಸಾಂಸ್ಕೃತಿಕ ಹಸಿರನ್ನು ಉಕ್ಕಿಸುವ ಕೆಲಸವನ್ನು ಬಿಡದೆ ಮಾಡಿದರು.

ಸ್ಮರಣೆ

ಚಂದ್ರಕಾಂತ ಕುಸುನೂರು, ರಾಜಶೇಖರ ನೀರಮಾನ್ವಿಯೊಂದಿಗೆ ‘ಪ್ರತೀಕ’ ತ್ರೈಮಾಸಿಕ ಪತ್ರಿಕೆ ಹೊರತಂದರು. ಇದು ಯುವ ಮನಸುಗಳ ಪಿಸುಮಾತಿಗೆ, ಭಾವಲಹರಿಗೆ, ತೀವ್ರ ಸಂವೇದನೆಗಳಿಗೆ ವೇದಿಕೆಯಾಯಿತು. ಹೀಗಾಗಿಯೇ ಜಂಬಣ್ಣ ಅಮರಚಿಂತ, ಚೆನ್ನಣ್ಣ ವಾಲೀಕಾರ, ಬಿ.ಟಿ. ಲಲಿತಾ ನಾಯಕ, ಎಚ್.ಎಸ್. ಮುಕ್ತಾಯಕ್ಕರ ಹೊಸನುಡಿಗಟ್ಟಿನ ಕವಿತೆಗಳು ಅಲ್ಲಿ ಬೆಳಗಿದವು.

ಪಿ.ಲಂಕೇಶರ ‘ಅಕ್ಷರ ಹೊಸ ಕಾವ್ಯ’ ಪ್ರಾತಿನಿಧಿಕ ಸಂಕಲನದಂತೆ, ಬುದ್ದಣ್ಣ ಹಿಂಗಮಿರೆ ಅವರು ಧಾರವಾಡದಿಂದ ‘ಹೊಸ ಜನಾಂಗದ ಕವಿತೆ’ಯನ್ನು ತಂದರು. ಅಲ್ಲಿ ಕಲ್ಯಾಣ ಕರ್ನಾಟಕದ ಪ್ರತಿಭೆಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯಕ್ಕೆ ಒಳಪಡಿಸಲಾಗಿತ್ತು. ಇದು ಶಾಂತರಸರ ಸ್ವಾಭಿಮಾನವನ್ನು ಕೆಣಕಿತು. ಆಗ ‘ಬೆನ್ನ ಹಿಂದಿನ ಬೆಳಕು’ ಪ್ರಾತಿನಿಧಿಕ ಸಂಕಲನ ಪ್ರಕಟಿಸಿದರು. ‘ಪರಿಸರ, ಪ್ರೋತ್ಸಾಹ, ಅವಕಾಶಗಳ ಬಲದಿಂದ ಮುಂದೆ ಹೋದವರು ಈ ಭಾಗದ ಬೆಳಕನ್ನು ಗುರುತಿಸಲಿಲ್ಲ. ಹೀಗಾದರೆ ಇಲ್ಲಿ ಬೆಳಕೇ ಇಲ್ಲವೆಂಬ ಭ್ರಮೆ ಹುಟ್ಟಬಹುದು. ಕನ್ನಡದ ಪ್ರಾಮಾಣಿಕ ಓದುಗ ಐತಿಹಾಸಿಕ ಸತ್ಯವಾದ ಬೆಳಕಿನಿಂದ ವಂಚಿತನಾಗಬಹುದು. ದಯವಿಟ್ಟು ಹಿಂದಿರುಗಿ ನೋಡಿ ಬೆನ್ನ ಹಿಂದಿನ ಬೆಳಕು’ ಎಂದರು.

ಕಲ್ಯಾಣ ಕರ್ನಾಟಕದ ಬಗೆಗೆ ಎಲ್ಲಿಲ್ಲದ ಅಭಿಮಾನ. ಈ ಭಾಗಕ್ಕೆ ಅನ್ಯಾಯವಾದಾಗಲೆಲ್ಲ ‘ನಾಗರಿಕ ವೇದಿಕೆ’ಯಿಂದ ವ್ಯವಸ್ಥೆಯ ವಿರುದ್ಧ ‘ಲಭೋ.. ಲಭೋ..’ ಹೊಯ್ಕೊಳ್ಳುತ್ತ ವಿಶಿಷ್ಟವಾದ ಬಗೆಯಲ್ಲಿ ಪ್ರತಿಭಟಿಸುತ್ತಿದ್ದರು. ಶಾಂತರಸರಿಗೆ ಕರ್ನಾಟಕ ಸರ್ಕಾರ 1992 ರಲ್ಲಿ ‘ರಾಜ್ಯೋತ್ಸವ ಪ್ರಶಸ್ತಿ’ಯನ್ನು ಪ್ರಕಟಿಸಿತು. ಕನ್ನಡ ಭಾಷೆಯ ಬಗೆಗಿನ ಸರ್ಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿ ಪ್ರಶಸ್ತಿಯನ್ನು ನಿರಾಕರಿಸಿದ್ದು ಇತಿಹಾಸ.

ಶಾಂತರಸರು ಸತ್ಯಸ್ನೇಹ (ನಾಟಕ), ಮುಸುಕು ತೆರೆ ಮಾನಸಗಳ್ಳಿ, ಬಯಲುಸೀಮೆಯ ಬಿಸಿಲು (ಕಾವ್ಯ) ಹೊರತಂದರು. ಪ್ರೀತಿ, ಪ್ರೇಮ, ಪ್ರತಿಭಟನೆ, ಆಕ್ರೋಶ, ನಿತ್ಯ ಬದುಕಿನ ಸಂಕಟ, ಭಾವತೀವ್ರತೆಯನ್ನು ಕಾವ್ಯದುದ್ದಕ್ಕೂ ತೆರೆದಿಟ್ಟರು. ನವೋದಯ, ನವ್ಯ ಮಾದರಿಯ ಕವಿತೆಗಳು ಈ ಹೊತ್ತಿಗೂ ತಾಜಾತನವನ್ನು ಉಳಿಸಿಕೊಂಡಿವೆ. ನೆಲದ ಕಸುವು ಅಲ್ಲಿ ಮಿಂಚಿದೆ. ಕನ್ನಡ ಕಾವ್ಯಲೋಕಕ್ಕೆ ‘ಗಜಲ್’ ರೂಪವನ್ನು ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರು ಕನ್ನಡದಲ್ಲಿ ಒಂದು ಪರಂಪರೆಯನ್ನೇ ನಿರ್ಮಾಣ ಮಾಡಿದ್ದಾರೆ. ಅವರ ‘ಗಜಲ್ ಮತ್ತು ಬಿಡಿ ದ್ವಿಪದಿ’ ಒಂದು ಅಪರೂಪದ ಸಂಕಲನ. ಈ ರೂಪ ಒಳಗು ಮಾಡಿಕೊಂಡಿರುವ ಮತ್ಲಾ, ಕಾಫೀಯಾ, ರದೀಫ್, ಮಕ್ತಾ ಛಂದೋಲಯಗಳನ್ನು ಪ್ರಸ್ತಾವನೆಯಲ್ಲಿ ಸೋದಾಹರಣವಾಗಿ ವಿಶ್ಲೇಷಿಸಿದ್ದಾರೆ.

“ಏಸೋ ದಿನಗಳ ಬಳಿಕ ಓಲೆ
ಬಂದಿದೆಯವಳ ಏನಿದೆಯೋ ಅಲ್ಲಿ.
ಮುನಿಸು ಒಲವೋ ಅದನು ಸಹಿಸಲಿಕೆ ಬಟ್ಟಲವ
ತುಂಬಿಕೊಡು ಸಾಕಿ”.


ವಿರಹ, ತೊಳಲಾಟ, ಚಡಪಡಿಕೆ, ವಿಪ್ರಲಂಭ, ಯಾತನೆಯ ಭಾವದ ಗಜಲ್‌ಗಳು ಮಧುರವಾಗಿವೆ. ಮತ್ತೆ ಮತ್ತೆ ಮೆಲುಕು ಹಾಕುವಂತಿವೆ. ಗಜಲ್‌ಗಳ ಭಾಷೆ ಕೋಮಲವಾಗಿದೆ. ಕನ್ನಡ ಕಾವ್ಯಲೋಕಕ್ಕೆ ಅವರ ಇನ್ನೊಂದು ಸೇರ್ಪಡೆ ಎಂದರೆ ‘ಉರ್ದು ಕಾವ್ಯದಲ್ಲಿ ಮದಿರೆ ಮತ್ತು ಯೌವನ’ ಅಲ್ಲಿನ ಇನ್ನೂರು ದ್ವಿಪದಿಗಳು ಅಪ್ಪಟ ಕನ್ನಡದವೇ ಎನ್ನುವಷ್ಟರ ಮಟ್ಟಿಗೆ ಸೊಗಸಾಗಿವೆ.

ಶಾಂತರಸರು ಅನನ್ಯ ಕಥೆಗಾರರು. ಅವರ ಬಡೇಸಾಬು ಪುರಾಣ, ನಾಯಿ ಮತ್ತು ಪಿಂಚಣಿ, ಉರಿದ ಬದುಕು ಸಂಕಲನಗಳಲ್ಲಿ ಒಂದು ಅದ್ಭುತಲೋಕವೇ ತೆರೆದುಕೊಂಡಿದೆ. ದೇಸಿಯ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡರು. ಬಿಸಿಲ ಬದುಕು, ರಜಾಕಾರರ ಹಾವಳಿ, ಹಿಂಸೆ, ಪ್ರೀತಿ, ಲೈಂಗಿಕ ಶೋಷಣೆಯಿದೆ. ಪಾತ್ರಗಳ ಚಹರೆ, ಮಾತು, ಬದುಕಿನ ವಿನ್ಯಾಸಗಳು ಸಹಜವಾಗಿ ಮೂಡಿವೆ. ಅವರ ಕಥನಕಲೆ, ತಂತ್ರ, ಶೈಲಿ ಆಪ್ತವಾಗುವಂತಿವೆ. ಬದುಕಿನ ಅನೇಕ ನಿಷ್ಠುರ ಸತ್ಯಗಳೇ ಅಲ್ಲಿ ಕಥೆಗಳಾಗಿವೆ. ಕತೆಗಳ ಮೇಲೆ ಸುಮ್ಮನೆ ಕಣ್ಣಾಡಿಸಿದರೆ ಸಾಕು ಇಡೀ ಕಲ್ಯಾಣ ಕರ್ನಾಟಕದ ದರ್ಶನವಾಗುತ್ತ ಹೋಗುತ್ತದೆ.

ಶಾಂತರಸರ ‘ಸಣ್ಣ ಗೌಡಸಾನಿ’, ಮಿರ್ಜಾ ರುಸ್ವಾರ ‘ಉಮ್ರಾವೋ ಜಾನ್ ಅದಾ’ ಉರ್ದು ಅನುವಾದಿತ ಕಾದಂಬರಿ ಕಾವ್ಯಾತ್ಮಕವಾಗಿವೆ. ಅಷ್ಟೇ ಮನೋಜ್ಞವಾಗಿ ಅನುವಾದಗೊಂಡಿದೆ.

ಕಲ್ಯಾಣ ಕರ್ನಾಟಕದ ಸಾಕ್ಷಿಪ್ರಜ್ಞೆಯಂತೆ, ಪ್ರಶಾಂತ ಹಸಿರು ದೀಪದಂತಿದ್ದ ಶಾಂತರಸರು ಏನಾದರೂ ಮಾಡಬೇಕು ಎಂದು ಸದಾ ಬಡಬಡಿಸುತ್ತಿದ್ದರು. ಅವರ ಉತ್ಸಾಹ, ಕ್ರಿಯಾಶೀಲತೆ ಅನುಕರಣೀಯವಾಗಿತ್ತು.

‘ಮುಗಿಯ ಬಂದಿದೆ ಎಣ್ಣೆ ದೀಪದಲಿ ಮಾಡುವುದು ಬಹಳವಿತ್ತು
ಕತ್ತಲೆಯನ್ನಪ್ಪಿದ್ದೆ ಉರಿವಾಗ ನೋಡುವುದು ಬಹಳವಿತ್ತು’.



ಶಾಂತರಸ

ಕಲ್ಯಾಣ ಕರ್ನಾಟಕ ಸೊಗಡಿನ ಸಾಹಿತಿ ಶಾಂತರಸರ (ಏಪ್ರಿಲ್ 4,1924) ಶತಮಾನೋತ್ಸವ ಸಮಾರಂಭವನ್ನು ಇಂದು ರಾಯಚೂರಿನ ಎಸ್‌.ಆರ್‌.ಕೆ. ಮಹಾವಿದ್ಯಾಲಯ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಅಲ್ಲಿ ಪುಸ್ತಕ ಬಿಡುಗಡೆ, ಉಪನ್ಯಾಸ ಸಹ ನಡೆಯಲಿವೆ.

ಅಕಾಡೆಮಿಕ್ ಚೌಕಟ್ಟಿನಲ್ಲಿ ಆಪ್ತ ಕಥನ

ಎನ್‌.ವಿ

ರಾಜಕುಮಾರ್ ಅಗಲಿ ಕೆಲವು ದಿನಗಳಾಗಿತ್ತಷ್ಟೆ. ಬೆಂಗಳೂರಿನ ಬಸವನಗುಡಿ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಗಿರೀಶ ಕಾರ್ನಾಡರು ಸುದೀರ್ಘವಾಗಿ ಮಾತನಾಡಿ, ಈ ನಟ ಹೇಗೆ ಸಂಸ್ಕೃತಿಯ ಭಾಗ ಎನ್ನುವುದನ್ನು ಬಣ್ಣಿಸಿದ್ದರು. ಕನ್ನಡ ಚೆನ್ನಾಗಿ ಮಾತನಾಡಬೇಕೆಂದು ಎಂಥವರಿಗೂ ಅನಿಸುವಂತೆ ಮಾಡಿದ್ದ, ನಾಡು–ನುಡಿಯ ಕುರಿತ ಆರಾಧನಾಭಾವ ಇಟ್ಟುಕೊಂಡಿದ್ದ, ಜೀವನಮೌಲ್ಯಗಳನ್ನು ಗೌರವಿಸುವ ರಾಜಕುಮಾರ್ ಹೇಗೆಲ್ಲ ಅಸಂಖ್ಯ ಕನ್ನಡಿಗರನ್ನು ಪ್ರಭಾವಿಸಿದ್ದರು ಎಂದು ಅವರು ಬಿಚ್ಚಿಟ್ಟಿದ್ದರು.

ಸಾಮಾನ್ಯವಾಗಿ ಸಿನಿಮಾ ನಟ–ನಟಿಯರ ಕುರಿತು ಸಾಹಿತಿಗಳು ತಲಸ್ಪರ್ಶಿಯಾಗಿ ಮಾತನಾಡುವುದು ಅಥವಾ ಬರೆಯುವುದು ವಿರಳ. ರಾಜಕುಮಾರ್ ಅದಕ್ಕೆ ಅಪವಾದ. ಗಿರೀಶ ಕಾರ್ನಾಡರು ಆ ದಿನ ಮಾತಿನಲ್ಲಿ ಕೇಳಿಸಿದ್ದನ್ನೇ, ‘ಡಾ. ರಾಜಕುಮಾರ್– ನಾಡು ನುಡಿಯ ಅಸ್ಮಿತೆ’ ಕೃತಿಯು ಅಕ್ಷರಗಳಲ್ಲಿ ಕಾಣಿಸಿದೆ.

2016ರಲ್ಲಿ ರಾಜಕುಮಾರ್ ಅವರನ್ನು ಕುರಿತ ರಾಷ್ಟ್ರೀಯ ಉತ್ಸವವೊಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದಿತ್ತು. ಅಲ್ಲಿ ಸಾಹಿತ್ಯ–ಸಂಶೋಧನಾ ವಲಯದವರು ಮೇರುನಟನ ಕುರಿತು ತಮ್ಮ ವಿಚಾರಗಳನ್ನು ಮಂಡಿಸಿದ್ದರು. ಅವರ ಆ ಮಾತುಗಳನ್ನು ಅಕ್ಷರರೂಪಕ್ಕೆ ಇಳಿಸುವಂತೆ ಮಾಡಿ, ಜಿ.ವಿ. ಆನಂದಮೂರ್ತಿ ಅವರು ಈ ಕೃತಿಯನ್ನು ಸಂಪಾದಿಸಿದ್ದಾರೆ. ರಾಜಕುಮಾರ್ ಕುರಿತು ಸಮಗ್ರ ಚರಿತ್ರೆಯ ಸಂಪುಟಗಳನ್ನು ಬರೆದಿರುವ ದೊಡ್ಡಹುಲ್ಲೂರು ರುಕ್ಕೋಜಿ ಅವರೇ ಈ ಕೃತಿಯ ಪ್ರಕಾಶಕರು.

ಪ್ರೊ. ಸಿ.ಎನ್. ರಾಮಚಂದ್ರನ್, ಪ್ರೊ. ಷ. ಶೆಟ್ಟರ್, ಎಚ್‌.ಎಸ್. ರಾಘವೇಂದ್ರ ರಾವ್, ಡಿ.ಎಸ್. ನಾಗಭೂಷಣ, ಕೃಷ್ಣಮೂರ್ತಿ ಹನೂರು, ಉದಯಾದ್ರಿ, ಶ್ಯಾಮಸುಂದರ ಕುಲಕರ್ಣಿ, ಪ್ರೊ. ನಿಸಾರ್ ಅಹಮದ್, ಮೊಗಳ್ಳಿ ಗಣೇಶ್ ಸೇರಿದಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತೊಡಗಿಕೊಂಡವರ ಕಣ್ಣೋಟದಲ್ಲಿ ರಾಜಕುಮಾರ್ ವ್ಯಕ್ತಿತ್ವ ಈ ಕೃತಿಯಲ್ಲಿ ಪಡಿಮೂಡಿದೆ.


ಪುಸ್ತಕದ ಲೇಖನಗಳನ್ನು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಕರ್ನಾಟಕದ ಸಂಸ್ಕೃತಿಯ ಹಿನ್ನೆಲೆಯಲ್ಲಿ ರಾಜಕುಮಾರ್ ಅವರನ್ನು ಕಟ್ಟಿಕೊಡುವಂತಹ ಬರಹಗಳಿವೆ. ಎರಡನೇ ಅಧ್ಯಾಯವು ‘ರಾಜಕುಮಾರ್ ಸಮಗ್ರ ಚರಿತ್ರೆ’ಯ ಎರಡು ಸಂಪುಟಗಳ ವಿಮರ್ಶಾ ಬರಹಗಳಿಗೆ ಮೀಸಲು. ಮೂರನೆಯ ಅಧ್ಯಾಯದಲ್ಲಿ ಮನು ಚಕ್ರವರ್ತಿ, ರಾಜೇಂದ್ರ ಚೆನ್ನಿ, ಎನ್. ವಿದ್ಯಾಶಂಕರ್, ಚಂದನ್ ಗೌಡ ಅವರ ಇಂಗ್ಲಿಷ್ ಲೇಖನಗಳಿವೆ. ಎಲ್ಲದರಲ್ಲೂ ಕನ್ನಡದ ದಿಗ್ಗಜ ನಟನ ಬದುಕಿನ ಹಲವು ಆಸಕ್ತಿಕರ ಸಂಗತಿಗಳು, ಅವರ ವ್ಯಕ್ತಿತ್ವ ಕುರಿತ ಒಳನೋಟಗಳು ಬಿಚ್ಚಿಕೊಳ್ಳುತ್ತವೆ.

ಹೆಚ್ಚು ಮಹತ್ವಪೂರ್ಣವಾದ ಅಧ್ಯಾಯ ಕೊನೆಯದ್ದು. ಇದರಲ್ಲಿ ವಿ.ಎನ್. ಸುಬ್ಬರಾವ್, ಕೆ.ಎಸ್. ನಾರಾಯಣ ಸ್ವಾಮಿ, ಎಂ.ವಿ. ರಾಮಕೃಷ್ಣಯ್ಯ, ಶ್ಯಾಮಸುಂದರ ಕುಲಕರ್ಣಿ 1980ರಲ್ಲಿ ಮಾಡಿದ್ದ ರಾಜಕುಮಾರ್ ಅವರ ಸಂದರ್ಶನಗಳಿವೆ. ತಾತನಿಂದ ತಂದೆಗೆ, ತಂದೆಯಿಂದ ರಾಜಕುಮಾರ್ ಅವರಿಗೆ ದೊರೆತ ಶಿಕ್ಷಾಪಾಠದ ಆಪ್ತ ಕಥನ ಅದರಲ್ಲಿದೆ. ಮೇರುನಟನ ಮುಗ್ಧತೆ, ಬದ್ಧತೆ, ನಟನೆ ಎನ್ನುವುದು ಕಲೆ ಎನ್ನುವುದು ಅವರಿಗೆ ಸಿದ್ಧಿಸಿದ ಗಳಿಗೆ ಇವೆಲ್ಲವೂ ನಮಗೆ ಈ ಸಂದರ್ಶನದಲ್ಲಿ ದಕ್ಕುತ್ತದೆ. ಈ ನಟ ಬದುಕಿನುದ್ದಕ್ಕೂ ಅಷ್ಟು ಸರಳವಾಗಿ ಇದ್ದುದು ಹೇಗೆ ಎನ್ನುವುದರ ಮೂಲಕಾರಣವೂ ಸ್ಪಷ್ಟವಾಗುತ್ತದೆ. ಸಂದರ್ಶನ ಎನ್ನುವುದಕ್ಕಿಂತ ಹೆಚ್ಚಾಗಿ, ಇದೊಂದು ಆಪ್ತ ಸಂವಾದದ ಮಾದರಿಯಲ್ಲಿ ಇದೆ.

ಒಳನೋಟ

ಶ್ಯಾಮಸುಂದರ ಕುಲಕರ್ಣಿ ಅವರ ಈ ಒಂದು ಅನುಭವ ಮುದ ನೀಡುವ ಓದಿನ ‘ಟ್ರೇಲರ್’ ತರಹ ಇದೆ: ಒಮ್ಮೆ ಹುಬ್ಬಳ್ಳಿಯಲ್ಲಿ ರಾಜಕುಮಾರ್ ನೆರೆಹಾವಳಿ ಸಂತ್ರಸ್ತರಿಗಾಗಿ ನಿಧಿ ಸಂಗ್ರಹಿಸಲು ರಸ್ತೆಗೆ ಇಳಿದಿದ್ದರು. ಆಗ ಶ್ಯಾಮಸುಂದರ್ ಕುಲಕರ್ಣಿ ಇನ್ನೂ ಕಾಲೇಜು ವಿದ್ಯಾರ್ಥಿ. ನಿಧಿ ಸಂಗ್ರಹಿಸಲು ಹೊರಟಿದ್ದ ಲಾರಿಯಿಂದ ರಾಜಕುಮಾರ್ ಕೆಳಗಿಳಿದವರೇ, ಕುಲಕರ್ಣಿ ಅವರ ಕೈಯಲ್ಲಿದ್ದ ಕೊಡೆಯನ್ನು ಕೇಳಿ ಪಡೆದರು. ಮರುದಿನ ಅದನ್ನು ಹಿಂದಿರುಗಿಸುವುದಾಗಿ ಹೇಳಿದರು. ಆ ಕೊಡೆಯ ಮೇಲೆ ಕುಲಕರ್ಣಿ ಅವರ ಹೆಸರು ಇದ್ದುದನ್ನೂ ಗಮನಿಸಿದ್ದರು. ಕೊಡೆ ಮರುದಿನ ಮರಳಲಿಲ್ಲ. ಆಪ್ತೇಷ್ಟರೆಲ್ಲ ಛೇಡಿಸಿದ್ದೇ ಬಂತು. ಕೊನೆಗೆ, ಆ ಕ್ಷೇತ್ರದ ಸಂಸದರು ಒಬ್ಬರ ಕೈಲಿ ಆ ಕೊಡೆ ಹಾಗೂ ಒಂದು ಪತ್ರವನ್ನು ಕಳುಹಿಸಿದರು. ಕುಲಕರ್ಣಿ ಅವರಿಗೆ ಆಶ್ಚರ್ಯ. ಪತ್ರದ ಮೇಲೆ ಸಹಿ ಪಡೆದು ಆ ವ್ಯಕ್ತಿ ಮರಳಿದರು. ಕೊಡೆ ಕೊಟ್ಟವರ ವಿಳಾಸ ಪತ್ತೆ ಮಾಡಿ ಅದನ್ನು ತಲುಪಿಸಿ ಎಂದು ಸಂಸದರಲ್ಲಿ ರಾಜಕುಮಾರ್ ವಿನಂತಿಸಿದ್ದರಂತೆ.

ಕುವೆಂಪು ಹಾಗೂ ರಾಜಕುಮಾರ್ ಇಬ್ಬರ ವ್ಯಕ್ತಿತ್ವಗಳನ್ನು ಸಮೀಕರಿಸುವಂತಹ ಅಕಾಡೆಮಿಕ್ ಬರಹಗಳ ವಿಚಾರಮಂಥನದ ಜೊತೆಗೆ, ಓದಿನ ಖುಷಿಯನ್ನೂ ನೀಡುವ ಪುಸ್ತಕವಿದು.



ಪು: 356 ₹400

ಡಾ. ರಾಜಕುಮಾರ್– ನಾಡು ನುಡಿಯ ಅಸ್ಮಿತೆ

ಸಂ: ಜಿ.ವಿ. ಆನಂದಮೂರ್ತಿ

ಪ್ರ: ಪ್ರೀತಿ ಪುಸ್ತಕ ಪ್ರಕಾಶನ

ಸಂ: 9845700747

ಹಿಮಾಲಯನ್ ಸತ್ಯಾಗ್ರಹ

10ನೇ ಪುಟದಿಂದ...

ಅತ್ಯಂತ ಆಶ್ಚರ್ಯಕರ ವಿಷಯವೆಂದರೆ 21 ನೇ ದಿನದ ಉಪವಾಸದಲ್ಲಿದ್ದ ವಾಂಗ್‌ಚುಕ್ ಅವರ ಮುಖದಲ್ಲಿ ದಣಿವಿರಲಿಲ್ಲ, ಉತ್ಸಾಹ ಕಮರಿರಲಿಲ್ಲ. ಅವರ ಹೊಳೆಯುವ ಕಣ್ಣಲ್ಲಿ ಇನ್ನೂ ಭರವಸೆ ಇತ್ತು.

ನಮ್ಮೊಳಗೆ ಉಳಿದಿದ್ದ ಕೆಲವು ಪ್ರಶ್ನೆಗಳನ್ನು ಅವರಿಗೆ ಕೇಳಿದೆವು.

ಅವರು ಹೇಳತೊಡಗಿದರು. ‘ನಮ್ಮ ಸಂಸ್ಕೃತಿಯೇ ಬೇರೆ. ಪರ್ವತ, ಹರಿಯುವ ಝರಿ, ಮುಗಿಲಿನಲ್ಲಿ ಕುಳಿತ ನಕ್ಷತ್ರಗಳು, ಇಲ್ಲಿ ನೆಲೆಸಿರುವ ಸಕಲ ಜೀವಿಗಳನ್ನು ನಾವು ನಮ್ಮ ಪೂರ್ವಜರೆಂದು ಗೌರವಿಸುತ್ತೇವೆ.

2019ರಲ್ಲಿ ಕೇಂದ್ರಾಡಳಿತ ಪ್ರದೇಶವೆಂದು ವಿಭಜಿಸಿ, ಚುನಾವಣಾ ಪ್ರಣಾಳಿಕೆಯಲ್ಲಿ 371ರ 6ನೇ ವಿಧಿಯನ್ನು ನೀಡಿ ಪ್ರತ್ಯೇಕ ರಾಜ್ಯದ ಸ್ಥಾನಮಾನ ನೀಡುವುದಾಗಿ ಹೇಳಿದ್ದರು. ಈಗ ಆ ಬಗ್ಗೆ ದೆಹಲಿಯವರು ಏನೂ ಮಾತನಾಡುತ್ತಿಲ್ಲ. ಆಡುವ ಮಾತಿಗೆ ನೀಡಿದ ಭರವಸೆಗಳಿಗೆ ಬೆಲೆಯೇ ಇಲ್ಲವೇ?

ನಮ್ಮ ಸಂಸ್ಕೃತಿಯಲ್ಲಿ ಭೂಮಿ ಕೊಳ್ಳಬಹುದಾದ ಅಥವಾ ಮಾರಬಹುದಾದ ವಸ್ತುವೇ ಅಲ್ಲ. ಇರುವ ಕನಿಷ್ಠ ಸಂಪನ್ಮೂಲಗಳನ್ನು ಎಚ್ಚರಿಕೆಯಿಂದ ಬಳಸಿ ಸುಸ್ಥಿರ ಬದುಕನ್ನು ನಾವು ಇಲ್ಲಿ ಕಂಡುಕೊಂಡಿದ್ದೇವೆ...

ಯಾವುದೋ ನೆಲೆಯಿಂದ ಬಂದ ಕಮಿಷನರ್‌ಗಳು ಇಲ್ಲಿ ಅಧಿಕಾರ ನಡೆಸಿದರೆ ಹೇಗೆ? ಅವರು ಒಳ್ಳೆಯವರೇ ಆಗಿರಬಹುದು. ಆದರೆ ಒಂದು ಸಂಸ್ಕೃತಿಗೆ ಅಸಂವೇದಿಯಾದ ಮನಸ್ಸುಗಳು ಅನಾಹುತಗಳನ್ನೇ ಸೃಷ್ಟಿಸುತ್ತವೆ.

ಲಡಾಖ್‌ನ 4 ಸಾವಿರ ಚ.ಕಿ.ಮೀ. ಪ್ರದೇಶವನ್ನು ಚೀನಾ ಆಕ್ರಮಿಸಿಕೊಂಡಿದೆ. ಅದರ ಮಗ್ಗುಲಲ್ಲಿರುವ 40 ಸಾವಿರ ಎಕರೆ ಭೂಮಿಯಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗಾಗಿ ಸರ್ಕಾರ ಎಸ್‌ಸಿಸಿಐ ಕಂಪನಿಗೆ ನೀಡಿದೆ. ಈ ಪ್ರದೇಶದ ವಿಸ್ತಾರವಾದ ಹುಲ್ಲುಗಾವಲಿನಲ್ಲಿ ವಿಶ್ವಪ್ರಸಿದ್ಧ ‘ಪಶ್ಮೀನಾ’ ತುಪ್ಪಳ ಕೊಡುವ ಮೇಕೆ ಸಾಕಾಣಿಕೆ ಮಾಡಿಕೊಂಡಿದ್ದ ಜಂಗ್‌ಫಾ ಜನಾಂಗ ಈಗ ಬೀದಿಪಾಲಾಗಿದೆ. ಇದರಿಂದ ಪುರಾತನ ಸಂಸ್ಕೃತಿಯೊಂದು ಆತ್ಮಹತ್ಯೆಗೆ ಸಿದ್ಧವಾಗಿದೆ. ಇದಕ್ಕೆ ಯಾರನ್ನು ಹೊಣೆ ಮಾಡುವುದು...?

ಗಣಿಗಾರಿಕೆಯ ವಿಷಯಕ್ಕೆ ಬಂದರೆ, ಕಾರ್ಪೋರೇಟ್ ಉದ್ಯಮಿಗಳು ಪರ್ವತಗಳನ್ನು ಕೆಡವಿ ಲೀಥಿಯಂ ಅಥವಾ ಚಿನ್ನವನ್ನೇ ಬಾಚಬಹುದು, ಇದನ್ನು ಅಭಿವೃದ್ಧಿ ಎಂದು ಕರೆಯಬಹುದು. ಆದರೆ, ಇವೆಲ್ಲಾ ಕೇವಲ ಕ್ಷಣಿಕ ಲಾಭ ತರುವ ದೂರದೃಷ್ಟಿಯಿಲ್ಲದ ಆಲೋಚನೆಗಳು. ಈ ಪರ್ವತಗಳು ಬೃಹದಾಕಾರವಾಗಿ ಕಂಡರೂ ಅತ್ಯಂತ ಸೂಕ್ಷ್ಮ, ಅಡಿಪಾಯವಿಲ್ಲದೆ ನಿಂತಿರುವ ಮರಳುಗುಡ್ಡಗಳಂತೆ. ಅಲ್ಲದೆ ಗಣಿಗಾರಿಕೆಯಿಂದ ಹೊರಬರುವ ಇಂಗಾಲ ಮತ್ತು ದೂಳಿನ ಕಣಗಳು ಪರ್ವತಗಳ ನೆತ್ತಿಯಲ್ಲಿರುವ ಹಿಮಗಡ್ಡೆಗಳ ಕರಗುವಿಕೆಯನ್ನು ಹಲವು ಪಟ್ಟು ಹೆಚ್ಚಿಸುತ್ತವೆ. ಇದರಿಂದಾಗುವ ದುರ್ಘಟನೆಗಳ ಸರಮಾಲೆಯನ್ನು ಊಹಿಸಲಸಾಧ್ಯ. ಇದೇ ಹಿಮಗಡ್ಡೆಗಳಿಂದ ಹುಟ್ಟುವ ಹಲವಾರು ನದಿಗಳು, ಹಲವಾರು ರಾಜ್ಯಗಳನ್ನು ದಾಟಿ ಸಾಗುತ್ತವೆ. ಇದರ ಮೌಲ್ಯವನ್ನು ಎಂದಾದರೂ ಅಂದಾಜಿಸುವುದು ಸಾಧ್ಯವೇ?’

ವಾಂಗ್‌ಚುಕ್ ಅವರ ಆತಂಕ ನಮಗೆ ಅರಿವಾಗತೊಡಗಿತು.

ಸ್ಮಾರ್ಟ್‌ಫೋನ್‌ಗೆ ಅತ್ಯಗತ್ಯವಾದ ಕೋಲ್ಟಾನ್ ಖನಿಜಕ್ಕೆ ಕಾಂಗೊ ದೇಶ ಬಲಿಯಾದದ್ದು, ಇದೇ ರೀತಿ ವಜ್ರದ ಗಣಿಗಾರಿಕೆಗೆ ದಕ್ಷಿಣ ಆಫ್ರಿಕಾ ಆಹುತಿಯಾದದ್ದು, ದಕ್ಷಿಣ ಅಮೆರಿಕದಿಂದ ಮೊಂಗೋಲಿಯಾ, ತಾಸ್ಮೆನಿಯಾವರೆಗೆ ಜರುಗಿದ ಅನಾಹುತಗಳು, ಎಲ್ಲವೂ ನೆನಪಿಗೆ ಬಂದವು. ಆಧುನಿಕ ಪ್ರಪಂಚದಲ್ಲಿ ಕಾರ್ಪೊರೇಟ್ ಕಂಪನಿಗಳ ದುರಾಸೆಗಳಿಗೆ ಆಹುತಿಯಾದ ಬುಡಕಟ್ಟು ಜನರ ಸಂಸ್ಕೃತಿಗಳು, ಛಿದ್ರವಾದ ಪರಿಸರದ ಅಧ್ಯಾಯಗಳೆಲ್ಲ ನೆನಪಾಗತೊಡಗಿದವು.

ಮನುಕುಲದ ದೊಡ್ಡ ದುರಂತವೆಂದರೆ ಚರಿತ್ರೆಯಿಂದ ಕಲಿಯಲು ನಿರಾಕರಿಸುವುದು. ವಿಜ್ಞಾನವನ್ನು ತಿರಸ್ಕರಿಸುತ್ತಾ, ಸ್ಥಳೀಯ ವಿವೇಕಕ್ಕೆ ಕಿವಿಗೊಡದೆ ಮನಸೋ ಇಚ್ಛೆ ತೀರ್ಮಾನಗಳನ್ನು ಕೈಗೊಳ್ಳುವುದು. ಇಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಮುಖ್ಯ ವಿಷಯವೆಂದರೆ, ಇಂತಹ ಸಂಚುಗಳಿಗೆ ಮೊದಲು ಬಲಿಯಾಗುವುದು ಮೂಲನಿವಾಸಿಗಳು ಮತ್ತು ಅವರ ಪರಿಸರ. ಲಡಾಖ್ ವಿಷಯದಲ್ಲಿ ಆಗುತ್ತಿರುವುದು ಕೂಡ ಇದೆ.

ಭಾರವಾದ ಹೃದಯದಿಂದ ಹೊರಟು ನಿಂತ ನಮ್ಮನ್ನು ಚಾಲಕ ‘ನೋರ್ಬು’ ವಿಮಾನನಿಲ್ದಾಣಕ್ಕೆ ಬಿಡಲು ಬಂದ. ಹಣ ನೀಡಲು ಮುಂದಾದಾಗ, ನಿರಾಕರಿಸಿ, ‘ದಯವಿಟ್ಟು ಮತ್ತೊಮ್ಮೆ ಬನ್ನಿ’ ಎಂದು ಒದ್ದೆಯಾದ ಕಣ್ಣುಗಳೊಂದಿಗೆ ಅಲ್ಲಿಂದ ಮರೆಯಾದ.



ಸತ್ಯಾಗ್ರಹವೂ ಇವರಿಗೆ ಪ್ರಾರ್ಥನೆಯೇ...

ಮೊದಲ ಓದು


ಮರಾಠ ಸಂಸ್ಕೃತಿಯ ಸಂಕ್ಷಿಪ್ತ ನೋಟ

ದ್ರಾವಿಡ ಸಂಸ್ಕೃತಿಯನ್ನು ಪ್ರತಿನಿಧಿಸುವ ಕರ್ನಾಟಕ ಹಾಗೂ ಆರ್ಯ ಸಂಸ್ಕೃತಿ ಪ್ರತಿನಿಧಿಸುವ ಮಹಾರಾಷ್ಟ್ರದ ಜನರು ರಾಜಕೀಯವಾಗಿ ಹಲವು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದರು. ಹೀಗಾಗಿ ಎರಡೂ ಪ್ರಾಂತ್ಯಗಳಲ್ಲಿ ಜನರು ತಮ್ಮ ಸ್ಥಳ ಬದಲಿಸಿ ನೆಲೆಸಿದರು. ಅವರಲ್ಲಿ ಮರಾಠ ಜನಾಂಗದವರು ಕರ್ನಾಟಕದಲ್ಲಿ ನೆಲೆಸಿದ್ದರೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ ಎಂಬ ಅಂಶವನ್ನು ‘ಕರ್ನಾಟಕದ ಸಂಕ್ಷಿಪ್ತ ಮರಾಠ ಸಾಂಸ್ಕೃತಿಕ ಪರಂಪರೆ’ ಕೃತಿಯಲ್ಲಿ ದಾಖಲಿಸಲಾಗಿದೆ.

ಮರಾಠ ಜನಾಂಗದ ಇತಿಹಾಸದಿಂದ ಆರಂಭವಾಗುವ ಈ ಕೃತಿಯು ಮರಾಠರ ಆಳ್ವಿಕೆ, ಕರ್ನಾಟಕದಲ್ಲಿ ಶಿವಾಜಿಯ ಮನೆತನ, ಬೆಂಗಳೂರು ಹಾಗೂ ಕರ್ನಾಟಕದ ಇತರ ನಗರ ಹಾಗೂ ಪ್ರದೇಶಗಳೊಂದಿಗೆ ಅವರಿಗಿದ್ದ ಸಂಬಂಧಗಳ ಕುರಿತು ಕೃತಿಯಲ್ಲಿ ಹೇಳಲಾಗಿದೆ. ಶಿವಾಜಿಯ ಪೂರ್ವಿಕರ ಇತಿಹಾಸದೊಂದಿಗೆ ಛತ್ರಪತಿ ಶಿವಾಜಿಯ ಆಳ್ವಿಕೆ, ಛತ್ರಪತಿ ಶಿವಾಜಿ ಮಹಾರಾಜರ ಮದುವೆ ಬೆಂಗಳೂರಿನಲ್ಲಿ ನಡೆದ ಮಾಹಿತಿ, ಮರಾಠ ಸಾಮ್ರಾಜ್ಯವು ಬೆಂಗಳೂರಿನಲ್ಲಿ ಕಟ್ಟಿಸಿರುವ ದೇಗುಲಗಳು, ಕನ್ನಡ ಮತ್ತು ಮರಾಠರ ಸಾಮಾಜಿಕ ಸಾಮರಸ್ಯ, ಕನ್ನಡ–ಮರಾಠಿ ಭಾಷಾ ಬಾಂಧವ್ಯವನ್ನೂ ಕೃತಿಯಲ್ಲಿ ವಿವರಿಸಲಾಗಿದೆ.

ಮರಾಠಿ ಮೋಡಿ ಲಿಪಿ, ಕನ್ನಡ–ಮರಾಠ ಸಾಹಿತ್ಯ ಪರಂಪರೆಯ ಮಾಹಿತಿಯನ್ನೂ ಈ ಕೃತಿ ಒಳಗೊಂಡಿದೆ. ಕರ್ನಾಟಕದಲ್ಲಿರುವ ಶಿವಾಜಿಯ ಕೋಟೆಗಳು, ನಾಣ್ಯಗಳು, ಬೆಂಗಳೂರಿನಲ್ಲಿ ಮರಾಠ ಸರದಾರರ ರಾಜ್ಯಭಾರ, ಕರಾವಳಿ ಒಳಗೊಂಡಂತೆ ಕರ್ನಾಟಕದಲ್ಲಿ ಮರಾಠ ಸಂಸ್ಥಾನಗಳ ಮಾಹಿತಿ, ರಾಜರ್ಷಿ ಶಹು ಛತ್ರಪತಿ ಅವರ ಮಾಹಿತಿಯನ್ನೂ ಈ ಕೃತಿ ಒಳಗೊಂಡಿದೆ.

ಮರಾಠರು ಅಥವಾ ಆರೇರ ಎಂದೇ ಕರ್ನಾಟಕದಲ್ಲಿ ಕರೆಯಲಾಗುವ ಮರಾಠ ಸಮಾಜದ ಕೆಲ ಶಾಸನಗಳ ಸಚಿತ್ರ ವರದಿ ಇದರಲ್ಲಿದೆ. ಸಂಡೂರಿನ ರಾಜವಂಶಸ್ಥ ಎಂ.ವೈ.ಘೋರ್ಪಡೆ ಅವರಿಂದ ಹಿಡಿದು, ರಾಜಕಾರಣಿಗಳಾದ ಸಂತೋಷ್ ಲಾಡ್, ಅನಿಲ್ ಲಾಡ್, ಶ್ರೀನಿವಾಸ ಮಾನೆ, ಪಿಜಿಆರ್ ಸಿಂಧ್ಯಾ, ಚಲನಚಿತ್ರ ರಂಗದ ರಜನಿಕಾಂತ್, ಗೀತಪ್ರಿಯ ಭಾರತಿ ವಿಷ್ಣುವರ್ಧನ್, ಓಂ ಪ್ರಕಾಶ್ ರಾವ್, ಬ್ಯಾಂಕ್ ಜನಾರ್ದನ್ ಅವರಂಥ ಕಲಾವಿದರು, ಸಾಧಕರ ಪರಿಚಯ ಈ ಕೃತಿಯಲ್ಲಿ ದಾಖಲಾಗಿದೆ.



ಪು: 250 ₹500

ಕರ್ನಾಟಕದ ಸಂಕ್ಷಿಪ್ತ ಮರಾಠ ಸಾಂಸ್ಕೃತಿಕ ಪರಂಪರೆ

ಪ್ರಧಾನ ಸಂಪಾದಕ: ಪ್ರಕಾಶ್ ಆರ್. ಪಾಗೋಜಿ

ಸಂ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಪ್ರ: ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ

ಸಂ: 88675 37799

ಕಾನೂನು ವಿದ್ಯಾರ್ಥಿಗಳಿಗೆ ಉತ್ತಮ ಕೈಪಿಡಿ

ಶೃಂಗೇರಿಯ ವಕೀಲ ವಿ.ಆರ್.ನಟಶೇಖರ್ ಅವರು ರಚಿಸಿರುವ ‘ಜನಸಾಮಾನ್ಯರಿಗೆ ಕಾನೂನು ತಿಳುವಳಿಕೆ’ ಇತ್ತೀಚಿನ ದಿನಗಳಲ್ಲಿ ಪ್ರಕಟವಾಗಿರುವ ಕಾನೂನು ಪುಸ್ತಕಗಳ ಸಾಮಾನ್ಯ ತಿಳಿವಳಿಕೆಯ ಕಪಾಟಿಗೆ ಮತ್ತೊಂದು ಸೇರ್ಪಡೆ. ಮಾನಗಾರುವಿನ ಶ್ರೀ ರಾಮಕೃಷ್ಣ ಪ್ರಕಾಶನದಿಂದ ಹೊರತರಲಾಗಿರುವ ಈ ಪುಸ್ತಕದ 78 ವಿವಿಧ ಕಾಯ್ದೆಗಳ ವಿವರಣೆಯನ್ನು ಸರಳವಾಗಿ ಬಿಡಿಸಿಡಲಾಗಿದೆ.

‘ಕಾನೂನಿನ ಆವಿಷ್ಕಾರ’ ಎಂಬ ಅಧ್ಯಾಯದ ಮೂಲಕ ಆರಂಭವಾಗುವ ಲೇಖನಗಳ ಸರಮಾಲೆಯಲ್ಲಿ; ಕೇವಿಯೆಟ್, ದಸ್ತಾವೇಜುಗಳ ನೋಂದಣಿ, ರಿಟ್ ಅರ್ಜಿಗಳು, ಆಸ್ತಿಯನ್ನು ಕೊಳ್ಳುವಾಗ ವಹಿಸಬೇಕಾದ ಎಚ್ಚರಿಕೆಗಳು, ವಾಹನ ಚಲಾಯಿಸುವಾಗ ದುಡುಕು ಮತ್ತು ನಿರ್ಲಕ್ಷ್ಯ, ಲೈಂಗಿಕ ಕಿರುಕುಳ, ದುಡಿಯುವ ಮಹಿಳೆಯರಲ್ಲಿ ಅರಿವು ಮೂಡಿಸುವುದು, ಸುಳ್ಳು ಸಾಕ್ಷ್ಯ, ಸಮನ್ಸ್ ಬಗ್ಗೆ ಮಾಹಿತಿ, ಭ್ರೂಣ ಹತ್ಯೆ, ಜನನ ಮರಣ ನೋಂದಣಿ, ಆತ್ಮಹತ್ಯೆ, ನಿರೀಕ್ಷಣಾ ಜಾಮೀನು... ಹೀಗೆ ವೈವಿಧ್ಯಮಯವಾದ ಹತ್ತು ಹಲವು ಕಾಯ್ದೆಗಳ ಕುರಿತು ಸರಳವಾಗಿ ವಿವರಿಸಿದ್ದಾರೆ.

ಕನ್ನಡದಲ್ಲಿ ಕಾನೂನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಇದೊಂದು ಅತ್ಯುತ್ತಮ ಕೈಪಿಡಿ. ಲೇಖಕರು ಕನ್ನಡದ ಆಸ್ಥೆ ಉಳ್ಳವರಾಗಿರುವ ಕಾರಣ ಇಲ್ಲಿ ಅವರಿಗೆ ಹೇಳಲೇಬೇಕಾದ ಮಾತೆಂದರೆ; ಈಗಾಗಲೇ ಕನ್ನಡದಲ್ಲಿ ಕಾನೂನು ವಿವರಣೆ ಬರೆಯುವ ಲೇಖಕರಲ್ಲಿ ಈ ಹಿಂದಿನ ಪಾರಿಭಾಷಿಕ ಪದಗಳನ್ನು ಅನಾಮತ್ತಾಗಿ ಮುಂದುವರಿಸುವುದು ರೂಢಿಯಾಗಿದೆ. ಉದಾಹರಣೆಗೆ ಅಭಿರಕ್ಷೆ... ಇಂತಹ ಪದಗಳನ್ನು ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಹಿಡಿದಿಡುವ ಪ್ರಯತ್ನಗಳು ಆಗಬೇಕು.



ಪು: 288 ₹250

ಜನಸಾಮಾನ್ಯರಿಗೆ ಕಾನೂನು ತಿಳುವಳಿಕೆ

ಲೇ: ವಿ.ಆರ್.ನಟಶೇಖರ್

ಪ್ರ: ಶ್ರೀ ರಾಮಕೃಷ್ಣ ಪ್ರಕಾಶನ

ಸಂ: 9448530432

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಗೃಹಶ್ರೀ

ಕುವೆಂಪು ಅವರು ‘ಮನೆ ಮನೆಯ ತಪಸ್ವಿನಿಗೆ’ ಕವನದಲ್ಲಿ ಗೃಹಿಣಿಯನ್ನು ‘ತಪಸ್ವಿನಿ’ಯಾಗಿ ಕಂಡಿದ್ದಾರೆ. ಅವಳು ಮನೆಯನ್ನು ಉಳಿಸಿ ಬೆಳೆಸುವವಳು. ಕುಟುಂಬದ ಜವಾಬ್ದಾರಿ ನಿರ್ವಹಿಸುವವಳು. ಅವಳು ಮನೆಗೆ ಅಲಂಕಾರ, ಮಂಗಳ, ಸಿರಿ, ಸಮೃದ್ಧಿ. ಹಾಗಾಗಿ ಕವಿಯು ಅವಳನ್ನು ‘ಗೃಹಶ್ರೀ’ ಎಂದು ನವನವೀನ ಹೆಸರಿಟ್ಟು ಕರೆದು ‘ನಮೋ ನಿತ್ಯ ಧನ್ಯೆ’ ಎಂದು ನಮಸ್ಕರಿಸಿದ್ದಾರೆ.

ಮನೆಮನೆಯಲಿ ನೀನಾಗಿಹೆ ‘ಗೃಹಶ್ರೀ’:
ಹೆಸರಿಲ್ಲದ ಹೆಸರು ನಿನಗೆ ‘ಗೃಹಸ್ತ್ರೀ!’
ಹೇ ದಿವ್ಯ ಸಾಮಾನ್ಯೆ,
ಹೇ ಭವ್ಯೆ ದೇವಮಾನ್ಯೆ,
ಚಿರಂತನ ಅಕೀರ್ತಿಕನ್ಯೆ,
ಅನ್ನಪೂರ್ಣೆ, ಅಹಂಶೂನ್ಯೆ,
ನಮೋ ನಿನಗೆ ನಿತ್ಯಧನ್ಯೆ!’
(ಮನೆಮನೆಯ ತಪಸ್ವಿನಿಗೆ: ಇಕ್ಷುಗಂಗೋತ್ರಿ)

ಇಕ್ಷುಗಂಗೋತ್ರಿ

ಇಕ್ಷು (ನಾ). ಕಬ್ಬು
ಗಂಗೋತ್ರಿ (ನಾ).ಗಂಗಾನದಿ ಹುಟ್ಟುವ ಸ್ಥಳ.

ಇಕ್ಷುವಿನೊಡನೆ ಪರಿಚಿತವಾಗಿರುವ ಪದ. ಇಕ್ಷು ಕೋದಂಡ, ಇಕ್ಷು ಛಾಪ. ಅದರ ಅರ್ಥ ಕಬ್ಬಿನ ಕೋಲಿನಿಂದ ಬಿಲ್ಲುಳ್ಳುವನು; ಮನ್ಮಥ. ಕುವೆಂಪು ಅವರು ತಮ್ಮ ಜೀವನದಲ್ಲಿ ಸವಿದ ರಸ ಘಳಿಗೆಯನ್ನು ರಸದಾಳಿ ಕಬ್ಬಿನಂತೆ ಸವಿಯುತ್ತ, ಅದರ ಆನಂದವನ್ನು ‘ಇಕ್ಷುಗಂಗೋತ್ರಿ’ ಎಂಬ ಪದದಿಂದ ಅಭಿವ್ಯಕ್ತಿಸಿದ್ದಾರೆ. 1957ರಲ್ಲಿ ‘ಇಕ್ಷುಗಂಗೋತ್ರಿ’ ಎಂಬ ಹೆಸರಿನ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ.

ಕುವೆಂಪು ಅವರು ಮಾನಸಯಾತ್ರಿಯಾಗಿ ಗಂಗೋತ್ರಿಯನ್ನು ಪರಿಭಾವಿಸಿ ರಚಿಸಿರುವ ಕವನ ‘ಇಕ್ಷುಗಂಗೋತ್ರಿ’. ಭಾರತ ದೇಶದ ಜೀವನದಿಯಾದ ಗಂಗೆಯು ಸಹಸ್ರಾರು ವರ್ಷಗಳಿಂದ ಈ ನೆಲದ ಜಲಚರ, ಪಶುಪಕ್ಷಿ, ಮಾನವರಿಗೆ ಸುಮಧುರ ಜೀವಪೋಷಕವಾಗಿದೆ. ಅದು ಭಾರತ ಸಂಸ್ಕೃತಿಯ ತೊಟ್ಟಿಲಾಗಿದ್ದು, ಎಲ್ಲ ತತ್ವ ಚಿಂತನದ ಕಡಲಾಗಿದೆ. ಅದು ಮನೋಲೋಕದಲ್ಲಿ ಆತ್ಮಕ್ಕೆ ಉನ್ನತ ಭಾವದ ಮಧುರತೆಯನ್ನು ನೀಡಿ ಅಧ್ಯಾತ್ಮ ಸಿದ್ಧಿಗೊಯ್ಯುವ ನೆಲೆಯಾಗಿದೆ.

ಗಂಗೋತ್ರಿ ಹಿಮಾಲಯದಲ್ಲಿರುವ ಗಂಗಾತೀರದ ಒಂದು ಪುಣ್ಯಕ್ಷೇತ್ರ. ಕವಿಯು ಅದನ್ನು ಮಧುರವಾದ ಸವಿ, ಸಿಹಿ, ಚೈತನ್ಯ ನೀಡಿ ತಣಿಸುವ ಕಬ್ಬು ಎಂಬ ರೂಪಕದಲ್ಲಿ ‘ಇಕ್ಷುಗಂಗೋತ್ರಿ’ ಕವನ ರಚಿಸಿದ್ದಾರೆ. ಅವರು ಅದನ್ನು ‘ಮಧು ಗಂಗೋತ್ರಿ’ ‘ಖತ್‌ಚಿದ್ ಗಂಗೋತ್ರಿ’ (ಸತ್ಯ ಚೈತನ್ಯ ಗಂಗೋತ್ರಿ) ಎಂದು ವಿವಿಧ ಬಗೆಯಲ್ಲಿ ವರ್ಣಿಸಿದ್ದಾರೆ.

ಅವರು ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ, ವಿಶಾಲಸ್ಥಳದಲ್ಲಿ ಅದನ್ನು ವಿಸ್ತರಿಸಿ ಅದಕ್ಕೆ ನೀಡಿದ ಹೆಸರು ‘ಮಾನಸ ಗಂಗೋತ್ರಿ’.

ಗಲ್ಲಿ ಕ್ರಿಕೆಟ್‌ಗೂ ಬಂತು ಕಾಲ!

ಭಾರತದಲ್ಲಿ ಈಗ ಗಲ್ಲಿ ಕ್ರಿಕೆಟ್‌ಗೂ ಒಳ್ಳೆಯ ಕಾಲ ಕೂಡಿ ಬಂದಿದೆ. ಈಚೆಗೆ ನಡೆದ ಇಂಡಿಯನ್ ಸ್ಟ್ರೀಟ್ ಪ್ರಿಮಿಯರ್ ಲೀಗ್ (ಐಎಸ್‌ಪಿಎಲ್) ಟೂರ್ನಿಯ ಮೊದಲ ಆವೃತ್ತಿಯು ಯಶಸ್ವಿಯಾಗಿದೆ. ಟೆನಿಸ್‌ಬಾಲ್ ಕ್ರಿಕೆಟ್‌ಗೂ ವೃತ್ತಿಪರತೆಯ ಸ್ಪರ್ಶ ನೀಡಿದೆ.


ಕ್ರೀಡಾಂಗಣದಲ್ಲಿ ಸೇರಿದ್ದ ಪ್ರೇಕ್ಷಕರು

ಗಿರೀಶ ದೊಡ್ಡಮನಿ

ಕಾಶ್ಮೀರದ 14 ವರ್ಷದ ಬಾಲಕ ಶರೀಕ್ ಯಾಸೀರ್ ಈಗ ಕ್ರಿಕೆಟ್ ಆಡಲು ಟೆನಿಸ್‌ಬಾಲ್, ಬ್ಯಾಟು ಹಿಡಿದು ಹೊರಟರೆ ಮನೆಯಲ್ಲಿ ತಡೆಯುವುದಿಲ್ಲ. ಬದಲಿಗೆ ಬೆನ್ನುತಟ್ಟಿ ಕಳಿಸುತ್ತಾರೆ. ಏಕೆಂದರೆ, ಈ ಹುಡುಗನ ಕ್ರಿಕೆಟ್ ಪ್ರೀತಿಗೆ ಈಗ ಹೆಸರು ಮತ್ತು ಹಣ ಎರಡೂ ಒಲಿದು ಬಂದಿವೆ. ಕಾಶ್ಮೀರದ ಪ್ರಮುಖ ಪತ್ರಿಕೆಗಳಲ್ಲಿ ಯಾಸೀರ್ ಚಿತ್ರಗಳು, ಸುದ್ದಿಗಳು ರಾರಾಜಿಸುತ್ತಿವೆ.

ಇತ್ತೀಚೆಗೆ ನಡೆದ ಇಂಡಿಯನ್ ಸ್ಟ್ರೀಟ್ ಪ್ರಿಮಿಯರ್ ಲೀಗ್ (ಐಎಸ್‌ಪಿಎಲ್) ಟಿ10 ಕ್ರಿಕೆಟ್ ಟೂರ್ನಿಯಲ್ಲಿ ಬೆಂಗಳೂರು ಸ್ಟ್ರೈಕರ್ಸ್ ಫ್ರ್ಯಾಂಚೈಸಿಯು ₹ 3.5 ಲಕ್ಷ ನೀಡಿ ಈ ಹುಡುಗನನ್ನು ಖರೀದಿಸಿತ್ತು.

ಟಿ.ವಿಯಲ್ಲಿ ತಮ್ಮ ನೆಚ್ಚಿನ ಕ್ರಿಕೆಟ್ ತಾರೆಗಳನ್ನು ನೋಡಿ ಗಲ್ಲಿ ಕ್ರಿಕೆಟ್‌ನಲ್ಲಿ ಆಡುವ ಇಂತಹ ಹಲವು ಹುಡುಗರಿಗೂ ಈಗ ಶುಕ್ರದೆಸೆ ಕೂಡಿ ಬಂದಿದೆ. ಲೆದರ್ ಬಾಲ್ ಕ್ರಿಕೆಟಿಗರಂತೆ ಅಂತರರಾಷ್ಟ್ರೀಯ ಮಟ್ಟದ ಟೆನಿಸ್‌ಬಾಲ್ ಕ್ರಿಕೆಟ್ ಆಡುವ ಕನಸು ಕೂಡ ಗರಿಗೆದರಿದೆ. ಅದರ ಮುನ್ನುಡಿ ಐಎಸ್‌ಪಿಎಲ್.

ಮುಂಬೈನಲ್ಲಿ ನಡೆದ ಟೂರ್ನಿಯಲ್ಲಿ ಬೆಂಗಳೂರು, ಮುಂಬೈ, ಹೈದರಾಬಾದ್, ಚೆನ್ನೈ, ಕೋಲ್ಕತ್ತ ಮತ್ತು ಶ್ರೀನಗರದ ತಂಡಗಳು ಕಣದಲ್ಲಿದ್ದವು. ಬಾಲಿವುಡ್ ದಿಗ್ಗಜರಾದ ಅಮಿತಾಭ್ ಬಚ್ಚನ್ (ಮಾಝಿ ಮುಂಬೈ), ಅಕ್ಷಯ್‌ಕುಮಾರ್ (ಶ್ರೀನಗರ್ ಕೆ ವೀರ್), ಹೃತಿಕ್ ರೋಷನ್ (ಕೆ.ವಿ.ಎನ್. ಬೆಂಗಳೂರು ಸ್ಟ್ರೈಕರ್ಸ್), ಸೂರ್ಯ (ಚೆನ್ನೈ ಸಿಂಗಮ್ಸ್), ರಾಮ್‌ಚರಣ್ (ಫಾಲ್ಕನ್ ರೈಸರ್ಸ್, ಹೈದರಾಬಾದ್) ಹಾಗೂ ಸೈಫ್ ಅಲಿ ಖಾನ್–ಕರೀನಾ (ಟೈಗರ್ಸ್ ಆಫ್ ಕೋಲ್ಕತ್ತ) ಅವರು ತಂಡಗಳ ಮಾಲೀಕರಾಗಿದ್ದಾರೆ.

ಯಾಸೀರ್ ಅಷ್ಟೇ ಅಲ್ಲ. ಅವರಂತಹ ಹಲವರು ಈಗ ಟೆನಿಸ್‌ಬಾಲ್ ಕ್ರಿಕೆಟ್‌ನಲ್ಲಿ 'ಭವಿಷ್ಯ'ದ ಕನಸು ಕಾಣುತ್ತಿದ್ದಾರೆ.

ಇದೇ ಟೂರ್ನಿಯಲ್ಲಿ ಆಡಿದ ಮಾಝಿ ಮುಂಬೈ ತಂಡದ ಅಭಿಷೇಕ್‌ಕುಮಾರ್ ದಲ್ಹೋರ್ ಅತಿ ಹೆಚ್ಚು ಮೌಲ್ಯ (₹ 27 ಲಕ್ಷ) ಗಳಿಸಿದ ಆಟಗಾರ. ಟೂರ್ನಿಯ ನಂತರ ಅವರು, 'ಅಬ್ ಹಮ್ ಭೀ ಬಡೇ ಸಪ್ನೇ ದೇಕ್ ಸಕತೆ ಹೈ' (ಈಗ ನಾವೂ ದೊಡ್ಡ ಕನಸು ಕಾಣಬಹುದು)' ಎಂದು ಹೇಳುವಾಗ ಭಾವುಕರಾಗಿದ್ದರು.

ಟೂರ್ನಿಯಲ್ಲಿ ಕೋಲ್ಕತ್ತ ತಂಡವು ಪ್ರಶಸ್ತಿ ಜಯಿಸಿತು. ಮುಂಬೈ ತಂಡ ರನ್ನರ್ಸ್ ಅಪ್ ಆಯಿತು.

ಈ ಟೂರ್ನಿಯಲ್ಲಿ ಫ್ರ್ಯಾಂಚೈಸಿಗಳು ಗಣನೀಯ ಮೊತ್ತವನ್ನೇ ಹೂಡಿವೆ. ಚೆನ್ನೈ (₹ 96.4 ಲಕ್ಷ), ಹೈದರಾಬಾದ್ (₹ 93.65ಲಕ್ಷ), ಕೋಲ್ಕತ್ತ (₹ 86.35ಲಕ್ಷ), ಮುಂಬೈ (₹84.3 ಲಕ್ಷ), ಬೆಂಗಳೂರು (₹ 77.3 ಲಕ್ಷ) ಹಾಗೂ ಶ್ರೀನಗರ (₹ 52.4 ಲಕ್ಷ) ತಂಡಗಳು ತಮ್ಮ ಆಟಗಾರರಿಗೆ ಒಳ್ಳೆಯ ಮೌಲ್ಯ ಕೊಟ್ಟು ಖರೀದಿಸಿದವು. ಇದರಿಂದಾಗಿ ಗಲ್ಲಿ ಕ್ರಿಕೆಟ್‌ನಲ್ಲಿ ಕಾಲಕ್ಷೇಪ ಮಾಡುವ ಹುಡುಗರೂ ಒಂದಿಷ್ಟು ಆದಾಯ ಗಳಿಸುವಂತಹ ಅವಕಾಶ ಲಭಿಸಿತು.

ಭಾರತದ ಬಹುತೇಕ ಎಲ್ಲ ಊರುಗಳಲ್ಲಿಯೂ ಗಲ್ಲಿ ಕ್ರಿಕೆಟ್ ನೋಡಬಹುದು. ಗೋಡೆಗೆ ಇದ್ದಿಲು, ಇಟ್ಟಿಗೆಪುಡಿ ಅಥವಾ ಬಣ್ಣದಿಂದ ಮೂರುಗೆರೆ ಎಳೆದು (ಸ್ಟಂಪ್ಸ್) 20 ಯಾರ್ಡ್ಸ್ ಪಿಚ್ ಮಾರ್ಕ್ ಮಾಡಿಕೊಂಡರೆ ಮುಗಿಯಿತು. ಆಟ ಶುರು. ಒಂದೆಡೆ ಲೆದರ್‌ಬಾಲ್ ಕ್ರಿಕೆಟ್ ವೃತ್ತಿಪರವಾಗಿ ಬೆಳೆಯುತ್ತಿದ್ದಂತೆ ಇತ್ತ ಗಲ್ಲಿ ಕ್ರಿಕೆಟ್ ಕೂಡ ಜನಪ್ರಿಯವಾಯಿತು. ಬಹುತೇಕ ಎಲ್ಲರ ಮನೆಯಲ್ಲಿಯೂ ಒಂದು ಟೆನಿಸ್‌ಬಾಲ್ ಮತ್ತು ಬ್ಯಾಟ್ ಇದ್ದೇ ಇರುತ್ತದೆ ಎನ್ನುವಷ್ಟರ ಮಟ್ಟಿಗೆ ಜನಪದವಾಗಿ ಹೋಗಿದೆ.

> ನಿರೀಕ್ಷೆಗೂ ಮೀರಿದ ಸ್ಪಂದನೆ ದೊರೆತಿದೆ. ಜನರ ಗಲ್ಲಿ ಕ್ರಿಕೆಟ್ ಪ್ರೀತಿಯು ಅಮೋಘವಾದದ್ದು. ನಮ್ಮ ದೇಶದಲ್ಲಿ ಕ್ರಿಕೆಟ್‌ಗೆ ಇರುವ ಜನಪ್ರಿಯತೆಯ ದ್ಯೋತಕ ಇದು.
> **ಸೂರಜ್ ಸಮತ್,** ಲೀಗ್ ಕಮಿಷನರ್

'ನಾನು 17 ದಿನಗಳು ಭಾರತದಲ್ಲಿ ಪ್ರವಾಸ ಮಾಡಿದೆ. ರಾಜಸ್ಥಾನದ ಮರಳುಗಾಡಿನಲ್ಲಿ, ಹಿಮಾಚಲದ ಪದತಲಗಳಲ್ಲಿ, ಹಳ್ಳಿಯಿಂದ ದೇಶದ ರಾಜಧಾನಿಯವರೆಗೆ ನದಿ, ಕೆರೆ, ಕುಂಟೆಗಳ ಆವರಣಗಳಲ್ಲಿ ಗಲ್ಲಿ ಕ್ರಿಕೆಟ್ ವೈಭವ ನೋಡಿದೆ. ಆ ಮಕ್ಕಳೊಂದಿಗೆ ನಾನೂ ಆಡಿದೆ. ಅಲ್ಲಿ ಬರೀ ಕ್ರಿಕೆಟ್ ಆಟವಿರಲಿಲ್ಲ. ಕಲ್ಪನೆ, ಛಲ, ಉತ್ಸಾಹ ಮತ್ತು ಭಾವೋತ್ಕಟತೆಯ ಸಂಗಮವೇ ಇತ್ತು. ಅದೆಲ್ಲವೂ ಸೇರಿ ಭಾರತೀಯ ಕ್ರಿಕೆಟ್ ರೂಪುಗೊಂಡಿದೆ ಎನಿಸಿತು' ಎಂದು ಆಸ್ಟ್ರೇಲಿಯಾ ತಂಡದ ಮಾಜಿ ನಾಯಕ ಸ್ಟೀವ್ ವಾ ತಮ್ಮ 'ದ ಸ್ಪಿರಿಟ್ ಆಫ್ ಕ್ರಿಕೆಟ್, ಇಂಡಿಯಾ' ಕೃತಿಯಲ್ಲಿ ಬರೆದಿದ್ದಾರೆ. ಗಲ್ಲಿ ಕ್ರಿಕೆಟ್‌ನ 200ಕ್ಕೂ ಹೆಚ್ಚು ಚಿತ್ರಗಳನ್ನು ಅದರಲ್ಲಿ ಪ್ರಕಟಿಸಿದ್ದಾರೆ.

ಕ್ರಿಕೆಟ್ ತಾರೆಗಳಾಗಿ ಬೆಳಗುತ್ತಿರುವ ಹಲವಾರು ಖ್ಯಾತನಾಮರ ಆಟ ಆರಂಭವಾಗಿದ್ದು ಕೂಡ ಗಲ್ಲಿ ಕ್ರಿಕೆಟ್‌ನಿಂದಲೇ. ಬಹುಶಃ ಟೆನಿಸ್‌ಬಾಲ್ ಕ್ರಿಕೆಟ್ ಆಡಿದವರಲ್ಲಿ ಬಹುತೇಕರು ಲೆದರ್‌ಬಾಲ್ ಕ್ರಿಕೆಟ್ ಆಡಿರದೇ ಇರಬಹುದು. ಆದರೆ ಇವತ್ತು ವೃತ್ತಿಪರವಾಗಿ ವಿವಿಧ ಹಂತಗಳಲ್ಲಿ ಮಿಂಚುತ್ತಿರುವವರೆಲ್ಲರೂ ಟೆನಿಸ್‌ಬಾಲ್ ಆಡಿಯೇ ಆಡಿರುತ್ತಾರೆ. ಮಹೇಂದ್ರಸಿಂಗ್ ಧೋನಿ ಹೆಲಿಕಾಪ್ಟರ್ ಶಾಟ್ ಕಲಿತದ್ದು, ರೋಹಿತ್ ಶರ್ಮಾ ಪುಲ್‌ಶಾಟ್ ಹೊಡೆಯಲು ಆರಂಭಿಸಿದ್ದು, ಮೊಹಮ್ಮದ್ ಶಮಿ ಮೊನಚಾದ ಸ್ವಿಂಗ್ ಎಸೆತಗಳ ಮೂಲಪಾಠ ಕಲಿತದ್ದು ಇದೇ ಅಂಗಳದಿಂದ.

ಅದಕ್ಕಾಗಿಯೇ ಇದಕ್ಕೊಂದು ಸಂಘಟಿತ ರೂಪ ಕೊಡುವತ್ತ ಐಎಸ್‌ಪಿಎಲ್ ಟಿ10 ಕ್ರಿಕೆಟ್ ಟೂರ್ನಿ ಆರಂಭವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಮುಂಬೈ, ಗೋವಾ, ಕೋಲ್ಕತ್ತ, ಬೆಂಗಳೂರು ಮತ್ತು ಮಂಗಳೂರು ಸೇರಿದಂತೆ ಹಲವೆಡೆ ಸಣ್ಣಪ್ರಮಾಣದಲ್ಲಿ ಇಂತಹ ಲೀಗ್‌ಗಳು ನಡೆಯುತ್ತಿದ್ದವು. ಆದರೆ ಐಎಸ್‌ಪಿಎಲ್ ದೊಡ್ಡ ಬಜೆಟ್‌ನಲ್ಲಿ ಆರಂಭವಾಗಿದ್ದು, ಮುಂಬರುವ ದಿನಗಳಲ್ಲಿ ವಿದೇಶಗಳಿಗೂ ವಿಸ್ತರಿಸುವತ್ತ ಯೋಜನೆ ರೂಪಿಸಿಕೊಂಡಿದೆ. ಗಲ್ಲಿ ಕ್ರಿಕೆಟ್‌ನಲ್ಲಿಯೂ ತಾರಾ ಆಟಗಾರರನ್ನು ಬೆಳೆಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದೆ.

ಅಂತೂ ಗಲ್ಲಿ ಕ್ರಿಕೆಟ್‌ಗೂ ಒಂದು ಕಾಲ ಬಂತು!


ಚೊಚ್ಚಲ ಐಎಸ್‌ಪಿಎಲ್ ಪ್ರಶಸ್ತಿ ಜಯಿಸಿದ ಟೈಗರ್ಸ್ ಆಫ್ ಕೋಲ್ಕತ್ತ ತಂಡ


ಬೆಂಗಳೂರು ತಂಡದ ಆಟಗಾರರ ಸಂಭ್ರಮ

ಕೋಟಿ ಪ್ರೇಕ್ಷಕರ ಸ್ಪಂದನೆ

ಮೊದಲ ಬಾರಿಗೆ ನಡೆದ ಐಎಸ್‌ಪಿಎಲ್ ಟೂರ್ನಿಯ ಪಂದ್ಯಗಳಿಗೆ ಪ್ರೇಕ್ಷಕರಿಂದಲೂ ಉತ್ತಮ ಸ್ಪಂದನೆ ದೊರೆತಿದೆ. ಕ್ರೀಡಾಂಗಣದಲ್ಲಿ ವೀಕ್ಷಿಸಿದ, ಟಿ.ವಿ. ಮತ್ತು ಡಿಜಿಟಲ್ ವೇದಿಕೆಗಳ ಮೂಲಕ ನೇರಪ್ರಸಾರ ನೋಡಿದವರ ಸಂಖ್ಯೆಯು ಒಂದು ಕೋಟಿಗೂ ಹೆಚ್ಚು ಎಂದು ಟೂರ್ನಿಯ ಅಧಿಕೃತ ಪ್ರಸಾರಕ ಸಂಸ್ಥೆ ಸೋನಿ ಪಿಕ್ಚರ್ಸ್ ನೆಟ್‌ವರ್ಕ್ ತಿಳಿಸಿದೆ.

ಇದರಲ್ಲಿ ಕ್ರೀಡಾಂಗಣದಲ್ಲಿ ಎಲ್ಲ ಪಂದ್ಯಗಳನ್ನು ವೀಕ್ಷಿಸಿದವರ ಸಂಖ್ಯೆಯು ಐದು ಲಕ್ಷ ದಾಟಿದೆ.

ಜನವರಿಯಲ್ಲಿ 2ನೇ ಆವೃತ್ತಿ

ಮೊದಲ ಆವೃತ್ತಿಯ ಯಶಸ್ಸಿನಿಂದ ತುಂಬು ಆತ್ಮವಿಶ್ವಾಸದಲ್ಲಿರುವ ಆಯೋಜಕರು ಎರಡನೇ ಆವೃತ್ತಿಗೆ ಸಿದ್ಧರಾಗಿದ್ದಾರೆ. 2025ರ ಜನವರಿ 31ರಿಂದ 9ರವರೆಗೆ ಟೂರ್ನಿ ನಡೆಯಲಿದೆ. ಇದೇ ವರ್ಷದ ನವೆಂಬರ್‌ನಲ್ಲಿ ಮಧ್ಯಪೂರ್ವ ದೇಶಗಳಿಗೂ ಟೂರ್ನಿಯನ್ನು ವಿಸ್ತರಿಸಲಾಗುತ್ತಿದೆ.

ಆತ್ಮವಿಶ್ವಾಸದ ಕಡಲು...

10ನೇ ಪುಟದಿಂದ...

ವಿಶ್ವಾಸ್, ಕೋಲಾರ ಜಿಲ್ಲೆಯ ಕಾಳಹಸ್ತಿಪುರದವರು. ಇವರು ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದಾಗ ತಂದೆ ಮನೆ ಕಟ್ಟಿಸುತ್ತಿದ್ದರು. ಕ್ಯೂರಿಂಗ್‌ಗಾಗಿ ನೀರು ಹಾಕಲು ಮನೆಯ ಮೇಲೆ ಹತ್ತಿದ್ದರು. ಆಯತಪ್ಪಿ ಕೆಳಗೆ ಬೀಳುವಾಗ ವಿದ್ಯುತ್ ತಂತಿಗಳನ್ನು ಕೈಗಳಿಂದ ಹಿಡಿದುಕೊಂಡರು. ಇದನ್ನು ಗಮನಿಸಿದ ತಂದೆ ಮರದ ತುಂಡಿನಿಂದ ಬಿಡಿಸಲು ಯತ್ನಿಸಿದರು. ಆಗ ಅವರೂ ಆಯತಪ್ಪಿ ಕೆಳಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟರು. ಪ್ರಜ್ಞೆ ತಪ್ಪಿಬಿದ್ದಿದ್ದ ವಿಶ್ವಾಸ್‌ಗೆ ಬೆಂಗಳೂರಿನ ಆಸ್ಪತ್ರೆಯಲ್ಲಿ ಎರಡು ತಿಂಗಳು ಚಿಕಿತ್ಸೆ ಕೊಡಿಸಲಾಯಿತು. ಆನಂತರ ಕಣ್ತೆರೆದರು. ಆಗ ಅವರಿಗೆ ತಿಳಿದದ್ದು ತಮ್ಮ ಎರಡೂ ಕೈಗಳು ಇಲ್ಲ ಎನ್ನುವ ಕಟುಸತ್ಯ.

'ಆರಂಭದಲ್ಲಿ ತಾಯಿ ನನಗೆ ಪ್ಲಾಸ್ಟಿಕ್ ಕೈಗಳನ್ನು ಹಾಕಿಸಿದ್ದರು. ಅವು ಸಂಪೂರ್ಣ ನಿಷ್ಪ್ರಯೋಜಕವಾಗಿದ್ದವು. ಪೇಪರ್ ತುಂಡನ್ನೂ ಕೂಡ ಎತ್ತಲು ಆಗುತ್ತಿರಲಿಲ್ಲ. ಬೊಂಬೆಗೆ ಕೈಗಳನ್ನು ಜೋಡಿಸಿದಂತೆ ಇತ್ತು. ಅವುಗಳನ್ನು ತೆಗೆದಿಟ್ಟು, ಮೈಗೆ ಶಾಲು ಅಥವಾ ಟವಲ್ ಹೊದ್ದು ಓಡಾಡುತ್ತಿದ್ದೆ. ನೋಡುವವರ ಕಣ್ಣಿಗೆ ಜ್ವರವಿರಬೇಕು ಎಂಬ ಭಾವನೆ ಮೂಡಿಸುವ ಉದ್ದೇಶ ಅದರ ಹಿಂದೆ ಇತ್ತು. ಆಗ ಕೈಗಳಿಲ್ಲ ಎನ್ನುವ ಅಳುಕು ಇತ್ತು' ಎಂದು ವಿಶ್ವಾಸ್ ಹಳೆಯದನ್ನು ನೆನಪಿಸಿಕೊಂಡರು.

ಹೊಸ ಹುರುಪು; ಹೊಸ ಗುರಿ

2020ರಲ್ಲಿ ಏಷ್ಯನ್ ಗೇಮ್ಸ್ ಇತ್ತು. ಅದಕ್ಕೆ ತಯಾರಿ ನಡೆಸುತ್ತಿದ್ದಾಗ ಕೋವಿಡ್‌ನಿಂದ ಲಾಕ್‌ಡೌನ್ ಹೇರಲಾಯಿತು. ಮೊದಲು ಈಜುಕೊಳಗಳು, ಜಿಮ್‌ಗಳನ್ನು ಮುಚ್ಚಲಾಯಿತು. ಇದು ಇವರ ತರಬೇತಿ ಹಾಗೂ ತಯಾರಿ ಮೇಲೆ ಸಾಕಷ್ಟು ಪರಿಣಾಮ ಬೀರಿತು. ಮನೆಯಲ್ಲೇ ಇದ್ದು ದೇಹದ ಫಿಟ್‌ನೆಸ್ ಕೆಟ್ಟಿತು, ಆಹಾರ ಪದ್ಧತಿಯೂ ಬದಲಾಯಿತು. ತೂಕ ಹೆಚ್ಚಾಯಿತು. ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಲಕ್ಷ್ಮಿ, ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಅವರನ್ನು ಪ್ರೀತಿಸಿ ಮದುವೆಯಾದರು. ಈಗ ಎರಡೂವರೆ ವರ್ಷದ ಮಗಳು ಇದ್ದಾಳೆ.

'ಆರೇಳು ತಿಂಗಳಿಂದ ಬಸವನಗುಡಿ ಸ್ವಿಮ್ಮಿಂಗ್ ಸ್ಕೂಲ್‌ನಲ್ಲಿ ತರಬೇತಿ ಆರಂಭಿಸಿದ್ದೇನೆ. ಮೇ ತಿಂಗಳಲ್ಲಿ ಜರ್ಮನಿಯಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆಯಿದೆ. ಬಳಿಕ ಒಲಿಂಪಿಕ್ಸ್ ಇದೆ. ಹೀಗೆ ಹಲವು ಅಂತರರಾಷ್ಟ್ರೀಯ ಸ್ಪರ್ಧೆಗಳಿವೆ. ಅವುಗಳಲ್ಲಿ ಭಾಗವಹಿಸುವುದು ಅಷ್ಟು ಸುಲಭವಲ್ಲ. ಬಹಳಷ್ಟು ಶ್ರಮಪಡಬೇಕು. ಕನಿಷ್ಠ ಎರಡು ವರ್ಷ ತರಬೇತಿ ಬೇಕು. ಮುಂದಿನ ಮಾರ್ಚ್–ಏಪ್ರಿಲ್‌ನಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆಗೆ ಹೋಗಬೇಕು ಎಂದಿದ್ದೇನೆ' ಎಂದರು ವಿಶ್ವಾಸ್.

ವಿಶ್ವಾಸ ತುಂಬಲು ಸಿನಿಮಾ

